
ಶ್ರೀ ಕೃಷ್ಣಾವಧೂತಪಂಡಿತ ವಿರಚಿತ

ಶ್ರೀ ರಾಘವೇಂದ್ರ ತಂತ್ರಮ್



ಅನುವಾದಕರು

ಶ್ರೀ ವೇದವ್ಯಾಸಾಚಾರ್ಯರು

ಪ್ರಕಾಶಕರು

ಶ್ರೀಮತಿ ಟಿ.ಎಸ್. ರಮಾ

ಬೆಂಗಳೂರು - 28

ಶ್ರೀ ಕೃಷ್ಣಾವಧೂತಪಂಡಿತ ವಿರಚಿತ

ಶ್ರೀ ರಾಘವೇಂದ್ರ ತಂತ್ರಮ್

ಅನುವಾದಕರು

ಶ್ರೀ ವೇದವ್ಯಾಸಾಚಾರ್ಯರು

ಪದ್ಮನಾಭನಗರ

ಪ್ರಕಾಶಕರು

ಶ್ರೀಮತಿ ಟಿ.ಎಸ್. ರಮಾ

20/2, 1ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ

4ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು - 28

☎ 6600454, 623654

ಗ್ರಂಥದ ಹೆಸರು : ಶ್ರೀ ರಾಘವೇಂದ್ರ ತಂತ್ರಮ್

ಗ್ರಂಥಕಾರರು : ಶ್ರೀ ಕೃಷ್ಣಾವಧೂತ ಪಂಡಿತರು

ಅನುವಾದಕರು : ಶ್ರೀ ವೇದವ್ಯಾಸಾಚಾರ್ಯರು

ಪ್ರಕಾಶಕರು : ಶ್ರೀಮತಿ ಟಿ.ಎಸ್. ರಮಾ
20/2, 1ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ
4ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು - 560 028
☎ 6600454, 623654

ಪ್ರಕಾಶನ : ಪ್ರಥಮ ಮುದ್ರಣ **1999**

ಬೆಲೆ :

ಮುದ್ರಕರು : ಸುಬೋಧ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು - 18

|| ಶ್ರೀ ಮೂಲರಾಮೋ ವಿಜಯತೇ ||

|| ಶ್ರೀ ಗುರುರಾಜೋ ವಿಜಯತೇ ||

ಶ್ರೀಮತ್ಸುಶಮೀಂದ್ರ ತೀರ್ಥ ಶ್ರೀ ಪಾದಂಗಳವರ ಅನುಗ್ರಹವಚನ

ಕಲಿಯುಗದ ಕಲ್ಪತರುವೆನಿಸಿರುವ ಶ್ರೀ ರಾಘವೇಂದ್ರ ಗುರುಸಾರ್ವಭೌಮ ರನ್ನು ಉದ್ದೇಶಿಸಿ ಅನೇಕ ಸಾಧು-ಸಂತರು, ಅಪರೋಕ್ಷಜ್ಞಾನಿಗಳೂ ಕೃತಿಗಳನ್ನು ರಚಿಸಿ ಸಜ್ಜನರಿಗೆ ಸ್ತೋತ್ರ ಪಾರಾಯಣಾದಿ ಮಾಡಲು ಉಪಕಾರ ಮಾಡಿರುವರು.

ರಾಘವೇಂದ್ರರ ಭಕ್ತಶಿರೋಮಣಿಗಳಾದ ಅಪ್ಪಣಾಚಾರ್ಯರು ರಾಘವೇಂದ್ರ ಸ್ತೋತ್ರ - ಕವಚಾದಿಗಳನ್ನು ರಚಿಸಿ ರಾಯರ ಕರುಣೆಗೆ ಪಾತ್ರರಾದರೆ, ರಾಘವೇಂದ್ರರ ಮತ್ತೊಬ್ಬ ಶಿಷ್ಯರಾದ ಕೃಷ್ಣಾವಧೂತರು ರಾಘವೇಂದ್ರ ತಂತ್ರವನ್ನು ರಚಿಸಿ ಗುರುಗಳ ಕರುಣೆಗೆ ಪಾತ್ರರಾಗಿರುವರು.

ಕೃಷ್ಣಾವಧೂತರಿಗೆ ರಾಯರೇ ಸ್ವಪ್ನದಲ್ಲಿ ಬಂದು ತಾಮ್ರಪಟಲವನ್ನು ನೀಡಿ ರಹಸ್ಯೋಪದೇಶವನ್ನು ಮಾಡಿ ಗ್ರಂಥವನ್ನು ರಚಿಸಲು ಸೂಚಿಸಿರುವರು. ಇದು 'ಪ್ರತ್ಯಕ್ಷ ಸಿದ್ಧಿಗ್ರಂಥ'ವಾಗಿದೆ. ಈ ಗ್ರಂಥದ ಪಾರಾಯಣಾದಿಗಳಿಂದ ಇಷ್ಟಫಲಗಳು ಖಂಡಿತ ವಾಗಿಯೂ ಕೈಗೂಡುವುವು. ಇದು ಸರ್ವರ ಅನುಭವಸಿದ್ಧವಾದದ್ದು.

ಈ ರಾಘವೇಂದ್ರ ತಂತ್ರವನ್ನು ಸಮಗ್ರವಾಗಿ ಕನ್ನಡದಲ್ಲಿ ಅನುವಾದವನ್ನು ಮಾಡಿದ ಶ್ರೀ ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯರು ಅಭಿನಂದನಾರ್ಹರು. ಈ ಹಿಂದೆ ಒಂದೊಂದು ಭಾಗಗಳು ಮಾತ್ರ ಲಭ್ಯವಿದ್ದವು. ಈಗ ಈ ಹದಿನೈದು ಪಟಲ ವನ್ನು ಅನುವಾದಿಸಿ ಪ್ರಕಟಿಸಿರುವುದು ಸಂತಸದ ವಿಷಯವಾಗಿದೆ.

ಈ ಗ್ರಂಥವನ್ನು ಪದ-ಪದಾರ್ಥ ಸಹಿತ ಅನುವಾದಿಸಿ ಸಜ್ಜನರಿಗೆ ಪಾರಾಯಣ ಮಾಡಲು ಅನುವು ದೊರೆತಂತಾಗಿದೆ.

ಈ ಗ್ರಂಥದ ಸಂಗ್ರಹ, ಪಾರಾಯಣಾದಿಗಳಿಂದ ಶ್ರೀ ಹರಿವಾಯು ಗುರು ರಾಜರ ಅನುಗ್ರಹಕ್ಕೆ ಪಾತ್ರರಾಗಬೇಕು. ಈ ಗ್ರಂಥವನ್ನು ಕನ್ನಡೀಕರಿಸಿ ಸಜ್ಜನವೃಂದಕ್ಕೆ ತಲುಪುವಂತೆ ಮಾಡಿದ ಶ್ರೀ ವೇದವ್ಯಾಸಾಚಾರ್ಯರಿಗೂ ಹಾಗೂ ಇದನ್ನು ಪಠಿಸುವ ಸಮಸ್ತ ಜನರಿಗೂ ಸಮಸ್ತ ಸನ್ಮಂಗಲಗಳನ್ನು ಕರುಣಿಸುವಂತೆ ಅಸ್ಮದುಪಾಧ್ಯಮೂರ್ತಿ ಶ್ರೀ ಮೂಲರಾಮದೇವರು, ಶ್ರೀಮದಾಚಾರ್ಯರು ಹಾಗೂ ಶ್ರೀ ಗುರುಸಾರ್ವ ಭೌಮರನ್ನು ಪ್ರಾರ್ಥಿಸುತ್ತೇವೆ.

ಶ್ರೀ ಕ್ಷೇತ್ರ ಮಂತ್ರಾಲಯ

ರಾಘವೇಂದ್ರರ ವರ್ಧಂತ್ಯುತ್ಸವ

ಇತಿ ನಾರಾಯಣ ಸ್ಮರಣೆಗಳು

ಅನುವಾದಕರ ಮುನ್ನುಡಿ

ತಂತ್ರಗ್ರಂಥಗಳು ಪ್ರಾಚೀನ ಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿವೆ. ತಂತ್ರಶಾಸ್ತ್ರವು ತತ್ವಶಾಸ್ತ್ರದ ಸಾರಭಾಗವೆನಿಸಿದೆ. ತಂತ್ರವೆಂದರೆ ಕಾರ್ಯವನ್ನು ಸುಗಮಗೊಳಿಸುವ ಸಾಧನ. ತಂತ್ರಶಾಸ್ತ್ರವು ಮಾನವನು ಮಾನವನಾಗಲು ಬೇಕಾದ ಅವಶ್ಯ ತತ್ವಜ್ಞಾನವನ್ನು ಮಂತ್ರಜ್ಞಾನವನ್ನು ಯಂತ್ರಜ್ಞಾನವನ್ನು ನೀಡಿ ರಕ್ಷಣೆಯನ್ನು ಮಾಡುತ್ತದೆ.

'ತನೋತಿ ತ್ರಾಯತೇ ಚೇತಿ ತಂತ್ರಮ್' ಎಂದು ತಂತ್ರದ ನಿರುಕ್ತಿ.

ಶ್ರೀಮದಾಚಾರ್ಯರು ವಿಷ್ಣುತಂತ್ರವನ್ನು ಆಧಾರವಾಗಿಟ್ಟುಕೊಂಡು ಶ್ರೀತಂತ್ರಸಾರಸಂಗ್ರಹವೆಂಬ ಬಹ್ವರ್ಥಗರ್ಭಿತವಾದ ಗ್ರಂಥವನ್ನು ರಚಿಸಿದ್ದಾರೆ. ಇದೇ ಮಾರ್ಗದಲ್ಲೇ ಹೊರಟ ತಂತ್ರಗ್ರಂಥಗಳಲ್ಲಿ 'ಶ್ರೀರಾಘವೇಂದ್ರ ತಂತ್ರ'ವೂ ಒಂದಾಗಿದೆ. ರಾಘವೇಂದ್ರರ ಶ್ರೀಗಳವರ ಪರಮ ಪ್ರೇಮಾಸ್ಪದರಾದ ಶ್ರೀ ಕೃಷ್ಣಾವಧೂತ ಪಂಡಿತರು ರಚಿಸಿರುವರು. ರಾಘವೇಂದ್ರ ತಂತ್ರವು ರಾಘವೇಂದ್ರರ ಅಷ್ಟಾಕ್ಷರ ಮಂತ್ರವಿಧಾನ, ಪೂಜಾವಿಧಾನ, ಯಂತ್ರವಿಧಾನ, ರಾಯರ ಕರುಣೆ, ಸಹಸ್ರನಾಮಸ್ತೋತ್ರ ಇವೇ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಈ ತಂತ್ರದ ವೈಶಿಷ್ಟ್ಯ

ಶೇಷಪುತ್ರರಾದ ವಿಷ್ವಕ್ಸೇನರೇ ರಾಘವೇಂದ್ರರ ಮೂಲರೂಪವೆನಿಸಿರುವರು. ಈ ಗ್ರಂಥದಲ್ಲಿ ಶಂಕುಕರ್ಣನೆಂಬ ಪದವನ್ನು ಪ್ರಯೋಗಿಸಿಲ್ಲ ಮತ್ತು ವಿಷ್ವಕ್ಸೇನನು ಭಗವಂತನ ನಿರ್ಮಾಲ್ಯಧಾರಕನಾಗಿದ್ದು, ವಾಯುಪುತ್ರನೆನಿಸಿರುವನು. ಗಣಪತಿಗೆ ಸಮಾನನು. ತಂತ್ರದ ಗೋಪ್ಯತೆಯನ್ನು ಕಾಪಾಡಲು ಈ ತಂತ್ರವನ್ನು ಬಳಸಿದ್ದಾರೆ.

ರಾಘವೇಂದ್ರರ ಆರು ಅವತಾರಗಳು

ಕೃತಾದಿ ಮೂರು ಯುಗಗಳಲ್ಲಿ ಪ್ರಹ್ಲಾದ-ವಿಭೀಷಣ-ಬಾಹ್ಲೀಕ ಎಂಬ ಅಭಿದಾನವನ್ನು ಹೊಂದಿದ್ದರೆ ಕಲಿಯುಗದಲ್ಲಿ ವ್ಯಾಸರಾಜರು-ರಾಘವೇಂದ್ರರು-ಸತ್ಯಸಂಧರು ಹೀಗೆ ಮೂರು ಅವತಾರಗಳು.

ಈ ಮೂರು ಅವತಾರಗಳಿಂದ ವ್ಯಾಸರಾಜಮಠ - ರಾಘವೇಂದ್ರ ಮಠ - ಉತ್ತರಾದಿ ಮಠ ಈ ಮೂರು ಮಠಗಳ ಐಕ್ಯಮತ್ಯವನ್ನು ಸ್ಥಾಪಿಸಿದವರು. ಇದು

ಯುಕ್ತಿಯುಕ್ತವೂ ಹೌದು. ಏಕೆಂದರೆ ಅದ್ಯಾಪಿ ಮಹಿಷಿಯಲ್ಲಿರುವ ಸತ್ಯಸಂಧರ ಬೃಂದಾವನಕ್ಕೆ ಅಭಿಷೇಕವು ರಾಘವೇಂದ್ರ ಸ್ತೋತ್ರದಿಂದಲೇ ನಡೆಯುವುದು.

ಸೀತಾದೇವಿಯ ಪ್ರತಿಮೆಯನ್ನು ಅರ್ಚಿಸಲು ಸತ್ಯಸಂಧರಾಗಿ ಅವತಾರ ಮಾಡಿದರೆಂದು ಕೃಷ್ಣಾವಧೂತರ ಹೇಳಿಕೆ. (೩೧ - ೨ನೇ ಶ್ಲೋಕ)

ಅಪ್ಪಣ್ಣಾಚಾರ್ಯರು - ಕೃಷ್ಣಾವಧೂತರು - ರಾಘವೇಂದ್ರರು ಭಗವತ್ಸೇವೆಗಾಗಿ ಆರುಬಾರಿ ಅವತರಿಸಿದೆ ಅವರ ಶಿಷ್ಯರಾದ ಅಪ್ಪಣ್ಣಾಚಾರ್ಯರು ಮತ್ತು ಕೃಷ್ಣಾವಧೂತರು ಸಂಹತ-ಪ್ರಹತ, ಸಂಧಿ-ಪ್ರಸಂಧೀ, ಸೋಮಿಕ-ಊರ್ಮಿಕ, ಅಪ್ಪಣ್ಣಾಚಾರ್ಯ-ಕೃಷ್ಣಾವಧೂತರಾಗಿ ನಾಲ್ಕುಬಾರಿ ಅವತರಿಸಿರುವರು.

ಕೃಷ್ಣಾವಧೂತರಿಗೆ ಪ್ರೇರಣೆ

ಕೃಷ್ಣಾವಧೂತರು ಮುವ್ವತ್ತೆರಡು ವರ್ಷಗಳ ಕಾಲ ದುರಾಚಾರಹತರಾಗಿದ್ದರು. ಅಪ್ಪಣ್ಣಾಚಾರ್ಯರು ಕನಸಿನಲ್ಲಿ ಕಾಣಿಸಿ ಎಚ್ಚರಿಸಿದರೂ ವಿಶ್ವಾಸವಿಲ್ಲದೆ ಕಿವಿಗೊಡಲಿಲ್ಲ. ರಾಯರೇ ಕನಸಿನಲ್ಲಿ ಬಂದು ದೇವನಾಗರಿ ಲಿಪಿಯಲ್ಲಿ ಬರೆದಿರುವ ತಾಮ್ರಪಟಲ ಹಾಗೂ ಮಂತ್ರಾಕ್ಷತೆಯನ್ನು ಕೊಟ್ಟು ಅನುಗ್ರಹಿಸಿದರು. (೧೫-೮)

ಸ್ವಪ್ನದ ಆದೇಶ

ರಾಯರು ಸ್ವಪ್ನದಲ್ಲಿ ದರ್ಶನವಿತ್ತು ತಾಮ್ರಪತ್ರವನ್ನು ನೀಡಿ ತಮ್ಮ ಸ್ವರೂಪ ಹಾಗೂ ಅವತಾರ ರೂಪಗಳನ್ನು ತಿಳಿಸಿ ನನ್ನ ಮಂತ್ರಾದಿ ಉಪಾಸನೆಯನ್ನು ಬಿತ್ತರಿಸುವ ಯಾವುದಾದರೂ ಗ್ರಂಥವನ್ನು ರಚಿಸು ಎಂದು ಆಜ್ಞಾಪಿಸಿದರು. ಗ್ರಂಥದಲ್ಲಿ ಒಳಗೊಂಡಿರಬೇಕಾದ ವಿಷಯಗಳನ್ನು ದೇವರಹಸ್ಯಗಳನ್ನು ತಿಳಿಸಿದರು. ಇವೆಲ್ಲವನ್ನೂ ಗ್ರಂಥಸ್ಥ ಮಾಡಲು ಗುರುಗಳ ಅಪ್ಪಣೆಯಿಲ್ಲದಿರುವುದರಿಂದ ಅತಿಗೋಪ್ಯ ವಿಷಯವನ್ನು ಈ ಗ್ರಂಥದಲ್ಲಿ ತಿಳಿಸಿಲ್ಲ ಎಂದು ಕೃಷ್ಣಾವಧೂತರು ಹೇಳಿದ್ದಾರೆ.

ಸಿದ್ಧಿಪ್ರದಗ್ರಂಥ

ಈ ರಾಘವೇಂದ್ರ ತಂತ್ರ ಗ್ರಂಥವು ಸಕಲ ಸಿದ್ಧಿಗಳನ್ನು ನೀಡಬಲ್ಲ ಕೃತಿ ಎಂದು ರಾಘವೇಂದ್ರರೇ ಸೂಚಿಸಿದ್ದಾರೆಂದು ತಿಳಿಯುತ್ತದೆ.

ಕಲಿಯುಗದಲ್ಲಿ ಈ ತಂತ್ರದ ಪಠನದಿಂದ ಫಲವು ಪ್ರತ್ಯಕ್ಷವಾಗಿ ಲಭಿಸುವುದು. ಕಲಿಯುಗದಲ್ಲಿ ಈ ತಂತ್ರಾನುಸರಣೆಯು ಶೀಘ್ರವಾಗಿ ಫಲದಾಯಕವಾದ್ದರಿಂದ ದುರ್ಜನರೂ ಫಲವನ್ನು ಹೊಂದಲು ಸಾಧ್ಯವಿರುವುದರಿಂದ ಈ ಗ್ರಂಥಸ್ಥ

ವಿಷಯಗಳನ್ನು ರಾಘವೇಂದ್ರ ಭಕ್ತರಾದವರಿಗೆ ಮಾತ್ರ ಬಹಿರಂಗಪಡಿಸಬೇಕು ಎಂದು ರಾಯರು ತಿಳಿಸಿರುವರು.

ಯೋಗ್ಯಾಧಿಕಾರಿಕ ತಂತ್ರ

ಯೋಗ್ಯರು ಮಾತ್ರ ಪಠಿಸಲು ಯೋಗ್ಯವಾದ ಈ ತಂತ್ರವು ಅನ್ಯರಿಗೆ ಹಿಡಿಸುವುದಿಲ್ಲ.

'ತಮ್ಮ ದುರ್ದೈವವನ್ನು ಪೂರ್ಣವಾಗಿ ನಾಶಮಾಡಿಕೊಳ್ಳಲು ಯೋಗ್ಯತೆಯುಳ್ಳ ಯೋಗ್ಯಾಧಿಕಾರಿಗಳಿಗೆ ಮಾತ್ರ ಈ ತಂತ್ರದಲ್ಲಿ ಆಸಕ್ತಿ ಹುಟ್ಟುವುದೇ ವಿನಃ ಇತರರಿಗಲ್ಲ' ಈ ವಿಷಯವನ್ನು ಗ್ರಂಥರಚನಾನಂತರ ರಾಯರೇ ಪುನಃ ಸ್ವಪ್ನದಲ್ಲಿ ಬಂದು ತಿಳಿಸಿರುವರು.

ರಾಘವೇಂದ್ರ ಅಷ್ಟಾಕ್ಷರಮಂತ್ರ

'ಶ್ರೀ ರಾಘವೇಂದ್ರಾಯ ನಮಃ' ಎಂಬ ರಾಘವೇಂದ್ರ ಅಷ್ಟಾಕ್ಷರಮಂತ್ರವನ್ನು ಜಪಿಸಲು ಋಷಿನ್ಯಾಸ, ಅಂಗನ್ಯಾಸ, ಕರನ್ಯಾಸಗಳನ್ನು, ಧ್ಯಾನಶ್ಲೋಕಗಳನ್ನು ವಿಶದವಾಗಿ ತಿಳಿಸಿರುವರು.

ಅಪ್ಪಣ್ಣಾಚಾರ್ಯರ ಸ್ತೋತ್ರ

ರಾಘವೇಂದ್ರಾಷ್ಟಾಕ್ಷರ ಮಂತ್ರವನ್ನು ಜಪಿಸುವ ಮೊದಲು ಅಪ್ಪಣಾಚಾರ್ಯ ರಿಂದಲೇ ರಚಿತವಾದ ರಾಘವೇಂದ್ರಸ್ತೋತ್ರವನ್ನು ಭಕ್ತಿಯಿಂದ ಪಠಿಸಿ, ಪಾದುಕೆ, ಯಂತ್ರದಲ್ಲಾಗಲೀ, ರಾಯರನ್ನು ಆವಾಹಿಸಿ ಮಂತ್ರಪೂತಜಲದಿಂದ ಅಭಿಷೇಕಿಸ ಬೇಕು.

ನಂತರ ಶ್ರೀ ಅಪ್ಪಣಾರ್ಯಾಯ ನಮಃ ಎಂದು ಅಪ್ಪಣಾಚಾರ್ಯರ ಅಷ್ಟಾಕ್ಷರ ಜಪವನ್ನು ಯಥಾಶಕ್ತಿ ಜಪಿಸಿ ನಂತರ ರಾಘವೇಂದ್ರರ ಅಷ್ಟಾಕ್ಷರಮಂತ್ರವನ್ನು ಎರಡು ಲಕ್ಷ, ಎಂಟುಲಕ್ಷ ಹೀಗೆ ಯಥಾಶಕ್ತಿ ಜಪಿಸಬೇಕು. ಈ ಮಂತ್ರದ ಜಪದಿಂದ ಜನಾನು ರಾಗಿಯಾಗಿಯೂ, ಬಲರೂಪಸಂಪನ್ನನೂ ಆಗುವನು. ಈ ಮಂತ್ರಜಪದಿಂದ ಅಸಾಧ್ಯವಾದದ್ದು ಯಾವುದೂ ಇರುವುದಿಲ್ಲ.

ಯಂತ್ರರಾಜ

ಈ ತಂತ್ರದಲ್ಲಿ ಯಂತ್ರವನ್ನು ರಚಿಸುವ ಕ್ರಮವನ್ನು ವಿವರಿಸಲಾಗಿದೆ. 'ರಾಂ'

ಎಂಬ ಬೀಜಾಕ್ಷರವನ್ನು ಬರೆದು, ಆವರಕವಾಗಿ ತ್ರಿಕೋಣವನ್ನು ಬರೆಯಬೇಕು. ತ್ರಿಕೋಣವನ್ನು ವರ್ತುಲದಿಂದ ಸುತ್ತುವರಿಸಬೇಕು. ನಂತರ ಎಂಟುದಳವುಳ್ಳ ಪದ್ಮವನ್ನು ಬರೆಯಬೇಕು. ಆ ಎಂಟು ದಳಗಳಲ್ಲಿ 'ಶ್ರೀ ರಾಘವೇಂದ್ರಾಯ ನಮಃ' ಎಂಬ ಅಕ್ಷರಗಳನ್ನು ಬರೆಯಬೇಕು. ನಂತರ ಮೂರು ಆವರಣಗಳನ್ನು ಬರೆಯಬೇಕು. ಇದರ ಮೇಲೆ ಎರಡು ರೇಖೆಯ ಭೂಪುರವನ್ನು ಬರೆಯಬೇಕು.

ಸಾಧ್ಯಾರ್ಣಗಳು

ಈ ವೃತ್ತಗಳಲ್ಲಿ ನಮ್ಮ ಇಷ್ಟಾರ್ಥಗಳನ್ನು ಬರೆಯಬೇಕು. ನಂತರ ಪೂಜಿಸಿ ಧರಿಸಬೇಕು.. ಇದರಿಂದ ಇಷ್ಟಾರ್ಥಗಳನ್ನು ಪಡೆದವರು ಸಾಕ್ಷಿಯಾಗಿ ಅನೇಕಮಂದಿ ಭಕ್ತರಿರುವರು. ಇದಕ್ಕೆ ಅವಧೂತರೂ ಸಾಕ್ಷಿಯಾಗಿ ನಿಂತಿದ್ದಾರೆ.

ಹೀಗೆ ರಾಘವೇಂದ್ರತಂತ್ರವು ಪ್ರತ್ಯಕ್ಷಸಿದ್ಧಿಪ್ರದವಾಗಿದ್ದು ಕಲಿಯುಗದ ಕಲ್ಪತರುವಾದ ರಾಘವೇಂದ್ರರು ಸಂಸಾರದಲ್ಲಿ ತೊಳಲುತ್ತಿರುವ ಭಕ್ತವೃಂದವನ್ನು ಉದ್ಧಾರಮಾಡಲೆಂದು ಕೃಷ್ಣಾವಧೂತರಿಂದ ರಚಿಸಿರುವರು. ಈ ಗ್ರಂಥವು ಪರಮ ಪವಿತ್ರವಾಗಿದ್ದು ಪರ್ವಕಾಲಗಳಲ್ಲಿ ಪುರಶ್ಚರಣವನ್ನು ಮಾಡುವುದರಿಂದ ಖಂಡಿತ ಫಲವು ಸಿದ್ಧಿಸುತ್ತದೆ.

ಶ್ರೀ ಗುರುರಾಜರಲ್ಲಿ ಮೊರೆಹೊಕ್ಕು ಅವರಿಗೆ ಭಕ್ತಿಯಿಂದ ತಮ್ಮನ್ನು ಅರ್ಪಿಸಿಕೊಂಡರೆ ದಯಾಮಯರಾದ ರಾಯರು ಅವರನ್ನು ಖಂಡಿತ ಉದ್ಧಾರ ಮಾಡುವರು.

ಯಂತ್ರೇ ತೀರ್ಥೇ ತಥಾ ದೈವೇ ದೈವಜ್ಞೇ ಭೇಷಜೇ ಗುರೌ।
ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ॥

ಯಂತ್ರ-ತಂತ್ರ-ಮಂತ್ರ-ದೇವತೆ, ಗುರು, ಜ್ಯೋತಿಷಿ, ವೈದ್ಯ ಇವರಲ್ಲಿ ಯಾವ ರೀತಿ ಭಾವನೆಯೋ ಆ ಭಾವನೆಯಂತೆ ಸಿದ್ಧಿಯಾಗುವುದು.

ಈ ಗ್ರಂಥವನ್ನು ಅನುವಾದ ಮಾಡಬೇಕೆಂದು ಹಿಂದಿನಿಂದಲೂ ಅಭಿಪ್ರಾಯವಿತ್ತು. ಆದರೆ ಇತ್ತೀಚೆಗೆ ಅನುವಾದ ಕಾರ್ಯವನ್ನು ಮಾಡಿರುವೆನು. ರಾಘವೇಂದ್ರರೇ ಈ ಕಾರ್ಯವನ್ನು ಮಾಡಿ ಮುಗಿಸಿರುವರು. ಈ ಕಾರ್ಯವನ್ನು ಮಾಡುವಾಗ ನನ್ನ ಗುರುಗಳಾದ ವಿದ್ವಾನ್ ಶ್ರೀ ಹಯವದನ ಪುರಾಣಿಕರು ಹಾಗೂ ಶ್ರೀ ಪಿ. ಶೇಷಗಿರಿರಾಯರು ಮಾರ್ಗದರ್ಶನವನ್ನು ಮಾಡಿರುವರು. ಅವರಿಗೆ ಕೃತಜ್ಞತಾ ಪೂರ್ವಕವಾದ ಪ್ರಣಾಮಗಳು.

ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದ ರಾಘವೇಂದ್ರರ ಅನುಗ್ರಹ ಪಾತ್ರ

ಭೂತರಾದ ಶ್ರೀ ಶ್ರೀ ೧೦೮ ಸುಖಮೀಂದ್ರ ತೀರ್ಥ ಶ್ರೀ ಪಾದಂಗಳವರಿಗೂ ನನ್ನ ಸಾಷ್ಟಾಂಗ ಪ್ರಣಾಮಗಳು.

ಈ ಗ್ರಂಥವು ಸಜ್ಜನರ ಕೈ ಸೇರಲು ಪೂರ್ಣವಾಗಿ ಧನ ಸಹಾಯ ಮಾಡಿದ ಸಂಗೀತ ವಿದುಷಿ ಶ್ರೀಮತಿ ಟಿ.ಎಸ್. ರಮಾರವರಿಗೆ ಶ್ರೀ ರಾಯರ ಪರಮ ಕರುಣೆ ಹಾಗೂ ಪ್ರೇರಣೆ ಎಷ್ಟು ಹೇಳಿದರೂ ಸಾಲದು.

ಶ್ರೀಮತಿ ಟಿ. ರಮಾರವರು ರಾಯರ ಮಹಾ ಭಕ್ತರು. ಅವರಿಗೆ ರಾಯರು ಕರುಣಿಸುವುದರಲ್ಲಿ ಎರಡು ಮಾತಿಲ್ಲ. ಇವರಿಗೆ ಆಯುರಾರೋಗ್ಯಾದಿಗಳುಂಟಾಗಲಿ ಎಂದು ಪ್ರಾರ್ಥಿಸುತ್ತೇವೆ. ಕರಡು ಪ್ರತಿ ತಿದ್ದಿ ಸಹಾಯ ಮಾಡಿದ ಶ್ರೀ ನಾರಾಯಣ ರಾವ್‌ರವರಿಗೂ ಕೃತಜ್ಞತೆಗಳನ್ನರ್ಪಿಸುವೆ.

ಮುದ್ರಣಕಾರ್ಯವನ್ನು ನಡೆಸುವಲ್ಲಿಯೂ ರಾಯರು ತಮ್ಮ ಪವಾಡವನ್ನು ತೋರಿದ್ದಾರೆ. ದಿ|| ಶ್ರೀ ಸುಭೋಧ ರಾಮರಾಯರ ಪುತ್ರರಾದ ಶ್ರೀ ಗುರುರಾಜ ಸುಬೋಧರವರು ಮಂತ್ರಾಲಯಕ್ಕೆ ಹೋಗಿ ರಾಯರದರ್ಶನ ಮಾಡಿ ಬಂದ ಮಾರನೇ ದಿನವೇ ಈ ಗ್ರಂಥವನ್ನು ಮುದ್ರಣ ಮಾಡಲು ಈ ಗ್ರಂಥದ ನಕಲು ತಲುಪಿ ಶ್ರದ್ಧಾಭಕ್ತಿಗಳಿಂದ ಸುಂದರವಾಗಿ ಅಚ್ಚುಮಾಡಿಕೊಟ್ಟಿದ್ದಾರೆ.

ಈ ಗ್ರಂಥವನ್ನು ಅಂದವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ ಶ್ರೀ ಗುರುರಾಜ ಸುಬೋಧರವರಿಗೆ ಅಭಿನಂದಿಸುವೆನು.

ಈ ಗ್ರಂಥವನ್ನು ಸಜ್ಜನರು ಪಠಿಸಿ ಫಲವನ್ನು ಪಡೆಯಲಿ ಎಂದು ಆಶಿಸುವೆ.

ಇತಿ

ಸಜ್ಜನ ವಿಧೇಯ

ಎಸ್. ವೇದವ್ಯಾಸಾಚಾರ್ಯ

ಶ್ರೀ ರಾಘವೇಂದ್ರ ತಂತ್ರಮ್

ಪ್ರಥಮ ಪಟಲಮ್

ಅಥಾತಃ ಶ್ರೀ ರಾಘವೇಂದ್ರ ತಂತ್ರಂ ವಕ್ಷ್ಯೇ ತವಾಜ್ಞಯಾ ।
ಕೃಷ್ಣಾವಧೂತನಾಮಾಽಹಂ ಕಲೌ ಪ್ರತ್ಯಕ್ಷಸಿದ್ಧಿದಮ್ ॥ ೧॥

ಅರ್ಥ : ಅಥ = ಭಕ್ತ್ಯಾದ್ಯತಿಶಯ ಅಧಿಕಾರಿಗಳು ಈ ಗ್ರಂಥಕ್ಕೆ ಸಿದ್ಧವಾದ ಮೇಲೆ, **ಅತಃ** = ರಾಘವೇಂದ್ರರ ಅನುಗ್ರಹರೂಪ ವಿಶೇಷಫಲವಿರುವುದರಿಂದ, **ಕೃಷ್ಣಾವಧೂತನಾಮಾ** = ಕೃಷ್ಣಾವಧೂತರೆಂಬ ನಾಮಧೇಯವುಳ್ಳ, **ಅಹಮ್** = ನಾನು, **ಕಲೌ** = ಕಲಿಯುಗದಲ್ಲಿ, **ಪ್ರತ್ಯಕ್ಷಸಿದ್ಧಿದಂ** = ಪ್ರತ್ಯಕ್ಷಸಿದ್ಧಿಯನ್ನುಂಟು ಮಾಡುವ, **ಶ್ರೀ ರಾಘವೇಂದ್ರ ತಂತ್ರಂ** = ಶ್ರೀ ರಾಘವೇಂದ್ರ ತಂತ್ರವೆಂಬ ಗ್ರಂಥವನ್ನು, **ತವ** = ನಿಮ್ಮ (ರಾಘವೇಂದ್ರರ), **ಆಜ್ಞಯಾ** = ಆಜ್ಞೆಯಿಂದ, **ವಕ್ಷ್ಯೇ** = ಹೇಳುವೆನು.

ನಾರಾಯಣಂ ನಮಸ್ಕೃತ್ಯ ರಾಮಕೃಷ್ಣದ್ವಯಾತ್ಮಕಮ್ ।
ಮಾರುತಿತ್ರಿತಯಂ ಪ್ರಾಣಂ ತತೋ ಗ್ರಂಥಮುದೀರಯೇ ॥ ೨॥

ರಾಮಕೃಷ್ಣದ್ವಯಾತ್ಮಕಂ = ಶ್ರೀರಾಮ ಹಾಗೂ ಶ್ರೀಕೃಷ್ಣ ರೂಪಗಳಿಂದ ಅಭಿನ್ನವಾದ, **ನಾರಾಯಣಂ** = ನಾರಾಯಣನನ್ನು, **ಮಾರುತಿತ್ರಿತಯಂ** = ಹನುಮ-ಭೀಮ-ಮಧ್ವರೆಂಬ ಮೂರು ರೂಪಗಳುಳ್ಳ, **ಪ್ರಾಣಂ** = ಮುಖ್ಯಪ್ರಾಣದೇವನನ್ನು, **ನಮಸ್ಕೃತ್ಯ** = ನಮಸ್ಕರಿಸಿ, **ತತಃ** = ಅನಂತರ, **ಗ್ರಂಥಂ** = ರಾಘವೇಂದ್ರ ತಂತ್ರವೆಂಬ ಗ್ರಂಥವನ್ನು, **ಉದೀರಯೇ** = ತಿಳಿಸುವೆನು.

ಶ್ರೀ ರಾಘವೇಂದ್ರ ಗುರುರಾಟ್ ಸಾರ್ವಭೌಮಾಂಘ್ರಿರೇಣವಃ ।
ಸಿದ್ಧಿಂ ದಿಶಂತು ಮೇ ವಾಚಾಂ ರಸಾರ್ಣವ ಇವಾಂಭಸಾಂ ॥ ೩॥

ಶ್ರೀ ರಾಘವೇಂದ್ರ ಗುರುರಾಟ್ ಸಾರ್ವಭೌಮಾಂಘ್ರಿರೇಣವಃ = **ಶ್ರೀ ರಾಘವೇಂದ್ರ ಗುರುರಾಟ್** = ಶ್ರೀ ರಾಘವೇಂದ್ರ ಗುರುರಾಜರೆಂಬ, **ಸಾರ್ವಭೌಮ**

= ಸಾರ್ವಭೌಮರಾದ ರಾಘವೇಂದ್ರರ, **ಅಂಘ್ರಿರೇಣವಃ** = ಪಾದಗಳಲ್ಲಿರುವ ಧೂಳುಗಳು, **ಮೇ** = ನನ್ನ (ಕೃಷ್ಣಾವಧೂತರ), **ವಾಚಾಂ** = ಮಾತುಗಳಿಗೆ, **ರಸಾರ್ಣವಃ** = ಸಮುದ್ರವು, **ಅಂಭಸಾಂ ಇವ** = ನೀರುಗಳಿಗೆ ಹೇಗೋ ಹಾಗೆ, **ಸಿದ್ಧಿಂ** = ಸಿದ್ಧಿಯನ್ನು, **ದಿಶಂತು** = ಕೊಡಲಿ.

ರಾಘವೇಂದ್ರಗುರೋಃ ಪಾದಪದ್ಮಪಾಂಸುಲುಠನ್ಮನಾಃ ।
ಅಪ್ಪಣ್ಣಾಚಾರ್ಯವರ್ಯೋಽತ್ರ ಸಿದ್ಧಿಂ ದಿಶತು ಕರ್ಮಣಿ ॥ ೪ ॥

ರಾಘವೇಂದ್ರ ಗುರೋಃ = ಶ್ರೀ ರಾಘವೇಂದ್ರಗುರುಗಳ, **ಪಾದಪದ್ಮ ಪಾಂಸುಲುಠನ್ಮನಾಃ** = ಪಾದಕಮಲಗಳ ರೇಣುಗಳಲ್ಲಿ, **ಲುಠನ್ಮನಾಃ** = ಅತ್ಯಾಸಕ್ತವಾದ ಮನಸ್ಸುಳ್ಳ, **ಅಪ್ಪಣ್ಣಾಚಾರ್ಯವರ್ಯಃ** = ಪೂಜ್ಯರಾದ ಅಪ್ಪಣ್ಣಾಚಾರ್ಯರು, **ಅತ್ರ** = ಈ, **ಕರ್ಮಣಿ** = ಗ್ರಂಥ ರಚನಾಕಾರ್ಯದಲ್ಲಿ, **ಸಿದ್ಧಿಂ** = ಸಿದ್ಧಿಯನ್ನು, **ದಿಶತು** = ಕೊಡಲಿ. ಈ ಗ್ರಂಥಕಾರ್ಯವು ಪೂರ್ಣಗೊಳ್ಳುವಂತೆ ಅನುಗ್ರಹಿಸಲಿ ಎಂದು ಅಭಿಪ್ರಾಯ.

ಯಃ ಪೂರ್ವಂ ಬೋಧಯಾಮಾಸ ಸ್ವಪ್ನೇ ಮಾಂ ವಿಮುಖಂ ಗುರೋಃ।
ದ್ವಾತ್ರಿಂಶದ್ವರ್ಷಪರ್ಯಂತಂ ದುರಾಚಾರರತಂ ಸದಾ ॥ ೫ ॥

ಯಃ = ಅಪ್ಪಣ್ಣಾಚಾರ್ಯರು, (ಯಾವ ರಾಘವೇಂದ್ರ ತೀರ್ಥರಿಂದ ಪ್ರೇರಿತರಾದ), **ಗುರೋಃ ವಿಮುಖಂ** = ರಾಘವೇಂದ್ರರನ್ನು ಭಜಿಸದೆ ವಿಮುಖನಾದ, **ದ್ವಾತ್ರಿಂಶದ್ವರ್ಷಪರ್ಯಂತಂ** = ಮುವ್ವತ್ತೆರಡು ವರ್ಷಗಳ ಕಾಲ, **ಸದಾ** = ಯಾವಾಗಲೂ, **ದುರಾಚಾರರತಂ** = ವ್ಯಭಿಚಾರಾದಿ ಕೆಟ್ಟವ್ಯಸನಗಳಲ್ಲಿ ಆಸಕ್ತಿ ಹೊಂದಿರುವ, **ಮಾಂ** = ನನ್ನನ್ನು, **ಸ್ವಪ್ನೇ** = ಸ್ವಪ್ನದಲ್ಲಿ ಕಾಣಿಸಿ, ಸ್ವಪ್ನದ ಮೂಲಕ, **ಬೋಧಯಾಮಾಸ** = ಎಚ್ಚರಿಸಿದರೋ, ಅಂಥಹ ಅಪ್ಪಣಾಚಾರ್ಯರು ಸಿದ್ಧಿಯನ್ನು ನೀಡಲಿ.

ಪ್ರಬೋಧಿತೋಽಪ್ಯವಿಶ್ವಾಸಾದಪ್ಪಣ್ಣಾರ್ಯೇಣ ಮೂಢಧೀಃ ।
ನಾಕಾರ್ಷಂ ಶ್ರೀಗುರೌ ಭಕ್ತಿಂ ಪುನರಾಸಂ ಕುಕರ್ಮಣಿ ॥ ೬ ॥

ಮೂಢಧೀಃ = ಮಂದಬುದ್ಧಿಯುಳ್ಳ ನಾನು, **ಅಪ್ಪಣ್ಣಾರ್ಯೇಣ** = ಅಪ್ಪಣ್ಣಾಚಾರ್ಯರಿಂದ, **ಪ್ರಬೋಧಿತೋಽಪಿ** = ಎಚ್ಚರಿಸಲ್ಪಟ್ಟರೂ, **ಅವಿಶ್ವಾಸಾತ್**

= ನಂಬಿಕೆ ಇಲ್ಲವಾದ್ದರಿಂದ, **ಗುರೌ** = ರಾಘವೇಂದ್ರರಲ್ಲಿ, **ಭಕ್ತಿಂ** = ಭಕ್ತಿಯನ್ನು, **ನ ಅಕಾರ್ಷಂ** = ಮಾಡಲಿಲ್ಲ, **ಪುನಃ** = ಹಿಂದಿನಂತೆಯೇ, **ಕುಕರ್ಮಣಿ** = ನೀಚ ಕರ್ಮಗಳಲ್ಲಿ, **ಆಸಮ್** = ಆಸಕ್ತನಾದೆನು.

ಪುನಃ ಸ್ವಪ್ನೇ ಸಮಾಗತ್ಯ ಮಂತ್ರೌ ಸ ವ್ಯಾಸಕೃಷ್ಣಯೋಃ ।
ಅಪ್ಪಣಾಚಾರ್ಯೋऽಹಮಿತ್ಯುಕ್ತ್ವಾ ಸೇವಾಂ ಚೋಪಾವಿಶದ್ ಗುರೋಃ ॥ ೭॥

ಸಃ = ಅಪ್ಪಣ್ಣಾಚಾರ್ಯರು, **ಸ್ವಪ್ನೇ** = ಸ್ವಪ್ನದಲ್ಲಿ, **ಪುನಃ** = ಎರಡನೇ ಬಾರಿ, **ಸಮಾಗತ್ಯ** = ಕಾಣಿಸಿಕೊಂಡು, **ಅಹಂ** = ನಾನು, **ಅಪ್ಪಣ್ಣಾರ್ಯಃ** = ಅಪ್ಪಣ್ಣಾಚಾರ್ಯರು, **ಇತಿ** = ಹೀಗೆಂದು, **ಉಕ್ತ್ವಾ** = ಹೇಳಿ, **ವ್ಯಾಸಕೃಷ್ಣಯೋಃ** = ವೇದವ್ಯಾಸ ಹಾಗೂ ಶ್ರೀಕೃಷ್ಣರ, **ಮಂತ್ರೌ** = ಓಂ ವ್ಯಾಂ ವೇದವ್ಯಾಸಾಯ ನಮಃ, ಓಂ ಕ್ಲೀಂ ಕೃಷ್ಣಾಯ ನಮಃ ಎಂಬ ಮಂತ್ರಗಳನ್ನು, **ಗುರೋಃ** = ರಾಘವೇಂದ್ರಗುರುಗಳ, **ಸೇವಾಂ ಚ** = ಸೇವೆಯನ್ನು ಮಾಡುವ ವಿಧಿ ವಿಧಾನಗಳನ್ನು ಕೂಡ, **ಉಪಾದಿಶತ್** = ಉಪದೇಶಿಸಿದರು.

ಅಜ್ಞಾತ ಶ್ರೀ ಗುರುಸ್ತೋತ್ರೋऽಪ್ಯೇತತ್ಪ್ರಭೃತಿ ವಿಶ್ವಸನ್।
ಗುರುಸ್ತೋತ್ರಾರ್ಥಮೇವಾಹಂ ಪಠನ್ ಗುರುಮಪೂಜಯಮ್ ॥ ೮॥

ಏತತ್ಪ್ರಭೃತಿ = ವ್ಯಾಸಕೃಷ್ಣರ ಮಂತ್ರೋಪದೇಶವಾದ ದಿವಸದಿಂದ, ಪ್ರಾರಂಭಿಸಿ, **ವಿಶ್ವಸನ್** = ಅಪ್ಪಣ್ಣಾಚಾರ್ಯರ ಮಾತಿನಲ್ಲಿ ವಿಶ್ವಾಸವಿಡುತ್ತಾ, **ಅಜ್ಞಾತಶ್ರೀ ಗುರುಸ್ತೋತ್ರೋऽಪಿ** = ರಾಘವೇಂದ್ರ ಸ್ತೋತ್ರವನ್ನೇ ಅರಿಯದ, **ಅಹಂ** = ನಾನು, **ಗುರುಸ್ತೋತ್ರಾರ್ಥಮ್** ಏವ = ಕೇವಲ ರಾಘವೇಂದ್ರ ಸ್ತೋತ್ರದ ಅರ್ಥವನ್ನು ಮಾತ್ರ, **ಪಠನ್** = ಓದುತ್ತಾ, **ಗುರುಮ್** = ಶ್ರೀ ರಾಘವೇಂದ್ರರನ್ನು, **ಅಪೂಜಯಮ್** = ಪೂಜಿಸಿದೆನು.

ಏವಂ ಕತಿಪಯೇ ಕಾಲೇ ನಿವೃತ್ತೇ ಕೋऽಪಿ ಸದ್ಯತಿಃ ।
ಸ್ವಪ್ನೇ ಯದಾಹ ಗೋಪ್ಯತ್ವಾತ್ ತದ್ವಕ್ತುಂ ನ ಹಿ ಸಾಂಪ್ರತಮ್ ॥ ೯॥

ಏವಂ = ಹಿಂದಿನ ರೀತಿಯಂತೆ, **ಕತಿಪಯೇ ಕಾಲೇ** = ಕೆಲವು ಸಮಯವು, **ನಿವೃತ್ತೇ(ಸತಿ)** = ಹೋಗುತ್ತಿರಲು, **ಕ್ಯೋऽಪಿ** = ಯಾರೋ ಒಬ್ಬ, **ಸದ್ಯತಿ** = ದಿವ್ಯತೇಜಸ್ವಿಯಾದ, ಯತಿಶ್ರೇಷ್ಠರು, **ಸ್ವಪ್ನೇ** = ನನ್ನ ಸ್ವಪ್ನದಲ್ಲಿ, **ಯತ್** = ಯಾವ

ವಿಚಾರವನ್ನು, **ಆಹ** = ಹೇಳಿದರೋ, **ತತ್** = ಆ ವಿಷಯವನ್ನು, **ವಕ್ತುಂ** = ಬಹಿರಂಗಪಡಿಸಲು, **ಗೋಪ್ಯತ್ವಾತ್** = ರಹಸ್ಯವಾದ್ದರಿಂದ, **ನ ಹಿ ಸಾಂಪ್ರತಮ್** = ಯುಕ್ತವಾದದ್ದಲ್ಲ.

ತದಾರಭ್ಯಾವಧೂಯಾಹಂ ವಿಷಯಾನ್ ಬಾಂಧವಾನ್ ಗೃಹಮ್ ।
ಕೋಶಂ ಪಿತ್ರಾರ್ಜಿತಂ ಪುತ್ರಾನ್ ಪತ್ನೀದ್ವಯಮಪಿ ಪ್ರಿಯಮ್ ॥ ೧೦॥

ತದಾರಭ್ಯ = ಯತಿಗಳ ಸ್ವಪ್ನಸಂದೇಶರಾದ ದಿನದಿಂದ ಆರಂಭಿಸಿ, **ಅಹಮ್** = ನಾನು, **ವಿಷಯಾನ್** = ವೈಷಯಿಕ ಭೋಗಗಳನ್ನು, **ಬಾಂಧವಾನ್** = ಬಂಧುಗಳನ್ನು, **ಗೃಹಮ್** = ಮನೆಯನ್ನು, **ಪಿತ್ರಾರ್ಜಿತಂ** = ತಂದೆಯಿಂದ ಸಂಪಾದಿಸಲ್ಪಟ್ಟ, **ಕೋಶಂ** = ಧನಸಂಗ್ರಹವನ್ನು, **ಪುತ್ರಾನ್** = ನಾಲ್ಕು ಗಂಡು, ಒಂದು ಹೆಣ್ಣುಮಗುವನ್ನು, **ಪ್ರಿಯಮ್** = ಅತಿಪ್ರಿಯರಾದ, **ಪತ್ನೀದ್ವಯಮ್ ಅಪಿ** = ಇಬ್ಬರು ಪತ್ನಿಯರನ್ನು ಕೂಡ, **ಅವಧೂಯ** = ತಿರಸ್ಕರಿಸಿ, (ಅವಧೂತಃ = ವಿರಾಗಿಯಾಗಿ, **ಅಭವಂ** = ಆದೆನು), ಮುಂದಿನ ಶ್ಲೋಕದಿಂದ ಅನ್ವಯ.

ಮನಸಾಪಿ ಪರಿತ್ಯಜ್ಯ ಗೃಹಾದನ್ಯತ್ರ ತಸ್ಥಿವಾನ್ ।
ಉಪಾಸ್ಯ ಗುರುಪಾದಾಬ್ಜಮವಧೂತಸ್ತತೋಽಭವಮ್ ॥ ೧೧॥

ಮನಸಾಪಿ = ದೇಹದಿಂದ ಮಾತ್ರವಲ್ಲದೆ, ಮನಃ ಪೂರ್ವಕವಾಗಿಯೂ, **ಪರಿತ್ಯಜ್ಯ** = ಹಿಂದೆ ತಿಳಿಸಿದ ವಿಷಯ, ಬಂಧುಬಾಂಧವರುಗಳನ್ನು, ಪರಿತ್ಯಜಿಸಿ, **ಅನ್ಯತ್ರ** = ಬೇರೆ ಕಡೆಯಲ್ಲಿಯೇ, **ತಸ್ಥಿವಾನ್** = ನಿಂತೆನು, **ತತಃ** = ಅನಂತರ, **ಗುರುಪಾದಾಬ್ಜಂ** = ರಾಘವೇಂದ್ರ ಗುರುಗಳ ಪಾದಕಮಲಗಳನ್ನು, **ಉಪಾಸ್ಯ** = ಉಪಾಸನೆಯನ್ನು ಮಾಡಿ, **ಅವಧೂತಃ** = ವಿರಾಗಿಯಾಗಿ, **ಅಭವಂ** = ಆದೆನು. (ಹೀಗೆ ಕೃಷ್ಣಾಚಾರ್ಯರು ಕೃಷ್ಣಾವಧೂತರೆಂದು ಕರೆಯಲ್ಪಟ್ಟರು)

ಲೋಕೇ ಪಿತ್ರೋರ್ಯಥಾ ಪುತ್ರೇ ತತೋಽಪಿ ಪ್ರೇಮತೋಽಧಿಕಾತ್ ।
ಮಾಂ ರಕ್ಷತಿ ಗುರುಸ್ತಸ್ಮಾತ್ ಸ ಪಿತಾಽಹಂ ಚ ತತ್ಸುತಃ ॥ ೧೨॥

ಲೋಕೇ = ಜನರಲ್ಲಿ, **ಪಿತ್ರೋಃ** = ತಂದೆ - ತಾಯಿಗಳಿಗೆ, **ಪುತ್ರೇ** = ಮಗನಲ್ಲಿ **ಯಥಾ** = ಹೇಗೆ, ಪ್ರೇಮವಿರುವುದೋ, **ತತೋಽಪಿ** = ಆ ಪುತ್ರನ ಮೇಲಿನ ಪ್ರೇಮಕ್ಕಿಂತಲೂ, **ಅಧಿಕಾತ್ ಪ್ರೇಮತಃ** = ಪ್ರೇಮಾಧಿಕ್ಯದಿಂದ, **ಗುರುಃ** =

ರಾಘವೇಂದ್ರಗುರುಗಳು, **ಮಾಂ** = ನನ್ನನ್ನು, **ರಕ್ಷತಿ** = ರಕ್ಷಿಸುವವರು, **ತಸ್ಮಾತ್** = ಈ ನನ್ನಲ್ಲಿ ತೋರುವ ಪ್ರೇಮಾತಿಶಯದಿಂದಲೇ, **ಸಃ** = ರಾಘವೇಂದ್ರರು, **ಪಿತಾ** = ತಂದೆಯಾದರೆ, **ಅಹಂ** = ನಾನು (ಕೃಷ್ಣಾವಧೂತರು), **ತತ್ಸುತಃ** = ರಾಘವೇಂದ್ರರ ಪುತ್ರನಾಗಿರುವೆನು.

ತತ್ರಾಪ್ಯನುಸರಂತೀ ಮಾಂ ದ್ವಿತೀಯಾಭೂದ್ ದ್ವಿತೀಯಕಾ ।
ಗುರುರಾಜಾನುಮತ್ಯಾಽಹಂ ಸ್ವೀಚಕಾರ ಪತಿವ್ರತಾಮ್ ॥ ೧೩॥

ತತ್ರಾಪಿ = ವಿರಾಗಿಯಾಗಿರುವಾಗಲೂ, **ಮಾಂ** = ನನ್ನನ್ನು, **ಅನುಸರಂತೀ** = ಪತಿಸೇವಾದಿ ಪೂಜೆಗಳಿಂದ ನನ್ನನ್ನು ಅನುಸರಿಸುತ್ತಿದ್ದ, **ದ್ವಿತೀಯಕಾ** = ಎರಡನೇ ಹೆಂಡತಿಯಾದ ರುಕ್ಮಿಣಿಯು, **ದ್ವಿತೀಯಾ** = ಸಹಾಯಕಳಾಗಿ, **ಅಭೂತ್** = ಆದಳು, **ಅಹಮ್** = ನಾನು, **ಗುರುರಾಜಾನುಮತ್ಯಾ** = ಗುರುರಾಜರ ಆಣತಿಯಂತೆ, **ಪತಿವ್ರತಾಂ** = ಪತಿವ್ರತೆಯಾದ ರುಕ್ಮಿಣಿಯನ್ನು, **ಸ್ವೀಚಕಾರ** = ಸ್ವೀಕರಿಸಿದೆನು.

ಸುತಂ ಚ ಜನಯಾಂಚಕ್ರೇ ತಸ್ಯಾಂ ಗುರ್ವತ್ಯನುಗ್ರಹಾತ್ ।
ಕುಟುಂಬಜೀವನಂ ತತ್ರಾಪ್ಯಾಸೀತ್ ತಸ್ಯ ಪ್ರಸಾದತಃ ॥ ೧೪॥

ಗುರ್ವತ್ಯನುಗ್ರಹಾತ್ = ಗುರುಗಳ ಅತಿಶಯವಾದ ಅನುಗ್ರಹದಿಂದ, **ತಸ್ಯಾಂ** = ಆ ರುಕ್ಮಿಣಿಯಲ್ಲಿ, **ಸುತಂ ಚ** = ಒಬ್ಬ ಪುತ್ರನನ್ನು ಕೂಡ, **ಜನಯಾಂ ಚಕ್ರೇ** = ಹುಟ್ಟಿಸಿದೆನು, ಅನುಗ್ರಹಿಸಿದರು. **ತತ್ರಾಪಿ** = ಆ ವಿರಕ್ತವಾದ ಅವಸ್ಥೆಯಲ್ಲಿಯೂ, **ತಸ್ಯ** = ರಾಯರ, **ಪ್ರಸಾದತಃ** = ಅನುಗ್ರಹದಿಂದ, **ಕುಟುಂಬಜೀವನಂ** = ಸಾಂಸಾರಿಕ ಜೀವನವು, **ಆಸೀತ್** = ಇದ್ದಿತು.

ಪದೇ ಪದೇ ಸಮಾಗತ್ಯ ಸಾಕ್ಷಾತ್ ಸ್ವಪ್ನೇಬ್ರವೀತಿ ಯತ್ ।
ಗೋಪ್ಯಂ ವಕ್ತುಂ ನ ತದ್ಯುಕ್ತಂ ಗುರುರಾಜಃ ಕೃಪಾನಿಧಿಃ ॥ ೪॥

ಕೃಪಾನಿಧಿಃ = ಕರುಣಾಸಾಗರರಾದ, **ಗುರುರಾಜಃ** = ಗುರುರಾಯರು, **ಸ್ವಪ್ನೇ** = ಸ್ವಪ್ನದಲ್ಲಿ, **ಸಾಕ್ಷಾತ್** = ನೇರವಾಗಿ ತಾವೇ, **ಪದೇ ಪದೇ** = ಪುನಃ ಪುನಃ, **ಸಮಾಗತ್ಯ** = ಕಾಣಿಸಿಕೊಂಡು, **ಯತ್** = ಯಾವ ವಿಷಯವನ್ನು, ಬ್ರವೀತಿ (**ಅಬ್ರವೀತ್**) = ಹೇಳಿದರೋ, **ತತ್** = ಆ, **ಗೋಪ್ಯಂ** = ರಹಸ್ಯ ವಿಚಾರವನ್ನು, **ವಕ್ತುಂ** = ಬಹಿರಂಗ ಪಡಿಸಲು, **ನ ಯುಕ್ತಮ್** = ಯೋಗ್ಯವಾಗಿರುವುದಿಲ್ಲ.

ಚೋದಿತಸ್ತೇನ ವಕ್ಷ್ಯಾಮಿ ಭಕ್ತಾನುಗ್ರಹ ಕಾಂಕ್ಷಿಣಾ ।
ಶ್ರೀರಾಘವೇಂದ್ರತಂತ್ರಾಖ್ಯಂ ಗ್ರಂಥಂ ಪ್ರತ್ಯಕ್ಷಸಿದ್ಧಿದಮ್ ॥ ೧೬॥

ಭಕ್ತಾನುಗ್ರಹಕಾಂಕ್ಷಿಣಾ = ಭಕ್ತರನ್ನು ಅನುಗ್ರಹಿಸಬೇಕೆಂಬ ಇಚ್ಛೆಯುಳ್ಳ, **ತೇನ** = ರಾಘವೇಂದ್ರಗುರುಗಳಿಂದ, **ಚೋದಿತಃ** = ಅನುಜ್ಞೆ ಹೊಂದಿದ, ನಾನು, **ಪ್ರತ್ಯಕ್ಷಸಿದ್ಧಿದಂ** = ಸಿದ್ಧಿಯಾಗಿರುವುದನ್ನು ನಮ್ಮ ಅನುಭವಕ್ಕೆ (ಸಾಕ್ಷಿಗೆ) ತೋರಿಸುವ, **ಶ್ರೀ ರಾಘವೇಂದ್ರ ತಂತ್ರಾಖ್ಯಂ** = 'ಶ್ರೀ ರಾಘವೇಂದ್ರ ತಂತ್ರ' ಎಂಬ ಹೆಸರಿನ, **ಗ್ರಂಥಂ** = ಗ್ರಂಥವನ್ನು, **ವಕ್ಷ್ಯಾಮಿ** = ತಿಳಿಸುವೆನು.

ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯೋಽಖಿಲೇಶ್ವರಃ ।
ಸ ಶಂಕರಶರೀರಸ್ಥೋ ಯಜ್ಞೋಚ್ಛಿಷ್ಟಧನಪ್ರದಃ ॥ ೧೭॥

(ಈ ಶ್ಲೋಕವು ಮುಂದಿನ ಶ್ಲೋಕದಲ್ಲಿ ಅನ್ವಯ ಹೊಂದುತ್ತದೆ) **ಅಖಿಲೇಶ್ವರಃ** = ಸಮಸ್ತ ಜಗತ್ತಿಗೂ ನಿಯಾಮಕರಾದ, **ವಿಷ್ಣುಃ** = ನಾರಾಯಣಾವತಾರಿಯಾದ, **ಜಾಮದಗ್ನ್ಯಃ** = ಜಮದಗ್ನಿಪುತ್ರರೆನಿಸಿದ ಪರಶುರಾಮದೇವರು, **ಧನಸ್ಯ** = ಐಹಿಕ ಸಂಪತ್ತುಗಳಿಗೆ, **ದೇವತಾ** = ದೇವತೆಯಾಗಿರುವವರು, **ಸಃ** = ಅವರು, **ಶಂಕರ ಶರೀರಸ್ಥಃ** = ಶಂಕರನ ಅಂತರ್ಯಾಮಿಯಾಗಿ, **ಯಜ್ಞೋಚ್ಛಿಷ್ಟಧನಪ್ರದಃ** = ಯಾಗವನ್ನು ಮಾಡಿದ ಮೇಲೆ ಉಳಿದಿರುವ ಸಮಸ್ತ ಧನಾದಿ ವಸ್ತುಗಳನ್ನು ಕೊಡುವವರು ಎಂದು, **ವರ್ತತೇ** = ಪ್ರಸಿದ್ಧರಾಗಿರುವವರು (ಯಜ್ಞ ಮಾಡಿದ ಮೇಲೆ ಉಳಿದ ಎಲ್ಲಾ ವಸ್ತುಗಳೂ ರುದ್ರರದು.)

ಇತ್ಯಾದಿ ಗುರುವಾಕ್ಯೇನ ಧನದಂ ಪಠನಾದಿದಮ್ ।
ಗಂಗಾದಿ ಸರ್ವತೀರ್ಥಾನಾಂ ಲಭತೇ ಸ್ನಾನಜಂ ಫಲಮ್ ॥ ೧೮॥

ಇತ್ಯಾದಿ = ಇವೇ ಮೊದಲಾದ, **ಗುರುವಾಕ್ಯೇನ** = ಗುರುಗಳು ಹೇಳಿದ ವಾಕ್ಯಾನುಸಾರವಾಗಿ, **ಧನದಂ** = ಧನಾದಿಗಳನ್ನು ನೀಡುವ, **ಇದಮ್** = ಈ ಗ್ರಂಥವನ್ನು, **ಪಠನಾತ್** = ಪಠಿಸುವುದರಿಂದ, (ನರಃ = ಭಕ್ತನು), **ಗಂಗಾದಿ ಸರ್ವತೀರ್ಥಾನಾಂ** = ಗಂಗೆಯೇ ಮೊದಲಾದ ಸಮಸ್ತ ತೀರ್ಥಗಳಲ್ಲಿ, **ಸ್ನಾನಜಂ** = ಸ್ನಾನಮಾಡುವಿಕೆಯಿಂದ ಬರುವ, **ಫಲಮ್** = ಫಲವನ್ನು, **ಲಭತೇ** = ಪಡೆಯುವನು.

ವೇದಾಂತಭಾರತಾದೀನಾಂ ವೇದಾನಾಮಪಿ ಸಾಂಗತಃ ।
ಪಠನೇ ಯತ್ಫಲಂ ತಚ್ಚ ಸಕೃತ್ ಪಠನತೋ ಭವೇತ್ ॥ ೧೯॥

ಸಾಂಗತಃ = ಅಂಗಗಳಿಂದ ಸಹಿತವಾದ, **ವೇದಾನಾಂ** = ನಾಲ್ಕು ವೇದಗಳ, **ವೇದಾಂತ** = ಉಪನಿಷತ್ತು, **ಭಾರತಾದೀನಾಂ** = ಮಹಾಭಾರತಾದಿ ಇತಿಹಾಸಗಳ, **ಪಠನೇ** = ಪಠನಮಾಡುವುದರಿಂದ ಬರುವ, **ಯತ್ಫಲಂ** = ಯಾವ ಫಲವಿದೆಯೋ, **ತಚ್ಚ** = ಆ ಫಲವು, **ಸಕೃತ್** = ಒಂದು ಸಲ, **ಪಠನತಃ** = ಈ ಗ್ರಂಥದ ಪಾರಾಯಣವನ್ನು ಮಾಡುವುದರಿಂದ, **ಭವೇತ್** = ಲಭಿಸುವುದು.

ಸರ್ವಮಂಗಲಮಾಂಗಲ್ಯಂ ಸರ್ವತಾಪಪ್ರಣಾಶನಮ್ ।
ಸರ್ವರೋಗಪ್ರಶಮನಮಾಯುರ್ವರ್ಧನಮುತ್ತಮಮ್ ॥ ೨೦॥

ಇದಂ = ಈ ಗ್ರಂಥವು, **ಸರ್ವಮಂಗಲಮಾಂಗಲ್ಯಂ** = ಸರ್ವಮಂಗಲಕರ ವಸ್ತುಗಳಿಗೂ, **ಮಾಂಗಲ್ಯಂ** = ಮಾಂಗಲ್ಯವನ್ನು ಉಂಟುಮಾಡುವ ಸಾಮರ್ಥ್ಯವುಳ್ಳದ್ದು. **ಸರ್ವತಾಪಪ್ರಣಾಶನಮ್** = ಸಮಸ್ತ ಆಧ್ಯಾತ್ಮಿಕಾದಿ ತಾಪಗಳನ್ನು ನಾಶಮಾಡುವ ಸಾಮರ್ಥ್ಯವುಳ್ಳದ್ದು. **ಸರ್ವರೋಗ ಪ್ರಶಮನಂ** = ಸಮಸ್ತ ದೈಹಿಕ ರೋಗಗಳನ್ನು ಪರಿಹರಿಸುವ ಶಕ್ತಿಯುಳ್ಳದ್ದು, **ಆಯುರ್ವರ್ಧನಂ** = ಆಯುರಭಿವೃದ್ಧಿ ಮಾಡುವಲ್ಲಿ, **ಉತ್ತಮಂ** = ಉತ್ಕೃಷ್ಟವಾದದ್ದು.

ಸ್ತ್ರೀಹತ್ಯಾ ಬಾಲಘಾತಶ್ಚ ಗೋಹತ್ಯಾ ಬ್ರಹ್ಮಶಾಸನಂ ।
ಸರ್ವಹತ್ಯಾಕೃತಂ ಪಾಪಂ ಕ್ಷಯಂ ಯಾತ್ಯಸ್ಯ ಪಾಠತಃ ॥ ೨೧॥

ಸ್ತ್ರೀಹತ್ಯಾ = ಸ್ತ್ರೀಘಾತವು, **ಬಾಲಘಾತಃ** = ಶಿಶುಹತ್ಯೆಯು, **ಗೋಹತ್ಯಾ** = ಗೋವಿನಹತ್ಯೆಯು, **ಬ್ರಹ್ಮಶಾಸನಂ** = ಬ್ರಹ್ಮಹತ್ಯೆಯು ಇವೇ ಮೊದಲಾದ, **ಸರ್ವಹತ್ಯಾಕೃತಂ** = ಪ್ರಾಣಿಹತ್ಯಾದಿ ಸಮಸ್ತ ಹತ್ಯೆಗಳಿಂದ ಉಂಟಾದ, **ಪಾಪಂ** = ಪಾಪ ಸಮೂಹವು, **ಅಸ್ಯ** = ಈ ಗ್ರಂಥದ, **ಪಾಠತಃ** = ಪಠನಮಾಡುವಿಕೆಯಿಂದ, **ಕ್ಷಯಂ** = ನಾಶವನ್ನು, **ಯಾತಿ** = ಹೊಂದುತ್ತದೆ.

ಸ್ತೇಯೀ ಗುರ್ವಂಗನಾಗಾಮೀ ತಥಾ ವಿಶ್ವಾಸಘಾತಕಃ ।
ಅಯೋನಿಗಾಮೀ ಯೋ ಮೂಢೋ ಬ್ರಾಹ್ಮಣ್ಯಾ ಸಹ ಸಂಗಮೀ ॥ ೨೨॥

ಸ್ತೇಯೀ = ಕಳ್ಳತನ ಮಾಡಿದವನು, **ಗುರ್ವಂಗನಾಗಾಮೀ** = ಗುರುಪತ್ನಿಯನ್ನು ಸೇರಿದವನು, **ತಥಾ** = ಹಾಗೆಯೇ, **ವಿಶ್ವಾಸಘಾತಕಃ** = ನಂಬಿಕೆದ್ರೋಹಿಯು, **ಅಯೋನಿಗಾಮೀ** = ತನಗೆ ಯೋಗ್ಯವಲ್ಲದ ಶೂದ್ರಾದಿ ಸ್ತ್ರೀಯರನ್ನು ಉಪಭೋಗಿಸು

ವವನು, ಬ್ರಾಹ್ಮಣ್ಯಾ ಸಹ= ಬ್ರಾಹ್ಮಣಸ್ತ್ರೀಯರ ಜೊತೆಗೆ, ಸಂಗಮೀ=ಸಂಗಮ ಮಾಡುವವನು (ಪಠನಾತ್ ಶುದ್ಧಿಮಾಪ್ನುಯಾತ್ ಎಂಬ ಮುಂದಿನ ಶ್ಲೋಕದಲ್ಲಿ ಅನ್ವಯ).

ಕುಯೋನಿಮೈಥುನಾದ್‌ದುಷ್ಟೋ ದುಷ್ಟೋ ದುರ್ಬುದ್ಧಿಚೇತಸಃ ।
ನಷ್ಟಸ್ವಧರ್ಮೋऽಪ್ಯೇತಸ್ಯ ಪಠನಾತ್ ಶುದ್ಧಿಮಾಪ್ನುಯಾತ್ ॥ ೨೩॥

ಯಃ = ಯಾವ ಮೂಢನು, **ಕುಯೋನಿ ಮೈಥುನಾತ್** = ಶೂದ್ರಾದಿ ಸ್ತ್ರೀಯರಿಂದ ಕೂಡಿ ಗ್ರಾಮ್ಯಧರ್ಮದಿಂದ, **ದುಷ್ಟಃ** = ಪಾಪಿಯಾದವನೋ, **ದುರ್ಬುದ್ಧಿಚೇತಸಃ**= ದುರ್ಜನರ ಸಹವಾಸದಿಂದ, **ದುಷ್ಟಃ**= ದುಷ್ಟನಾಗಿರುವವನೋ, **ಸಃ** = ಅವನು, **ನಷ್ಟಸ್ವಧರ್ಮಃ ಅಪಿ** = ಸ್ವಧರ್ಮಾಚರಣೆಯಿಂದ ಚ್ಯುತನಾದರೂ, **ಅಸ್ಯ** = ಈ ಗ್ರಂಥದ, **ಪಠನಾತ್** = ಪಾಠಮಾತ್ರದಿಂದ, **ಶುದ್ಧಿಂ** = ಪವಿತ್ರತೆಯನ್ನು **ಆಪ್ನುಯಾತ್** = ಹೊಂದುವನು.

ವಿನಾ ಪೂಜಾಂ ವಿನಾ ಧ್ಯಾನಂ ವಿನಾ ನ್ಯಾಸಂ ವಿನಾ ತಪಃ ।
ವಿನಾ ಜಪಂ ವಿನಾ ಯಜ್ಞಂ ವಿನಾ ಯೋಗಂ ಚ ಭಾವನಾಮ್ ॥ ೨೪॥

ಯೇ = ಯಾವ ಮೂಢರು, **ಪೂಜಾಂ ವಿನಾ** = ಪೂಜೆಯಿಲ್ಲದೆ ಇರುವವರೋ, **ಧ್ಯಾನಂ ವಿನಾ** = ಧ್ಯಾನವಿಲ್ಲದೆ, **ನ್ಯಾಸಂ ವಿನಾ** = ತತ್ವನ್ಯಾಸಾದಿಗಳು ಇಲ್ಲದೇನೇ, **ತಪಃ ವಿನಾ** = ತಪಸ್ಸು ಇಲ್ಲದೆ, **ಜಪಂ ವಿನಾ** = ಗಾಯತ್ರ್ಯಾದಿ ಜಪವಿಲ್ಲದೆ, **ಯಜ್ಞಂ ವಿನಾ** = ವೈಶ್ವದೇವಾದಿ ಯಜ್ಞಗಳಿಲ್ಲದೆ, **ಯೋಗಂ ವಿನಾ** = ಧ್ಯಾನಾದಿ ಉಪಾಯವಿಲ್ಲದೆ, **ಭಾವನಾಮ್ ಚ ವಿನಾ** = ಭಕ್ತ್ಯಾದಿ ಭಾವನೆಯಿಲ್ಲದೆ ಇರುವರೋ ಅವರಿಗೆ- (ಮುಂದೆ ಅನ್ವಯಿಸುತ್ತದೆ).

ಫಲಂ ತು ಲಭತೇ ತೇಷಾಂ ಪಠನಾದಸ್ಯ ನಿತ್ಯಶಃ ।
ಅತ್ಯಂತ ಚಿತ್ತನೈರ್ಮಲ್ಯಕರಂ ದುಃಸ್ವಪ್ನನಾಶನಮ್ ॥ ೨೫॥

ನಿತ್ಯಶಃ = ಯಾವಾಗಲೂ, **ಅಸ್ಯ** = ಈ ಗ್ರಂಥದ, **ಪಠನಾತ್** = ಪಾರಾಯಣ ಮಾತ್ರದಿಂದ, **ಫಲಂ** = ಪೂಜಾದಿಗಳಿಂದ ಲಭಿಸಬಹುದಾದ ಫಲಗಳು, **ಲಭತೇ** = ಲಭಿಸುವುವು. **ತು** = ಹಾಗೆಯೇ, **ಅತ್ಯಂತ ಚಿತ್ತನೈರ್ಮಲ್ಯಕರಂ** = ಅಂತಃಕರಣ ಶುದ್ಧಿಯನ್ನೂ ಉಂಟುಮಾಡುವುದು, **ದುಃಸ್ವಪ್ನನಾಶನಮ್** = ಕೆಟ್ಟಕನಸುಗಳನ್ನು ನಾಶ ಮಾಡಬಲ್ಲದು.

ಯೋಗಾನಂದಕರಂ ಜ್ಞಾನಭಕ್ತಿವೈರಾಗ್ಯದಾಯಕಮ್ ।
ಭೂತಪ್ರೇತಪಿಶಾಚೋಗ್ರಬ್ರಹ್ಮರಾಕ್ಷಸ ನಾಶನಮ್ ॥ ೨೬॥

ಯೋಗಾನಂದಕರಂ = ಧ್ಯಾನಾದಿ ಉಪಾಯವನ್ನು ತಿಳಿಸಿ ಆನಂದವನ್ನುಂಟು ಮಾಡುವುದು, **ಬ್ರಹ್ಮರಾಕ್ಷಸ ವಿನಾಶನಮ್** = ಬ್ರಹ್ಮರಾಕ್ಷಸಪೀಡೆಯನ್ನು ನಾಶ ಮಾಡುವುದು, **ಜ್ಞಾನಭಕ್ತಿ ವೈರಾಗ್ಯದಾಯಕಮ್** = ಭಗವಂತನಲ್ಲಿ ಜ್ಞಾನ ಹಾಗೂ ಭಕ್ತಿಯನ್ನು, ಸಂಸಾರದಲ್ಲಿ ವೈರಾಗ್ಯವನ್ನು ಉಂಟುಮಾಡುವುದು, **ಭೂತಪ್ರೇತ ಪಿಶಾಚೋಗ್ರ ಬ್ರಹ್ಮರಾಕ್ಷಸನಾಶನಮ್ - ಭೂತ** = ಭೂತಗಳು, **ಪ್ರೇತ** = ಪ್ರೇತಗಳು, **ಪಿಶಾಚ** = ಪಿಶಾಚಿಗಳು, **ಉಗ್ರಬ್ರಹ್ಮರಾಕ್ಷಸ** = ಕ್ರೂರಿಯಾದ ಬ್ರಹ್ಮರಾಕ್ಷಸ ಪೀಡೆ ಯನ್ನು, **ವಿನಾಶನಮ್** = ನಾಶಮಾಡುವ ಸಾಮರ್ಥ್ಯವುಳ್ಳದ್ದು.

ಗಾಂಧರ್ವಮಾರೀ ಕೂಷ್ಮಾಂಡ ಬಾಲಗ್ರಹವಿನಾಶನಮ್।
ಸ್ವಾಮಿದ್ರೋಹ ಪಿತೃದ್ರೋಹ ಪಿತೃವ್ಯದ್ರೋಹಕಾರಕಮ್ ॥ ೨೭॥

ಗಂಧರ್ವ = ಗಂಧರ್ವವಿದ್ಯೆ, **ಮಾರೀ** = ಉರಿಮಾರಿಯು, **ಕೂಷ್ಮಾಂಡ** = ವಾಮಾಚಾರ, **ಬಾಲಗ್ರಹ** = ಕೋಟರಾ, ರೇವತೀ, ಪೂತನಾ ಮೊದಲಾದ ಬಾಲಗ್ರಹ ಗಳ, **ವಿನಾಶನಮ್** = ನಾಶವು, **ಸ್ವಾಮಿದ್ರೋಹ ಪಿತೃದ್ರೋಹ ಪಿತೃವ್ಯದ್ರೋಹಕಾರಕಂ** = **ಸ್ವಾಮಿದ್ರೋಹ** = ಯಜಮಾನನಿಗೆ ದ್ರೋಹ ಬಗೆಯುವುದು, **ಪಿತೃದ್ರೋಹ** = ತಂದೆಗೆ ಅಪಚಾರವೆಸಗುವುದು, **ಪಿತೃವ್ಯದ್ರೋಹ** = ತಂದೆಗೆ ಸಮಾನರಾದ ಚಿಕ್ಕಪ್ಪ, ದೊಡ್ಡಪ್ಪರುಗಳಿಗೆ ಎಸಗಿದ ದ್ರೋಹ ಇವುಗಳನ್ನು, **ಹಾರಕಮ್** = ಇಲ್ಲದಂತೆ ಮಾಡುವುದು.

ವಶ್ಯಾಕರ್ಷಣ ವಿದ್ವೇಷಮಾರಣೋಚ್ಚಾಟನಪ್ರದಂ ।
ಸ್ತಂಭನಂ ಶತ್ರುವಚಸಾಂ ಪ್ರತ್ಯರ್ಥೀಕೃತ ಕರ್ಮಣಾಮ್ ॥ ೨೮॥

ವಶ್ಯ = ವಶೀಕರಣ, **ಆಕರ್ಷಣ** = ಬೇರೆ ಸ್ಥಳದಲ್ಲಿದ್ದ ವಸ್ತುವನ್ನು ತನ್ನೆಡೆಗೆ ಬರುವಂತೆ ಮಾಡುವುದು, **ವಿದ್ವೇಷ** = ದ್ವೇಷ ಮಾಡುವುದು, **ಮಾರಣ** = ಮರಣ ವುಂಟಾಗುವಂತೆ ಮಾಡುವುದು, **ಉಚ್ಚಾಟನ** = ಶತ್ರುಗಳನ್ನು ದೂರ ಓಡಿಸುವುದು, ಇವುಗಳನ್ನು ನೀಡುವ ಸಾಮರ್ಥ್ಯವುಳ್ಳದ್ದು, **ಪ್ರತ್ಯರ್ಥೀಕೃತಕರ್ಮಣಾಂ** = ಶತ್ರುಗಳು ಮಾಡಿದ ಉಚ್ಚಾಟನಾದಿ ಕುಕರ್ಮಗಳ ಹಾಗೂ, **ಶತ್ರುವಚಸಾಂ** = ಶತ್ರುಗಳ ಮಾತುಗಳ, **ಸ್ತಂಭನಂ** = ಸ್ತಂಭನವನ್ನು ಮಾಡುವುದು.

ಯಂತ್ರತಂತ್ರ ಪ್ರಶಮನಂ ಚೋರವ್ಯಾಘ್ರಭಯಾಪಹಮ್ ।
ರಾಜಬಾಧಾಂ ಕ್ಷುದ್ರಬಾಧಾಂ ಹರೇತ್ ಕೈವಲ್ಯದಾಯಕಮ್ ॥ ೨೯॥

ಯಂತ್ರತಂತ್ರ ಪ್ರಶಮನಂ = ಯಂತ್ರ ಮತ್ತು ತಂತ್ರಗಳ ಶಕ್ತಿಯನ್ನು ಶಮನ ಗೊಳಿಸುವಂತಹುದು, **ಚೋರವ್ಯಾಘ್ರ ಭಯಾಪಹಮ್** = ಕಳ್ಳರು, ಹುಲಿ ಮುಂತಾದ ಪ್ರಾಣಿಗಳಿಂದ ಬರುವ ಭಯವನ್ನು ಪರಿಹರಿಸುವ ಸಾಮರ್ಥ್ಯವುಳ್ಳದ್ದು, **ರಾಜ ಬಾಧಾಂ** = ರಾಜರಿಂದ ಉಂಟಾಗುವ ತೊಂದರೆಗಳನ್ನು, **ಕ್ಷುದ್ರಬಾಧಾಂ** = ಸಾಮಾನ್ಯ ಜನರಿಂದ ಬರುವ ತೊಂದರೆಗಳನ್ನು, **ಹರೇತ್** = ಪರಿಹರಿಸುವ ಸಾಮರ್ಥ್ಯವುಳ್ಳದ್ದು. **ಕೈವಲ್ಯದಾಯಕಮ್** = ಮೋಕ್ಷಸಾಧನ ಜ್ಞಾನಭಕ್ತ್ಯಾದಿಗಳನ್ನು ಕೊಡುವ ಸಾಮರ್ಥ್ಯ ವುಳ್ಳದ್ದು.

ಹೃದ್ರೋಗಂ ಕುಕ್ಷಿರೋಗಂ ಚ ಶೂಲಾಪಸ್ಮಾರ ಗುಲ್ಮಜಂ ।
ಏಕಾಹಿಕಂ ದ್ವ್ಯಾಹಿಕಂ ಚ ತ್ರ್ಯಾಹಿಕಂ ಚತುರಾಹಿಕಮ್ ॥ ೩೦॥

ಹೃದ್ರೋಗಂ = ಹೃದಯಸ್ತಂಭನಾದಿ ರೋಗವು, **ಶೂಲಾಪಸ್ಮಾರ ಗುಲ್ಮಜಂ** - **ಶೂಲ** = ಶೂಲಪೀಡೆ, **ಅಪಸ್ಮಾರ** = ಮೂರ್ಛೆರೋಗವು, **ಗುಲ್ಮಜಂ** = ಪ್ಲೀಹರೋಗವೇ ಮೊದಲಾದವುಗಳಿಂದ ಜನ್ಯವಾದ, **ಏಕಾಹಿಕಂ** = ಒಂದು ದಿನದ, **ದ್ವ್ಯಾಹಿಕಂ** = ಎರಡು ದಿನಗಳ, **ತ್ರ್ಯಾಹಿಕಂ** = ಮೂರು ದಿನಗಳ, **ಚತುರಾಹಿಕಮ್** = ನಾಲ್ಕುದಿವಸಗಳ, **ಕುಕ್ಷಿರೋಗಂ ಚ** = ಉದರಪೀಡೆಯನ್ನು, **ಹರೇತ್** = ಪರಿ ಹರಿಸುತ್ತದೆ.

ಅನೇಕ ಜ್ವರ ಸಂಬಾಧಕುಷ್ಠಶೋಫಕ್ಷಯಾಧಿಕಮ್ ।
ಆಧಯೋ ವ್ಯಾಧಯಃ ಸರ್ವೇ ಪ್ರತ್ಯಂಗಿರಪುರೋಗಮಾಃ ॥ ೩೧॥

ಅನೇಕ ಜ್ವರಸಂಬಾಧಕುಷ್ಠಶೋಫಕ್ಷಯಾದಿಕಂ - **ಅನೇರ ಜ್ವರ** = ನಾನಾ ವಿಧವಾದ, ಚಳಿಜ್ವರಾದಿ ನಾನಾ ರೋಗಗಳು, **ಸಂಬಾಧ** = ಪೀಡೆಯು, **ಕುಷ್ಠ** = ಕುಷ್ಠರೋಗವು, **ಶೋಫ** = ಊದಲು ರೋಗ, **ಕ್ಷಯಾದಿಕಂ** = ಕ್ಷಯರೋಗವೇ ಮೊದಲಾದ ರೋಗಗಳು, **ಪ್ರತ್ಯಂಗಿರ ಪುರೋಗಮಾಃ** = ದೇಹದ ಅಂಗಗಳಿಗೆ ಬರುವ ರೋಗಗಳೇ ಮೊದಲಾದ, **ಸರ್ವೇ** = ಎಲ್ಲಾ ರೀತಿಯ, **ವ್ಯಾಧಯಃ** = ರೋಗಗಳು, **ಆಧಯಃ** = ಮನೋವ್ಯಥೆಗಳೂ, **ಪಲಾಯಂತೇ** = ದೂರವಾಗುವುವು - ಮುಂದಿನ ಶ್ಲೋಕದಿಂದ ಅನ್ವಯ.

ಏತಸ್ಯ ಪಾಠಮಾತ್ರೇಣ ಪಲಾಯಂತೇಽತಿ ದೂರತಃ ।
ಪ್ರತಿವಾದಿವಿಜಯಂ ವಿದ್ಯಾಂ ಧನಂ ರಾಜ್ಯಂ ಪಶೂನ್ ಸುತಾನ್ ॥ ೩೨॥

ಏತಸ್ಯ = ಈ ರಾಘವೇಂದ್ರ ತಂತ್ರದ, **ಪಾಠಮಾತ್ರೇಣ** = ಕೇವಲ ಪಾರಾಯಣದಿಂದ, **ಅತಿ ದೂರತಃ** = ಬಹಳದೂರ, **ಪಲಾಯಂತೇ** = ಓಡಿ ಹೋಗುವುವು, **ಪ್ರತಿವಾದಿವಿಜಯಂ** = ಪ್ರತಿವಾದಿಗಳ ವಿರುದ್ಧವಾಗಿ ವಾದದಲ್ಲಿ ಜಯವನ್ನು, **ವಿದ್ಯಾಂ** = ವಿದ್ಯೆಯನ್ನು, **ಧನಂ** = ಧನವನ್ನು, **ರಾಜ್ಯಂ** = ರಾಜ್ಯವನ್ನು, **ಪಶೂನ್** = ಗೋ ಸಂಪತ್ತನ್ನು, **ಸುತಾನ್** = ಸುಪುತ್ರರನ್ನೂ, **ಆಪ್ನುಯಾತ್** = ಹೊಂದ ಬಹುದು.

ಕನ್ಯಾಂ ಪತ್ನೀಂ ಚ ಲಭತೇ ಲೋಕಪೂಜ್ಯತ್ವಮಾಪ್ನುಯಾತ್ ।
ಕೃತ್ಯಾಭಿಚಾರಗರಲ ಸರ್ವಬಂಧನಿವಾರಣಮ್ ॥ ೩೩॥

ಕನ್ಯಾಂ ಪತ್ನೀಂ ಚ =ಯೋಗ್ಯ ಕನ್ಯೆಯನ್ನು ಪತ್ನಿಯನ್ನಾಗಿ, **ಲಭತೇ** = ಪಡೆ ಯುವನು, **ಲೋಕಪೂಜ್ಯತ್ವಂ**= ಜನಮನ್ನಣೆಯನ್ನು, **ಆಪ್ನುಯಾತ್** = ಹೊಂದುವನು. **ಕೃತ್ಯಾಭಿಚಾರಗರಲ ಸರ್ವಬಂಧ ನಿವಾರಕಮ್ - ಕೃತ್ಯಾ** = ಕೃತ್ಯೆಯು, **ಅಭಿಚಾರ** = ವಾಮಾಚಾರವು, **ಗರಲ** = ವಿಷಪ್ರಾಶನವು, **ಸರ್ವಬಂಧ** = ಎಲ್ಲಾ ರೀತಿಯ ಬಂಧನ ಗಳ, **ನಿವಾರಕಮ್** = ನಿವಾರಣ ಮಾಡುವ ಸಾಮರ್ಥ್ಯೋಪೇತವಾದದ್ದು.

ಪ್ರತಿಕೂಲವತೀ ಭಾರ್ಯಾಪ್ಯನುಕೂಲವತೀ ಭವೇತ್ ।
ಮಾತಾಪಿತೃಸುಹೃದ್ಬಂಧು ನಿಂದಕಃ ಸರ್ವದೂಷಕಃ ॥ ೩೪॥

ಪ್ರತಿಕೂಲವತೀ = ತನಗೆ ಅನುಕೂಲವಾಗಿರದ, **ಭಾರ್ಯಾ ಅಪಿ** = ಹೆಂಡತಿಯೂ ಕೂಡ, **ಅನುಕೂಲವತೀ** = ತನಗೆ ಅನುಕೂಲಳಾಗಿ, **ಭವೇತ್** = ಆಗುವಳು, **ಮಾತಾ** = ತಾಯಿಯು, **ಪಿತೃ** = ತಂದೆಯು, **ಸುಹೃತ್** = ಮಿತ್ರನು, **ಬಂಧು** = ಶಾರೀರಿಕ ಬಂಧುಗಳು, ಇವರನ್ನು, **ನಿಂದಕಃ** = ನಿಂದೆಮಾಡುವವನು, **ಸರ್ವದೂಷಕಃ** = ಸರ್ವರನ್ನು ನಿಂದಿಸುವ ಸ್ವಭಾವದವನೂ ಕೂಡ, ಮುಂದಿನ ಶ್ಲೋಕದಲ್ಲಿರುವ ಮುಚ್ಯತೇ = ಎಂಬುವುದರಿಂದ ಅನ್ವಯ.

ಅಭಕ್ಷ್ಯಭಕ್ಷಕೋ ವಾಽಪಿ ಮುಚ್ಯತೇ ಪಾತಕಾತ್ ತತಃ।
ಏಕಾವೃತ್ತ್ಯಾ ಪಠೇದೇತತ್ ಸರ್ವಪಾಪೈಃ ಪ್ರಮುಚ್ಯತೇ ॥ ೩೫॥

ಅಭಕ್ಷ್ಯಭಕ್ಷಕಃ ಅಪಿ = ತಿನ್ನಲು ಅಯೋಗ್ಯವಾದ್ದನ್ನು ತಿಂದಿರುವವನೂ ಕೂಡ, **ತತಃ ಪಾತ ಕಾತ್** = ಆ ಅಭಕ್ಷ್ಯಭಕ್ಷಣದಿಂದುಂಟಾದ ಪಾಪದಿಂದ, **ಮುಚ್ಯತೇ** = ಬಿಡುಗಡೆ ಹೊಂದುವವನು. **ಯಃ** = ಯಾವನು, **ಏಕಾವೃತ್ತ್ಯಾ** = ಒಂದು ಬಾರಿ, **ಏತತ್** = ಈ ಗ್ರಂಥವನ್ನು, **ಪಠೇತ್** = ಪಠಿಸುವನೋ, **ಸಃ** = ಅವನು, **ಸರ್ವಪಾಪೈಃ** = ಸಮಸ್ತ ಪಾಪಗಳಿಂದ, **ಪ್ರಮುಚ್ಯತೇ** = ಬಿಡಲ್ಪಡುತ್ತಾನೆ.

ಸಂತತಿಂ ಸಂಪದಂ ಜ್ಞಾನಮಾರೋಗ್ಯಂ ಚಾಪಿ ವಿಂದತಿ ।
ದ್ವಿರಾವೃತ್ತ್ಯಾ ಪಠೇದ್ ಯಸ್ತು ಭಕ್ತ್ಯಾ ಸ ಸ್ಯಾದ್ ಜಗದ್ವಶೀ ॥ ೩೬॥

ಯಃ ತು = ಯಾವ ಭಕ್ತನು, **ದ್ವಿರಾವೃತ್ತ್ಯಾ** = ಎರಡು ಆವರ್ತಿ, **ಭಕ್ತ್ಯಾ** = ಭಕ್ತಿಯಿಂದ, **ಪಠೇತ್** = ಪಠಿಸುವನೋ, **ಸಃ** = ಅವನು, **ಸಂತತಿಂ** = ಸಂತಾನವನ್ನು, **ಸಂಪದಂ** = ಸಂಪತ್ತನ್ನು, **ಜ್ಞಾನಂ** = ಜ್ಞಾನವನ್ನು, **ಆರೋಗ್ಯಂ ಚಾಪಿ** = ದೈಹಿಕಾರೋಗ್ಯವನ್ನು ಕೂಡ, **ವಿಂದಂತಿ** = ಪಡೆಯುವನು. **ಜಗದ್ವಶೀ** = ಜಗತ್ತನ್ನೇ ತನ್ನ ಅಂಕೆಯಲ್ಲಿಟ್ಟುಕೊಳ್ಳುವವನಾಗಿ, **ಸ್ಯಾತ್** = ಆಗುವನು.

ತ್ರಿರಾವೃತ್ತ್ಯಾ ಪಠೇದ್ ಯಸ್ತು ತ್ರಿಮಾಸಂ ಗುರುಸನ್ನಿಧೌ ।
ಲೋಕಪೂಜ್ಯತ್ವಮಾಪ್ನೋತಿ ರಾಜಾದ್ಯಾಃ ಸೇವಕಾ ಇವ ॥ ೩೭॥

ಯಸ್ತು = ಯಾವಭಕ್ತನು, **ತ್ರಿಮಾಸಂ** = ಮೂರು ತಿಂಗಳು, ಬಿಡದೆ, **ಗುರುಸನ್ನಿಧೌ** = ರಾಘವೇಂದ್ರರ ಸನ್ನಿಧಿಯಲ್ಲಿ, **ತ್ರಿರಾವೃತ್ತ್ಯಾ** = ಮೂರು ಬಾರಿ, **ಪಠೇತ್** = ಪಾರಾಯಣವನ್ನು ಮಾಡುವನೋ, ಅವನಿಗೆ, **ರಾಜಾದ್ಯಾಃ** = ರಾಜರು, **ಸೇವಕಾ ಇವ** = ಸೇವಕರಂತೆ ಆಗುವರು, **ಲೋಕಪೂಜ್ಯತ್ವಂ** = ಜನಗೌರವವನ್ನು, **ಆಪ್ನೋತಿ** = ಹೊಂದುವನು.

ಗುರೋರ್ವಾರೇ ಚ ಪುಷ್ಯಾರ್ಕೇ ತನ್ಮಹಾರಾಧನೋತ್ಸವೇ।
ಯಃ ಪಠೇದ್ ಶೃಣುಯಾದ್ ವಾಪಿ ಗುರುರಾಜ ಪ್ರಸಾದತಃ ॥ ೩೮॥

ಭಾನುವಾರದಂದು ಪುಷ್ಯಾನಕ್ಷತ್ರವಿರುವಾಗ ಅಥವಾ ಗುರುವಾರದಂದು ಪುಷ್ಯಾನಕ್ಷತ್ರವಿರುವಾಗಲಾಗಲಿ, **ತನ್ಮಹಾರಾಧನೋತ್ಸವೇ** = ರಾಘವೇಂದ್ರರ ಆರಾಧನೋತ್ಸವದಲ್ಲಿ, **ಯಃ** = ಯಾವ ಭಕ್ತನು, **ಪಠೇತ್** = ಪಠಿಸುವನೋ, **ವಾಽಪಿ** = ಅಥವಾ, **ಶೃಣುಯಾತ್** = ಶ್ರವಣ ಮಾಡುವನೋ, ಅವನು, **ಗುರು**

ರಾಜ ಪ್ರಸಾದತಃ = ಗುರುರಾಜರ ಅನುಗ್ರಹದಿಂದ - (ಮುಂದಿನ ಶ್ಲೋಕದಲ್ಲಿ ಅನ್ವಯ).

ಇಹ ಭುಕ್ತ್ವಾಖಿಲಾನ್ ಭೋಗಾನ್ ಗುರುಭಕ್ತಿಂ ಚ ದುರ್ಲಭಾಮ್।
ಜ್ಞಾನಂ ಚ ಹರಿಭಕ್ತಿಂ ಚ ತಯಾ ಮೋಕ್ಷಮವಾಪ್ನುಯಾತ್ ॥ ೩೯॥

ಇಹ = ಈ ಲೋಕದಲ್ಲಿ, **ಅಖಿಲಾನ್ ಭೋಗಾನ್** = ಸಮಸ್ತ ಭೋಗಗಳನ್ನು, **ದುರ್ಲಭಾಂ** = ಇತರರಲ್ಲಿ ಕಾಣದ, **ಗುರುಭಕ್ತಿಂ ಚ** = ಗುರುವಿನಲ್ಲಿ ಭಕ್ತಿಯನ್ನೂ, **ಜ್ಞಾನಂ** = ಶಾಸ್ತ್ರಜನ್ಯಜ್ಞಾನವನ್ನು, **ಹರಿಭಕ್ತಿಂ ಚ** = ಹರಿಯಲ್ಲಿ ಭಕ್ತಿಯನ್ನು ಕೂಡ, ಪಡೆದು, **ತಯಾ** = ಈ ಗುರುಭಕ್ತಿ, ಹರಿಭಕ್ತಿಯಿಂದ ಉಂಟಾದ ಹರಿಪ್ರಸಾದದಿಂದ, **ಮೋಕ್ಷಂ** = ಸಂಸಾರದಿಂದ ಮುಕ್ತಿಯನ್ನು, **ಆಪ್ನುಯಾತ್** = ಹೊಂದುವನು.

ನಾರೀ ಶ್ರುತ್ವಾ ತು ಸೌಭಾಗ್ಯಂ ಸೌಶೀಲ್ಯಂ ಪತಿವಶ್ಯತಾಮ್ ।
ಚಿರಮಾಂಗಲ್ಯಮಾಪ್ನೋತಿ ನ ಸಪತ್ನೀ ಕದಾಚನ ॥ ೪೦॥

ನಾರೀ ತು = ನಾರಿಯಾದರೂ, **ಶ್ರುತ್ವಾ** = ಈ ಗ್ರಂಥ ಶ್ರವಣದಿಂದ, **ಸೌಭಾಗ್ಯಂ** = ಸೌಮಂಗಲ್ಯವನ್ನು, **ಸೌಶೀಲ್ಯಂ** = ಶೀಲಸಂಪನ್ನತೆಯನ್ನು , **ಪತಿವಶ್ಯತಾಂ** = ಪತಿಗೆ ಪ್ರಿಯಳಾಗುವಿಕೆಯನ್ನು, **ಚಿರಮಾಂಗಲ್ಯಂ** = ದೀರ್ಘಕಾಲ ಸುಮಂಗಲಿಯಾಗಿರುವಿಕೆಯನ್ನು , **ಆಪ್ನೋತಿ** = ಪಡೆಯುವಳು, **ಕದಾಚನ** = ಯಾವ ಕಾಲದಲ್ಲೂ, **ಸಪತ್ನೀ** = ಸವತಿಯು, ನ **(ಭವತಿ)** = ಆಗುವುದಿಲ್ಲ.

ಅಪ್ಪಣ್ಣಾಚಾರ್ಯಕೃತಂ ಸ್ತೋತ್ರಂ ಪಠಿತ್ವಾದೌ ತತಸ್ತ್ವಿದಮ್ ।
ಪಠೇದ್ ಯದಿ ಫಲಂ ದದ್ಯಾತ್ ಸದ್ಯ ಏವ ಕಲೌ ಯುಗೇ ॥ ೪೧॥

ಆದೌ = ಮೊದಲು (ಈ ಗ್ರಂಥವನ್ನು ಓದುವ ಮೊದಲು), **ಅಪ್ಪಣ್ಣಾಚಾರ್ಯಕೃತಂ** = ಅಪ್ಪಣ್ಣಾಚಾರ್ಯರಿಂದ ರಚಿಸಲ್ಪಟ್ಟ ಸ್ತೋತ್ರವನ್ನು, **ಪಠಿತ್ವಾ** = ಪಠಿಸಿ, **ತತಃ** = ಅನಂತರದಲ್ಲಿ, **ಇದಂ** = ಈ ರಾಘವೇಂದ್ರತಂತ್ರವನ್ನು, **ಪಠೇದ್ ಯದಿ** = ಓದಿದ್ದೇ ಆದರೆ, **ಕಲಿಯುಗೇ** = ಈ ಕಲಿಯುಗದಲ್ಲಿ, **ಸದ್ಯ ಏವ** = ಶೀಘ್ರವಾಗಿಯೇ, **ಫಲಂ** = ಫಲವನ್ನು, **ದದ್ಯಾತ್** = ಕೊಡುತ್ತದೆ. (ಸಂತುಷ್ಟರಾದ ರಾಘವೇಂದ್ರರು ಕೊಡುವರು)

(ಅಪ್ಪಣ್ಣಾಚಾರ್ಯರಿಂದ ರಚಿತವಾದ ರಾಘವೇಂದ್ರ ಸ್ತೋತ್ರವನ್ನು ಮೊದಲು

ಪಠಿಸಬೇಕು. ನಂತರ ಈ ತಂತ್ರವನ್ನು ಪಠಿಸಬೇಕು. ಇದು ವಿಧಿಯಾಗಿದೆ. ಈ ವಿಧಿಯಿಂದ ರಾಘವೇಂದ್ರತಂತ್ರವು ಕೂಡಲೇ ಫಲವನ್ನು ನೀಡುವುದು ಎಂದು ಅಭಿಪ್ರಾಯ).

ಕಲೌ ಯುಗೇ ಕಲ್ಪತರುಪ್ರಭಾವಃ
ಉದ್ಧಾರಕರ್ತಾ ಕಲಿತಾಗಸೋಽಪಿ ।
ಜೀಯಾತ್ ಚಿರಂ ವಿಷ್ಣುಪರಾಗ್ರಗಣ್ಯಃ
ಶ್ರೀರಾಘವೇಂದ್ರೋ ಗುರುರಾಡುದಾರಃ **॥ ೪೨॥**

ಕಲೌ ಯುಗೇ = ಕಲಿಯುಗದಲ್ಲಿ, **ಕಲ್ಪತರು ಪ್ರಭಾವಃ** = ಕಲ್ಪವೃಕ್ಷದಂತೆ ಬೇಡಿದ ವರಗಳನ್ನು ನೀಡುವ ಸಾಮರ್ಥ್ಯವುಳ್ಳ, **ಕಲಿತಾಗಸಃ ಅಪಿ** = ಅಪರಾಧಿಗಳನ್ನು ಕೂಡ, **ಉದ್ಧಾರಕರ್ತಾ** = ಉದ್ಧಾರವನ್ನು ಮಾಡುವ, (ನನ್ನನ್ನು ಹೇಗೋ ಹಾಗೆ), **ವಿಷ್ಣುಪರಾಗ್ರಗಣ್ಯಃ** = ವಿಷ್ಣುಭಕ್ತರಲ್ಲಿ ಅಗ್ರಗಣ್ಯರಾದ, **ಉದಾರಃ** = ಉದಾರಿಗಳಾದ, **ಗುರುರಾಟ್** = ಗುರುರಾಜರಾದ, **ಶ್ರೀ ರಾಘವೇಂದ್ರಃ** = ಶ್ರೀ ರಾಘವೇಂದ್ರರು, **ಚಿರಂ** = ಬಹಳಕಾಲ, **ಜೀಯಾತ್** = ಜಯ ಶಾಲಿಗಳಾಗಲಿ.

ಇತಿ ಶ್ರೀ ಕೃಷ್ಣಾವಧೂತ ಪಂಡಿತ ಕೃತೌ ಶ್ರೀ ರಾಘವೇಂದ್ರ ತಂತ್ರೇ
ಪ್ರತ್ಯಕ್ಷಸಿದ್ಧಿಪ್ರದೇ ಪೂರ್ವಪೀಠಿಕಾ ನಾಮ ಪ್ರಥಮ ಪಟಲಃ

ದ್ವಿತೀಯ ಪಟಲಮ್

ಮಂತ್ರವಿಧಿ ವರ್ಣನಮ್

ಅಥ ಮಂತ್ರವಿಧಿಂ ವಕ್ಷ್ಯೇ ರಾಘವೇಂದ್ರಾರ್ಯ ಸದ್ಗುರೋಃ ।
ಜಪೇನ ಯಸ್ಯ ಮಂತ್ರಸ್ಯ ಗುರುರಿಷ್ಟಂ ಪ್ರಯಚ್ಛತಿ ॥ ೧॥

ಅರ್ಥ = **ಅಥ** = ಪೀಠಿಕಾನಂತರದಲ್ಲಿ, **ಯಸ್ಯ** = ಯಾವ, **ಮಂತ್ರಸ್ಯ** = ಶ್ರೀ ರಾಘವೇಂದ್ರ ಅಷ್ಟಾಕ್ಷರ ಮಂತ್ರದ, **ಜಪೇನ** = ಜಪಿಸುವುದರಿಂದ, **ಗುರುಃ** = ರಾಘವೇಂದ್ರ ಗುರುಗಳು, **ಇಷ್ಟಂ** = ಇಷ್ಟಾರ್ಥವನ್ನು, **ಪ್ರಯಚ್ಛತಿ** = ಅತಿಶಯವಾಗಿ ಕೊಡುವರೋ, ಅಂತಹ, **ರಾಘವೇಂದ್ರಾರ್ಯ ಸದ್ಗುರೋಃ** = ಶ್ರೇಷ್ಠಗುರುಗಳಾದ ರಾಘವೇಂದ್ರತೀರ್ಥರ, **ಮಂತ್ರವಿಧಿಂ** = ಓಂ ಶ್ರೀ ರಾಘವೇಂದ್ರಾಯ ನಮಃ ಓಂ ಎಂಬ ಅಷ್ಟಾಕ್ಷರ ಮಂತ್ರದ ಜಪವಿಧಾನವನ್ನು, **ವಕ್ಷ್ಯೇ** = ಹೇಳುವೆನು.

ಹರೌ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ ।
ಗುರೌ ತುಷ್ಟೇ ಹರಿಸ್ತುಷ್ಟೋ ಗುರುದ್ವಾರಾ ವಿಮುಕ್ತಿದಃ ॥ ೨॥

ಹರೌ = ಹರಿಯು, **ರುಷ್ಟೇ** = ಕೋಪಗೊಂಡಾಗ, **ಗುರುಃ** = ಗುರುಗಳು, **ತ್ರಾತಾ** = ರಕ್ಷಿಸುವವರಾಗಿದ್ದಾರೆ, **ಗುರೌ** = ಗುರುಗಳು, **ರುಷ್ಟೇ ಸತಿ** = ಕೋಪಗೊಳ್ಳಲು, **ಕಶ್ಚನ** = ಯಟಾರೂ, **ನ ತ್ರಾತಾ** = ರಕ್ಷಕರಿರುವುದಿಲ್ಲ, **ಗುರೌ** = ಗುರುಗಳು, **ತುಷ್ಟೇ** = ಸಂತುಷ್ಟರಾಗಲು, **ತುಷ್ಟಃ** = ಸಂತುಷ್ಟನಾದ, **ಹರಿಃ** = ಹರಿಯೂ, **ಗುರುದ್ವಾರಾ** = ಗುರುಗಳ ಮೂಲಕ, **ವಿಮುಕ್ತಿದಃ** = ಮೋಕ್ಷವನ್ನು ಕೊಡಿಸುವವನಾಗಿರುವವನು. (ಅಪ್ಯಹಂ ಗುರದ್ವಾರಾ ಪ್ರಸಾದಕೃತ್)

ಉತ್ತಮಾದುತ್ತಮಾ ಸಿದ್ಧಿಃ ಧರ್ಮಮೋಕ್ಷಾದಿಷು ಸ್ಫುಟಮ್ ।
ತತ್ತಸ್ಮಾದುತ್ತಮಾಚಾರ್ಯೇ ಲಬ್ಧೇ ನಾಽತೋಽವರಂ ವ್ರಜೇತ್ ॥ ೩॥

ಉತ್ತಮಾತ್ = ಉತ್ತಮಗುರುಗಳ ಸೇವೆಯಿಂದುಂಟಾದ, **ಧರ್ಮಮೋಕ್ಷಾದಿಷು** = ಧರ್ಮಾಚರಣೆ ಹಾಗೂ ಮೋಕ್ಷ ಮೊದಲಾದವುಗಳಲ್ಲಿ, **ಸಿದ್ಧಿಃ** = ಸಿದ್ಧಿಯು, **ಉತ್ತಮಾ** = ಉತ್ತಮವಾದದ್ದೆಂದು, **ಸ್ಫುಟಮ್** = ಸ್ಪಷ್ಟವು, **ತಸ್ಮಾತ್** =

ಆದ್ದರಿಂದ, **ಉತ್ತಮಾಚಾರ್ಯೇ** = ಉತ್ತಮರಾದ ರಾಘವೇಂದ್ರರಂತಹ ಆಚಾರ್ಯರು, **ಲಬ್ಧೇ ಸತಿ** = ಸಿಕ್ಕಿರುವಾಗ, **ಅತಃ** = ರಾಘವೇಂದ್ರ ಗುರುಗಳಿಗಿಂತಲೂ, **ಅವರಂ** = ಕನಿಷ್ಠರಾದ ವ್ಯಕ್ತಿಗಳನ್ನು, **ನ ವ್ರಜೇತ್** = ಸಮೀಪಿಸಬಾರದು.

ಏಕಸ್ಯ ಶಿಷ್ಯತಾಂ ಪ್ರಾಪ್ಯ ನ ತದಾಜ್ಞಾಂ ವಿನಾ ಸಮಮ್ ।
ಅವರಂ ವಾ ವ್ರಜೇದ್ ಉಚ್ಚಗುಣಶ್ಚೇನ್ನೈವ ದುಷ್ಯತಿ ॥ ೪॥

ಏಕಸ್ಯ = ಒಬ್ಬ ಗುರುವಿಗೆ, **ಶಿಷ್ಯತಾಂ ಪ್ರಾಪ್ಯ** = ಶಿಷ್ಯತ್ವವನ್ನು ಹೊಂದಿ, (ಶಿಷ್ಯನಾಗಿ), **ತದಾಜ್ಞಾಂ ವಿನಾ** = ಆ ಮೊದಲ ಗುರುವಿನ ಆಜ್ಞೆ ಇಲ್ಲದೆ, **ಸಮಮ್** = ಮೊದಲ ಗುರುವಿಗೆ ಸಮಾನನಾದ, ಮತ್ತೊಬ್ಬ ಗುರುವನ್ನಾಗಲೀ, **ಅವರಂ ವಾ** = ಜ್ಞಾನಾದಿಗಳಲ್ಲಿ ಕನಿಷ್ಠನಾದ ಗುರುವನ್ನಾಗಲೀ, **ನ ವ್ರಜೇತ್** = ಹೊಂದಬಾರದು, **ಉಚ್ಚಗುಣಃ ಚೇತ್** = ಮೊದಲಿನ ಗುರುವಿಗಿಂತ ಜ್ಞಾನಾದಿಗಳಲ್ಲಿ ಉಚ್ಚನಾಗಿದ್ದರೇ, **ನ ದುಷ್ಯತಿ ಏವ** = ದೋಷವಾಗುವುದೇ ಇಲ್ಲ.★

ನರಾಣಾಂ ಸ್ಥೂಲದೃಷ್ಟೀನಾಂ ಶಾಸ್ತ್ರಜ್ಞಾನಾಧಿಕಾಃ ಸ್ವತಃ ।
ತದನುಗ್ರಹಾಚ್ಚ ಯಾ ವಿದ್ಯಾ ಸ್ವರೂಪೋದ್ಧಾರಿಣೀ ಭವೇತ್ ॥ ೫॥

ಸ್ಥೂಲದೃಷ್ಟೀನಾಂ = ಒಳಗಣ್ಣು ಹೊಂದಿರದ, **ನರಾಣಾಂ** = ಮನುಷ್ಯರಿಗೆ, **ಶಾಸ್ತ್ರಜ್ಞಾನಾಧಿಕಾಃ** = ಶಾಸ್ತ್ರಜನ್ಯಜ್ಞಾನದಿಂದ ಅಧಿಕರಾದವರು, **ಸ್ವತಃ** = ತಾವಾಗಿಯೇ ಲಭಿಸುವರು **ತದನುಗ್ರಹಾತ್ ಚ** = ಆ ಗುರುಗಳ ಅನುಗ್ರಹದಿಂದಲೇ ಲಭಿಸಿದ, **ಯಾ ವಿದ್ಯಾ** = ಯಾವ ವಿದ್ಯೆಯೋ, **ಸಾ** = ಆ ವಿದ್ಯೆಯೇ (ಬಿಂಬರೂಪವಿದ್ಯೆಯೇ), **ಸ್ವರೂಪೋದ್ಧಾರಿಣೀ** = ಸ್ವರೂಪವನ್ನು ಉದ್ಧರಿಸುವ ಸಾಧನವಾಗಿ, **ಭವೇತ್** = ಆಗುವುದು.

★ **ಗುಣಾಧಿಕಂ ಗುರುಂ ಪ್ರಾಪ್ಯ ತದ್ಧೀನಂ ನಾಪ್ನುಯಾತ್ ಕ್ವಚಿತ್।**
ವಿಪರ್ಯಯಸ್ತು ಕರ್ತವ್ಯಃ ಸರ್ವಥಾ ಶುಭಮಿಚ್ಛತಾ॥

ಗುಣದಲ್ಲಿ ಅಧಿಕನಾದ ಗುರುವನ್ನು ತ್ಯಜಿಸಿ ಹೀನನನ್ನು ಸೇವಿಸಬಾರದು. ಸೇವಿಸಿದರೆ ರೌರವ ನರಕಪ್ರಾಪ್ತಿಯಾಗುವುದು. ಹೀನಗುರುವನ್ನು ತ್ಯಜಿಸಿ ಉತ್ತಮ ಗುರುವನ್ನು ಸೇವಿಸಿದರೆ ದೋಷವಿಲ್ಲ. ಒಬ್ಬ ಗುರುವನ್ನು ತ್ಯಜಿಸಿ ಮತ್ತೊಬ್ಬ ಗುರುವನ್ನು ಸ್ವೀಕರಿಸುವಾಗ ಹಿಂದಿನ ಗುರುವಿನ ಅನುಜ್ಞೆ ಪಡೆಯಬೇಕೆಂಬುದು ಸಾಮಾನ್ಯ ನಿಯಮ. ಹಿಂದಿನ ಗುರುವಿಗಿಂತಲೂ ಉತ್ತಮನಾದ ಗುರುವು ಲಭಿಸಿದಾಗ ಹಿಂದಿನ ಗುರುಗಳ ಅನುಜ್ಞೆ ಬೇಕಿಲ್ಲ.

ಗುರುಪ್ರಸಾದೋ ಬಲವಾನ್ ಪ್ರಸಾದಾತ್ ಶ್ರೀಹರೇರಪಿ ।
ಅನುಪಾಸಿತೋऽಪಿ ಭಗವಾನ್ ಪ್ರಸನ್ನೋ ಯೇನ ಮುಕ್ತಿದಃ ॥ ೬॥

ಗುರುಪ್ರಸಾದಃ = ಗುರ್ವನುಗ್ರಹವು, **ಶ್ರೀ ಹರೇಃ** = ಶ್ರೀಹರಿಯ, **ಪ್ರಸಾದಾತ್ ಅಪಿ** = ಅನುಗ್ರಹಕ್ಕಿಂತಲೂ, **ಬಲವಾನ್** = ಬಲವಾದದ್ದು, **ಯೇನ** = ಯಾವ ಗುರ್ವನುಗ್ರಹದಿಂದ, **ಪ್ರಸನ್ನಃ** = ಪ್ರಸನ್ನನಾದ, **ಭಗವಾನ್** = ಶ್ರೀ ಹರಿಯು, **ಅನುಪಾಸಿತಃ ಅಪಿ** = ತನ್ನನ್ನು ಉಪಾಸಿಸದಿದ್ದರೂ, **ಮುಕ್ತಿದಃ** = ಮುಕ್ತಿಯನ್ನು ಕೊಡುವವನಾಗುವವನು.

ಯಸ್ತಾರತಮ್ಯವೇತ್ತಾ ಸ್ಯಾದ್ ಗುರೂಣಾಂ ದೇವತಾಸ್ವಪಿ ।
ಭಕ್ತಿಮಾನ್ ಗುರುದೇವೇಷು ತದ್ಭಕ್ತೇಷು ಚ ಸಿದ್ಧ್ಯತಿ ॥ ೭॥

ಯಃ = ಯಾವ ಭಕ್ತನು, **ಗುರೂಣಾಂ** = ಗುರುಗಳಲ್ಲಿ, **ದೇವತಾಸು ಅಪಿ** = ದೇವತೆಗಳಲ್ಲಿಯೂ ಇರುವ, **ತಾರತಮ್ಯವೇತ್ತಾ** = ತರತಮಭಾವವನ್ನು ತಿಳಿದವನು, **ಸ್ಯಾತ್** = ಆಗುವನೋ, **ಚ** = ಹಾಗೆಯೇ, **ಗುರುದೇವೇಷು** = ಗುರುಗಳಲ್ಲಿ ಹಾಗೂ ದೇವತೆಗಳಲ್ಲಿ, **ತದ್ಭಕ್ತೇಷು** = ಗುರುದೇವತಾ ಭಕ್ತರಲ್ಲಿಯೂ, **ಭಕ್ತಿಮಾನ್** = ಭಕ್ತಿಯುಳ್ಳವನಿಗೂ, **ಸಿದ್ಧ್ಯತಿ** = ಜ್ಞಾನಾದಿಗಳು ಸಿದ್ಧಿಸುತ್ತವೆ.

ಅವಜ್ಞಾತಾ ಗುರೂಣಾಂ ಚ ದೇವತಾನಾಂ ನ ಸಿದ್ಧ್ಯತಿ ।
ಪ್ರಯಾತಿ ಚ ತಮೋ ಘೋರಮಿತ್ಯಾದಿಬಹುವಾಕ್ಯತಃ ॥ ೮॥

ಗುರೂಣಾಂ = ಗುರುಗಳನ್ನು, **ದೇವತಾನಾಂ ಚ** = ದೇವತೆಗಳ, **ಅವಜ್ಞಾತಾ** = ತಿರಸ್ಕರಿಸುವವನು, **ನ ಸಿದ್ಧ್ಯತಿ** = ಯಾವುದೇ ಸಿದ್ಧಿಯನ್ನು ಹೊಂದಲಾರನು.

★**ತದುತ್ತಮಗುರುಪ್ರಾಪ್ತೌ ಪೂರ್ವಾऽನುಜ್ಞಾ ನಮೃಗ್ಯತೇ। - ಅನುವ್ಯಾಖ್ಯಾನ**
ಪೂರ್ವಸ್ಮಾದುತ್ತಮೋ ಲಬ್ಧಃ ಸ್ವಯಮೇವ ಗುರುರ್ಯದಿ।
ಗೃಹ್ಣೀಯಾದ್ ಅವಿಚಾರೇಣ ವಿಕಲ್ಪಃ ಸಮಯೋರ್ಭವೇತ್॥

ಹಿಂದಿನ ಗುರುವನ್ನು ವೃಥಾ ಬಿಡಬಾರದು. ಹಿಂದಿನ ಗುರುವಿಗೆ ಸಮಾನನಾದ ಮತ್ತೊಬ್ಬ ಗುರುವನ್ನು ಅಥವಾ ಅವನನ್ನು ಹೊಂದುವಾಗ ಗುರುವಿನ ಅನುಜ್ಞೆಯನ್ನು ಪಡೆಯಬೇಕು. ರಾಘವೇದ್ರರಂತಹ ಉತ್ತಮೋತ್ತಮ ಗುರುಗಳು ಸಿಕ್ಕಿರುವಾಗ ಅವರನ್ನು ಗುರುಗಳಾಗಿ ಸ್ವೀಕರಿಸಲು ಯಾವ ಗುರುಗಳ ಆಜ್ಞೆಗೂ ಕಾಯಬೇಕಿಲ್ಲ ಎಂದು ಭಾವ.

ಚ = ಮತ್ತು, **ಘೋರ ತಮಃ** = ಭಯಂಕರವಾದ ಅಂಧತಮಸ್ಸನ್ನು, **ಪ್ರಯಾತಿ** = ಹೊಂದುವನು, **ಇತ್ಯಾದಿ** = ಇವೇ ಮೊದಲಾದ, **ಬಹುವಾಕ್ಯತಃ** = ಅನೇಕ ಸ್ಮೃತಿಪುರಾಣಾದಿ ವಾಕ್ಯಗಳಿಂದ (ಮುಂದಿನ ಶ್ಲೋಕದಿಂದ ಅನ್ವಯವನ್ನು ಹೇಳಬೇಕು)

ಗುರೋರನುಗ್ರಹಂ ಮುಖ್ಯಂ ಸಂಪ್ರಾಪ್ಯ ಸುಖವಾನ್ ಭವೇತ್ ।
ಅತೋ ಭೂಲೋಕಮಧ್ಯೇಽಸ್ಮಿನ್ ಪ್ರತ್ಯಕ್ಷಫಲದಾಯಿನಃ ॥ ೯॥

ಗುರೋಃ = ಗುರುಗಳ (ರಾಘವೇಂದ್ರರ), **ಮುಖ್ಯಂ** = ಪ್ರಧಾನವಾದ, **ಅನುಗ್ರಹಂ** = ಅನುಗ್ರಹವನ್ನು, **ಸಂಪ್ರಾಪ್ಯ** = ಪಡೆದು, **ಸುಖವಾನ್** = ಸುಖಿಯಾಗಿ, **ಭವೇತ್** = ಆಗುವನು, **ಅತಃ** = ಗುರುಗಳ ಅನುಗ್ರಹವೇ ಮುಖ್ಯವಾದ್ದರಿಂದ, **ಅಸ್ಮಿನ್** = ಈ, **ಭೂಲೋಕಮಧ್ಯೇ** = ಮಧ್ಯದಲ್ಲಿರುವ ಭೂಮಿಯಲ್ಲಿ, **ಪ್ರತ್ಯಕ್ಷಫಲದಾಯಿನಃ** = ಪ್ರತ್ಯಕ್ಷ ಫಲನೀಡುವ, (ಮುಂದಿನ ಶ್ಲೋಕದಿಂದ ಅನ್ವಯ ಮಾಡಿಕೊಳ್ಳಬೇಕು)

ರಾಘವೇಂದ್ರ ಗುರೋಃ ಸ್ತೋತ್ರಂ ಮಂತ್ರಂ ಕವಚಮುಚ್ಯತೇ ।
ಅಪ್ಪಣ್ಣಾರ್ಯೇಣ ಕಥಿತಂ ಲೋಕಾನುಗ್ರಹಕಾಂಕ್ಷಯಾ ॥ ೧೦॥

ಅಪ್ಪಣ್ಣಾಚಾರ್ಯೇಣ = ಅಪ್ಪಣ್ಣಾಚಾರ್ಯರಿಂದ, **ಲೋಕಾನುಗ್ರಹಕಾಂಕ್ಷಯಾ** = ಭಕ್ತಜನರನ್ನು ಅನುಗ್ರಹಿಸಲೆಂದು, **ಕಥಿತಂ** = ಹೇಳಲ್ಪಟ್ಟ, **ರಾಘವೇಂದ್ರ ಗುರೋಃ** = ರಾಘವೇಂದ್ರ ಗುರುಗಳ, **ಸ್ತೋತ್ರಂ** = ಸ್ತೋತ್ರವು (ಧ್ಯಾನಸ್ತೋತ್ರವು), **ಮಂತ್ರಃ** = ರಾಘವೇಂದ್ರ ಅಷ್ಟಾಕ್ಷರ ಮಂತ್ರವು, **ಕವಚಂ** = ಕವಚವು, **ಉಚ್ಯತೇ** = ಹೇಳಲ್ಪಡುತ್ತದೆ.

ಲಕ್ಷ್ಮೀಃ ಸದೀರ್ಘಾಗ್ನಿಘರ್ಮಾ ಸಾಧರೋಷ್ಠಾಂಬರಾಮೃತಮ್ ।
ದತ್ತೋ ವಾಯುಶ್ಚ ಹೃದಯಂ ಮನುರಷ್ಟಾಕ್ಷರೋ ಗುರೋಃ ॥ ೧೧॥

ಲಕ್ಷ್ಮೀಃ = ಶ್ರೀಕಾರವು, **ಸದೀರ್ಘಾಗ್ನಿಘರ್ಮಾ** – **ಸದೀರ್ಘಾಗ್ನಿ** = ದೀರ್ಘವಾಗಿ ಮಾಡಿದ ಅಗ್ನಿಬೀಜವಾದ 'ರಾ' ಎಂಬುದು, **ಘರ್ಮಾ** = 'ಘ' ಎಂಬಕ್ಷರವೂ, **ಸಾಧರೋಷ್ಠಾಂಬರಾಮೃತಮ್** – **ಅಧರೋಷ್ಠ** = ದಂತೋಷ್ಠಗಳಿಂದ ಹುಟ್ಟಿದ 'ವ'ಕಾರವು, **ಸಾಂಬರಾಮೃತಂ** = ಶೂನ್ಯದಿಂದ ಹಾಗೂ ಏಕಾರದಿಂದ ಕೂಡಿದಾಗ

ಉಂಟಾಗುವ 'ವೇಂ' ಎಂಬಕ್ಷರವು, (**ಅಮೃತಾ** = ಏ = ನಾರದೀಯ ಪುರಾಣ), **ದತ್ತಃ** = 'ದ್ರಾ' ಎಂಬಕ್ಷರವು, **ವಾಯುಃ** = 'ಯ' ಎಂಬಕ್ಷರವು, **ಹೃದಯಂ** = ನಮಃ ಎಂಬ ಪದಗಳಿಂದ ಉಂಟಾಗುವ 'ಶ್ರೀ ರಾಘವೇಂದ್ರಾಯನಮಃ ಎಂಬ, **ಮನುಃ** = ಮಂತ್ರವು, **ಗುರೋಃ** = ರಾಘವೇಂದ್ರ ಗುರುಗಳ, **ಅಷ್ಟಾಕ್ಷರಃ** = ಅಷ್ಟಾಕ್ಷರ ಮಂತ್ರವಾಗಿದೆ.

ಷಡಂಗನ್ಯಾಸ

ವಿನಾ ತು ಹೃದಯಂ ಷಡ್ಭಿಃ ವರ್ಣೈರಂಗಮುದಾಹೃತಮ್ ।
ದ್ವಿರಾವೃತ್ತೈಃ ಮಂತ್ರಪದೈಃ ಷಡಂಗಾನ್ಯಥವಾ ವಿದುಃ ॥ ೧೨॥

ಹೃದಯಂ ವಿನಾ = ನಮಃ ಎಂಬ ಎರಡಕ್ಷರವನ್ನು ಬಿಟ್ಟು, **ಷಡ್ಭಿಃವರ್ಣೈಃ** = ಶ್ರೀರಾಘವೇಂದ್ರಾಯ ಎಂಬ ಆರು ಅಕ್ಷರಗಳಿಂದ, **ಅಂಗಂ** = ಅಂಗನ್ಯಾಸವು, **ಉದಾಹೃತಮ್** = ಅಪ್ಪಣ್ಣಾಚಾರ್ಯರಿಂದ ತಿಳಿಸಲಾಗಿದೆ, **ಅಥವಾ** = ಪಕ್ಷಾಂತರದಲ್ಲಿ, **ದ್ವಿರಾವೃತ್ತೈಃ** = ಎರಡುಬಾರಿ ಆವೃತ್ತಿಮಾಡಿದ, **ಮಂತ್ರಪದೈಃ** = ಅಷ್ಟಾಕ್ಷರ ಮಂತ್ರಪದಗಳಿಂದ, **ಷಡಂಗಾನಿ** = ಅಂಗನ್ಯಾಸವನ್ನು, **ವಿದುಃ** = ತಿಳಿದಿರುವರು (ತಿಳಿಯಬೇಕು).

ತೈರೇವ ತು ದ್ವಿರಾವೃತ್ತೈಃ ಕ್ರಮವ್ಯುತ್ಕ್ರಮತೋಽಥವಾ ।
ತಪ್ತಕಾಂಚನ ಸಂಕಾಶಮಕ್ಷಮಾಲಾ ಕಮಂಡಲುಮ್ ॥ ೧೩॥

ಅಥವಾ ಹಿಂದಿನ ಪಕ್ಷಕ್ಕಿಂತ ಬೇರೆಯಾದ ಕ್ರಮದಂತೆ, **ಕ್ರಮವ್ಯುತ್ಕ್ರಮತಃ** = ಮಂತ್ರ ಪದಗಳ ಆನುಪೂರ್ವಿಕ್ರಮ ಹಾಗೂ ವಿರುದ್ಧ ಕ್ರಮಗಳಿಂದ (**ಮಂತ್ರಕ್ರಮ** = ಶ್ರೀ ರಾಘವೇಂದ್ರಾಯ ನಮಃ, **ವ್ಯುತ್ಕ್ರಮ** = ನಮಃ ರಾಘವೇಂದ್ರಾಯ, ಶ್ರೀ), **ದ್ವಿರಾವೃತ್ತೈಃ** = ಎರಡುಬಾರಿ ಆವೃತ್ತಿ ಮಾಡಿ ಉಚ್ಚರಿಸಿದ, **ತೈರೇವ ತು** = ಅಷ್ಟಾಕ್ಷರ ಮಂತ್ರ ಪದಗಳಿಂದಲೇ, **ಷಡಂಗಾನಿ** = ಷಡಂಗನ್ಯಾಸವನ್ನು, ವಿದುಃ = ತಿಳಿದಿರುವರು (ತಿಳಿಯಬೇಕು), **ತಪ್ತಕಾಂಚನ ಸಂಕಾಶಮ್** = ಪುಟವಿಟ್ಟ ಚಿನ್ನದಂತೆ ಕಾಂತಿಯುಳ್ಳ, **ಅಕ್ಷಮಾಲಾಂ** = ಜಪಸರವನ್ನು, **ಕಮಂಡಲುಮ್** = ಕಮಂಡಲುವನ್ನು,

ದೋರ್ಭ್ಯಾಂ ದಧಾನಂ ಕಾಷಾಯವಸನಂ ರಾಮಮಾನಸಮ್ ।
ಯೋಗೀಂದ್ರತೀರ್ಥವಂದ್ಯಾಂಘ್ರಿಂ ತುಲಸೀದಾಮವಕ್ಷಸಮ್ ॥ ೧೪॥

ದೋರ್ಭ್ಯಾಂ = ಕೈಗಳಲ್ಲಿ, **ದಧಾನಂ** = ಧರಿಸಿರುವ, **ಕಾಷಾಯವಸನಂ** = ಕಾವಿಶಾಟಿಯನ್ನು ಧರಿಸಿರುವ, **ರಾಮಮಾನಸಮ್** = ತಮ್ಮ ಉಪಾಸ್ಯ ಮೂರ್ತಿಯಾದ ಶ್ರೀ ರಾಮನಲ್ಲಿ ನೆಟ್ಟ ಮನಸ್ಸುಳ್ಳ, **ಯೋಗೀಂದ್ರತೀರ್ಥ ವಂದ್ಯಾಂಘ್ರಿಂ** = ಶಿಷ್ಯರಾದ ಯೋಗೀಂದ್ರ ತೀರ್ಥರಿಂದ ವಂದಿಸಲ್ಪಟ್ಟ ಪಾದಗಳುಳ್ಳ, **ತುಲಸೀದಾಮವಕ್ಷಸಮ್** = ಭಗವದರ್ಪಿತ ತುಲಸೀಹಾರವನ್ನು ಎದೆಯಲ್ಲಿ ಧರಿಸಿರುವ,

ಜ್ಞಾನಭಕ್ತಿತಪಃಪೂರ್ಣಂ ಧ್ಯಾಯೇತ್ ಸರ್ವಾರ್ಥಸಿದ್ಧಯೇ ।
ಮಂತ್ರೇಣೈವ ಪ್ರಕರ್ತವ್ಯಂ ದಿಶಾಂ ಬಂಧಶ್ಚ ಮೋಚನಮ್ ॥ ೧೫॥

ಜ್ಞಾನಭಕ್ತಿತಪಃ ಪೂರ್ಣಂ = ಮಾಹಾತ್ಮ್ಯ, ಜ್ಞಾನ, ಭಕ್ತಿ, ತಪಸ್ಸಿನಿಂದ ಪೂರ್ಣರಾದ ರಾಘವೇಂದ್ರಗುರುಗಳನ್ನು, **ಸರ್ವಾರ್ಥಸಿದ್ಧಯೇ** = ಸಮಸ್ತ ಇಷ್ಟಾರ್ಥಗಳು ಕೈಗೂಡಲು, **ಧ್ಯಾಯೇತ್** = ಧ್ಯಾನವನ್ನು ಮಾಡಬೇಕು. (ಇದಿಷ್ಟು ಧ್ಯಾನಶ್ಲೋಕದ ಅರ್ಥ) **ಮಂತ್ರೇಣೈವ** = ಅಷ್ಟಾಕ್ಷರ ಮಂತ್ರದಿಂದಲೇ, **ದಿಶಾಂ ಬಂಧಃ** = 'ದಿಗ್ಬಂಧ'ವು, **ಮೋಚನಂ** = ದಿಙ್ಮೋಖವು, **ಪ್ರಕರ್ತವ್ಯಂ** = ಮಾಡಬೇಕು. **(ಶ್ರೀ ರಾಘವೇಂದ್ರಾಯ ನಮಃ ಇತಿ ದಿಗ್ಬಂಧಃ) (ಶ್ರೀ ರಾಘವೇಂದ್ರಾಯ ನಮಃ ಇತಿ ದಿಙ್ಮೋಖಃ)**

ಅಷ್ಟಾಕ್ಷರ ಮಂತ್ರಜಪದ ಸಂಖ್ಯೆ

ಲಕ್ಷಾಣ್ಯಷ್ಟೌ ದ್ವಾದಶ ವಾ ಪುರಶ್ಚರ್ಯಾಪರೋ ಜಪೇತ್ ।
ಅನ್ಯೋ ವಾಽಷ್ಟೋತ್ತರಶತಂ ಸಹಸ್ರಂ ಪ್ರತ್ಯಹಂ ಜಪೇತ್ ॥ ೧೬॥

ಪುರಶ್ಚರ್ಯಾಪರಃ = ಪುರಶ್ಚರಣೆಯನ್ನು ಮಾಡುವವನು, **ಅಷ್ಟೌ ಲಕ್ಷಾಣಿ** = ಎಂಟುಲಕ್ಷ ಸಂಖ್ಯೆಯಷ್ಟು, **ವಾ** = ಅಥವಾ, **ದ್ವಾದಶಃ** = ಹನ್ನೆರಡು ಲಕ್ಷಸಂಖ್ಯೆಯಷ್ಟಾಗಲೀ, **ಜಪೇತ್** = ಜಪಿಸಬೇಕು, **ಅನ್ಯಃ** = ಪುರಶ್ಚರಣೆಯ ಉದ್ದೇಶವಿಲ್ಲದವನು, **ಪ್ರತ್ಯಹಂ** = ಪ್ರತಿದಿವಸದಲ್ಲೂ, **ಅಷ್ಟೋತ್ತರಶತಂ** = ನೂರೆಂಟುಬಾರಿ, **ಸಹಸ್ರಂ ವಾ** = ಸಾವಿರಬಾರಿಯಾಗಲೀ, **ಜಪೇತ್** = ಜಪಿಸಬೇಕು.

ಕೃತಾಕೃತಂ ಚ ಹೋಮಾದಿ ಪರಸ್ತ್ರೀವಿಮುಖೋ ಭವೇತ್ ।
ಬ್ರಾಹ್ಮಣಾರಾಧನಂ ಮುಖ್ಯಂ ಯಥಾಶಕ್ತಿ ಋಣಂ ವಿನಾ ॥ ೧೭॥

ಹೋಮಾದಿ = ಹೋಮ, ತರ್ಪಣಗಳನ್ನು, **ಕೃತಾಕೃತಂ** = ಮಾಡ ಬಹುದು ಅಥವಾ ಬಿಡಬಹುದು, ಇದು ಐಚ್ಛಿಕವಾದುದ್ದು, ಆದರೆ, **ಪರಸ್ತ್ರೀ ವಿಮುಖಃ** = ಜಪ ಮಾಡುವವನು, ಪರಸ್ತ್ರೀಯರಿಂದ ವಿಮುಖನಾಗಿ, **ಭವೇತ್** = ಇರಬೇಕು, **ಋಣಂವಿನಾ** = ಸಾಲವನ್ನು ಮಾಡದೇ, **ಯಥಾಶಕ್ತಿ** = ಶಕ್ತಿಯನ್ನು ಮೀರದೇ, **ಬ್ರಾಹ್ಮಣಾರಾಧನಂ** = ಬ್ರಾಹ್ಮಣರ ಸಂತರ್ಪಣೆಯು, **ಮುಖ್ಯಂ** = ಪ್ರಧಾನವಾದದ್ದು.

ಅಂಗನ್ಯಾಸೇ ದ್ವಿತೀಯೇ ತು ಧ್ಯಾನಂ ವಕ್ಷ್ಯಾಮಿ ಸದ್ಗುರೋಃ ।
ಶ್ರೀ ರಾಘವೇಂದ್ರೋ ಹರಿಪಾದಕಂಜನಿಷೇವಣಾಲ್ಲಬ್ಧಸಮಸ್ತ ಸಂಪತ್ ॥ ೧೮॥

ದ್ವಿತೀಯೇ = ಎರಡನೆಯದಾದ ದ್ವಿರಾವೃತ್ತ ಮಂತ್ರಪದಗಳಿಂದ ಮಾಡಬಹುದಾದ, **ಅಂಗನ್ಯಾಸೇ** = ಹೃದಯಾದಿ ಅಂಗನ್ಯಾಸದಲ್ಲಿ, **ಸದ್ಗುರೋಃ** = ಸದ್ಗುರುವಾದ ರಾಘವೇಂದ್ರರ, **ಧ್ಯಾನಂ** = ಧ್ಯಾನಮಾಡುವ ಧ್ಯಾನಶ್ಲೋಕವನ್ನು, **ವಕ್ಷ್ಯಾಮಿ** = ಹೇಳುವೆನು, **ಹರಿಪಾದಕಂಜ ನಿಷೇವಣಾತ್** = ಭಗವಂತನ ಪಾದಕಮಲಗಳಲ್ಲಿ ನಿರಂತರವಾದ ಸೇವೆಯಿಂದ, **ಲಬ್ಧಸಮಸ್ತ ಸಂಪತ್** = ಹೊಂದಲ್ಪಟ್ಟ, ಜ್ಞಾನಾದಿ ಸಕಲ ಸಂಪತ್ತುಳ್ಳ,

ದೇವಸ್ವಭಾವೋ ದಿವಿಜದ್ರುಮೋಽಯಯಿಷ್ಟಪ್ರದೋ ಮೇ ಸತತಂ ಸ ಭೂಯಾತ್।
ನ್ಯಾಸೇ ತೃತೀಯೇ ಧ್ಯಾನಂ ತು ಪೂಜಾಪಟಲ ಉಚ್ಯತೇ ॥ ೧೯॥

ದೇವಸ್ವಭಾವಃ = ಕರ್ಮಜ ದೇವತಾಸ್ವರೂಪವುಳ್ಳ, **ದಿವಿಜದ್ರುಮಃ** = ಕಲ್ಪವೃಕ್ಷದಂತಿರುವ, **ಅಯಂ** = ಈ, **ಶ್ರೀ ರಾಘವೇಂದ್ರಃ** = ಶ್ರೀ ರಾಘವೇಂದ್ರ ಗುರುಗಳು, **ಮೇ** = ನನಗೆ, **ಸತತಂ** = ಸರ್ವಕಾಲದಲ್ಲಿಯೂ, **ಇಷ್ಟಪ್ರದಃ** = ಇಷ್ಟವನ್ನು ಕೈಗೂಡಿಸುವವರಾಗಿ, **ಭೂಯಾತ್** = ಆಗಲಿ, **ತೃತೀಯ ನ್ಯಾಸೇ** = ಮಂತ್ರಪದಗಳ ಕ್ರಮ ವ್ಯುತ್ಕ್ರಮಗಳಿಂದ ಮಾಡುವ ಮೂರನೇ ನ್ಯಾಸಕ್ರಮದಲ್ಲಿ - **ಧ್ಯಾನಂ ತು** = ಧ್ಯಾನಶ್ಲೋಕವನ್ನಾದರೂ, **ಪೂಜಾಪಟಲೇ** = ನಾಲ್ಕನೆಯದಾದ ಪೂಜಾ ಪಟಲದಲ್ಲಿ, **ಉಚ್ಯತೇ** = 'ರಾಘವೇಂದ್ರಗುರುಂ ಧ್ಯಾಯೇತ್' ಇತ್ಯಾದಿ ಶ್ಲೋಕಗಳಿಂದ ತಿಳಿಸಲಾಗುವುದು (ಪಟಲ ೪-೪ ಶ್ಲೋಕ)

ನಾಲ್ಕನೆಯ ಷಡಂಗನ್ಯಾಸ ಕ್ರಮ

('ರಾಂ' ಎಂಬ ಮಂತ್ರಾಕ್ಷರದಿಂದಲೇ ನ್ಯಾಸಕ್ರಮ)

ಅಗ್ನಿಃ ಸದೀರ್ಘಬಿಂದುಶ್ಚೇತ್ ಮನುರೇಕಾಕ್ಷರೋಽಪರಃ ।
ಷಡ್ದೀರ್ಘಸ್ವರಯುಕ್ತೇನ ತೇನೈವಸ್ಯಾತ್ ಷಡಂಗಕಮ್ ॥ ೨೦॥

ಅಗ್ನಿಃ = ರ ಎಂಬ ರೇಫಾಕ್ಷರವು, ಸದೀರ್ಘಬಿಂದುಃ **ಚೇತ್** = ಅನುಸ್ವಾರ ಸಹಿತ ದೀರ್ಘವಾದದ್ದಾದರೇ, (ರಾಂ ಎಂದಾದರೇ ಎಂದರ್ಥ), **ಏಕಾಕ್ಷರಃ** = ರಾಂ ಎಂಬ ಒಂದಕ್ಷರದಿಂದಲೇ ತಯಾರಾದ, **ಅಪರಃ** = ಹಿಂದೆ ಹೇಳಿದ ಕ್ರಮಕ್ಕಿಂತ ಭಿನ್ನವಾದ, **ಮನುಃ** = ಏಕಾಕ್ಷರ ಮಂತ್ರವಾಗುವುದು (ಓಂ ರಾಂ ಓಂ), **ಷಡ್ದೀರ್ಘ ಸ್ವರಯುಕ್ತೇನ** = ಆರು ದೀರ್ಘಸ್ವರಗಳಿಂದ ಕೂಡಿದ, **ತೇನೈವ** = ಏಕಾಕ್ಷರ ಮಂತ್ರ ದಿಂದಲೇ, **ಷಡಂಗಕಮ್** = ಷಡಂಗನ್ಯಾಸವೂ, **ಸ್ಯಾತ್** = ಆಗುತ್ತದೆ.

ನಿಚೃದ್ಗಾಯತ್ರಿಕಾನುಷ್ಟುಪ್ ಛಂದಸೀ ಏತದಾದ್ಯಯೋಃ ।
ಶ್ರೀ ರಾಘವೇಂದ್ರಃ ಸಕಲಪ್ರದಾತಾ ಸ್ವಪಾದಕಂಜದ್ವಯ ಭಕ್ತಿಮದ್ಭ್ಯಃ ॥ ೨೧॥

ಏತದಾದ್ಯಯೋಃ = ಮೇಲಿನ ಎರಡು ಮಂತ್ರಗಳ, **ಛಂದಸೀ** = ಛಂದಸ್ಸುಗಳು **ನಿಚೃದ್ಗಾಯತ್ರಿಕಾ** = ಇಪ್ಪತ್ತನಾಲ್ಕು ಅಕ್ಷರಗಳ ಗಾಯತ್ರಿಛಂದಸ್ಸು ಮತ್ತು, **ಅನುಷ್ಟುಪ್** = ಒಂದು ಪಾದದಲ್ಲಿ ಎಂಟಕ್ಷರಗಳಿರುವ ಅನುಷ್ಟುಪ್ ಎಂಬ ಛಂದಸ್ಸುಗಳೆಂದು ತಿಳಿಯಬೇಕು.

ಸ್ವಪಾದಕಂಜದ್ವಯಭಕ್ತಿಮದ್ಭ್ಯಃ = ರಾಘವೇಂದ್ರರ ಪಾದಕಮಲದ್ವಯಗಳಲ್ಲಿ ಭಕ್ತಿಯುಳ್ಳವರಿಗೆ, **ಸಕಲಪ್ರದಾತಾ** = ಸಕಲೇಷ್ಟಗಳನ್ನು ಕೊಡುವವರೂ, **ಅಘಾದ್ರಿ ಸಂಭೇದನ ದೃಷ್ಟಿವಜ್ರಃ** = ಪಾಪಪರ್ವತಗಳನ್ನು ಭೇದಿಸುವುದರಲ್ಲಿ ಸಮರ್ಥವಾದ

ಅಕ್ಷರ ಷಡಂಗನ್ಯಾಸ ಕ್ರಮ – ಒಂದನೇ ಕ್ರಮ

ಅಸ್ಯಶ್ರೀ ರಾಘವೇಂದ್ರ ಅಷ್ಟಾಕ್ಷರಮಂತ್ರಸ್ಯ - ಶ್ರೀ ಅಪ್ಪಣ್ಣಾಚಾರ್ಯಋಷಿಃ ಗಾಯತ್ರೀ ಅನುಷ್ಟುಬ್ಬಾ ಛಂದಃ - ಶ್ರೀ ರಾಘವೇಂದ್ರ ಗುರ್ವಂತರ್ಗತ ಶ್ರೀ ಭಾರತೀ ರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಸೀತಾಪತಿ ಶ್ರೀ ಮೂಲರಾಮಚಂದ್ರೋ ದೇವತಾ ಶ್ರೀ ರಾಘವೇಂದ್ರ ಅಷ್ಟಾಕ್ಷರ ಜಪತರ್ಪಣಾಖ್ಯಂ ಕರ್ಮ ಕರಿಷ್ಯೇ॥

ಓಂ ಶ್ರೀ ರಾಘವೇಂದ್ರಾಯ ನಮಃ ಓಂ - ೧೦೮, ೧೦೦೮ ಇತ್ಯಾದಿ.

ದೃಷ್ಟಿಯೆಂಬ ವಜ್ರಾಯುಧಪ್ರಾಯರು, **ಕ್ಷಮಾಸುರೇಂದ್ರಃ** = ಭೂಸುರರಾದ ಬ್ರಾಹ್ಮಣರಿಗೆ ಶ್ರೇಷ್ಠರಾದವರು ಆಗಿರುವ, ಶ್ರೀ ರಾಘವೇಂದ್ರರು, **ಮಾಂ** = ನನ್ನನ್ನು, **ಸದಾ** = ಯಾವಾಗಲೂ, **ಅವತು** = ರಕ್ಷಿಸಲಿ.

ಇಮೌ ಮಂತ್ರೌ ಮಂತ್ರರಾಜೌ ಮುಖ್ಯಮಾಪನ್ನಿವಾರಕೌ ।
ಜಯಪ್ರದೌ ಚ ವಾಕ್ಸಿದ್ಧಿಪ್ರದೌ ಪುತ್ರಾದಿಕಪ್ರದೌ ॥ ೨೨॥

ಇಮೌ ಮಂತ್ರೌ = ಮೇಲೆ ತಿಳಿಸಿದ ಏಕಾಕ್ಷರ ಮಂತ್ರ ಹಾಗೂ ಅಷ್ಟಾಕ್ಷರ ಮಂತ್ರಗಳು, **ಮಂತ್ರರಾಜೌ** = ಮಂತ್ರಗಳಲ್ಲೇ ಶ್ರೇಷ್ಠವಾಗಿದ್ದು, **ಮುಖ್ಯಂ** = ಮುಖ್ಯವಾಗಿ, **ಆಪನ್ನಿವಾರಕೌ** = ಆಪತ್ತುಗಳನ್ನು ನಿವಾರಿಸುವುವು, **ಜಯಪ್ರದೌ** = ಜಯವನ್ನೀಯುವುವು, **ವಾಕ್ಸಿದ್ಧಿಪ್ರದೌ** = ವಾಗ್ಮಿಯನ್ನಾಗಿ ಮಾಡುವುದು, **ಪುತ್ರಾದಿಕಪ್ರದೌ** = ಪುತ್ರರೇ ಮೊದಲಾದ ಇಷ್ಟಾರ್ಥಗಳನ್ನು ಕೊಡುವ ಸಾಮರ್ಥ್ಯವುಳ್ಳವುಗಳು.

ಓಂ ಶ್ರೀ - ಹೃದಯಾಯ ನಮಃ	ಓಂ ರಾಂ - ಶಿರಸೇ ಸ್ವಾಹಾ
ಓಂ ಘಂ - ಶಿಖಾಯೈ ವೌಷಟ್	ಓಂ ವೇಂ - ಕವಚಾಯ ಹುಮ್
ಓಂ ದ್ರಾಂ - ನೇತ್ರಾಭ್ಯಾಂ ವಷಟ್	ಓಂ ಯಂ - ಅಸ್ತ್ರಾಯ ಫಟ್

ಶ್ರೀ ರಾಘವೇಂದ್ರಾಯ ನಮಃ ಇತಿ ದಿಗ್ಬಂಧಃ

ಧ್ಯಾನಂ

ತಪ್ತಕಾಂಚನ ಸಂಕಾಶಮಕ್ಷಮಾಲಾಂ ಕಮಂಡುಲುಂ।
ದೋರ್ಭ್ಯಾಂ ದಧಾನಂ ಕಾಷಾಯವಸನಂ ರಾಮಮಾನಸಮ್।
ಯೋಗೀಂದ್ರತೀರ್ಥ ವಂದ್ಯಾಂಘ್ರಿಂ ತುಲಸೀದಾಮವಕ್ಷಸಂ।
ಜ್ಞಾನಭಕ್ತಿ ತಪಃ ಪೂರ್ಣಂ ಧ್ಯಾಯೇತ್ ಸರ್ವಾರ್ಥಸಿದ್ಧಯೇ ॥

ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮೂಲರಾಮಚಂದ್ರ ಪ್ರೇರಣಯಾ ಶ್ರೀ ಮೂಲರಾಮಚಂದ್ರಪ್ರೀತ್ಯರ್ಥಂ ಶ್ರೀ ರಾಘವೇಂದ್ರಾಷ್ಟಾಕ್ಷರ ಜಪತರ್ಪಣಾಖ್ಯಂ ಕರ್ಮ ಕರಿಷ್ಯೇ 'ಓಂ ಶ್ರೀ ರಾಘವೇಂದ್ರಾಯನಮಃ ಓಂ'

ಎರಡನೇ ಕ್ರಮ

ಅಸ್ಯಶ್ರೀ ರಾಘವೇಂದ್ರ ಅಷ್ಟಾಕ್ಷರಮಂತ್ರಸ್ಯ ಅಪ್ಪಣಾಚಾರ್ಯ ಋಷಿಃ ಗಾಯತ್ರೀ ಅನುಷ್ಟುಪ್ ವಾ ಛಂದಃ - ಶ್ರೀ ರಾಘವೇಂದ್ರಗುರ್ವಂತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಮೂಲರಾಮಚಂದ್ರೋದೇವತಾ

ಕಲೌ ಪ್ರತ್ಯಕ್ಷಫಲದೌ ಶೀಘ್ರಮೇವ ಧನಪ್ರದೌ ।
ಋಣಾಪಹಾರಕೌ ರಾಜಚೋರಪೀಡಾದಿಶಾಮಕೌ ॥ ೨೩॥

ಕಲೌ = ಈ ಕಲಿಯುಗದಲ್ಲಂತೂ, **ಪ್ರತ್ಯಕ್ಷಫಲದೌ** = ಪ್ರತ್ಯಕ್ಷವಾಗಿಯೇ ಫಲವನ್ನು ನೀಡುವುವು, **ಶೀಘ್ರಮೇವ**= ತಡವಿಲ್ಲದೆ, ಶೀಘ್ರವಾಗಿಯೇ, **ಧನಪ್ರದೌ** = ಧನವನ್ನು ನೀಡುವುವು, **ಋಣಾಪಹಾರಕೌ** = ಸಾಲದ ಹೊರೆಯನ್ನು ಪರಿಹರಿಸುವುವು, **ರಾಜಚೋರಪೀಡಾದಿ ಶಾಮಕೌ** = ರಾಜರ, ಕಳ್ಳರ ಪೀಡೆಗಳನ್ನನು ಶಮನ ಮಾಡುವುವು.

ಜನಾನುರಾಗೀ ಲೋಕೈಶ್ಚ ಪೂಜ್ಯೋ ಭವತಿ ಜಾಪಕಃ ।
ಜ್ಞಾನವಾನ್ ವಾಕ್ಪಟುರ್ದೈವಶಾಲೀ ದೀರ್ಘಾಯುರುತ್ತಮಃ ॥ ೨೪॥

ಜಾಪಕಃ = ಈ ಮಂತ್ರಜಪಮಾಡುವವನು, **ಜನಾನುರಾಗೀ** = ಜನರ ಮನ್ನಣೆಯನ್ನು ಪಡೆದವನು, **ಜ್ಞಾನವಾನ್** = ಶಾಸ್ತ್ರೀಯ ಜ್ಞಾನಿಯು, **ವಾಕ್ಪಟುಃ** = ಚತುರ ಭಾಷಿಯೂ, **ದೈವಶಾಲೀ** = ಅದೃಷ್ಟಶಾಲಿಯೂ, **ದೀರ್ಘಾಯುಃ** = ದೀರ್ಘಾಯುಷ್ಮಂತನು, **ಉತ್ತಮಃ** = ಸರ್ವಶ್ರೇಷ್ಠನೂ, **ಲೋಕೈಶ್ಚ** = ಜನರಿಂದ, **ಪೂಜ್ಯಃ** = ಪೂಜಾರ್ಹನೂ, **ಭವತಿ** = ಆಗುವವನು.

೧.ಓಂ ಶ್ರೀಂ ಹೃದಯಾಯ ನಮಃ ೨. ಓಂ ರಾಘವೇಂದ್ರಾಯ ಶಿರಸೇ ಸ್ವಾಹಾ
೩.ಓಂ ನಮಃ ಶಿಖಾಯೈ ವೌಷಟ್ ೪. ಓಂ ಶ್ರೀಂ ಕವಚಾಯ ಹುಂ
೫.ಓಂ ರಾಘವೇಂದ್ರಾಯ ನೇತ್ರಾಭ್ಯಾಂ ವಷಟ್ ೬. ಓಂ ನಮಃ ಅಸ್ತ್ರಾಯ ಫಟ್

ಶ್ರೀ ರಾಘವೇಂದ್ರಾಯ ನಮಃ ಇತಿ ದಿಗ್ಬಂಧಃ

ಧ್ಯಾನಂ

ಶ್ರೀ ರಾಘವೇಂದ್ರೋ ಹರಿಪಾದಕಂಜ ನಿಷೇವಣಾಲ್ಲಬ್ಧ ಸಮಸ್ತಸಂಪತ್।
ದೇವಸ್ವಭಾವೋ ದಿವಿಜದ್ ದ್ರುಮೋಽಯಮಿಷ್ಟಪ್ರದೋ ಮೇ ಸತತಂ ಸ ಭೂಯಾತ್॥

ಶ್ರೀ ರಾಘವೇಂದ್ರಗುರ್ವಂತರ್ಗತ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಸೀತಾಪತಿ ಶ್ರೀ ಮೂಲರಾಮಚಂದ್ರ ಪ್ರೇರಣಯಾ, ತತ್ಪ್ರೀತ್ಯರ್ಥಂ ಶ್ರೀ ರಾಘವೇಂದ್ರ ಅಷ್ಟಾಕ್ಷರ ಜಪತರ್ಪಣಾಖ್ಯಂ ಕರ್ಮ ಕರಿಷ್ಯೇ.

ಮೂರನೇ ಕ್ರಮ (ಕ್ರಮ-ವ್ಯುತ್ಕ್ರಮವಾಗಿ)

ಹಿಂದಿನಂತೆಯೇ ಋಷಿ - ಛಂದಸ್ಸು - ದೇವತೆಗಳನ್ನು ಸ್ಮರಿಸುವುದು

ಕ್ಷೇಮವಾನ್ ಕವಿತಾಶಾಸ್ತ್ರಗೋಷ್ಠೀಷು ಚ ವಿಚಕ್ಷಣಃ।
ಬಲವಾನ್ ರೂಪಸಂಪನ್ನೋ ನಿರ್ಮಲಾತ್ಮಾ ಸುಭಕ್ತಿಮಾನ್ ॥ ೨೫॥

ಕ್ಷೇಮವಾನ್ = ಕುಶಲಿಯು, ಕವಿತಾಶಾಸ್ತ್ರಗೋಷ್ಠೀಷು = ಕವಿತೆ ಹಾಗೂ ಶಾಸ್ತ್ರಗಳ ಸಭೆಗಳಲ್ಲಿ, **ವಿಚಕ್ಷಣಃ** = ಪಂಡಿತನೂ, **ಬಲವಾನ್** = ದೈಹಿಕ ಬಲಶಾಲಿಯೂ, **ರೂಪಸಂಪನ್ನಃ** = ಸುಂದರನೂ, **ನಿರ್ಮಲಾತ್ಮಾ** = ಶುದ್ಧಾಂತಃಕರಣವುಳ್ಳವನು, **ಸುಭಕ್ತಿಮಾನ್** = ಸಮೀಚೀನವಾದ ಭಕ್ತಿಯುಳ್ಳವನು, **ಭವತಿ** = ಆಗುವವನು.

ಕಲತ್ರಪುತ್ರ ಬಂಧೂನಾಮಾನುಕೂಲ್ಯಂ ಚ ವಿಂದತಿ ।
ಶತ್ರುವಶ್ಯಂ ಭವೇತ್ ತಸ್ಯ ಸರ್ವಸೌಭಾಗ್ಯವರ್ಧನಮ್ ॥ ೨೬॥

ಕಲತ್ರಪುತ್ರ ಬಂಧೂನಾಂ = ಹೆಂಡತಿ, ಮಕ್ಕಳು ಹಾಗೂ ಬಂಧುಗಳ, **ಆನುಕೂಲ್ಯಂ ಚ** = ಅನುಕೂಲರಾಗಿರುವಿಕೆಯನ್ನು, **ವಿಂದತಿ** = ಹೊಂದುವನು, **ತಸ್ಯ** = ಮಂತ್ರಜಾಪಕನಿಗೆ, **ಶತ್ರುವಶ್ಯಂ** = ಶತ್ರುವಶ್ಯತೆಯೂ, **ಭವೇತ್** = ಲಭಿಸುತ್ತದೆ, **ಸರ್ವಸೌಭಾಗ್ಯವರ್ಧನಮ್** = ಸಕಲ ಸೌಭಾಗ್ಯಗಳ ವೃದ್ಧಿಯನ್ನು ಮಾಡುವುದು.

ಅಂಗನ್ಯಾಸ

ಓಂ ಶ್ರೀ ಹೃದಯಾಯ ನಮಃ – ಓಂ ರಾಘವೇಂದ್ರಾಯ ಶಿರಸೇ ಸ್ವಾಹಾ
ಓಂ ನಮಃ ಶಿಖಾಯೈ ವೌಷಟ್ (ಮಂತ್ರದ ಕ್ರಮದಂತೆ)
ಓಂ ನಮಃ ಕವಚಾಯ ಹುಂ – ಓಂ ರಾಘವೇಂದ್ರಾಯ ಅಸ್ತ್ರಾಯಃಫಟ್
ಓಂ ಶ್ರೀಂ ನೇತ್ರಾಭ್ಯಾಂ ವೌಷಟ್ (ಮಂತ್ರದ ವ್ಯುತ್ಕ್ರಮದಂತೆ)

ಶ್ರೀ ರಾಘವೇಂದ್ರಾಯ ನಮಃ ಇತಿ ದಿಗ್ಬಂಧಃ

ಧ್ಯಾನಂ

ರಾಘವೇಂದ್ರಗುರುಂ ಧ್ಯಾಯೇತ್ ಕಾಷಾಯಾಂಬರಧಾರಿಣಂ।
ನೀಲಾಂಬುದಸಮಾಭಾಸಂ ಭವ್ಯಾಂಗಂ ದೀರ್ಘಬಾಹುಕಮ್॥
ರಕ್ತರಾಜೀವ ಪತ್ರಾಕ್ಷಂ ಊರ್ಧ್ವದ್ವಾದಶಪುಂಡ್ರಕಂ।
ಬದ್ಧಪದ್ಮಾಸನಂ ದೇವಸ್ವಭಾವಂ ದಂಡಧಾರಿಣಮ್॥
ಆನಾಲಂಭಿತ ಸ್ವಚ್ಛತುಲಸೀದಲಮಾಲಿಕಂ।
ಜ್ಞಾನಮುದ್ರಾऽಭಯಕರಂ ಪ್ರಣತೇಷ್ಟಸುರದ್ರುಮಮ್॥

ವೇದಾಂತಪಾರಗಃ ಕೀರ್ತಿಸಂಪನ್ನಃ ಸುದಯಾನ್ವಿತಃ ।
ಶಾಂತಕ್ರೋಧೋ ನಿರ್ಮಲಾತ್ಮಾ ಸರ್ವದೇವಪ್ರಿಯೋ ಭವೇತ್ ॥ ೨೭॥

ವೇದಾಂತಪಾರಗಃ = ಉಪನಿಷದರ್ಥವನ್ನು ಸರಿಯಾಗಿ ತಿಳಿದವನು, **ಕೀರ್ತಿಸಂಪನ್ನಃ** = ಯಶೋವಂತನು, **ಸದಯಾನ್ವಿತಃ** = ದಯಾಶಾಲಿಯೂ, **ಶಾಂತಕ್ರೋಧಃ** = ಕೋಪವನ್ನು ಹಿಡಿತದಲ್ಲಿಟ್ಟುಕೊಂಡವನು, **ನಿರ್ಮಲಾತ್ಮಾ** = ನಿರ್ಮಲ ಹೃದಯನೂ, **ಸರ್ವದೇವಪ್ರಿಯಃ** = ಸರ್ವ ದೇವತೆಗಳಿಗೆ ಪ್ರೀತಿಪಾತ್ರನು, **ಭವೇತ್** = ಆಗುವನು.

ವೈರಾಗ್ಯವಾನ್ ಮಹಾತ್ಯಾಗೀ ಭೋಗೀ ಧರ್ಮವಿಚಕ್ಷಣಃ ।
ಕನ್ಯಾಂ ಲಕ್ಷಣಸಂಪನ್ನಾಂ ಪ್ರಾಪ್ನೋತಿ ಶ್ರಿಯಮುತ್ತಮಂ ॥ ೨೮॥

ವೈರಾಗ್ಯವಾನ್ = ವೈರಾಗ್ಯಶಾಲಿಯೂ, **ಮಹಾತ್ಯಾಗೀ** = ಮಹಾ ದಾನಿಯು, **ಭೋಗೀ** = ಭೋಗಶಾಲಿಯು, **ಧರ್ಮವಿಚಕ್ಷಣಃ** = ಧರ್ಮದ ಸೂಕ್ಷ್ಮತೆಯನ್ನು ತಿಳಿದವನು, **ಲಕ್ಷಣಸಂಪನ್ನಾಂ** = ಸುಲಕ್ಷಣೆಯಾದ, **ಕನ್ಯಾಂ** = ಕನ್ಯೆಯನ್ನು, **ಉತ್ತಮಾಂ** = ಉತ್ತಮವಾದ, **ಶ್ರಿಯಂ** = ಸಂಪತ್ತನ್ನು, **ಪ್ರಾಪ್ನೋತಿ** = ಹೊಂದುವನು.

ಶ್ರೀ ರಾಘವೇಂದ್ರಗುರ್ವಂತರ್ಗತ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಸೀತಾಪತಿ ಶ್ರೀ ರಾಮಚಂದ್ರಪ್ರೇರಣಯಾ ಶ್ರೀ ರಾಮಚಂದ್ರಪ್ರೀತ್ಯರ್ಥಂ ಯಥಾಶಕ್ತಿ ಶ್ರೀ ರಾಘವೇಂದ್ರ ಅಷ್ಟಾಕ್ಷರ ಜಪತರ್ಪಣಾಖ್ಯಂ ಕರ್ಮಕರಿಷ್ಯೇ.

ನಾಲ್ಕನೇಕ್ರಮ (ಬೀಜಾಕ್ಷರ ಅಂಗನ್ಯಾಸ)

ಹಿಂದಿನಂತೆಯೇ ಅಸ್ಯಶ್ರೀ ಇತ್ಯಾದಿ ಉಚ್ಚರಿಸಬೇಕು.

ಓಂ ರಾಂ ಹೃದಯಾಯ ನಮಃ ಓಂ ರಾಂ ಶಿರಸೇ ಸ್ವಾಹಾ ಓಂ ರಾಂ ಶಿಖಾಯೈ ವೌಷಟ್
ಓಂ ರಾಂ ಕವಚಾಯ ಹುಂ ಓಂ ರಾಂ ನೇತ್ರಾಭ್ಯಾಂ ವಷಟ್ ಓಂ ರಾಂ ಅಸ್ತ್ರಾಯಫಟ್
ಇತಿ ದಿಗ್ಬಂಧಃ

ಧ್ಯಾನಂ **ಶ್ರೀ ರಾಘವೇಂದ್ರಃ ಸಕಲಪ್ರದಾತಾ ಸ್ವಪಾದಕಂಜದ್ವಯಭಕ್ತಿಮದ್ಭ್ಯಃ।**
ಅಘಾದಿಸಂಭೇದನದೃಷ್ಟಿವಜ್ರಃ ಕ್ಷಮಾಸುರೇಂದ್ರೋಽವತು ಮಾಂ ಸದಾಽಯಮ್॥

ಶ್ರೀ ರಾಘವೇಂದ್ರಗುರ್ವಂತರ್ಗತ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಸೀತಾಪತಿ ಶ್ರೀ ರಾಮಚಂದ್ರಪ್ರೇರಣಯಾ ಶ್ರೀ ರಾಮಚಂದ್ರ ಪ್ರೀತ್ಯರ್ಥಂ ಯಥಾಶಕ್ತಿ ಶ್ರೀ ರಾಘವೇಂದ್ರ ಅಷ್ಟಾಕ್ಷರ ಜಪತರ್ಪಣಾಖ್ಯಂ ಕರ್ಮಕರಿಷ್ಯೇ ಓಂ ಶ್ರೀ ರಾಘವೇಂದ್ರಾಯ ನಮಃ ಓಂ

ಕಿಮತ್ರ ಬಹುನೋಕ್ತೇನ ಗುರುರಾಜಕೃಪಾಬಲಾತ್।
ಸ ಭವೇತ್ ಸಿದ್ಧಸಂಕಲ್ಪಃ ಸರ್ವರೋಗವಿವರ್ಜಿತಃ ॥ ೨೯॥

ಅತ್ರ = ಮಂತ್ರಗಳ ಪ್ರಭಾವವನ್ನು ವರ್ಣಿಸುವ ವಿಷಯದಲ್ಲಿ, **ಬಹುನಾ ಉಕ್ತೇನ** = ಹೆಚ್ಚು ಹೇಳುವುದರಿಂದ, **ಕಿಮ್** = ಏನು ಪ್ರಯೋಜನ?, **ಗುರುರಾಜ ಕೃಪಾಬಲಾತ್** = ಗುರುರಾಜರ ಕರುಣೆಯಿಂದ, **ಸಃ** = ಮಂತ್ರಜಾಪಕನು, **ಸಿದ್ಧಸಂಕಲ್ಪಃ** = ಈಡೇರಿದ ಮನೋರಥವುಳ್ಳವನಾಗಿ, **ಸರ್ವರೋಗ ವಿವರ್ಜಿತಃ** = ಸಮಸ್ತರೋಗ ರಹಿತನಾಗಿ, **ಭವೇತ್** = ಆಗುವನು.

ಭಗವದ್‌ಜ್ಞಾನಭಕ್ತಿಭ್ಯಾಂ ಭುಕ್ತಿಂ ಮುಕ್ತಿಂ ಚ ವಿಂದತಿ ।
ಸ್ನಾತ್ವಾ ನಿತ್ಯಾಹ್ನಿಕಂ ಕೃತ್ವಾ ವೃಂದಾವನ ಗತಂ ಗುರುಮ್ ॥ ೩೦॥

ಭಗವದ್‌ಜ್ಞಾನ ಭಕ್ತಿಭ್ಯಾಂ = ಭಗವಂತನಲ್ಲಿ ಜ್ಞಾನ ಮತ್ತು ಭಕ್ತಿಗಳಿಂದ, **ಭುಕ್ತಿಂ** = ಐಹಿಕಭೋಗವನ್ನು, **ಮುಕ್ತಿಂ ಚ** = ಮೋಕ್ಷವನ್ನು, **ವಿಂದತಿ** = ಹೊಂದುವನು, **ಸ್ನಾತ್ವಾ** = ಸ್ನಾನವನ್ನು ಮಾಡಿ, **ನಿತ್ಯಾಹ್ನಿಕಂ** = ಸಂಧ್ಯಾವಂದನಾದಿ ದೈನಂದಿನ ಕೃತ್ಯಗಳನ್ನು, **ಕೃತ್ವಾ** = ಮಾಡಿ, **ವೃಂದಾವನಗತಂ** = ವೃಂದಾವನದಲ್ಲಿರುವ, **ಗುರುಂ** = ರಾಘವೇಂದ್ರಗುರುಗಳನ್ನು, **ಪೂಜಯೇತ್** = ಪೂಜಿಸಬೇಕು.

ಅಥವಾ ಪಾದುಕಾಯಾಂ ಚ ಯಂತ್ರೇ ವಾಽವಾಹಯನ್ ಜಲೇ ।
ಅಪ್ಪಣಾರ್ಯಕೃತಸ್ತುತ್ಯಾ ಸ್ನಾಪಯಿತ್ವಾ ಶುಚಿಃ ಸ್ಥಿರಃ ॥ ೩೧॥

ಅಥವಾ = ಮತ್ತೊಂದು ರೀತ್ಯಾ, **ಪಾದುಕಾಯಾಂ** = ರಾಯರ ಬೆಳ್ಳಿ ಮುಂತಾದ ಪಾದುಕೆಗಳಲ್ಲಿ, **ಯಂತ್ರೇ** = ಯಂತ್ರದಲ್ಲಾಗಲೀ, **ಜಲೇ ವಾ** = ನೀರಿನಲ್ಲಾಗಲೀ, **ಅಪ್ಪಣಾರ್ಯಕೃತಸ್ತುತ್ಯಾ** = ಅಪ್ಪಣಾಚಾರ್ಯರು ರಚಿಸಿದ ರಾಘವೇಂದ್ರ ಸ್ತೋತ್ರದಿಂದ, **ಆವಾಹಯನ್** = ರಾಯರನ್ನು ಆವಾಹಿಸಿ, **ಸ್ನಾಪಯಿತ್ವಾ** = ವೃಂದಾವನ


ಧರಿಸುವ ಯಂತ್ರ

ಮೊದಲು ರಾಂ ಬೀಜಾಕ್ಷರವಿರುವ ತ್ರಿಕೋಣವನ್ನು ಬರೆದು ಅದರ ಸುತ್ತಲೂ ಅಷ್ಟದಳ ಪದ್ಮವನ್ನು ಬರೆದು ರಾಘವೇಂದ್ರ ಅಷ್ಟಾಕ್ಷರ ಮಂತ್ರಗಳ ಅಕ್ಷರಗಳನ್ನು ಬರೆಯಬೇಕು. ಅದರ ಸುತ್ತಲೂ ವೃತ್ತವನ್ನು ಬರೆದು ಇಷ್ಟಾರ್ಥವನ್ನು ಸುತ್ತಲೂ ಬರೆಯಬೇಕು.

ದಲ್ಲಿರುವ ರಾಯರನ್ನು, **ಅಪ್ಪಣಾರ್ಯಕೃತಸ್ತುತ್ಯಾ** = ರಾಘವೇಂದ್ರಸ್ತೋತ್ರದಿಂದ, **ಸ್ನಾಪಯಿತ್ವಾ** = ಅಭಿಷೇಕವನ್ನು ಮಾಡಿ, **ಶುಚಿಃ** = ಶುಚಿಯಾಗಿ, **ಸ್ಥಿರಃ** = ನಿಶ್ಚಲನಾಗಿ,

ಜಪೇತ್ ಪಶ್ಚಾತ್ ಅಪ್ಪಣಾರ್ಯನಾಮಮಂತ್ರಂ ಜಪೇದ್ ಯಥಾ ।
ಶ್ರೀ ಅಪ್ಪಣಾರ್ಯಾಯ ನಮ ಇತ್ಥಮಷ್ಟಾಕ್ಷರೋ ಮನುಃ ॥ ೩೨॥

ಪಶ್ಚಾತ್ = ಸ್ನಾನ ಮಾಡಿಸಿದ ನಂತರ, **ಅಪ್ಪಣಾರ್ಯನಾಮಮಂತ್ರಂ** = ಅಪ್ಪಣಾಚಾರ್ಯರ ನಾಮಮಂತ್ರವನ್ನು, **ಜಪೇತ್** = ಜಪಿಸಬೇಕು, **ಯಥಾ** = ಹೇಗೆಂದರೇ, **ಶ್ರೀ ಅಪ್ಪಣಾರ್ಯಾಯ ನಮಃ** = ಶ್ರೀ ಅಪ್ಪಣಾರ್ಯಾಯ ನಮಃ, **ಇತ್ಥಂ** = ಈ ರೀತಿಯಾಗಿ, **ಅಷ್ಟಾಕ್ಷರಃ** = ಎಂಟು ಅಕ್ಷರಗಳಿರುವ, **ಮನುಃ** = ಮಂತ್ರವು, **ಜಪೇತ್** = ಜಪಿಸತಕ್ಕದ್ದು.




ಅಪ್ಪಣಾರ್ಯರ ಧ್ಯಾನಶ್ಲೋಕ

ಶ್ರೀ ರಾಘವೇಂದ್ರಗುರ್ವಂಘ್ರಿಸಂಸಕ್ತಧಿಷಣಾಗ್ರಣೀಃ।
ಅಪ್ಪಣ್ಣಾರ್ಯಗುರುರ್ಭೂಯಾದಸ್ಮದಿಷ್ಟಾರ್ಥಸಿದ್ಧಯೇ ॥ ೩೩॥

ಶ್ರೀ ರಾಘವೇಂದ್ರಗುರ್ವಂಘ್ರಿ ಸಂಸಕ್ತ = ಶ್ರೀ ರಾಘವೇಂದ್ರ ಗುರುಪಾದಗಳಲ್ಲಿ ಆಸಕ್ತರಾದ, **ಧಿಷಣಾಗ್ರಣೀಃ** = **ಧಿಷಣ** = ಬುದ್ಧಿವಂತ ಜನರಲ್ಲಿ, **ಅಗ್ರಣೀಃ** = ಅಗ್ರಗಣ್ಯರಾದ, **ಅಪ್ಪಣ್ಣಾರ್ಯಗುರುಃ** = ಅಪ್ಪಣಾಚಾರ್ಯಗುರುಗಳು, **ಅಸ್ಮದಿಷ್ಟಾರ್ಥ ಸಿದ್ಧಯೇ** = ನಮ್ಮ ಇಷ್ಟಸಿದ್ಧಿಗೋಸ್ಕರ, **ಭೂಯಾತ್** = ಆಗಲಿ.

ಅಂಗನ್ಯಾಸಾದಿ ನಾಸ್ಯಾಸ್ತಿ ಶತಂ ವಾ ದಶ ವಾ ಜಪೇತ್ ।
ಮಾಲಾದಿಗಾಸನಾದೀನಿ ಪ್ರಸಿದ್ಧಾನ್ಯೇವ ಲೋಕತಃ ॥ ೩೪॥

ಅಸ್ಯ = ಅಪ್ಪಣಾರ್ಯರ ಅಷ್ಟಾಕ್ಷರ ಮಂತ್ರ ಜಪಕ್ಕೆ, **ಅಂಗನ್ಯಾಸಾದಿ** = ಅಂಗನ್ಯಾಸ ಕರನ್ಯಾಸಗಳು, **ನಾಸ್ತಿ** = ಇರುವುದಿಲ್ಲ, **ಶತಂ ವಾ** = ನೂರಾಗಲೀ, **ದಶ ವಾ** = ಹತ್ತಾಗಲಿ, **ಜಪೇತ್** = ಜಪಿಸಬಹುದು, **ಮಾಲಾ ದಿಗಾಸನಾದೀನಿ – ಮಾಲಾ** = ಜಪಸರವು, **ದಿಕ್** = ಪೂರ್ವಾದಿ ದಿಕ್ಕುಗಳು, **ಆಸನಾದೀನಿ** = ಕುಳಿತುಕೊಳ್ಳುವ




ಧರಿಸುವ ಯಂತ್ರ – **ತ್ರಿಕೋಣ ಬೀಜ ಸಂಪುಟ**

ವಿಧಾನಗಳು, **ಲೋಕತಃ** = ಲೋಕದಲ್ಲಿ, **ಪ್ರಸಿದ್ಧಾನಿ ಏವ** = ಪ್ರಸಿದ್ಧವಾದವುಗಳೇ ಬೇರೆ ವಿಶೇಷವಿರುವುದಿಲ್ಲ.

ಅನೇನ ಗುರುರಾಜಸ್ಯ ಮಂತ್ರಃ ಶೀಘ್ರೇಣ ಸಿದ್ಧ್ಯತಿ ।
ರಾಂ ಬೀಜಂ ವಿಲಿಖೇತ್ ಪೂರ್ವಂ ತ್ರಿಕೋಣಂ ತ್ವೇಕರೇಖಯಾ ॥ ೩೫॥

ಅನೇನ = ಅಪ್ಪಣಾರ್ಯರ ಅಷ್ಟಾಕ್ಷರ ಜಪದಿಂದ, **ಗುರುರಾಜಸ್ಯ** = ಗುರುರಾಜರ, **ಮಂತ್ರಃ** = ಅಷ್ಟಾಕ್ಷರಮಂತ್ರವು, **ಶೀಘ್ರೇಣ** = ಶೀಘ್ರವಾಗಿ, **ಸಿದ್ಧ್ಯತಿ** = ಸಿದ್ಧಿಯಾಗುವುದು.



ಶ್ರೀ ರಾಘವೇಂದ್ರ ರಕ್ಷಾಯಂತ್ರಃ

ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮರತಾಯಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಯಂತ್ರ ರಚನೆ

ರಾಂ ಬೀಜಂ = ರಾಂ ಎಂಬ ಬೀಜಾಕ್ಷರವನ್ನು, **ಪೂರ್ವಂ** = ಮೊದಲು, **ವಿಲಿಖೇತ್** = ಬರೆಯಬೇಕು, **ಏಕರೇಖಯಾ** = ಒಂದೇ ಗೆರೆಯಿಂದ, **ತ್ರಿಕೋಣಂ** = ತ್ರಿಕೋಣವನ್ನು, **ವಿಲಿಖೇತ್** = ಬರೆಯಬೇಕು.

ವರ್ತುಲಂ ವೇಷ್ಟಯಿತ್ವಾಥ ಪದ್ಮಮಷ್ಟದಲಂ ಲಿಖೇತ್ ।
ತದ್ದಲೇಷು ಕ್ರಮಾನ್ಮಂತ್ರವರ್ಣಾನಿ ವಿಲಿಖೇತ್ ಬುಧಃ ॥ ೩೬॥

ಅಥ = ತ್ರಿಕೋಣವನ್ನು ಬರೆದನಂತರ, **ವರ್ತುಲಂ** = ವೃತ್ತವನ್ನು, **ವೇಷ್ಟಯಿತ್ವಾ** = ಸುತ್ತು ಬರೆದು, **ಅಷ್ಟದಲಂ** = ಎಂಟುದಳಗಳುಳ್ಳ, **ಪದ್ಮಂ** = ಪದ್ಮವನ್ನು, **ಲಿಖೇತ್** = ಬರೆಯಬೇಕು, **ತದ್ದಲೇಷು** = ಆ ಎಂಟು ದಳಗಳಲ್ಲಿಯೂ, **ಕ್ರಮಾತ್** = ಕ್ರಮವಾಗಿ, **ಮಂತ್ರವರ್ಣಾನಿ** = ಅಷ್ಟಾಕ್ಷರ ಮಂತ್ರದ ಅಕ್ಷರಗಳನ್ನು, **ಬುಧಃ** = ಪಂಡಿತನು, **ವಿಲಿಖೇತ್** = ಬರೆಯಬೇಕು.

ಯಂತ್ರಪೂಜೆ

ರಾಘವೇಂದ್ರರ ಬೃಂದಾವನವನ್ನು ಪೂಜಿಸುವುದು, ಪಾದುಕೆಗಳನ್ನು, ಪ್ರತಿಮೆಗಳನ್ನು ಆವಾಹನಾದಿಗಳಿಂದ ಪೂಜಿಸಿ ಗುರ್ವನುಗ್ರಹಕ್ಕೆ ಪಾತ್ರರಾಗುವುದು ಒಂದು ವಿಧಾನ, ಯಂತ್ರದ ಮೂಲಕ ರಾಘವೇಂದ್ರರನ್ನು ಪೂಜಿಸಿದರೆ ಅತಿಶೀಘ್ರವಾಗಿ ಫಲವು ಲಭಿಸುವುದು.

ಯಂತ್ರ ಎಂದರೇನು? ಯಂತ್ರ್ಯತೇ ಬದ್ಧ್ಯತೇ ದೇವತಾ ಅಸ್ಮಿನ್ ಇತಿ ಯಂತ್ರಂ ದೇವತೆಯು ಬಂದು ನೆಲಸುವ ರೇಖಾಚಿತ್ರವೇ ಯಂತ್ರ. ಈ ಯಂತ್ರದಲ್ಲಿ ದೇವತೆಯ ಮೂಲಮಂತ್ರವನ್ನು ಹಾಗೂ ಬೀಜಾಕ್ಷರಗಳನ್ನು ಬರೆಯಬೇಕು.

ಯಂತ್ರವು ಪವಿತ್ರ ಹಾಗೂ ಶೀಘ್ರವಾಗಿ ಫಲವನ್ನು ನೀಡುವ ಸಾಧನವಾಗಿದೆ. ಇದೊಂದು ದೇವತಾ ಪ್ರತೀಕವಾಗಿದೆ. ಯಂತ್ರವನ್ನು ತಾಮ್ರದ ತಗಡು ಅಥವಾ ಕಾಗದದಲ್ಲಿಯೂ ಬರೆಯಬಹುದು.

ಯಂತ್ರದಲ್ಲಿ ಬರೆಯುವುದಾದರೆ ಆ ಯಂತ್ರವನ್ನು ಹೋಮಕುಂಡದಲ್ಲಿ ಹಾಕಿ ಪವಿತ್ರಗೊಳಿಸಿ ನಂತರ ರೇಖೆಯನ್ನು ಬರೆಯಬೇಕು.

ಯಂತ್ರವು ದೇವತೆಯ ದೇಹವೆನಿಸಿದರೆ ಆ ಮಂತ್ರವಾದರೋ ದೇವತೆಯ ಆತ್ಮವೆನಿಸಿದೆ. ದೇಹಾತ್ಮಗಳಿಗೆ ಭೇದವಿದ್ದಂತೆ ಯಂತ್ರ ಹಾಗೂ ಮಂತ್ರಗಳಿಗೆ ಭೇದವಿದೆ.

ಅಷ್ಟದಳ ಪದ್ಮದಳಗಳಲ್ಲಿ ಅಷ್ಟಾಕ್ಷರ ಮಂತ್ರಾಕ್ಷರಗಳು

ರೇಖಾಭ್ಯಾಂ ಭೂಪುರಂ ದ್ವಾಭ್ಯಾಮಷ್ಟದಿಕ್ಷು ಶ್ರಿಯಂ ಲಿಖೇತ್ ।
ತ್ರಿಭಿರಾವರಣೈರ್ಯುಕ್ತಂ ಪೂಜಾಯಂತ್ರಮಿದಂ ಗುರೋಃ ॥ ೩೭॥

ದ್ವಾಭ್ಯಾಂ = ಎರಡು, **ರೇಖಾಭ್ಯಾಂ** = ರೇಖೆಗಳಿಂದ, **ಭೂಪುರಂ** = ಭೂಪುರವನ್ನು, **ವಿಲಿಖೇತ್** = ಬರೆಯಬೇಕು, **ತ್ರಿಭಿಃ** = ಮೂರು, **ಆವರಣೈಃ** = ಆವರಣಗಳಿಂದ, **ಯುಕ್ತಂ** = ಕೂಡಿರುವ, **ಇದಂ** = ಈ ಯಂತ್ರವು, **ಗುರೋಃ** = ರಾಘವೇಂದ್ರ ಗುರುಗಳ, **ಪೂಜಾಯಂತ್ರಂ** = ಪೂಜಿಸಲು ಯೋಗ್ಯವಾದ ಯಂತ್ರವಾಗಿದೆ. (**ಭೂಪುರ** = ಯಂತ್ರವನ್ನು ಬರೆದ ನಂತರ ಸುತ್ತಲೂ ಎರಡು ರೇಖೆಯಿಂದ ಚಚ್ಚೌಕವಾಗಿ ಬರೆದ ಆವರಣ ರೇಖೆ).

ಅಂತರ್ಯಾಮಿ ವಿವಕ್ಷೆ

ಯಾವುದೇ ಯಂತ್ರವನ್ನು ಬರೆದು ಪೂಜಿಸಿದರೂ ಆ ಯಂತ್ರದಲ್ಲಿರುವ ದೇವತೆಯ ಅಂತರ್ಯಾಮಿಯಾದ ಭಗವಂತನೆ ಪೂಜೆಯನ್ನು ಸ್ವೀಕರಿಸುವನು.

ಯಂತ್ರಗಳ ವಿಧಗಳು

ಯಂತ್ರಗಳು ಅನೇಕವಿವೆ. ಸಿದ್ಧಯಂತ್ರ, ಸಾಧ್ಯಯಂತ್ರ, ಶತ್ರುಯಂತ್ರ ಇತ್ಯಾದಿ.

ಯಂತ್ರಗಳಲ್ಲಿರಬೇಕಾದ ಅಂಶಗಳು

೧) ಮೊದಲು ಆ ದೇವತೆಯ ಮಂತ್ರದ ಮೊದಲನೆಯ ವರ್ಣವನ್ನು ಅನುಸ್ವಾರ ಸಹಿತವಾಗಿ ಬರೆಯಬೇಕು. ಇದೇ ಬೀಜಾಕ್ಷರ. ಉದಾ - ರಾಘವೇಂದ್ರ ಮಂತ್ರದಲ್ಲಿ 'ರಾಂ' ಎಂಬುದು ಬೀಜಾಕ್ಷರ ಅಥವಾ ಬೀಜಾಕ್ಷರ ಸ್ಥಾನದಲ್ಲಿ 'ಓಂ' ಎಂಬ ಅಕ್ಷರವನ್ನು ಬರೆಯಬಹುದು. ಬೀಜಾಕ್ಷರವನ್ನು ಬರೆದ ಮೇಲೆ ಅದರ ಸುತ್ತಲೂ ಒಂದು ವೃತ್ತಾಕಾರವಾಗಿ ಗೆರೆಯನ್ನು ಎಳೆಯಬೇಕು.

೨) ಸಾಧ್ಯಾಕ್ಷರವನ್ನು ಬರೆಯುವುದು

ಬೀಜಾಕ್ಷರವನ್ನು ಬರೆದು ನಂತರ ವೃತ್ತಾಕಾರವಾಗಿ ವೃತ್ತವನ್ನು ಎಳೆದ ಮೇಲೆ, ನಮಗೆ ಯಾವ ಇಷ್ಟಾರ್ಥವು ಅಪೇಕ್ಷಿತವಾಗಿದೆಯೋ ಆ ಇಷ್ಟಾರ್ಥವನ್ನು ಆ ವೃತ್ತದ ಸುತ್ತಲೂ ಬರೆಯಬೇಕು. ಅವಕಾಶವಿದ್ದರೆ ಸಾಧಕನ ಹೆಸರನ್ನು ಬರೆಯಬಹುದು.

ಸಾಧ್ಯಾರ್ಣಾನ್ ವಿಲಿಖೇತ್ ಧಾರ್ಯೇ ತ್ರಿಕೋಣೇ ಬೀಜ ಸಂಪುಟೇ ।
ಏವಂ ಮಂತ್ರೇಣ ಯಂತ್ರೇಣ ಗುರುರಾಜ ಪ್ರಸಾದಜೈಃ ॥ ೩೮॥

ಧಾರ್ಯೇ = ಧರಿಸಲ್ಪಡುವ ಯಂತ್ರದಲ್ಲಿ, **ಬೀಜಸಂಪುಟೇ** = 'ರಾಂ' ಬೀಜಾಕ್ಷರವನ್ನು ಬರೆಯುವ ಸಂಪುಟವಿರುವ, **ತ್ರಿಕೋಣೇ** = ತ್ರಿಕೋಣದ ಸುತ್ತಲೂ ಇರುವ ವೃತ್ತದಲ್ಲಿ, **ಸಾಧ್ಯಾರ್ಣಾನ್** = ಇಷ್ಟಾರ್ಥದ ಅಕ್ಷರಗಳನ್ನು ಅಥವಾ ಮಂತ್ರಾಕ್ಷರಗಳನ್ನಾಗಲೀ, **ವಿಲಿಖೇತ್** = ಬರೆಯಬೇಕು, **ಏವಂ** = ಹೀಗೆ, **ಮಂತ್ರೇಣ** = ಮಂತ್ರಜಪದಿಂದ, **ಯಂತ್ರೇಣ** = ಯಂತ್ರಪೂಜೆಯ ಮೂಲಕವು, **ಗುರುರಾಜ ಪ್ರಸಾದಜೈಃ** = ಗುರು ರಾಜರ ಅನುಗ್ರಹದಿಂದ ಕೈಗೂಡಿದ, **ಮನೋರಥೈಃ** = ಮನೋಭಿಲಾಷೆಗಳಿಂದ, **ಸಮೃದ್ಧಃ** = ಸಮೃದ್ಧರಾಗಿ, **ಸ್ಯಾತ್** = ಆಗುವರು.

---

೪) ಸಾಧ್ಯಾರ್ಣಗಳು

ಗೋಪಾಲಶರ್ಮಣಃ ಮಮ ರೋಗಭಾಧಾ ನಿವೃತ್ತಿರಸ್ತು।
ಗೋವಿಂದ ಶರ್ಮಣಃ ಮಮ ಪುತ್ರಸಂತಾನ ಪ್ರಾಪ್ತಿರಸ್ತು। ಇತ್ಯಾದಿ ಕ್ರಮ.

೩) ಮಂತ್ರವನ್ನು ಬರೆಯುವುದು

ಇಷ್ಟಾರ್ಥವನ್ನು ಬರೆದ ವೃತ್ತದ ಮೇಲೆ ಮೂರನೆಯದಾಗಿ ಇನ್ನೊಂದು ವೃತ್ತವನ್ನು ಎಳೆಯಬೇಕು. ಆ ವೃತ್ತದಲ್ಲಿ ಸುತ್ತಲೂ ಯಾವ ದೇವತೆಯ ಮಂತ್ರವೋ ಆ ಮಂತ್ರಾಕ್ಷರಗಳನ್ನು ಪೂರ್ತಿಯಾಗಿ ಬರೆಯಬೇಕು.

೪) ಏಕಪಂಚಾಶದ್ವರ್ಣ

ಅ - ಕ್ಷ

ಮೂರನೇ ವೃತ್ತದ ಮೇಲೆ ಇನ್ನೊಂದು ವೃತ್ತವನ್ನು ಬರೆದು ಆ ವೃತ್ತದ ಸುತ್ತಲೂ 'ಅ' ದಿಂದ ಪ್ರಾರಂಭಿಸಿ ಕ್ಷ ಅಕ್ಷರದವರೆಗೆ ಐವತ್ತೊಂದು ಅಕ್ಷರಗಳನ್ನು ಬರೆಯಬೇಕು.

೫) ವ್ಯುತ್ಕ್ರಮವಾಗಿ ಬರೆಯುವುದು

ನಾಲ್ಕನೇ ವೃತ್ತವನ್ನು ಬರೆದು ಐವತ್ತೊಂದು ಅಕ್ಷರವನ್ನು ಬರೆದು, ನಂತರ ಮತ್ತೊಂದು ವೃತ್ತವನ್ನು ಎಳೆದು ಕ್ಷದಿಂದ ಅಕಾರದವರೆಗೂ ಐವತ್ತೊಂದು ಅಕ್ಷರವನ್ನು ವ್ಯುತ್ಕ್ರಮವಾಗಿ ಬರೆಯಬೇಕು.

ಮನೋರಥೈಃ ಸಮೃದ್ಧಃ ಸ್ಯಾದನೇಕೇ ಸಂತಿ ಸಾಕ್ಷಿಣಃ ।
ಸ್ವಾನುಭೂತಂ ಚಾಹ ಸಾಕ್ಷಾದವಧೂತೋ ಗುರೋಃಸುತಃ ॥ ೩೯॥

ಸಾಕ್ಷಿಣಃ = ಮಂತ್ರಯಂತ್ರದಿಂದ ಸಫಲ ಮನೋರಥರಾದ ಸಾಕ್ಷಿಗಳು, **ಅನೇಕೇ** = ಬಹಳ ಮಂದಿ, **ಸಂತಿ** = ಇರುವರು, **ಗುರೋಃಸುತಃ** = ಗುರುಪುತ್ರರಾದ, **ಅವಧೂತಃ** = ಕೃಷ್ಣಾವಧೂತರು, **ಸಾಕ್ಷಾತ್** = ಸ್ವತಃ ತಾವೇ, **ಸ್ವಾನುಭೂತಂ** = ಯಂತ್ರಮಂತ್ರ ಪೂಜೆಯಿಂದ ಫಲವನ್ನು ಪಡೆದ ಅನುಭವವನ್ನು, **ಆಹ** = ಈ ಗ್ರಂಥದಲ್ಲಿ ಹೇಳಿರುವರು.

---

೬) ಯಂತ್ರಗಾಯತ್ರೀ

ಯಾವುದೇ ಯಂತ್ರವಾದರೂ ಐದನೆಯ ವೃತ್ತದಲ್ಲಿ ಯಂತ್ರಗಾಯತ್ರಿಯನ್ನು ಬರೆಯುವುದು ವಾಡಿಕೆಯಲ್ಲಿದೆ.

'ಯಂತ್ರರಾಜಾಯ ವಿದ್ಮಹೇ ದೇವಗ್ರಹಾಯ ಧೀಮಹಿ। ತನ್ನೋ ಯಂತ್ರಃ ಪ್ರಚೋದಯಾತ್॥'

೭) ಭೂಪುರ

ಯಂತ್ರವನ್ನು ಪೂರ್ತಿಯಾಗಿ ಬರೆದ ಮೇಲೆ ಆ ವೃತ್ತಾಕಾರದ ಯಂತ್ರದ ಸುತ್ತಲೂ, ಚಚ್ಚೌಕವಾಗಿ ಎರಡು ರೇಖೆಗಳಿಂದ ಎಳೆಯುವ ಅವಧಿರೇಖೆಯನ್ನು 'ಭೂಪುರ' ಎಂದು ಕರೆಯಲಾಗಿದೆ.

೮) ದಿಗ್ದೇವತಾ ಬೀಜಾಕ್ಷರ

ಭೂಪುರವನ್ನು ಬರೆದ ಮೇಲೆ ನಾಲ್ಕು ದಿಕ್ಕಿನ ದೇವತೆಗಳ ಬೀಜಾಕ್ಷರಗಳನ್ನು ನಾಲ್ಕು ದಿಕ್ಕಿನಲ್ಲೂ ಬರೆಯಬೇಕು.

ಪೂರ್ವದಿಕ್ಕಿನ ದೇವತೆ ಇಂದ್ರದೇವರು. 'ಇಂ' ಎಂಬುದು ಬೀಜಾಕ್ಷರ.
ದಕ್ಷಿಣದಿಕ್ಕು - ಯಮ - 'ಯಂ' ಬೀಜಾಕ್ಷರ
ಪಶ್ಚಿಮದಿಕ್ಕು - ವರುಣ - 'ವಂ' ಬೀಜಾಕ್ಷರ
ಉತ್ತರದಿಕ್ಕು - ಕುಬೇರ - 'ಕುಂ' ಬೀಜಾಕ್ಷರ

ಈ ಭೂಪುರದ ಒಳಭಾಗದಲ್ಲಿ ಉದ್ದೇಶ್ಯ ದೇವತೆಯ ಬೀಜಾಕ್ಷರವನ್ನಾದರೂ ಬರೆಯಬಹುದು.

ಸತತವಿಮಲಗಾತ್ರಂ ಸದ್ಗುಣಾನಾಮಮತ್ರಂ
ದುರಿತತೃಣಲವಿತ್ರಂ ದುರ್ಮತಧ್ವಾಂತಮಿತ್ರಮ್ ।
ಭಜಕಬರಬಹಿತ್ರಂ ಮಾಮಕಪ್ರಾಣಮಿತ್ರಂ
ಗುರುಮತುಲಚರಿತ್ರಂ ಸೌಮಿ ಮಾಂ ಪಾತು ಮಿತ್ರಮ್ ॥ ೪೦॥

(ಅಹಂ = ನಾನು), **ಸತತವಿಮಲಗಾತ್ರಂ** = ಯಾವಾಗಲೂ ನಿರ್ಮಲ ದೇಹಿಗಳಾದ, **ಸದ್ಗುಣಾನಾಂ** = ಸದ್ಗುಣಗಳಿಗೆ, **ಅಮತ್ರಂ** = ಪಾತ್ರರಾದ, **ದುರಿತತೃಣಲವಿತ್ರಂ** = ಪಾಪಗಳೆಂಬ, ಹುಲ್ಲುಗಳಿಗೆ ಕುಡುಗೋಲಿನಂತಿರುವ, **ದುರ್ಮತಧ್ವಾಂತಮಿತ್ರಮ್**

ರಾಘವೇಂದ್ರರ ಯಂತ್ರ

ಕೃಷ್ಣಾವಧೂತರು ರಾಘವೇಂದ್ರತಂತ್ರದಲ್ಲಿ ರಾಘವೇಂದ್ರರ ಯಂತ್ರವನ್ನು ತಿಳಿಸಿದ್ದಾರೆ. ಅದರಂತೆ ಮೊದಲು 'ರಾಂ' ಎಂದು ಬರೆಯಬೇಕು. ಅದರ ಸುತ್ತಲೂ ಏಕರೇಖೆಯ ಮೂಲಕ ತ್ರಿಕೋಣವನ್ನು ಬರೆಯಬೇಕು.

ರಾಂ ಬೀಜಂ ವಿಲಿಖೇತ್ ಪೂರ್ವಂ ತ್ರಿಕೋಣಂ ತ್ವೇಕರೇಕಬಯಾ – ೨/೩೬.

ಅನಂತರ ಆ ತ್ರಿಕೋಣದ ಸುತ್ತಲೂ ವೃತ್ತವನ್ನು ಬರೆಯಬೇಕು. ಅನಂತರ ಆ ವೃತ್ತದ ಸುತ್ತಲೂ ಎಂಟು ದಳಗಳುಳ್ಳ ಪದ್ಮವನ್ನು ಬರೆಯಬೇಕು.

ವರ್ತುಲಂ ವೇಷ್ಟಯಿತ್ವಾಽಥ ಪದ್ಮಮಷ್ಟದಲಂ ಲಿಖೇತ್।

ಆ ಎಂಟುದಳಗಳಲ್ಲಿಯೂ ರಾಘವೇಂದ್ರ ಅಷ್ಟಾಕ್ಷರಮಂತ್ರದ ಅಕ್ಷರಗಳನ್ನು ಕ್ರಮವಾಗಿ ಬರೆಯಬೇಕು.

ತದ್ದಲೇಷು ಕ್ರಮಾನ್ ಮಂತ್ರವರ್ಣಾನಿ ವಿಲಿಖೇತ್ ಬುಧಃ।

ಅದರ ಮೇಲೆ ಮೂರು ಆವರಣಗಳಿಂದ ಯುಕ್ತವಾದ ಚತುರಸ್ರಾಕಾರವಾದ ಎರಡು ರೇಖೆಯ ಭೂಪುರವನ್ನು ಬರೆಯಬೇಕು. ಅನಂತರ ಎಂಟು ದಿಕ್ಕಿನಲ್ಲಿಯೂ ಶ್ರೀ ಎಂದು ಬರೆಯಬೇಕು.

ಇದು ರಾಘವೇಂದ್ರರ ಯಂತ್ರವಾಗುತ್ತದೆ. ಕುತ್ತಿಗೆಯಲ್ಲಿ ಧರಿಸಬೇಕಾದಾಗ, ಸಾಧ್ಯಾಕ್ಷರಗಳನ್ನು = (ಅಪೇಕ್ಷಿತವಾದ ಅಕ್ಷರಗಳನ್ನು = ಮಮ ಇಷ್ಟಾರ್ಥಂ ಭೂಯಾತ್ ಇತ್ಯಾದಿ) ತ್ರಿಕೋಣವನ್ನು ಬರೆದು ಅದರಲ್ಲಿ ಬೀಜಾಕ್ಷರಗಳ ಸಂಪುಟದಲ್ಲಿ ಬರೆದು ಅದರ ಸುತ್ತಲೂ ರಾಘವೇಂದ್ರಅಷ್ಟಾಕ್ಷರಗಳನ್ನಾಗಲೀ, ಬರೆಯಬಹುದು.

= ದುರ್ಮತಗಳೆಂಬ ಕತ್ತಲೆಗೆ ಸೂರ್ಯನಂತಿರುವ, **ಭಜಕಬರ ಬಹಿತ್ರಂ** = ಭಜಕರ ಆಸೆಗಳನ್ನು ಬಹುವಿಧವಾಗಿ ನೀಡಿ ರಕ್ಷಿಸುವ, **ಮಾಮಕ ಪ್ರಾಣಮಿತ್ರಂ** = ನನ್ನ ಪ್ರಾಣಮಿತ್ರರಾದ, **ಅತುಲಚರಿತ್ರಂ** = ಅಸದೃಶಮಹಿಮೆಯುಳ್ಳ, **ಗುರುಂ** = ಗುರುಗಳಾದ ರಾಘವೇಂದ್ರರನ್ನು, **ನೌಮಿ** = ನಮಸ್ಕರಿಸುವೆನು, **ಪುತ್ರಂ** = ಪುತ್ರನಾದ, **ಮಾಂ** = ನನ್ನನ್ನು, ಪಾತು ರಕ್ಷಿಸಲಿ.

ಇತಿ ಶ್ರೀ ಕೃಷ್ಣಾವಧೂತ ಪಂಡಿತಕೃತೌ ಶ್ರೀ ರಾಘವೇಂದ್ರತಂತ್ರೇ
ಮಂತ್ರಾನುವರ್ಣನಂ ನಾಮ ದ್ವಿತೀಯೋಽಧ್ಯಾಯಃ

ತೃತೀಯ ಪಟಲಮ್

ರಾಘವೇಂದ್ರ ಹೃದಯಃ

ನಾರಾಯಣಂ ಮಹಾಲಕ್ಷ್ಮೀಂ ಭಾರ್ಗವಂ ರಘುನಾಯಕಮ್ ।
ಕೃಷ್ಣಂ ವ್ಯಾಸಂ ಹನೂಮಂತಂ ಭೀಮಂ ಮಧ್ವಂ ಗುರೂನಪಿ ॥ ೧॥

ವ್ಯಾಸಂ ನತ್ವಾಽವಧೂತೋಽಹಂ ವಕ್ಷ್ಯಾಮಿ ಹೃದಯಂ ಗುರೋಃ ।
ನಾನಾ ಛಂದಃ ಸುಸರ್ವಾರ್ಥದಾಯಕಂ ಪಾಪನಾಶಕಮ್ ॥ ೨॥

(ಎರಡೂ ಶ್ಲೋಕಗಳಿಗೆ ಸೇರಿ ಅನ್ವಯವನ್ನು ಹೇಳಬೇಕು)

ಅವಧೂತಃ = ಅವಧೂತನಾದ, **ಅಹಂ** = ನಾನು, **ನಾರಾಯಣಂ** = ಪ್ರತಿಪಾದ್ಯ ದೇವತೆಯಾದ ನಾರಾಯಣನನ್ನು, **ಭಾರ್ಗವಂ** = ಪರಶುರಾಮನನ್ನು, **ರಘುನಾಯಕಂ** = ರಾಮಚಂದ್ರದೇವನನ್ನು, **ಕೃಷ್ಣಂ** = ಶ್ರೀಕೃಷ್ಣದೇವನನ್ನು, **ವ್ಯಾಸಂ** = ವಿದ್ಯಾದೇವತೆಯಾದ ವ್ಯಾಸದೇವರನ್ನು, **ಮಹಾಲಕ್ಷ್ಮೀಂ** = ವಾಗಭಿಮಾನಿಯಾದ ಶ್ರೀ ಲಕ್ಷ್ಮೀದೇವಿಯರನ್ನು, **ಹನೂಮಂತಂ** = ಹನುಮಂತದೇವರನ್ನು, **ಭೀಮಂ** = ಭೀಮಸೇನದೇವನನ್ನು, **ಮಧ್ವಂ** = ಮಧ್ವಾಚಾರ್ಯರನ್ನು, **ಗುರೂನ್‌ಅಪಿ** = ಪದ್ಮನಾಭಾದಿ ತೀರ್ಥರನ್ನು, **ವ್ಯಾಸಂ** = ಮಹಾಭಾರತಾದಿ ಗ್ರಂಥಕರ್ತೃಗಳಾದ ವ್ಯಾಸರನ್ನು, **ನತ್ವಾ** = ನಮಸ್ಕರಿಸಿ, **ನಾನಾಛಂದಃ** = ಅನೇಕ ಛಂದಸ್ಸಿನ ಯುಕ್ತವಾಗಿರುವ, **ಸುಸರ್ವಾರ್ಥದಾಯಕಂ** = ಸಮಸ್ತ ಇಷ್ಟಾರ್ಥಗಳನ್ನು ಪೂರ್ಣವಾಗಿ ಕೊಡಲು ಸಮರ್ಥವಾದ, **ಪಾಪನಾಶಕಮ್** = ಪಾಪಗಳನ್ನು ಪರಿಹರಿಸುವ, **ಗುರೋಃ ಹೃದಯಂ** = 'ರಾಘವೇಂದ್ರ ಹೃದಯಂ' ಎಂಬ ಭಾಗವನ್ನು, **ವಕ್ಷ್ಯಾಮಿ** = ಹೇಳುವೆನು. (ವ್ಯಾಸರು ಪ್ರತಿಪಾದ್ಯ ದೇವತೆ ಹಾಗೂ ಗ್ರಂಥಕರ್ತೃವೂ, ಹೀಗೆ ನಿಮಿತ್ತದ್ವಯ ಕಾರಣವಾಗಿ ಎರಡು ಬಾರಿ ನಮನ)

ಧ್ಯಾಯಾಮಿ ಶ್ರೀ ರಾಘವೇಂದ್ರಾರ್ಯರೂಪಂ ।
ಭೂಲೋಕೇಽಸ್ಮಿನ್ ಸರ್ವಸೌಭಾಗ್ಯಹೇತುಮ್ ॥
ಭಕ್ತತ್ರಾಣಾಯೈವ ಬದ್ಧಾದರಂ ಮೇ ।
ಚಿತ್ತೇ ನಿತ್ಯಂ ಸಂವಸತ್ವಿಷ್ಟದೈವಮ್ ॥ ೩॥

ಅಸ್ಮಿನ್ = ಈ, **ಭೂಲೋಕೇ** = ಭೂಲೋಕದಲ್ಲಿ, **ಸರ್ವಸೌಭಾಗ್ಯಹೇತುಂ** = ಸಮಸ್ತ ಸೌಭಾಗ್ಯಗಳಿಗೆ ಕಾರಣವಾದ, **ಭಕ್ತತ್ರಾಣಾಯ ಏವ** = ಭಕ್ತರ ರಕ್ಷಣ ದಲ್ಲಿಯೇ, **ಬದ್ಧಾದರಂ** = ಆಸಕ್ತವಾದ, **ಶ್ರೀ ರಾಘವೇಂದ್ರಾರ್ಯರೂಪಂ** = ಶ್ರೀ ರಾಘವೇಂದ್ರಗುರುಗಳ ರೂಪವನ್ನು, **ಧ್ಯಾಯಾಮಿ** = ಧ್ಯಾನಮಾಡುವೆ, **ಇಷ್ಟದೈವಂ** = ಇಷ್ಟದೇವತೆಯಾದ ರಾಘವೇಂದ್ರರು, **ಮೇ** = ನನ್ನ, **ಚಿತ್ತೇ** = ಚಿತ್ತದಲ್ಲಿ, **ಸದಾ** = ಯಾವಾಗಲೂ, **ಸಂವಸತು** = ವಾಸಮಾಡುತ್ತಿರಲಿ.

ರಾಘವೇಂದ್ರರ ಪೂರ್ವ ಅವತಾರಗಳು

ಪುರಾ ಪ್ರಹ್ಲಾದನಾಮಾಽಭೂದ್ ಹಿರಣ್ಯಕಶಿಪೋಃ ಸುತಃ ।
ಯದರ್ಥಂ ಶ್ರೀಮಹಾವಿಷ್ಣುರ್ನೃಕಂಠೀರವತಾಂ ಗತಃ ॥ ೪॥

ಪುರಾ = ಕೃತಯುಗದಲ್ಲಿ, **ಯದರ್ಥಂ** = ಯಾವ ಪ್ರಹ್ಲಾದರ ಅನುಗ್ರಹ ಕ್ಕೋಸ್ಕರ, **ಮಹಾವಿಷ್ಣುಃ** = ಶ್ರೀಮನ್ನಾರಾಯಣನೇ, **ನೃಕಂಠೀರವತಾಂ** = ನರಸಿಂಹತ್ವ ವನ್ನು, **ಗತಃ** = ಹೊಂದಿದನೋ ಅಂತಹ, **ಹಿರಣ್ಯಕಶಿಪೋಃ ಪುತ್ರಃ** = ಹಿರಣ್ಯಕಶಿಪು ವಿನ ಪುತ್ರರಾದ, **ಪ್ರಹ್ಲಾದನಾಮಾ** = ಪ್ರಹ್ಲಾದರೆಂಬ ಅಭಿದಾನವುಳ್ಳವರಾಗಿ, **ಅಭೂತ್** = ಆಗಿದ್ದರು.

ಸಂಹತಃ ಪ್ರಹತಶ್ಚೇತಿ ತಸ್ಯಾಸ್ತಾಂ ಪರಿಚಾರಿಣೌ ।
ತ್ರೇತಾಯಾಂ ರಾಮಸೇವಾರ್ಥಂ ವಿಭೀಷಣತಯಾಽಜನಿ★ ॥ ೫॥

ತಸ್ಯ = ಆ ಪ್ರಹ್ಲಾದರಾಜರಿಗೆ, **ಸಂಹತಃ** = ಸಂಹತಃನೆಂಬುವನು, **ಪ್ರಹತಃ ಚ** = ಪ್ರಹತನೆಂಬ, **ಪರಿಚಾರಿಣೌ** = ಪರಿಚಾರಕರು (ಸೇವಕರು), **ಆಸ್ತಾಮ್** = ಇದ್ದರು (ಸಃ = ಪ್ರಹ್ಲಾದರು), **ತ್ರೇತಾಯಾಂ** = ತ್ರೇತಾಯುಗದಲ್ಲಿ, **ರಾಮಸೇವಾರ್ಥಂ** = ಶ್ರೀರಾಮಚಂದ್ರದೇವರ ಸೇವೆಗೋಸ್ಕರ, **ವಿಭೀಷಣತಯಾ** = ವಿಭೀಷಣನಾಗಿ, **ಅಜನಿ** = ಅವತರಿಸಿದರು (ಇದು ಎರಡನೇ ಅವತಾರ).

★ (ಕಣ್ವಋಷಿಗಳು ವಿಭೀಷಣನು ಎಂದು ಪ್ರಸಿದ್ಧಿಯಿದೆ. ಕಣ್ವಋಷಿಗಳು ವಿಭೀಷಣ ನಾದಾಗ ಪ್ರಹ್ಲಾದರೂ ರಾಮಸೇವೆಗಾಗಿ ಅವನಲ್ಲಿ ಆವಿಷ್ಟರಾಗಿದ್ದರು ಎಂದು ಜೀವದ್ವಯಾಽವೇಶವನ್ನು ಹೇಳಿ ಕೂಡಿಸಬಹುದು.)

ತತ್ರಾಪಿ ಚಾರೌ ತೌ ಜಾತೌ ಸಂಧಿಕಶ್ಚ ಪ್ರಸಂಧಿಕಃ ।
ದ್ವಾಪರೇಽಪಿ ಸಮಂತಾಭ್ಯಾಂ ಸಮಾವಿಷ್ಟಶ್ಚ ವಾಯುನಾ ॥ ೬॥

ಭೂಭಾರಕ್ಷಪಣೇ ವಿಷ್ಣೋರಂಗತಾಮಾಪ್ತುಮೇವ ಸಃ।
ಪ್ರತೀಪಪುತ್ರತಾಮಾಪ್ಯ ಬಾಹ್ಲೀಕೇಷ್ವಭವತ್ ಪತಿಃ ॥ ೭॥

ತತ್ರಾಪಿ = ವಿಭೀಷಣನ ಅವತಾರಕಾಲದಲ್ಲಿಯೂ, **ತೌ ಚಾರೌ** = ಸೇವಕರಾದ ಸಂಹತ ಹಾಗೂ ಪ್ರಹತರು, **ಸಂಧಿಕಃ** = ಸಂಧಿಕನಾಗಿಯೂ, **ಪ್ರಸಂಧಿಕಃ** = ಪ್ರಸಂಧಿಕ ನಾಮಧೇಯರಾಗಿ, **ಜಾತೌ** = ಅವತರಿಸಿದರು, **ದ್ವಾಪರೇ ಅಪಿ** = ದ್ವಾಪರ ಯುಗದಲ್ಲಿಯೂ, **ವಾಯುನಾ** = ವಾಯುದೇವನಿಂದ, **ಸಮಾವಿಷ್ಟಃ** = ವಿಶೇಷವಾಗಿ ಆವಿಷ್ಟರಾದ, **ಸಃ** = ಪ್ರಹ್ಲಾದರಾಜರೇ, **ಭೂಭಾರಕ್ಷಪಣೇ** = ಭೂಮಿಯ ಭಾರಭೂತರಾದ ದೈತ್ಯರನ್ನು ಕೊಲ್ಲುವ ಕಾರ್ಯದಲ್ಲಿ, **ವಿಷ್ಣೋಃ** = ಶ್ರೀ ಕೃಷ್ಣನಿಗೆ, **ಅಂಗತ್ವಂ ಆಪ್ತುಂ** = ಅಂಗರಾಗಿ ಸೇವೆ ಮಾಡಲು, ಪ್ರತೀಪಪುತ್ರತಾಂ, **ಆಪ್ಯ** = ಪ್ರತೀಪರಾಜನ ಪುತ್ರರಾಗಿ, **ತಾಭ್ಯಾಂ ಸಹ** = ಸಂಹತ ಪ್ರಹತರ ಜೊತೆಗೆ, **ಬಾಹ್ಲೀಕೇಷು** = ಬಾಹ್ಲೀಕ ದೇಶದಲ್ಲಿ (ಪಂಜಾಬ್), **ಪತಿಃ** = ರಾಜರಾಗಿ, **ಅಭವತ್** = ಆದರು (ಇದು ಮೂರನೇ ಅವತಾರ).

ಕಲೌ ಗೋಪಾಲಕೃಷ್ಣಾರ್ಚಾ ಪೂಜಾಯೈ ವ್ಯಾಸಮಸ್ಕರೀ ।
ಭೂತ್ವಾ ನಿರ್ಜಿತ್ಯ ದುರ್ವಾದಾನ್ ಮಧ್ವಶಾಸ್ತ್ರಂ ಪ್ರಕಾಶಯನ್ ॥ ೮॥

ಕಲೌ = ಕಲಿಯುಗದಲ್ಲಿ, **ಗೋಪಾಲಕೃಷ್ಣಾರ್ಚಾ ಪೂಜಾಯೈಃ** = ಗೋಪಾಲ ಕೃಷ್ಣ ಪ್ರತಿಮಾ ಪೂಜೆಗೋಸ್ಕರ, **ವ್ಯಾಸಮಸ್ಕರೀ** = ಶ್ರೀ ವ್ಯಾಸರಾಜರೆಂಬ ಸನ್ಯಾಸಿಗಳಾಗಿ, **ಭೂತ್ವಾ** = ಅವತರಿಸಿ, **ಮಧ್ವಶಾಸ್ತ್ರಂ** = ಶ್ರೀ ಮಧ್ವಾಚಾರ್ಯರ ಶಾಸ್ತ್ರವನ್ನು, **ಪ್ರಕಾಶಯನ್** = ಪ್ರಚುರಪಡಿಸುತ್ತಾ, **ದುರ್ವಾದಾನ್** = ಕೆಟ್ಟವಾದಿಗಳನ್ನು, **ನಿರ್ಜಿತ್ಯ** = ಗೆದ್ದವರಾಗಿ, **ಅಭೂತ್** = ಆದರು.

ಬ್ರಹ್ಮಮಾನಸ ಪೂಜಾಯಾಮಾವಿರ್ಭೂತಾಂ ಹೃದಂಬುಜಾತ್।
ಶ್ರೀರಾಮಾರ್ಚಾಂ ಚ ಸೀತಾರ್ಚಾಂ ಪ್ರಪೂಜಯಿಷುರೇಷಕಃ ॥ ೯॥

ಶ್ರೀ ರಾಘವೇಂದ್ರತೀರ್ಥಾಖ್ಯೋಽವತೀರ್ಯ ಯತಿರೂಪಕಃ ।
ವಿವೃತ್ಯಾ ಮಧ್ವಶಾಸ್ತ್ರಸ್ಯ ಲೋಕೋಪಕೃತಿಮಾತನೋತ್ ॥ ೧೦॥

ಏಷಕಃ = ಈ ವ್ಯಾಸರಾಜರೇ, **ಬ್ರಹ್ಮಮಾನಸ ಪೂಜಾಯಾಂ** = ಬ್ರಹ್ಮದೇವರ ಮಾನಸ ಪೂಜಾಕಾಲದಲ್ಲಿ, **ಹೃದಂಬುಜಾತ್** = ಹೃದಯಕಮಲದಿಂದ, **ಆವಿರ್ಭೂತಾಂ** = ಆವಿರ್ಭವಿಸಿದ, **ಶ್ರೀರಾಮಾರ್ಚಾಂ** = ಶ್ರೀರಾಮದೇವರ ಪ್ರತಿಮೆಯನ್ನು, **ಸೀತಾರ್ಚಾಂ ಚ** = ಸೀತಾದೇವಿಯ ಪ್ರತಿಮೆಯನ್ನು, **ಪ್ರಪೂಜಯಿಷುಃ** = ಪೂಜೆಯನ್ನು ಮಾಡುವ ಉದ್ದೇಶದಿಂದ, **ಶ್ರೀ ರಾಘವೇಂದ್ರ ತೀರ್ಥಾಖ್ಯಂ** = ಶ್ರೀರಾಘವೇಂದ್ರ ತೀರ್ಥರೆಂಬ ನಾಮಧೇಯದಿಂದ, **ಯತಿರೂಪತಃ** = ಯತಿರೂಪ ಧರಿಸಿ, **ಅವತೀರ್ಯ** = ಭೂಮಿಯಲ್ಲಿ ಅವತರಿಸಿ, **ಮಧ್ವಶಾಸ್ತ್ರಸ್ಯ** = ಮಧ್ವಭಾಷ್ಯಾದಿಗಳ, **ವಿವೃತ್ಯಾ** = ಟಿಪ್ಪಣಿಗಳಿಂದ, **ಲೋಕೋಪಕೃತಿ** = ಲೋಕಕ್ಕೆ ಉಪಕಾರವನ್ನು, **ಆತನೋತ್** = ಮಾಡಿದರು (ಇದು ಐದನೇ ಅವತಾರ)

ಅಪ್ಪಣ್ಣಾಚಾರ್ಯ ಕೃಷ್ಣಾಖ್ಯೌ ತತ್ರಾಪಿ ದ್ವಿಜರೂಪತಃ ।
ಸಂಹತಪ್ರಹತೌ ಜಾತೌ ಶಿಷ್ಯೌ ತಸ್ಯ ಪ್ರಿಯೌ ಸದಾ ॥ ೧೧॥

ತತ್ರಾಪಿ = ರಾಘವೇಂದ್ರ - ವ್ಯಾಸರಾಜಾವತಾರಗಳಲ್ಲಿಯೂ, **ತಸ್ಯ** = ರಾಘವೇಂದ್ರರಿಗೆ, **ಸದಾ** = ಯಾವಾಗಲೂ, **ಪ್ರಿಯೌ** = ಪ್ರಿಯರಾದ, **ಸಂಹತಪ್ರಹತೌ** = ಸಂಹತ ಮತ್ತು ಪ್ರಹತರು, **ದ್ವಿಜರೂಪತಃ** = ಬ್ರಾಹ್ಮಣರೂಪದಿಂದ, **ಅಪ್ಪಣ್ಣಾಚಾರ್ಯ ಕೃಷ್ಣಾಖ್ಯೌ** = ಅಪ್ಪಣ್ಣಾಚಾರ್ಯ ಹಾಗೂ ಮುದ್ದುಕೃಷ್ಣಾಚಾರ್ಯರೆಂಬ ಹೆಸರುಳ್ಳ, **ಶಿಷ್ಯೌ** = ಶಿಷ್ಯರಾಗಿ, **ಜಾತೌ** = ಅವತರಿಸಿದರು.

ಪುನಶ್ಚ ಸತ್ಯಸಂಧಾಖ್ಯೋ ಮಠಾಂತರ ನಿವಾಸಿನೀಮ್ ।
ಅನರ್ಚಿತಾಂ ಚ ಸೀತಾಯಾಃ ಪ್ರತಿಮಾಮಾರ್ಚಯದ್ ಯತಿಃ ॥ ೧೨॥

ಪುನಃ ಚ = ಕಲಿಯುಗದಲ್ಲಿ ಮತ್ತೊಂದು ಜನ್ಮದಲ್ಲಿ, **ಸತ್ಯಸಂಧಾಖ್ಯಃ** = ಸತ್ಯಸಂಧರೆಂಬ ಅಭಿದಾನವುಳ್ಳವರಾಗಿ, **ಯತಿಃ** = ಯತಿಯಾಗಿ, **ಮಠಾಂತರ ನಿವಾಸಿನೀಮ್** = ಉತ್ತರಾದಿ ಮಠದಲ್ಲಿದ್ದ, **ಅನರ್ಚಿತಾಂ** = ತಮ್ಮ ಕಾಲದಲ್ಲಿ, ತಮ್ಮಿಂದ ಅರ್ಚಿಸಲಾಗದ, **ಸೀತಾಯಾಃ** = ಸೀತಾ ದೇವಿಯರ, **ಪ್ರತಿಮಾಂ** = ಪ್ರತಿಮೆಯನ್ನು, **ಆರ್ಚಯತ್** = ಪೂಜಿಸಿದರು (ಇದು ಆರನೆಯ ಅವತಾರ)

ವಿಷ್ವಕ್ಸೇನಾಹೀಶಪುತ್ರಾವತಾರಾಃ ಷಡಿಮೇ ಮತಾಃ ।
ತಸ್ಯ ಶ್ರೀ ರಾಘವೇಂದ್ರಗುರೋಃ ಕಾಮ್ಯಾರ್ಥದಾಯಿನಃ ॥ ೧೩॥

ಕಾಮ್ಯಾರ್ಥದಾಯಿನಃ = ಅಭೀಪ್ಸಿತವನ್ನು ಪೂರೈಸುವ, **ತಸ್ಯ** = ಆ, **ರಾಘವೇಂದ್ರಾರ್ಯಗುರೋಃ** = ಶ್ರೀ ರಾಘವೇಂದ್ರಗುರುಗಳ, ★ **ವಿಷ್ವಕ್ಸೇನಾಹೀಶ ಪುತ್ರಾವತಾರಾಃ** = **ವಿಷ್ವಕ್ಸೇನ** = ಸುತ್ತಲೂ ರಕ್ಷಿಸುವ, **ಅಹೀಶ ಪುತ್ರ** = ಸರ್ಪಶಯನ ಭಗವಂತನ ಪುತ್ರನಾದ ವಾಯುದೇವನ ವಿಶೇಷಾವೇಶದಿಂದ ಕೂಡಿರುವ, **ಅವತಾರಾಃ** = ಅವತಾರಗಳು, **ಇಮೇ** = ಮೇಲೆ ಹೇಳಿದ, **ಷಟ್ ಮತಾಃ** = ಷಟ್ಸಂಖ್ಯಾಕಗಳೆಂದು ತಿಳಿಯಲ್ಪಟ್ಟಿವೆ.

ಅಪ್ಪಣ್ಣಾಚಾರ್ಯರಚಿತಂ ಸ್ತೋತ್ರಂ ಸರ್ವೇಷ್ಟಸಾಧಕಮ್ ।
ಏತದ್‌ವಿನಾ ಗುರೋಃ ಪೂಜಾ ಸ್ತೋತ್ರಂಚಾಷ್ಟಾಕ್ಷರೀ ಜಪಃ ॥ ೧೪॥

ಸೇವಾ ಚ ವ್ಯರ್ಥತಾಮೇತಿ ನ ಪ್ರಸಾದೋ ಗುರೋರ್ಭವೇತ್ ।
ಆದೌ ಸಕೃದ್ವಾ ತತ್ಪಾಠಾದನ್ಯಚ್ಛಿದ್ಯತಿ ಶೀಘ್ರತಃ ॥ ೧೫॥

ಅಪ್ಪಣ್ಣಾಚಾರ್ಯರಚಿತಂ = ಅಪ್ಪಣ್ಣಾಚಾರ್ಯರಿಂದ ರಚಿಸಲ್ಪಟ್ಟ, **ಸ್ತೋತ್ರಂ** = ರಾಘವೇಂದ್ರ ಸ್ತೋತ್ರವು, **ಸರ್ವೇಷ್ಟಸಾಧಕಮ್** = ಸಮಸ್ತ ಇಷ್ಟಾರ್ಥಗಳನ್ನು ಸಾಧಿಸಿಕೊಡುವ ಶಕ್ತಿಯುಳ್ಳದ್ದು.

ಏತದ್ ವಿನಾ = ಈ ಸ್ತೋತ್ರವನ್ನು ಮೊದಲು ಪಠಿಸದೇ, **ಗುರೋಃ ಪೂಜಾ** = ಗುರುರಾಜರ ಪೂಜೆಯಾಗಲೀ, **ಸ್ತೋತ್ರಂ** = ಸ್ತುತಿಗಳಾಗಲಿ, **ಅಷ್ಟಾಕ್ಷರೀಜಪಃ ಚ** = ಅಷ್ಟಾಕ್ಷರೀಮಂತ್ರ ಜಪವೂ ಕೂಡ, **ಸೇವಾ** = ಗುರುಸೇವೆಯು, **ವ್ಯರ್ಥತಾಮ್ ಏತಿ** = ವಿಫಲವಾಗುವುದು, **ಗುರೋಃ** = ರಾಘವೇಂದ್ರರ, **ಪ್ರಸಾದಃ** = ಅನುಗ್ರಹವೂ, **ನ ಭವೇತ್** = ಆಗಲಾರದು.

★ ಬ್ರಹ್ಮಸೇವಕನು ಶಂಕುಕರ್ಣನೆಂಬ ಕರ್ಮಜ ದೇವತೆಯು ರಾಘವೇಂದ್ರರ ಅವತಾರವೆಂದು ಭಾವಿಸಲಾಗಿದೆ. ಈ ವಿಷಯಕ್ಕೆ ನರಸಿಂಹಪುರಾಣದ '**ಶಂಕುಕರ್ಣಾಖ್ಯ ದೇವಸ್ತು ಬ್ರಹ್ಮಶಾಪಾಚ್ಚ ಭೂತಲೇ**' ಎಂಬ ಶ್ಲೋಕವನ್ನು ಉದಾಹರಿಸಲಾಗಿದೆ. ಆದರೆ ಈಗಿನ ಪ್ರತಿಗಳಲ್ಲಿ ಈ ಶ್ಲೋಕವು ಕಾಣುವುದಿಲ್ಲ. ರಾಘವೇಂದ್ರತಂತ್ರದಲ್ಲಿಯಾದರೂ ಶೇಷಪುತ್ರನಾದ ವಿಷ್ವಕ್ಸೇನನ ಅವತಾರವೆಂದು '**ವಿಷ್ವಕ್ಸೇನೋ ಶೇಷಪುತ್ರಃ**' ಎಂದು ತಿಳಿಸಲಾಗಿದೆ. ವಿಷ್ವಕ್ಸೇನನು ವಾಯುಪುತ್ರನೆಂದು '**ವಿಷ್ವಕ್ಸೇನಃ ವಾಯುಜಃ ಖೇನ ತುಲ್ಯಃ**' ಎಂಬ ಅನುವ್ಯಾಖ್ಯಾನದಲ್ಲಿ ಪ್ರಸಿದ್ಧವಿದೆ. ಶೇಷಪುತ್ರನೆಂಬ ವಿಷ್ವಕ್ಸೇನನು ಅಪ್ರಸಿದ್ಧನಾಗಿರುವನು. ಆದ್ದರಿಂದ ರಾಘವೇಂದ್ರರನ್ನು ಶಂಕುಕರ್ಣ ಎಂಬ ದೇವತೆಯ ಅವತಾರವೆಂದು ಒಪ್ಪಿದಾಗ ವಿಷ್ವಕ್ಸೇನ ಎಂದರೆ ಶ್ರೀಹರಿ, ಅಹೀಶ

ಆದೌ = ಜಪಾದಿಗಳ ಮೊದಲು, **ಸಕೃತ್** = ಒಂದು ಬಾರಿಯಾಗಲಿ, **ವಾ** = ಅನೇಕ ಬಾರಿಯಾಗಲಿ, **ತತ್ಪಾಠಾತ್** = ಸ್ತೋತ್ರದ ಪಠನದಿಂದ, **ಅನ್ಯತ್** = ಜಪ, ಸೇವಾದಿ ಸಕಲವೂ, **ಶೀಘ್ರತಃ** = ಶೀಘ್ರಕಾಲದಲ್ಲಿಯೇ, **ಸಿದ್ಧ್ಯತಿ** = ಸಿದ್ಧಿಸುತ್ತದೆ.

ಸರ್ವೇಷ್ವಪಿ ಚ ಶಿಷ್ಯೇಷು ಅಪ್ಪಣ್ಣಾಚಾರ್ಯ ಏವ ಸಃ ।
ಗುರೋರತಿಪ್ರಿಯೋ ಯಸ್ಮಾತ್ ಸ್ತುತಿಸ್ತೇನ ಸಮಾದೃತಾಃ ॥ ೧೬॥

ಸರ್ವೇಷು = ಎಲ್ಲಾ, **ಶಿಷ್ಯೇಷು ಅಪಿ** = ಶಿಷ್ಯಸಮೂಹದಲ್ಲಿ, **ಅಪ್ಪಣ್ಣಾಚಾರ್ಯ ಏವ** = ಅಪ್ಪಣ್ಣಾಚಾರ್ಯರೇ, **ಗುರೋಃ** = ರಾಘವೇಂದ್ರರಿಗೆ, **ಅತಿಪ್ರಿಯಃ** = ಅತ್ಯಂತ ಪ್ರೇಮಾಸ್ಪದರೋ, **ತಸ್ಮಾತ್** = ಅತ್ಯಂತ ಪ್ರೇಮಪಾತ್ರರಾದ್ದರಿಂದಲೇ, **ತೇನ** = ರಾಘವೇಂದ್ರ ತೀರ್ಥರಿಂದ, **ಸ್ತುತಿಃ** = ರಾಘವೇಂದ್ರಸ್ತೋತ್ರವು, **ಸಮಾದೃತಾ** = ವಿಶೇಷವಾಗಿ ಆದರಿಸಲ್ಪಟ್ಟಿತು.

ಅಪ್ಪಣ್ಣಾಚಾರ್ಯ ಸಂಪ್ರೋಕ್ತಂ ಮೂಲಂ ಮಾಲಾ ಚ ವರ್ಮ ಚ ।
ಯಥಾಯೋಗಂ ಯಥಾಕಾಲಂ ತತ್ತದುಕ್ತಾರ್ಥಸಿದ್ಧಿದಮ್ ॥ ೧೭॥

ಅಪ್ಪಣ್ಣಾಚಾರ್ಯಸಂಪ್ರೋಕ್ತಂ = ಅಪ್ಪಣ್ಣಾಚಾರ್ಯರಿಂದ ಹೇಳಲ್ಪಟ್ಟ, **ಮೂಲಂ** = ರಾಘವೇಂದ್ರಾಷ್ಟಾಕ್ಷರ ಮೂಲಮಂತ್ರ, **ಮಾಲಾ** = ರಾಘವೇಂದ್ರಸ್ತೋತ್ರ ಮಾಲೆ, **ವರ್ಮ ಚ** = ರಾಘವೇಂದ್ರ ಕವಚವೂ, **ಯಥಾಯೋಗಂ** = ಯೋಗಾನುಸಾರ

ಪುತ್ರ ಎಂದರೆ ವಾಯುದೇವ, ಇವರ ಆವೇಶವುಳ್ಳವರೆಂದು ತಿಳಿಯಬೇಕು, ಇದು ಒಂದು ರೀತಿ. ಇದಕ್ಕೆ ಪ್ರಮಾಣ - **ವಿಷ್ವಕ್ಸೇನೋ ಮಹಾದ್ಯುತಿಃ** - ವಿಷ್ಣುಸಹಸ್ರನಾಮ, ಅಹೀಶ = ಸಂಕರ್ಷಣ ಭಗವಂತ, ಅವನ ಪುತ್ರ ವಾಯುದೇವ, **ಸಂಕರ್ಷಣಾಚ್ಚ ಜಯಾತನೂಜಃ** - ತಾತ್ಪರ್ಯನಿರ್ಣಯ. ರಾಘವೇಂದ್ರರು ವಿಷ್ವಕ್ಸೇನನ ಅವತಾರ ವೆಂದಿಟ್ಟುಕೊಂಡರೆ ನರಸಿಂಹಪುರಾಣದ ವಾಕ್ಯವನ್ನು ಬಿಡಬೇಕಾಗುತ್ತದೆ. ಶಂಕು ಕರ್ಣನ ಅವತಾರವನ್ನು ಒಪ್ಪಿ ಶಂಕುಕರ್ಣನಲ್ಲಿ ವಾಯುದೇವ ಹಾಗೂ ವಾಯುಪುತ್ರ ನಾದ ವಿಷ್ವಕ್ಸೇನ ಮತ್ತು ಶೇಷದೇವ ಹೀಗೆ ಮೂವರ ಆವೇಶವನ್ನು ಒಪ್ಪುವುದು. ಇದಕ್ಕೆ ಪ್ರಮಾಣಗಳು -

'**ವಾಯುನಾ ಚ ಸಮಾವಿಷ್ಟಃ ಮಹಾಬಲ ಸಮನ್ವಿತಃ** - ತಾತ್ಪರ್ಯನಿರ್ಣಯ
'**ಪ್ರಹ್ಲಾದೋಽವತತಾರ ಭೂಮಿವಲಯೇ ನಾಗಾಧಿಪಸ್ಯಾಂಶಕೃತ್**' - ರತ್ನಾಕರತೀರ್ಥರು
'**ಪ್ರಹ್ಲಾದಸ್ಯಾವತಾರೋಽಸೌ ಇಂದ್ರಸ್ಯಾನು ಪ್ರವೇಶಿವಾನ್**' - ವಿಜಯೀಂದ್ರರು

ವಾಗಿ, **ಯಥಾಕಾಲಂ** = ಕಾಲಾನುಸಾರವಾಗಿ, **ತತ್ತತ್** = ಆಯಾಯಾ, **ಉಕ್ತಾರ್ಥ ಸಿದ್ಧಿದಮ್** = ಗ್ರಂಥದಲ್ಲಿ ಹೇಳಿರುವ ಮಂತ್ರಾದಿಗಳ ಸಿದ್ಧಿಯನ್ನು ನೀಡು ವಂತಹುದು.

ರಾಘವೇಂದ್ರಯತಿನಂ ಈಪ್ಸಿತಾರ್ಥಪ್ರದಾಯಿನಮ್।
ಉಪಾಸತೇ ಯಥಾ ಭಕ್ತ್ಯಾ ತಥಾ ಫಲಮವಾಪ್ನುಯಾತ್ ॥ ೧೮॥

ಯಥಾ = ಯಾವ ರೀತಿಯಿಂದ, **ಈಪ್ಸಿತಾರ್ಥದಾಯಿನಂ** = ಇಷ್ಟಾರ್ಥವನ್ನು ಕೊಡುವ, **ಶ್ರೀ ರಾಘವೇಂದ್ರಯತಿನಂ** = ಶ್ರೀ ರಾಘವೇಂದ್ರರನ್ನು, **ಭಕ್ತ್ಯಾ** = ಭಕ್ತ್ಯಾದರ ಪೂರ್ವಕವಾಗಿ, **ಉಪಾಸತೇ** = ಉಪಾಸನೆ ಮಾಡುವನೋ, **ತಥಾ** = ಹಾಗೆಯೇ, **ಫಲಂ** = ಫಲವನ್ನು, **ಅವಾಪ್ನುಯಾತ್** = ಹೊಂದುವನು.

ಸೇವಯಾ ಪರಮಹಂಸಾನಾಮೈಹಿಕಾಽಽಮುಷ್ಮಿಕಂ ಭವೇತ್ ।
ಜ್ಞಾನಂ ಭಕ್ತಿಂ ಚ ವೈರಾಗ್ಯಂ ಭುಕ್ತಿಂ ಮುಕ್ತಿಂ ಚ ವಿಂದತಿ ॥ ೧೯॥

ಪರಮಹಂಸಾನಾಮ್ = ಪರಮಹಂಸಾಶ್ರಮಿಗಳ, **ಸೇವಯಾ** = ಸೇವೆಯಿಂದ, **ಐಹಿಕಾಮುಷ್ಮಿಕಂ** = ಇಹಲೋಕ ಹಾಗೂ ಪಾರತ್ರಿಕ ಫಲಗಳು, **ಭವೇತ್** = ಉಂಟಾಗುತ್ತವೆ, **ಜ್ಞಾನಂ** = ತತ್ವಜ್ಞಾನವನ್ನು, **ಭಕ್ತಿಂ** = ಭಕ್ತಿಯನ್ನು, **ವೈರಾಗ್ಯಂ** = ವೈಷಯಿಕ ವೈರಾಗ್ಯವನ್ನು, **ಭುಕ್ತಿಂ** = ಭೋಗಗಳನ್ನು, **ಮುಕ್ತಿಂ** = ಮುಕ್ತಿಯನ್ನು, **ವಿಂದತಿ** = ಹೊಂದುವನು.

ಶೇಷಾವೇಶ ಪ್ರಹ್ಲಾದನವತಾರವೆನಿಸಿದೆ – ಪುರಂದರದಾಸರು
'ತರಳ ಪ್ರಹ್ಲಾದನೆ ಶೇಷಾವೇಷ ವ್ಯಾಸರು, ಮಧ್ವಪತಿ ವಿಠಲ,
ಶೇಷಾಂಶ ಪ್ರಹ್ಲಾದ ವ್ಯಾಸಮುನಿಯೇ ರಾಘವೇಂದ್ರ – ಗೋಪಾಲದಾಸರು

ರಾಘವೇಂದ್ರ ತಂತ್ರದಲ್ಲಿ 'ಅಪ್ಪಣಾರ್ಯಕೃತ ರಾಘವೇಂದ್ರ ಸ್ತೋತ್ರ, ದಾಸರ ಪದ್ಯಗಳಲ್ಲಿಯೂ ಶಂಕುಕರ್ಣ ಎಂಬ ಹೆಸರಾಗಲೀ, ವಿಷ್ವಕ್ಸೇನ ಎಂಬ ಮೂಲ ರೂಪದ ಪ್ರಸ್ತಾಪವಾಗಲಿ ಇರುವುದಿಲ್ಲ. ಭಾಗವತದಲ್ಲಿ ಸಪ್ತಮದಲ್ಲಿ 'ಶಂಕುಕರ್ಣ' ಎಂಬ ಪದವಿದೆ.

'ಆಂತ್ರಸ್ರಜಃ ಕ್ಷತಜಕೇಸರ ಶಂಕುಕರ್ಣಾತ್' – ೭-೯-೧೬.

ಅಂತೂ, ವಿಷ್ವಕ್ಸೇನನು ಮೂಲರೂಪವೆಂದಿಟ್ಟುಕೊಂಡಾಗ ವಾಯು ಹಾಗೂ ಶಂಕುಕರ್ಣವೆಂಬ ಕರ್ಮಜದೇವತೆಯ ಆವೇಶವನ್ನು ಶಂಕುಕರ್ಣವೆಂದಿಟ್ಟುಕೊಂಡಾಗ ವಾಯು ಹಾಗೂ ವಿಷ್ವಕ್ಸೇನನ ಆವೇಶವೆಂದು ಒಪ್ಪುವುದು.

ಇತ್ಯಾದಿ ವಾಕ್ಯಾತ್ ಪರಮಹಂಸಾಧೀಶಮಿಮಂ ಗುರುಮ್ ।
ಸೇವೇತ ಸರ್ವಥಾ ಮರ್ತ್ಯಃ ಸ್ವರೂಪೋದ್ಧಾರಕಾರಣಮ್ ।
ಸ್ತುವೀತಃ ವಾಕ್ಯಾತ್ ಸ್ತೋತ್ರೈಃ ಪ್ರಾರ್ಥಯೀತ ಯಥೇಪ್ಸಿತಮ್ ॥ ೨೦॥

ಇತ್ಯಾದಿ ವಾಕ್ಯಾತ್ = ಇವೇ ಮೊದಲಾದ ವಾಕ್ಯಗಳ ಪರ್ಯಾಲೋಚನೆಯಿಂದ, **ಮರ್ತ್ಯಃ** = ಭಕ್ತನು, **ಸ್ವರೂಪೋದ್ಧಾರಕಾರಣಂ** = ಸ್ವರೂಪವನ್ನು ಉದ್ಧರಿಸಲು ಸಮರ್ಥರಾದ, **ಪರಮಹಂಸಾಧೀಶಂ** = ಪರಮಹಂಸಾಶ್ರಮಿಗಳಿಗೆ ನಾಯಕರಂತಿರುವ, **ಇಮಂ ಗುರುಮ್**= ಶ್ರೀ ರಾಘವೇಂದ್ರ ಗುರುಗಳನ್ನು, **ಸರ್ವಥಾ**= ಎಲ್ಲಾ ರೀತಿಯಿಂದಲೂ, **ಸೇವೇತ** = ಸೇವಿಸತಕ್ಕದ್ದು, **ಬಹುಭಿಃ** = ಬಹು ಸಂಖ್ಯಾಕಗಳಾದ, **ಸ್ತೋತ್ರೈಃ** = ಸ್ತೋತ್ರಪಾಠಗಳಿಂದ, **ಸ್ತುವೀತ** = ಸ್ತುತಿಸಬೇಕು. **ಯಥೇಪ್ಸಿತಮ್** = ಇಷ್ಟಾರ್ಥಗಳನ್ನು, **ಪ್ರಾರ್ಥಯೀತ** = ಪ್ರಾರ್ಥಿಸಬೇಕು.

ಶ್ರೀ ರಾಘವೇಂದ್ರಂ ಶ್ರಿತಪಾರಿಜಾತಂ
ಸೀತಾರಘೂತ್ತಂಸ್ಯಪದಾಬ್ಜಚಿತ್ತಮ್ ।
ಕಾಷಾಯವಸ್ತ್ರಂ ಕಮನೀಯ ವೇಷಂ
ಕಾಮ್ಯಾರ್ಥದಾತಾರಮತೀತ ದೋಷಮ್ ॥ ೨೧॥

ಶ್ರಿತಪಾರಿಜಾತಂ = ಆಶ್ರಿತರಿಗೆ ಕಲ್ಪವೃಕ್ಷರಾದ, ಸೀತಾರಘೂತ್ತಮಾಂಸ ಪದಾಬ್ಜ **ಚಿತ್ತಂ**= ಸೀತಾರಾಮರ ಪಾದಗಳಲ್ಲಿ ನೆಟ್ಟಮನಸ್ಸುಳ್ಳ, **ಕಾಷಾಯವಸ್ತ್ರಂ**= ಕಾಷಾಯಾಂಬರಧಾರಿಗಳಾದ, **ಕಮನೀಯವೇಷಂ** = ಸುಂದರವಾದ ವೇಷವುಳ್ಳ, **ಕಾಮ್ಯಾರ್ಥ ದಾತಾರಂ** = ಇಷ್ಟಾರ್ಥವನ್ನು ಕೊಡುವ, **ಅತೀತದೋಷಂ** = ದೋಷರಹಿತರಾದ, **ಶ್ರೀ ರಾಘವೇಂದ್ರಂ** = ಶ್ರೀ ರಾಘವೇಂದ್ರರನ್ನು, **ಸ್ತುವೀತ** = ಸ್ತುತಿಸಬೇಕು.

ಜಯತು ಜಯತು ರಾಜಾ ರಾಜರಾಜಾಧಿಪೂಜ್ಯೋ।
ಜಯತು ಜಯತು ರಮ್ಯೋ ರಂಜಿತಾನೇಕಲೋಕಃ।
ಜಯತು ಜಯತು ಭೋಗೀ ಭಕ್ತಭಾಗ್ಯಪ್ರದಾತಾ
ಜಯತು ಜಯತು ಭೂಮಾ ಭೂರಿ ಭೂರಿ ಪ್ರದಾತಾ ॥ ೨೨॥

ರಾಜರಾಜಾಧಿ ಪೂಜ್ಯಃ = ಕುಬೇರನಿಂದಲೂ ಪೂಜಾರ್ಹರಾದ, **ರಾಜಾ** = ಯತಿರಾಜರಾದ ರಾಯರು, **ಜಯತು ಜಯತು** = ಅತಿಶಯವಾಗಿ ಜಯಿಸಲಿ, **ರಂಜಿತಾನೇಕಲೋಕಃ** = ಸಂತೋಷಪಡಿಸಲ್ಪಟ್ಟ ಅನೇಕವಿಧ ಭಕ್ತರುಳ್ಳ, **ರಮ್ಯಃ** =

ಮನೋಹರರಾದ ರಾಯರು, **ಜಯತು ಜಯತು** = ಜಯಿಸಲಿ, **ಭಕ್ತಭಾಗ್ಯ ಪ್ರದಾತಾ** = ಭಕ್ತರಿಗೆ ಐಶ್ವರ್ಯಾದಿ ಭಾಗ್ಯದಾತರಾದ, **ಭೋಗೀ** = ಭೋಗಗಳನ್ನು ಅನುಭವಿಸುವ ಗುರುರಾಜರು, **ಜಯತು ಜಯತು** = ಜಯಿಸಲಿ, **ಭೂಮಾ** = ಗುಣಪೂರ್ಣರಾದ, **ಭೂರಿ ಭೂರಿ ಪ್ರದಾತಾ** = ಸಕಲ ಇಷ್ಟಾರ್ಥಗಳನ್ನು ಅಧಿಕವಾಗಿ ನೀಡುವ ಗುರುರಾಜರು, **ಜಯತು ಜಯತು** = ಜಯಿಸಲಿ.

ಜಯತು ಜಯತು ಬಂಧುಃ ಬಂಧನಚ್ಛೇದಕಾರೀ।
ಜಯತು ಜಯತು ಮಿತ್ರಂ ಮೀಲಿತಾನೇಕವೈರೀ।
ಜಯತು ಜಯತು ಮಾತಾ ಮಾನ್ಯಮಾನ್ಯೋ ಮಹಾತ್ಮಾ।
ಜಯತು ಜಯತು ತಾತಸ್ತಾಪಹರ್ತಾ ನಿತಾಂತಮ್ ॥ ೨೩॥

ಬಂಧನಚ್ಛೇದಕಾರೀ = ಸಂಸಾರಾದಿಬಂಧನವನ್ನು ಕತ್ತರಿಸುವ, **ಬಂಧುಃ**= ಬಂಧುಗಳಾದ, **ಮೀಲಿತಾನೇಕ ವೈರೀ** = ಶತ್ರುಗಳನ್ನು ನಾಶಮಾಡುವ, **ಮಿತ್ರಂ** = ಹಿತೈಷಿಯಾದ, **ಮಾನ್ಯಮಾನ್ಯಃ** = ಮಾನ್ಯರಿಂದಲೂ ಮಾನ್ಯರಾದ, **ಮಹಾತ್ಮಾ** = ಮಹಾನುಭಾವರಾದ, **ನಿತಾಂತಂ ತಾಪಹರ್ತಾ** = ನಿರಂತರವಾಗಿ ತಾಪತ್ರಯ ಪರಿಹಾರಕರಾದ, **ತಾತಃ** = ತಂದೆಯಂತಿರುವ ರಾಘವೇಂದ್ರರು, **ಜಯತು ಜಯತು** = ಜಯಶೀಲರಾಗಲಿ.

ಗುರೋ ತವ ಪದಾಂಬುಜಂ ಭವಪಯೋಧಿನೌಕಾಯಿತಂ।
ಮಹಾಜನ ಪರಂಪರಾಭಜನಗೋಚರಂ ಭೂತಿದಮ್।
ಭಜಾಮಿ ಭಜತಾಂ ನೃಣಾಂ ಬಹುಗದೌಘವಿಧ್ವಂಸಕಮ್।
ಸುಖಪ್ರದಮಹರ್ನಿಶಂ ಸುಖಸುಖೇನ ಸಂಸಿದ್ಧಿದಮ್ ॥ ೨೪॥

ಹೇ ಗುರೋ = ಗುರುಗಳೇ, **ಭವಪಯೋಧಿನೌಕಾಯಿತಂ** = ಸಂಸಾರ ಸಾಗರವನ್ನು ದಾಟಿಸುವ ದೋಣಿಯಂತಿರುವ, **ಮಹಾಜನ ಪರಂಪರಾಭಜನ ಗೋಚರಮ್** = ಮಹಾತ್ಮರ ಪರಂಪರೆಯಲ್ಲಿ ಸ್ತುತಿಗೆ ಗೋಚರವಾದ, **ಭೂತಿದಮ್**= ಐಶ್ವರ್ಯವನ್ನು ನೀಡುವ, **ಭಜತಾಂ** = ಭಜನೆ ಮಾಡುವ, **ಸತಾಂ** = ಸಜ್ಜನರ, **ಬಹುಗದೌಘ ವಿಧ್ವಂಸಕಮ್** = ಬಹುವಿಧವಾದ ರೋಗಗಳನ್ನು ನಾಶ ಮಾಡುವ, **ಅಹರ್ನಿಶಂ** = ಹಗಲೂ ರಾತ್ರಿ ಕಾಲಗಳಲ್ಲಿ, **ಸುಖಪ್ರದಂ** = ಸುಖವನ್ನು ನೀಡುವ, **ಸುಖಸುಖೇನ** = ಅತಿ ಸುಲಭವಾಗಿ, **ಸಂಸಿದ್ಧಿದಮ್** = ಸಿದ್ಧಿಯನ್ನುಂಟುಮಾಡುವ, **ತವ ಪಾದಾಂಬುಜಂ** = ತಮ್ಮ ಪಾದಕಮಲಗಳನ್ನು, **ಭಜಾಮಿ** = ಭಜಿಸುವೆನು.

ಮನೋ ವಸತು ಪಾದಯೋರ್ಭವತು ಮೇ ವಚಸ್ತೇ ಸ್ತುತೌ ।
ತ್ವದೀಕ್ಷಣವಿಧೌ ದೃಶೌ ಭವತು ತೇಽರ್ಚನಾಯಾಂ ಕರೌ ।
ಶ್ರುತೀ ತವ ಗುಣಶ್ರುತೌ ಭವತು ಮಸ್ತಕಂ ತೇ ನತೌ ।
ಪ್ರದಕ್ಷಿಣವಿಧೌ ಪದೇ ಗುರುವರಾಶ್ರಯೇ ತೇ ಪದೇ ॥ ೨೫॥

ಮನಃ = ಮನಸ್ಸು, **ಪಾದಯೋಃ** = ಪಾದಾರವಿಂದಗಳಲ್ಲಿ, **ವಸತು** = ಆಸಕ್ತವಾಗಲಿ, **ಮೇ** = ನನ್ನ, **ವಚಃ** = ಮಾತುಗಳು, **ತೇ** = ನಿಮ್ಮ, **ಸ್ತುತೌ** = ಸ್ತುತಿಯಲ್ಲಿ, **ಭವತು** = ಆಸಕ್ತವಾಗಲಿ, **ದೃಶೌ** = ದೃಷ್ಟಿಗಳು, **ತ್ವದೀಕ್ಷಣವಿಧೌ** = ನಿಮ್ಮನ್ನು ನೋಡುವ ಕಾರ್ಯದಲ್ಲಿ, **ಭವತು** = ಆಸಕ್ತವಾಗಲಿ, **ಕರೌ** = ಕರಗಳು, **ತೇ** = ನಿಮ್ಮ, **ಅರ್ಚನಾಯಾಂ** = ಅರ್ಚಿಸುವುದರಲ್ಲಿ, **ಭವತು** = ಆಸಕ್ತವಾಗಲಿ, **ಶ್ರುತೀ** = ಶ್ರವಣೇಂದ್ರಿಯಗಳು, **ತವ** = ತಮ್ಮ, **ಗುಣಶ್ರುತೌ** = ಗುಣಗಳನ್ನು ಕೇಳುವುದರಲ್ಲಿಯೂ, **ಮಸ್ತಕಂ** = ತಲೆಯು, **ತೇ** = ನಿಮ್ಮ, **ನತೌ** = ನಮಸ್ಕರಿಸುವುದರಲ್ಲಿ, **ಭವತು** = ಮಗ್ನವಾಗಲಿ, **ಪದೇ** = ಪಾದಗಳೆರಡು, **ತೇ** = ನಿಮ್ಮ, **ಪ್ರದಕ್ಷಿಣವಿಧೌ** = ಪ್ರದಕ್ಷಿಣೆಯನ್ನು ಮಾಡುವುದರಲ್ಲಿ ಭವತು, **ಹೇ ಗುರುವರ** = ರಾಘವೇಂದ್ರರೇ, **ತೇ** = ನಿಮ್ಮ, **ಪದೇ** = ಪಾದಗಳನ್ನು, **ಆಶ್ರಯೇ** = ಆಶ್ರಯಿಸುವೆನು.

ವಿತ್ತಾಶಯಾ ಜಗತಿ ವಿತ್ತಾದಿ ಸಂವದತಿ ಮತ್ತಾನಿಮಾನುಪಚರನ್ ।
ಆತ್ತಾಧಿರಸ್ಮ್ಯಹಮನುತ್ತಾನಲುಂಠದಪಚಿತ್ತಾವಿವೇಕಮತಿಮಾನ್ ।
ಮತ್ತಾಂಗನಾ ಕಠಿಣವೃತ್ತಾನುಬಂಧಿಕುಚದತ್ತಾದರಶ್ಚ ತಮಿಮಂ ।
ಶ್ರೀ ರಾಘವೇಂದ್ರ ದಯಯಾರಾದುಪೈಹಿ ಮಮ ಧೀರಾಽಶು
ಯಚ್ಛ ಸುಮತಿಂ ॥ ೨೬॥

ಜಗತಿ = ಜಗತ್ತಿನಲ್ಲಿ, **ವಿತ್ತಾಶಯಾ** = ಹಣದಾಸೆಯಿಂದ, **ಮತ್ತಾನ್ ಇಮಾನ್** = ಅಹಂಕಾರಿಗಳಾದ ಲೌಕಿಕ ವ್ಯಕ್ತಿಗಳನ್ನು, **ಉಪಚರನ್** = ಸೇವಿಸುತ್ತಾ, **ವಿತ್ತಾದಿ** = ಹಣ ಮೊದಲಾದ ವಸ್ತುಗಳನ್ನು, **ಸಂವದತಿ ಸತಿ** = ಕೊಡುತ್ತಿರಲು, **ಅಹಂ** = ನಾನು, **ಅನುತ್ಥಾನ ಲುಂಠತ್** = ಏಳಲು ಬಾರದ ಹಾಗೆ ಹಾಗೆ ವಿವಿಧ ವಿಷಯಗಳಲ್ಲಿ ಹರಿಯುತ್ತಿರುವ, **ಅಪಚಿತ್ತ** = ದುಷ್ಟಮನಸ್ಸಿನಿಂದ, **ಅವಿವೇಕಮಾನ್** = ವಿವೇಕರಹಿತ ಮತಿಯುಳ್ಳವನಾಗಿಯೂ, **ಆತ್ತಾಧಿಃ** = ಮನಸ್ಸಿನ ವ್ಯಥೆಯನ್ನು ಹೊಂದಿದವನೂ, **ಚ** = ಮತ್ತು, **ಮತ್ತಾಂಗನಾಕಠಿಣವೃತ್ತಾನುಬಂಧಿಕುಚದತ್ತಾದರಃ - ಮತ್ತಾಂಗನಾ** = ಕಾಮದಿಂದ ಮದ ಹೊಂದಿದ ಸ್ತ್ರೀಯರ, **ಕಠಿಣ ವೃತ್ತಾನುಬಂಧಿ** = ಕಠಿಣ ಹಾಗೂ

ದುಂಡಾಗಿರುವ, **ಕುಚ** = ಸ್ತನಗಳಲ್ಲಿ, **ದತ್ತಾದರಃ** = ಇಡಲ್ಪಟ್ಟ ಆಸಕ್ತಿಯುಳ್ಳ, **ತಮಿಮಂ** = ಈ ನನ್ನನ್ನು, **ಶ್ರೀ ರಾಘವೇಂದ್ರ** = ರಾಘವೇಂದ್ರರೇ, **ದಯಯಾ** = ದಯೆಯಿಂದ, **ಆರಾದ್ ಉಪೈಹಿ** = ಸಮೀಪಕ್ಕೆ ಬನ್ನಿರಿ, **ಧೀರ** = ಧೀರರೇ, **ಸುಮತಿಂ** = ಸುಬುದ್ಧಿಯನ್ನು, **ಆಶು** = ಕೂಡಲೇ, **ಯಚ್ಛ** = ಕೊಡಿರಿ.

ತವ ಸೇವಾರತಾನ್ ಕಾಂಶ್ಚಿತ್ ಭಕ್ತಾನ್ ಪ್ರೇಷಯ ಮಾಂ ಪ್ರತಿ ।
ತೇಷಾಂ ಮನೋರಥಂ ತಾತ ಮಯಾ ಪುತ್ರೇಣ ಪೂರಯ ॥ ೨೭॥

ತವ = ನಿಮ್ಮ, **ಸೇವಾರತಾನ್** = ಸೇವೆಯಲ್ಲಿ ಆಸಕ್ತರಾದ, **ಕಾಂಶ್ಚಿತ್** = ಕೆಲವು, **ಭಕ್ತಾನ್** = ಭಕ್ತರನ್ನು, **ಮಾಂ ಪ್ರತಿ** = ನನ್ನ ಸಮೀಪಕ್ಕೆ, **ಪ್ರೇಷಯ** = ಕಳುಹಿಸಿಕೊಡಿ, **ಹೇ ತಾತ** = ತಂದೆಯೇ, **ತೇಷಾಂ** = ಆ ಭಕ್ತರ, **ಮನೋರಥಂ** = ಮನೋಭೀಷ್ಟಗಳನ್ನು, **ಪುತ್ರೇಣ** = ತಮ್ಮ ಪುತ್ರನಾದ, **ಮಯಾ** = ನನ್ನಿಂದ. **ಪೂರಯ** = ಪೂರ್ಣವಾಗುವಂತೆ ಮಾಡಿರಿ.

ಅಥವಾ ಕರುಣಾಸಿಂಧೋ ಮಯಿ ಸನ್ನಿಹಿತಃ ಸದಾ ।
ಪುತ್ರಸ್ಯ ಮಮ ವಾಕ್ಯೇನ ಸರ್ವಸರ್ವೇಷ್ಟದೋ ಭವ ॥ ೨೮॥

ಅಥವಾ, **ಹೇ ಕರುಣಾಸಿಂಧೋ** = ಕರುಣಾಸಾಗರರೇ, **ಮಯಿ** = ನನ್ನಲ್ಲಿ, **ಸದಾ** = ಯಾವಾಗಲೂ, **ಸನ್ನಿಹಿತಃ** = ನನ್ನಲ್ಲಿದ್ದುಕೊಂಡು, **ಪುತ್ರಸ್ಯ** = ತಮ್ಮ ಪುತ್ರನಾದ, **ಮಮ** = ನನ್ನನ್ನು, **ವಾಕ್ಯೇನ** = ಮಾತಿನಿಂದ, **ಸರ್ವಸರ್ವೇಷ್ಟಪ್ರದಃ** = ಸಮಸ್ತ ಇಷ್ಟಾರ್ಥವನ್ನು ಕೊಡುವವರಾಗಿ, **ಭವ** = ಆಗಿರಿ. (ಯಾವುದಾದರೂ ಒಂದು ರೀತಿಯಿಂದ ನನ್ನನ್ನು ಪ್ರಸಿದ್ಧಿಗೆ ಬರುವಂತೆ ಮಾಡಿ ನನಗೆ ಬಂದಿರುವ ಅಪಕೀರ್ತಿಯನ್ನು ಹೋಗಲಾಡಿಸಿರಿ ಎಂದು ಭಾವ - ಈ ಅಂಶವು ಮುಂದೆ ಸ್ಪಷ್ಟವಾಗಿದೆ)

ಯೇನ ಕೇನಾಪ್ಯುಪಾಯೇನ ದೂನೇ ದುರ್ಯಶಸಾ ಭುವಿ ।
ಮಾಹಾತ್ಮ್ಯಂ ಮಯಿ ವಿನ್ಯಸ್ಯ ಕುರು ಮಾಂ ಲೋಕಪೂಜಿತಂ ॥ ೨೯॥

ಭುವಿ = ಭೂಮಿಯಲ್ಲಿ, **ದುರ್ಯಶಸಾ** = ಅಪಕೀರ್ತಿಯಿಂದ, **ದೂನೇ** = ಖಿನ್ನನಾದ, **ಮಯಿ** = ನನ್ನಲ್ಲಿ, **ಮಾಹಾತ್ಮ್ಯಂ** = ಪವಾಡ ಶಕ್ತಿಯನ್ನು, **ವಿನ್ಯಸ್ಯ** = ಇಟ್ಟು, **ಯೇನ ಕೇನಾಪಿ ಉಪಾಯೇನ** = ಬೇರೆ ಯಾವುದಾದರೊಂದು ಉಪಾಯದಿಂದ, **ಮಾಂ** = ನನ್ನನ್ನು, **ಲೋಕಪೂಜಿತಂ** = ಲೋಕಮಾನ್ಯನನ್ನಾಗಿ, **ಕುರು** = ಮಾಡಿರಿ.

ಯುಕ್ತಾಯುಕ್ತಮಜಾನಾನೋ ಯಾಚೇ ತ್ವಾಂ ಬಾಲವದ್ ಗುರೋ ।
ದಾತಾ ತ್ರಾತಾ ದಯಾಲುಸ್ತ್ವಂ ಯಥೇಚ್ಛಸಿ ತಥಾ ಕುರು ॥ ೩೦॥

ಹೇ ಗುರೋ = ಗುರುಗಳೇ, **ಯುಕ್ತಾऽಯುಕ್ತಂ** = ಯೋಗ್ಯಾಯೋಗ್ಯವಾದದ್ದನ್ನು, **ಅಜಾನಾನಃ** = ತಿಳಿಯದ ನಾನು, **ಬಾಲವತ್** = ಚಿಕ್ಕಬಾಲಕನಂತೆ, **ತ್ವಾಂ** = ತಮ್ಮನ್ನು, **ಯಾಚೇ** = ಬೇಡುವೆನು, **ತ್ವಂ** = ನೀವು, **ದಾತಾ** = ದಾನಶೀಲರು, **ತ್ರಾತಾ** = ರಕ್ಷಿಸುವವರು, **ದಯಾಲುಃ** = ದಯಾಮಯರು, ಆಗಿರುವಿರಿ, **ಯಥಾ** = ಹೇಗೆ, **ಇಚ್ಛಸಿ** = ಇಚ್ಛಿಸುವಿರೋ, **ತಥಾ** = ಹಾಗೆ, **ಕುರು** = ಮಾಡಿರಿ.

ಸರ್ವಜ್ಞಾಯ ಸ್ವತಂತ್ರಾಯ ಭಕ್ತಕ್ಲೇಶವಿನಾಶಿನೇ ।
ಉದಾರಚೇತಸೇ ಕಿಂ ತೇ ವದೇ ಮದ್ಭಾರವಾಹಿನೇ ॥ ೩೦॥

ಸರ್ವಜ್ಞಾಯ = ಸಕಲವನ್ನು ತಿಳಿದಿರುವ, **ಸ್ವತಂತ್ರಾಯ** = ಅಪರತಂತ್ರರಾದ, **ಭಕ್ತಕ್ಲೇಶವಿನಾಶಿನೇ** = ಭಕ್ತರ ದುಃಖವನ್ನು ಪರಿಹರಿಸುವವರಾದ, **ಉದಾರಚೇತಸೇ** = ಉದಾರಮನಸ್ಕರಾದ, **ಮದ್ಭಾರವಾಹಿನೇ** = ನನ್ನ ಭಾರವನ್ನು ಪೂರ್ಣವಾಗಿ ಹೊರುವವರಾದ, **ತೇ** = ನಿಮಗೆ, **ಕಿಂ** = ಏನನ್ನು, **ವದೇ** = ವಿವರಿಸಲಿ?.

ಆಪಾದಮೌಲಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್ ।
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ॥ ೩೨॥

ಆಪಾದಮೌಲಿಪರ್ಯಂತಂ = ಪಾದದಿಂದ ತಲೆಯವರೆಗೂ, **ಗುರೂಣಾಂ** = ಗುರುಗಳ, **ಆಕೃತಿಂ** = ಆ ಮೂರ್ತಿಯನ್ನು (ಆಕಾರವನ್ನು), **ಸ್ಮರೇತ್** = ಸ್ಮರಿಸಬೇಕು, **ತೇನ** = ಆಕೃತಿಯ ಸ್ಮರಣೆಯಿಂದ, **ವಿಘ್ನಾಃ** = ವಿಘ್ನಗಳು, **ಪ್ರಣಶ್ಯಂತಿ** = ನಾಶವಾಗುವುವು, **ಮನೋರಥಾಃ** = ಮನೋರಥಗಳೆಲ್ಲವು, **ಸಿದ್ಧ್ಯಂತಿ ಚ** = ಸಿದ್ಧಿಸುವುವು.

ಇತಿ ಶ್ರೀ ಗುರುರಾಜಸ್ಯ ಹೃದಯಂ ತದನುಜ್ಞಯಾ ।
ಕೃಷ್ಣಾವಧೂತ ಕಥಿತಂ ಗುರುವಾಕ್ಯಾನುಸಾರತಃ।
ಸಂಪಾದ್ಯ ಸಿದ್ಧಸಂಕಲ್ಪೋ ಭಕ್ತಿಂ ಮುಕ್ತಿಂ ಚ ವಿಂದತಿ ॥ ೩೩॥

ಇತಿ = ಹೀಗೆ, **ತದನುಜ್ಞಯಾ** = ಗುರುಗಳ ಅನುಜ್ಞೆಯಿಂದಲೂ, **ಗುರುವಾಕ್ಯಾನುಸಾರತಃ** = ಗುರುಗಳು ಹೇಳಿದ ಮಾತಿನಂತೆ, **ಕೃಷ್ಣಾವಧೂತಕಥಿತಂ** = ಕೃಷ್ಣಾವಧೂತರಿಂದ ಹೇಳಲ್ಪಟ್ಟ, **ಶ್ರೀ ಗುರುರಾಜಸ್ಯ** = ಶ್ರೀ ಗುರುರಾಯರ, **ಹೃದಯಂ**

= ರಾಘವೇಂದ್ರ ಹೃದಯವೆಂಬ ಸ್ತೋತ್ರವನ್ನು, ಸಂಪಾದ್ಯ = ಹೊಂದಿ, **ಸಿದ್ಧಸಂಕಲ್ಪಃ** = ಪೂರೈಸಲ್ಪಟ್ಟ ಮನೋಭಿಲಾಷೆಯುಳ್ಳವನಾಗಿ, **ಭುಕ್ತಿಂ** = ಭೋಗವನ್ನು, **ಮುಕ್ತಿಂ** = ಮುಕ್ತಿಯನ್ನು, **ವಿಂದತಿ** = ಪಡೆಯುವನು.

ಪಠನಾಚ್ಛ್ರವಣಾದ್ವಾಪಿ ಗುರುಸಾನ್ನಿಧ್ಯಕಾರಣಮ್ ।
ಕಿಮತ್ರಬಹುನಾ ಸರ್ವಂ ಗುರುರಾಜಪ್ರಸಾದತಃ ॥ ೩೪॥

ಪಠನಾತ್ = ಪಠಿಸುವುದರಿಂದ, **ಶ್ರವಣಾತ್ ವಾ ಅಪಿ** = ಕೇಳುವುದರಿಂದಲೂ, **ಗುರುಸಾನ್ನಿಧ್ಯಕಾರಣಮ್** = ಗುರುಗಳ ಸಾನ್ನಿಧ್ಯಕ್ಕೆ ಕಾರಣವಾಗುವುದು, **ಅತ್ರ** = ಈ ವಿಷಯದಲ್ಲಿ, **ಬಹುನಾ** = ಬಹಳ ವಾಕ್ಯಗಳನ್ನು ಹೇಳುವುದರಿಂದ, **ಕಿಮ್** = ಏನು ಪ್ರಯೋಜನವು, **ಗುರುರಾಜಪ್ರಸಾದತಃ** = ಗುರುರಾಜರ ಅನುಗ್ರಹದಿಂದ, **ಸರ್ವಂ** = ಸಮಸ್ತ ಇಷ್ಟಾರ್ಥಗಳನ್ನು, **ಸಂಪಾದ್ಯ** = ಪಡೆದವನಾಗಿ, **ಸಿದ್ಧಸಂಕಲ್ಪಃ** = ಸಿದ್ಧವಾದ ಮನೋಭಿಲಾಷೆಯುಳ್ಳವನಾಗಿ, **ಭುಕ್ತಿಂ** = ಐಹಿಕ ಭೋಗವನ್ನು, **ಮುಕ್ತಿಂ** = ಸಂಸಾರ ದಿಂದ ಬಿಡುಗಡೆಯನ್ನು, **ವಿಂದತಿ** = ಹೊಂದುತ್ತಾನೆ.

ಮೋದಂ ಮೇ ದಿಶತು ಗುರುಃ ಸ ರಾಘವೇಂದ್ರೋ
ದೀನಾನಾಂ ಶರಣಮುದಾರ ಚಿತ್ತವೃತ್ತಿಃ ।
ಭಕ್ತಾನಾಂ ಹರಿಗುರುರೂಪದರ್ಶಕಸ್ತ್ವಂ
ಸುಪ್ರೇಮ್ಣಾ ಮಯಿ ಮಮ ತಾತ ಸನ್ನಿಧೇಹಿ ॥ ೩೪॥

ಸಃ ರಾಘವೇಂದ್ರಃ ಗುರುಃ = ಆ ರಾಘವೇಂದ್ರ ಗುರುಗಳು, **ಮೇ** = ನನಗೆ, **ಮೋದಂ** = ಸಂತೋಷವನ್ನು, **ದಿಶತು** = ಕೊಡಲಿ, **ತ್ವಂ** = ತಾವು, **ದೀನಾನಾಂ** = ದೈನ್ಯ ಜನರ, **ಶರಣಂ** = ರಕ್ಷಕರು, **ಉದಾರಚಿತ್ತವೃತ್ತಿ** = ಔದಾರ್ಯಗುಣೋಪೇತರು, **ಭಕ್ತಾನಾಂ** = ಭಕ್ತಜನರಿಗೆ, **ಹರಿಗುರುರೂಪದರ್ಶಕಃ** = ಹರಿಯ ಹಾಗೂ ಗುರುಗಳ ರೂಪವನ್ನು ತೋರಿಸುವವರು ಆಗಿರುವಿರಿ. **ಹೇ ಮಮ ತಾತ** = ಎಲೇ ನನ್ನ ತಂದೆಯೇ, **ಮಯಿ** = ನನ್ನಲ್ಲಿ, **ಸುಪ್ರೇಮ್ಣಾ** = ಸುಪ್ರೀತರಾಗಿ, **ಸನ್ನಿಧೇಹಿ** = ಸನ್ನಿಧಾನಯುಕ್ತರಾಗಿರಿ.

ಇತಿ ಶ್ರೀ ಕೃಷ್ಣಾವಧೂತ ವಿರಚಿತ ರಾಘವೇಂದ್ರ ತಂತ್ರೇ
ಪ್ರತ್ಯಕ್ಷಸಿದ್ಧಿಪ್ರದೇ ತೃತೀಯೋಽಧ್ಯಾಯಃ

ಚತುರ್ಥ ಪಟಲಮ್

ರಾಘವೇಂದ್ರ ಪೂಜಾ ವಿಧಾನಮ್

ಅಥ ಪೂಜಾವಿಧಿಂ ವಕ್ಷ್ಯೇ ರಾಘವೇಂದ್ರಾರ್ಯಸದ್ಗುರೋಃ।
ಯತಸ್ತುಷ್ಟೇನ ಗುರುಣಾ ಹರೌ ರುಷ್ಟೇಽಪಿ ರಕ್ಷ್ಯತೇ ॥ ೧॥

ಅಥ = ರಾಘವೇಂದ್ರಹೃದಯದ ನಂತರ, **ಯತಃ** = ಯಾವ ಪೂಜಾವಿಧಾನದಿಂದ, **ತುಷ್ಟೇನ** = ಸಂತುಷ್ಟರಾದ, **ಗುರುಣಾ** = ರಾಘವೇಂದ್ರ ಗುರುವಿನಿಂದ, **ರುಷ್ಟೇಽಪಿ ಹರೌ** = ಪೂಜಕನಲ್ಲಿ ಹರಿಯು ಕುಪಿತನಾಗಿದ್ದರೂ, **ರಕ್ಷ್ಯತೇ** = ರಕ್ಷಿಸಲ್ಪಡುವನೋ ಅಂತಹ, **ರಾಘವೇಂದ್ರಾರ್ಯ ಸದ್ಗುರೋಃ** = ಶ್ರೇಷ್ಠರಾಘವೇಂದ್ರಗುರುಗಳ, **ಪೂಜಾವಿಧಿಂ** = ಪೂಜಾಪ್ರಕಾರವನ್ನು, **ವಕ್ಷ್ಯೇ** = ತಿಳಿಸುವೆನು.

ಕೃತನಿತ್ಯಾಹ್ನಿಕಃ ಶುದ್ಧಃ ಸ್ವಸ್ಥಚಿತ್ತಃ ಸುಖಾಸನಃ।
ಆದೌ ಪೂಜಾಂಗಭೂತಂ ಚ ಜಪಂ ಕುರ್ಯಾತ್ ಗುರೋರ್ಮನೋಃ ॥ ೨॥

ಶುದ್ಧಃ = ಸ್ನಾನಾದಿಗಳಿಂದ ಶುಚಿಯಾದ, **ಸ್ವಸ್ಥಚಿತ್ತಃ** = ಮನಃ ಸ್ವಾಸ್ಥ್ಯವುಳ್ಳ ಪೂಜಕನು, **ಸುಖಾಸನಃ** = ಮನಸ್ಸಿಗೆ ಹಿತವೆನಿಸಿದ ಆಸನದಲ್ಲಿ ಕುಳಿತು, **ಕೃತನಿತ್ಯಾಹ್ನಿಕಂ** = ಸಂಧ್ಯಾವಂದನಾದಿ ನಿತ್ಯಾಹ್ನಿಕವನ್ನು ಮುಗಿಸಿ, **ಆದೌ** = ಪೂಜೆಯ ಮೊದಲು, **ಪೂಜಾಂಗಭೂತಂ** = ಪೂಜೆಗೆ ಅಂಗವಾದ, **ಗುರೋಃ** = ರಾಯರ, **ಮನೋಃ** = ಅಷ್ಟಾಕ್ಷರ ಮಂತ್ರದ, **ಜಪಂ** = ಜಪವನ್ನು, **ಕುರ್ಯಾತ್** = ಮಾಡಬೇಕು.

ಪ್ರಾಣಾನಾಯಮ್ಯ ಮಂತ್ರೇಣ ಸಂಸ್ಮರೇನ್ ಮೂರ್ಧ್ನಿ ತಂ ಗುರುಮ್ ।
ಋಷಿಛಂದೋದೇವಬೀಜಶಕ್ತಿ ಕೀಲಾನ್ಯಥೋಚ್ಚರೇತ್ ॥ ೩॥

ಮಂತ್ರೇಣ = ಓಂ ಶ್ರೀ ರಾಘವೇಂದ್ರಾಯ ನಮಃ ಎಂಬ ಅಷ್ಟಾಕ್ಷರ ಮಂತ್ರದಿಂದ, **ಪ್ರಾಣಾನಾಯಮ್ಯ** = ಪ್ರಾಣಾಯಾಮವನ್ನು ಮಾಡಿ, **ಮೂರ್ಧ್ನಿ** = ತಲೆಯಲ್ಲಿ, **ತಂ ಗುರುಂ** = ಗುರುರಾಜರನ್ನು, **ಸ್ಮರೇತ್** = ಸ್ಮರಿಸಬೇಕು, **ಅಥ** = ಅನಂತರದಲ್ಲಿ, **ಋಷಿ** = ಮಂತ್ರಋಷಿಯಾದ ಅಪ್ಪಣ್ಣಾಚಾರ್ಯರನ್ನು, **ಛಂದಸ್ಸು** = ಗಾಯತ್ರಿ,

ಅನುಷ್ಟುಪ್ ಛಂದಸ್ಸನ್ನು, **ದೇವ** = ಮಂತ್ರಪ್ರತಿಪಾದ್ಯ ದೇವತೆಯಾದ ಗುರುರಾಜರನ್ನು, **ಬೀಜ** = ಶ್ರೀಂ ಎಂಬ ಬೀಜವನ್ನು, **ಶಕ್ತಿ** = ರಾಘವೇಂದ್ರಾಯ ಎಂಬ ಶಕ್ತಿಯನ್ನು, **ಕೀಲಾನಿ** = ನಮಃ ಎಂಬ ಕೀಲಕವನ್ನು, **ಉಚ್ಚರೇತ್** = ಹೇಳಬೇಕು.

ನ್ಯಾಸಂ ಧ್ಯಾನಂ ಜಪಂ ಕೃತ್ವಾ ಗುರುಪಾದೇ ಸಮರ್ಪಯೇತ್ ॥ ೪॥

ನ್ಯಾಸಂ = ಅಂಗನ್ಯಾಸವನ್ನು, **ಧ್ಯಾನಂ** = ತಪ್ತಕಾಂಚನ ಇತ್ಯಾದಿ ಮಂತ್ರವನ್ನು, **ಜಪಂ** = ಅಷ್ಟಾಕ್ಷರಮಂತ್ರವನ್ನು, **ಕೃತ್ವಾ** = ಮಾಡಿ, **ಗುರುಪಾದೇ** = ಗುರುಚರಣಗಳಲ್ಲಿ, **ಸಮರ್ಪಯೇತ್** = ಸಮರ್ಪಿಸಬೇಕು.

ರಾಘವೇಂದ್ರಗುರುಂ ಧ್ಯಾಯೇತ್ ಕಾಷಾಯಾಂಬರಧಾರಿಣಮ್ ।
ನೀಲಾಂಬುದಸಮಾಭಾಸಂ ಭವ್ಯಾಂಗಂ ದೀರ್ಘಬಾಹುಕಮ್॥
ರಕ್ತರಾಜೀವಪತ್ರಾಕ್ಷಂ ಊರ್ಧ್ವದ್ವಾದಶ ಪುಂಡ್ರಕಂ।
ಬದ್ಧಪದ್ಮಾಸನಂ ದೇವಸ್ವಭಾವಂ ದಂಡಧಾರಿಣಮ್ ॥ ೫॥

ಕಾಷಾಯಾಂಬರಧಾರಿಣಮ್ = ಕಾಷಾಯವಸ್ತ್ರಧಾರಿಗಳಾದ, **ನೀಲಾಂಬುದಸಮಾಭಾಸಮ್** = ನೀಲಮೇಘದಂತಿರುವ, **ಭವ್ಯಾಂಗಂ** = ಭವ್ಯವಾದ ಅವಯವಗಳುಳ್ಳ, **ದೀರ್ಘಬಾಹುಕಮ್** = ನೀಳವಾದ ತೋಳುಗಳುಳ್ಳ, **ರಕ್ತರಾಜೀವಪತ್ರಾಕ್ಷಂ** = ಕೆಂಪುಕಮಲದ ಎಸಳುಗಳಂತೆ ಕಣ್ಣುಗಳುಳ್ಳ, **ಊರ್ಧ್ವದ್ವಾದಶಪುಂಡ್ರಕಮ್** = ಊರ್ಧ್ವಮುಖನಾಗಿ ಧರಿಸಿದ ದ್ವಾದಶನಾಮಗಳುಳ್ಳ, **ಬದ್ಧಪದ್ಮಾಸನಂ** = ಪದ್ಮಾಸನದಲ್ಲಿ ಕುಳಿತಿರುವ, **ದೇವಸ್ವಭಾವಂ** = ದೇವತಾಸ್ವರೂಪಿಗಳಾದ, **ದಂಡ ಧಾರಿಣಮ್** = ದಂಡವನ್ನು ಧರಿಸಿರುವ

ಆನಾಭಿಲಂಬಿತಸ್ವಚ್ಛತುಲಸೀದಲಮಾಲಿಕಮ್ ।
ಜ್ಞಾನಮುದ್ರಾಭಯಕರಂ ಪ್ರಣತೇಷ್ಟಸುರದ್ರುಮಮ್ ॥ ೬॥

ಆನಾಭಿಲಂಬಿತ ಸ್ವಚ್ಛತುಲಸೀದಲಮಾಲಿಕಮ್=ನಾಭಿಯವರೆಗೆ ಜೋತಾಡುವ ಸ್ವಚ್ಛವಾದ ತುಲಸೀದಲ ನಿರ್ಮಿತ ಹರಿ ನಿವೇದಿತ ಮಾಲೆಯುಳ್ಳ, **ಜ್ಞಾನಮುದ್ರಾಭಯಕರಂ** = ಜ್ಞಾನಮುದ್ರೆ ಹಾಗೂ ಅಭಯಮುದ್ರೆಗಳ ಹಸ್ತಗಳುಳ್ಳ, **ಪ್ರಣತೇಷ್ಟಸುರದ್ರುಮಮ್** = ಭಜಕಭಕ್ತರಿಗೆ ಕಲ್ಪದ್ರುಮದಂತಿರುವ, **ರಾಘವೇಂದ್ರ ಗುರುಂ** = ಶ್ರೀ ರಾಘವೇಂದ್ರರನ್ನು, **ಧ್ಯಾಯೇತ್** = ಧ್ಯಾನಕ್ಕೆ ವಿಷಯರನ್ನಾಗಿ ಮಾಡಬೇಕು.

ಇದು ಮಂತ್ರಜಪದಲ್ಲಿ ಮಾಡಬೇಕಾದ ಧ್ಯಾನಶ್ಲೋಕ.

ಗುರುರಾಜ ಪೂಜಾ ಪದ್ಧತಿಃ

ಧ್ಯಾಯಾಮಿ ಗುರುಮಬ್ಜಾಕ್ಷಂ ಮಹಾಸಾಮ್ರಾಜ್ಯ ಶೋಭಿನಂ ।
ಪ್ರಸನ್ನಮಪ್ಪಣ್ಣಾಚಾರ್ಯಯೋಗೀಂದ್ರಾದ್ಯೈಃ ಪರೀವೃತಮ್ ॥ ೭॥

ಅಬ್ಜಾಕ್ಷಂ = ಕಮಲದಂತೆ ಕಣ್ಣುಗಳಿರುವ, **ಮಹಾಸಾಮ್ರಾಜ್ಯಶೋಭಿನಂ** = ವೇದಾಂತ ಮಹಾಸಾಮ್ರಾಜ್ಯದಲ್ಲಿ ವಿರಾಜಮಾನನಾಗಿರುವ, **ಪ್ರಸನ್ನಂ** = ಪ್ರಸನ್ನ ಮುಖಮುದ್ರೆಯುಳ್ಳ, **ಅಪ್ಪಣ್ಣಾಚಾರ್ಯಯೋಗೀಂದ್ರಾದ್ಯೈಃ** = ಅಪ್ಪಣ್ಣಾಚಾರ್ಯರು ಹಾಗೂ ಯೋಗೀಂದ್ರತೀರ್ಥರೇ ಮೊದಲಾದವರಿಂದ, **ಪರೀವೃತಂ** = ಸುತ್ತುವರೆಯಲ್ಪಟ್ಟ, **ಗುರುಂ** = ಅಜ್ಞಾನಪರಿಹಾರಕರಾದ ರಾಘವೇಂದ್ರರನ್ನು, **ಧ್ಯಾಯಾಮಿ** = ಧ್ಯಾನಿಸುವೆನು.

ಶ್ರೀ ರಾಘವೇಂದ್ರಾಯ ನಮಃ ಧ್ಯಾಯಾಮಿ, ಧ್ಯಾನಂ ಸಮರ್ಪಯಾಮಿ

ಆವಾಹನಮ್

ಆವಾಹಯಾಮಿ ತ್ವಾಮತ್ರ ಸರ್ವದೇವೈರಧಿಷ್ಟಿತಮ್ ।
ಶಿಷ್ಯಸಂಘೈಃ ಪರಿವೃತಮಿಷ್ಟದಾನೋದ್ಯತಂ ಪ್ರಭುಮ್ ॥ ೮॥

ಸರ್ವದೇವೈಃ = ಸಮಸ್ತದೇವತೆಗಳಿಂದ, **ಅಧಿಷ್ಟಿತಮ್** = ಅಧಿಷ್ಠಿತರಾದ, **ಶಿಷ್ಯಸಂಘೈಃ** = ಶಿಷ್ಯಕೋಟಿಯಿಂದ, **ಪರಿವೃತಂ** = ಸುತ್ತುವರೆದಿರುವ, **ಇಷ್ಟದಾನೋದ್ಯತಂ** = ಇಷ್ಟಾರ್ಥದಾನದಲ್ಲಿ ಉದ್ಯುಕ್ತರಾದ, **ಪ್ರಭುಮ್** = ಪ್ರಭುಗಳಾದ, **ತ್ವಾಂ** = ತಮ್ಮನ್ನು, **ಅತ್ರ** = ಈ ಪೀಠದಲ್ಲಿ, **ಆವಾಹಯಾಮಿ** = ನೆಲಸಿರಿ ಎಂದು ಪ್ರಾರ್ಥಿಸುವೆನು.

ಶ್ರೀ ರಾಘವೇಂದ್ರಾಯ ನಮಃ ಆವಾಹನಂ ಸಮರ್ಪಯಾಮಿ

ಆಸನಮ್

ಗುರುರಾಜ ಮಹಾರಾಜ ದ್ವಿಜರಾಜಾದಿ ಸೇವಿತ।
ಸ್ವರ್ಣಪೀಠಾಸನಂ ತುಭ್ಯಂ ದದಾಮಿ ಸ್ವೀಕುರು ಪ್ರಭೋ ॥ ೯॥

ಹೇ ಪ್ರಭೋ = ಪ್ರಭುಗಳಾದ, **ಮಹಾರಾಜ** = ವೇದಾಂತ ಸಾಮ್ರಾಜ್ಯ ಚಕ್ರವರ್ತಿಗಳಾದ, **ದ್ವಿಜರಾಜಾದಿ ಸೇವಿತ** = ಬ್ರಾಹ್ಮಣರು ಹಾಗೂ ರಾಜರೇ ಮೊದಲಾದ ಭಕ್ತರಿಂದ ಸೇವಿಸಲ್ಪಡುವ, **ಗುರುರಾಜ** = ಗುರುರಾಜರೇ, **ತುಭ್ಯಂ** = ತಮಗಾಗಿ,

ಸ್ವರ್ಣಪೀಠಾಸನಂ = ಸುವರ್ಣಖಚಿತಪೀಠವನ್ನು, **ದದಾಮಿ** = ಕುಳಿತುಕೊಳ್ಳಲು ಕೊಡುವೆನು, **ಸ್ವೀಕುರು** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಸ್ವರ್ಣಸಿಂಹಾಸನಂ ಸಮರ್ಪಯಾಮಿ

ಸನ್ನಿಧಾನ ಪ್ರಾರ್ಥನೆ

ಆಗಚ್ಛ ಶ್ರೀ ಮಹಾರಾಜ ಸಾರ್ವಭೌಮ ಗುರೂತ್ತಮ ।
ಯಾವತ್ಪೂಜಾಂ ಕರೋಮ್ಯತ್ರ ತಾವತ್ ಸನ್ನಿಹಿತೋ ಭವ ॥ ೧೦॥

ಶ್ರೀ ಮಹಾರಾಜ = ಮಹಾರಾಜರಾದ, **ಸಾರ್ವಭೌಮ** = ಸರ್ವಭೂಮಿಗೆ ಸಂಬಂಧಿಸಿದ, **ಗುರೂತ್ತಮ** = ಗುರುಶ್ರೇಷ್ಠರಾದ ರಾಘವೇಂದ್ರರೇ, **ಅತ್ರ** = ಈ ಪೀಠದಲ್ಲಿ, **ಯಾವತ್** = ಎಷ್ಟು ಕಾಲದವರೆಗೂ, **ಪೂಜಾಂ** = ಪೂಜೆಯನ್ನು, **ಕರೋಮಿ** = ಮಾಡುವೆನೋ, **ತಾವತ್** = ಅಷ್ಟರವರೆಗೂ, **ಅತ್ರ** = ಈ ಪೀಠದಲ್ಲೇ, **ಸನ್ನಿಹಿತೋ ಭವ** = ಸನ್ನಿಧಾನಯುಕ್ತರಾಗಿರಿ.

ಶ್ರೀ ರಾಘವೇಂದ್ರಾಯ ನಮಃ ಸನ್ನಿಧಾಪನಂ ಪ್ರಾರ್ಥಯಾಮಿ।

ಸ್ಥಿರೀಕರಣಮ್ - ಸ್ಥಿರವಾಗಿರುವಿಕೆ

ಶ್ರೀ ಗುರೋ ರಾಘವೇಂದ್ರಾರ್ಯ ಭಕ್ತವತ್ಸಲ ಭೂಸುರ ।
ತ್ವದೀಯೈಃ ಸಕಲೈಃ ಸಾಕಮತ್ರಸ್ಥಃ ಸುಸ್ಥಿತೋ ಭವ ॥ ೧೧॥

ಭಕ್ತವತ್ಸಲ = ಭಕ್ತರಲ್ಲಿ ಪ್ರೀತಿಯುಳ್ಳ, **ಭೂಸುರ** = ಭೂಮಿಯಲ್ಲಿ ದೇವತೆಯಂತಿರುವ, **ಶ್ರೀ ಗುರೋ ರಾಘವೇಂದ್ರಾರ್ಯ** = ಶ್ರೀ ರಾಘವೇಂದ್ರ ಗುರುಗಳೇ, **ಸಕಲೈಃ ತ್ವದೀಯೈಃ** = ಸಮಸ್ತ ತಮ್ಮ ಪರಿವಾರದೊಂದಿಗೆ, **ಸಾಕಂ** = ಕೂಡಿಕೊಂಡು, **ಅತ್ರಸ್ಥಃ ಸುಸ್ಥಿತೋ ಭವ** = ಇಲ್ಲಿಯೇ ಸ್ಥಿರವಾಗಿರಿ.

ಶ್ರೀ ರಾಘವೇಂದ್ರಾಯ ನಮಃ ಸ್ಥಿರೀಕರಣಂ ಪ್ರಾರ್ಥಯಾಮಿ

ಅಭಿಮುಖೀಕರಣಮ್

ಜಯ ಶ್ರೀ ಗುರುರಾಜೇಂದ್ರ, ರಾಘವೇಂದ್ರ, ಯತೀಶ್ವರ ।
ಪೂಜಾಂ ಗೃಹೀತುಂ ಭಕ್ತಸ್ಯ ತ್ವಂ ಮಮಾಭಿಮುಖೋ ಭವ ॥ ೧೨॥

ಹೇ ಶ್ರೀ ಗುರುರಾಜೇಂದ್ರ = ಗುರುಶ್ರೇಷ್ಠರಾದ, ರಾಘವೇಂದ್ರ **ಯತೀಶ್ವರ** = ಯತಿಶ್ರೇಷ್ಠರಾದ ರಾಘವೇಂದ್ರರೇ, **ಜಯ** = ಜಯಶೀಲರಾಗಿರಿ, **ಭಕ್ತಸ್ಯಮಮ** = ಭಕ್ತನಾದ ನನ್ನನ್ನು, **ಪೂಜಾಂ ಗೃಹೀತುಂ** = ಪೂಜೆಯನ್ನು ಸ್ವೀಕರಿಸಲು, **ಅಭಿಮುಖೋಭವ** = ನಾನಿರುವ ದಿಕ್ಕಿಗೆ ಅಭಿಮುಖರಾಗಿರಿ.

ಶ್ರೀ ರಾಘವೇಂದ್ರಾಯ ನಮಃ ಅಭಿಮುಖೀಕರಣಂ ಪ್ರಾರ್ಥಯಾಮಿ

ಪ್ರಸನ್ನೀಕರಣಮ್

ಸ್ಮೃತಿಮಾತ್ರೇಣ ಸಂತುಷ್ಟ ಪ್ರಸಿದ್ಧ ಕರುಣಾನಿಧೇ ।
ಪ್ರಸನ್ನೋ ಭವ ತೇ ಪೂಜಾಂ ಯಥಾಶಕ್ತಿ ಕರೋಮ್ಯಹಂ ॥ ೧೩॥

ಸ್ಮೃತಿಮಾತ್ರೇಣ = ಕೇವಲ ಸ್ಮರಣೆಯಿಂದಲೇ, **ಸಂತುಷ್ಟ** = ಸಂತುಷ್ಟರಾಗುವ, **ಪ್ರಸಿದ್ಧಕರುಣಾನಿಧೇ** = ಕರುಣಾಳುಗಳೆಂದು ಪ್ರಸಿದ್ಧರಾದ ತಾವು, **ಪ್ರಸನ್ನೋ ಭವ** = ಶಾಂತಮನಸ್ಕರಾಗಿರಿ (ಪ್ರಸನ್ನರಾಗಿರಿ), **ಅಹಮ್** = ನಾನು, **ತೇ** = ತಮ್ಮ, **ಪೂಜಾಂ** = ಪೂಜೆಯನ್ನು, **ಯಥಾಶಕ್ತಿ** = ಶಕ್ತ್ಯಾನುಸಾರವಾಗಿ, **ಕರೋಮಿ** = ಮಾಡುವೆನು.

ಶ್ರೀ ರಾಘವೇಂದ್ರಾಯ ನಮಃ ಪ್ರಸನ್ನೀಕರಣಂ ಪ್ರಾರ್ಥಯಾಮಿ

ಪಾದ್ಯಮ್ (ಪಾದಪ್ರಕ್ಷಾಲನೆಗಾಗಿ ನೀರು)

ಭೂಲೋಕಪಾವನಾರ್ಥಾಯ ಕೃತಾವತರಣ ಪ್ರಭೋ।
ಪಾದ್ಯಂ ಗೃಹಾಣ ರಾಜರ್ಷೇ ಪವಿತ್ರಂ ಕುರು ಮಾಂ ಪ್ರಭೋ ॥ ೧೪॥

ಭೂಲೋಕ ಪಾವನಾರ್ಥಾಯ = ಭೂಲೋಕವನ್ನು ಪವಿತ್ರಗೊಳಿಸಲೆಂದೇ, **ಕೃತಾವತರಣ** = ಅವತರಿಸಿದ, **ಪ್ರಭೋ ರಾಜರ್ಷೇ** = ಗುರುರಾಜ ಶ್ರೇಷ್ಠರೇ, **ಪಾದ್ಯಮ್** = ಕಾಲು ತೊಳೆಯಲಿರುವ ನೀರನ್ನು, **ಗೃಹಾಣ** = ಸ್ವೀಕರಿಸಿ, **ಮಾಂ** = ನನ್ನನ್ನು, **ಪವಿತ್ರಂ ಕುರು** = ಪವಿತ್ರೀಗೊಳಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಪಾದ್ಯಂ ಸಮರ್ಪಯಾಮಿ

ಅರ್ಘ್ಯಮ್ (ಕೈ ತೊಳೆಯುವ ನೀರು)

ಅಭಿವ್ಯಕ್ತ ಸ್ವಸ್ವರೂಪಜ್ಞಾನಾನಂದ ಗುರೂತ್ತಮ ।
ಮಯಾದತ್ತಂ ಗೃಹಾಣಾರ್ಘ್ಯಂ ನಮಃ ಸಾತ್ವಿಕ ಸಾತ್ವಿಕ ॥ ೧೫॥

ಅಭಿವ್ಯಕ್ತಸ್ವಸ್ವರೂಪ = ತಮ್ಮ ಸ್ವರೂಪ ಜ್ಞಾನವುಳ್ಳ, **ಜ್ಞಾನಾನಂದ** = ಜ್ಞಾನಾನಂದ ಸ್ವರೂಪರಾದ, **ಸಾತ್ವಿಕಸಾತ್ವಿಕ** = ಶುದ್ಧಸತ್ತ್ವಾತ್ಮಕರಾದ (ಅತ್ಯಂತ ಸಾಧು ಸ್ವಭಾವವುಳ್ಳ), **ಗುರೂತ್ತಮ** = ಉತ್ತಮ ಗುರುಗಳಾದ ರಾಘವೇಂದ್ರರೇ, **ನಮಃ** = ನಿಮಗೆ ನಮಸ್ಕಾರವು, **ಮಯಾ** = ನನ್ನಿಂದ, **ದತ್ತಂ** = ಕೊಡಲ್ಪಡುವ, **ಅರ್ಘ್ಯಂ** = ಅರ್ಘ್ಯ ಜಲವನ್ನು, **ಗೃಹಾಣ** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಅರ್ಘ್ಯಂ ಸಮರ್ಪಯಾಮಿ

ಆಚಮನಮ್ (ಮಂತ್ರಪೂರ್ವಕ ಜಲಸೇವನೆ)

ಸದಾ ಸಾಕ್ಷಾತ್ಕೃತಶ್ರೀಶ ಕೇಶವಾದಿಕರೂಪಿಣೇ ।
ನಮಸ್ತುಭ್ಯಂ ಮಯಾ ದತ್ತಂ ಗೃಹಾಣಾಚಮನಂ ಗುರೋ ॥ ೧೬ ॥

ಸದಾ = ಸರ್ವಕಾಲದಲ್ಲಿಯೂ, **ಸಾಕ್ಷಾತ್ಕೃತಶ್ರೀಶ** = ಅಪರೋಕ್ಷೀಕೃತ ಶ್ರೀಶರಾದ, **ಕೇಶವಾದಿಕರೂಪಿಣೇ** = ಕೇಶವಾದಿ ಚತುರ್ವಿಂಶತಿ ಭಗವದ್ರೂಪಗಳ ಸನ್ನಿಧಾನವುಳ್ಳವರೇ, **ತುಭ್ಯಂ** = ತಮಗೆ, **ನಮಃ** = ಪ್ರಣಾಮವು, **ಹೇ ಗುರೋ** = ಗುರುಗಳೇ, **ಮಯಾದತ್ತಂ ಆಚಮನಂ** = ನನ್ನಿಂದ ಕೊಡಲಾಗುವ ಆಚಮನ ಜಲವನ್ನು, **ಗೃಹಾಣ** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಆಚಮನಂ ಸಮರ್ಪಯಾಮಿ

ಮಧುಪರ್ಕಮ್

ಹಾಲು, ಮೊಸರು, ಜೇನು, ನೀರು, ತುಪ್ಪ ಇವುಗಳ ಮಿಶ್ರಣ

ಪ್ರಹ್ಲಾದಸ್ಯಾವತಾರಾಯ ಕಲ್ಯಾಣೋನ್ಮುಖರೂಪಿಣೇ ।
ಮಧುಪರ್ಕಂ ಗೃಹಾಣೇದಂ ರಾಜರಾಜಾಯ ತೇ ನಮಃ ॥ ೧೬ ॥

ಪ್ರಹ್ಲಾದಸ್ಯಾವತಾರಾಯ = ಪ್ರಹ್ಲಾದರಾಜರ ಅವತಾರಿಗಳಾದ, **ಕಲ್ಯಾಣೋನ್ಮುಖರೂಪಿಣೇ** = ಮಂಗಳವುಂಟುಮಾಡುವ ರೂಪವುಳ್ಳ, **ರಾಜ ರಾಜಾಯ** = ರಾಜರಿಗೂ ರಾಜರಂತಿರುವ, **ತೇ** = ನಿಮಗೆ, **ನಮಃ** = ನಮನವು, **ಇದಂ** = ಈ, **ಮಧುಪರ್ಕಂ** = ಮಧುಪರ್ಕರೂಪ ಅತಿಥಿ ಸತ್ಕಾರವನ್ನು, **ಗೃಹಾಣ** = ಸ್ವೀಕರಿಸಿ.

ಶ್ರೀ ರಾಘವೇಂದ್ರಾಯ ನಮಃ ಮಧುಪರ್ಕಂ ಸಮರ್ಪಯಾಮಿ

ಪಂಚಾಮೃತಾಭಿಷೇಕಃ

ಕ್ಷೀರಸ್ನಾನಮ್

ಗುರುರಾಜ ಮಹೋದಾರ ಸ್ನಾನೇ ಪಾನೇ ಚ ಸರ್ವದಾ ।
ಕ್ಷೀರಪ್ರಿಯಸ್ಯ ತೇ ಗವ್ಯಪಯಸಾ ಸ್ನಾಪಯಾಮ್ಯಹಮ್ ॥ ೧೮॥

ಮಹೋದಾರಃ = ಮಹಾಔದಾರ್ಯಶಾಲಿಗಳಾದ, **ಗುರುರಾಜ** = ಗುರುರಾಜರೇ, **ಸ್ನಾನೇ ಪಾನೇ ಚ** = ಅಭಿಷೇಕ ಹಾಗೂ ಪಾನದಲ್ಲಿ, **ಸರ್ವದಾ** = ಯಾವಾಗಲೂ, **ಕ್ಷೀರಪ್ರಿಯಸ್ಯ** = ಭಗವದರ್ಪಿತ ಕ್ಷೀರಪ್ರಿಯರಾದ, **ತೇ** = ನಿಮಗೆ, **ಅಹಮ್** = ನಾನು, **ಗವ್ಯಪಯಸಾ** = ಗೋಕ್ಷೀರದಿಂದ, **ಸ್ನಾಪಯಾಮಿ** = ಅಭಿಷೇಕಿಸುವೆ.

ಶ್ರೀ ರಾಘವೇಂದ್ರಾಯ ನಮಃ ಕ್ಷೀರೇಣಸ್ನಪಯಾಮಿ

ದಧಿಸ್ನಾನಮ್

ಗುರುರಾಘವರಾಜೇಂದ್ರ, ತ್ವಾಂ ದಧ್ನಾ ಸ್ನಾಪಯಾಮ್ಯಹಂ।
ಸದಾ ಮೇ ತ್ವತ್ಪ್ರಸಾದೇನ ಶಾಂತಾಃ ಸ್ಯುರ್ದುರುಪದ್ರವಾಃ ॥ ೧೯॥

ಗುರುರಾಘವರಾಜೇಂದ್ರ = ಗುರುರಾಘವೇಂದ್ರರೇ, **ಅಹಮ್** = ನಾನು, **ತ್ವಾಂ** = ತಮ್ಮನ್ನು, **ದಧ್ನಾ** = ಮೊಸರಿನಿಂದ, **ಸ್ನಾಪಯಾಮಿ** = ಅಭಿಷೇಕಿಸುವೆ, **ತ್ವತ್ಪ್ರಸಾದೇನ** = ತಮ್ಮ ಅನುಗ್ರಹದಿಂದ, **ಮೇ** = ನನ್ನ, **ದುರುಪದ್ರವಾಃ** = ಕೆಟ್ಟ ಉಪದ್ರವಗಳು, **ಸದಾ** = ಯಾವಾಗಲೂ, **ಶಾಂತಾಃ ಸ್ಯುಃ** = ಶಾಂತವಾಗಲಿ.

ಶ್ರೀ ರಾಘವೇಂದ್ರಾಯನಮಃ ದಧ್ನಾಸ್ನಪಯಾಮಿ

ಘೃತಸ್ನಾನಮ್

ಮಹಾಬಲಮಹಾಪ್ರಾಜ್ಞ ಗುರುರಾಜ ಘೃತಪ್ರಿಯ ।
ಘೃತೇನ ಸ್ನಾಪಯಾಮಿ ತ್ವಾಂ ಪುಷ್ಟಿರ್ಮೇ ವರ್ಧತಾ ಬಲಮ್ ॥ ೨೦॥

ಮಹಾಬಲ = ಭಗವದನುಗ್ರಹರೂಪಬಲವುಳ್ಳವರೇ, **ಮಹಾಪ್ರಾಜ್ಞ** = ಮಹಾಪ್ರಾಜ್ಞರೇ, **ಘೃತಪ್ರಿಯ** = ಘೃತದಲ್ಲಿರುವ ವಿಷ್ಣುಪ್ರಿಯರಾದ, **ಗುರುರಾಜ** =

ಗುರುರಾಜರೇ, **ತ್ವಾಂ** = ತಮ್ಮನ್ನು, **ಘೃತೇನ** = ಘೃತದಿಂದ, **ಸ್ನಪಯಾಮಿ** = ಅಭಿಷೇಕಿ**ಸುವೆ**, **ಮೇ** = ನನಗೆ, **ಪುಷ್ಟಿಂ** = ಶರೀರ ಸೌಷ್ಟವವು, **ಬಲಮ್** = ದೈಹಿಕ ಬಲವು, **ವರ್ಧತಾಮ್** = ಅಭಿವೃದ್ಧವಾಗಲಿ.

ಶ್ರೀ ರಾಘವೇಂದ್ರಾಯನಮಃ ಘೃತಾಸ್ನಪಯಾಮಿ

ಮಧು ಸ್ನಾನಮ್

ಮಧುರಂ ಮಧುರಾವಾರಂ ಮಧುವಾಚಂ ಮಧುವ್ರತಂ ।
ಮಧುನಾ ಸ್ನಾಪಯಾಮಿ ತ್ವಾಂ ಲೋಕೆ ಮಾಂ ಮಧುರಂ ಕುರು ॥ ೨೦॥

ಮಧುರಂ = ಮನೋಹರರಾದ, **ಮಧುರಾವಾರಂ** = ಮಧುರವಸ್ತುಗಳಿಗೆ ಆಶ್ರಯರಾದ, **ಮಧುವಾಚಂ** = ಇಂಪಾದ ವಚನವುಳ್ಳ, **ಮಧುವ್ರತಂ** = ಮಧುಕರವೃತ್ತಿಯುಳ್ಳ, **ತ್ವಾಂ** = ನಿಮ್ಮನ್ನು, **ಮಧುನಾ** = ಜೇನುತುಪ್ಪದಿಂದ, **ಸ್ನಾಪಯಾಮಿ** = ಅಭಿಷೇಕ ಮಾಡುವೆ, **ಲೋಕೇ** = ಜನರಲ್ಲಿ, **ಮಾಂ** = ನನ್ನನ್ನು, **ಮಧುರಂ ಕುರು** = ಮಧುರನನ್ನಾಗಿ ಮಾಡಿರಿ.

ಶರ್ಕರಾ ಸ್ನಾನಂ – ಸಕ್ಕರೆ

ಶರ್ವರೀಶ ಮನೋಹಾರಿನ್ ವಿಷದೋಷನಿವಾರಣ ।
ಶರ್ಕರಾಭ ಸ್ನಾಪಯೇ ತ್ವಾಂ ಶರ್ಕರಾಭಂ ಕುರುಷ್ವ ಮಾಮ್ ॥ ೨೧॥

ಶರ್ವರೀಶ = ಚಂದ್ರನಂತೆ, **ಮನೋಹಾರಿನ್** = ಆಹ್ಲಾದದಿಂದ ಮನೋಹಾರಿಗಳಾದ, **ವಿಷದೋಷ ನಿವಾರಣ** = ವಿಷದೋಷವನ್ನು ಪರಿಹರಿಸುವ, **ಶರ್ಕರಾಭ** = ಸಕ್ಕರೆಯಂತೆ ಮಧುರರಾದ, ರಾಘವೇಂದ್ರರೇ, **ತ್ವಾಂ** = ನಿಮ್ಮನ್ನು, **ಸ್ನಾಪಯೇ** = ಅಭಿಷೇಕಮಾಡುವೆ, **ಮಾಂ** = ನನ್ನನ್ನು, **ಶರ್ಕರಾಭಂ** = ಎಲ್ಲರಿಗೂ ಬೇಕಾಗುವ ವ್ಯಕ್ತಿಯನ್ನಾಗಿ, **ಕುರು** = ಮಾಡಿರಿ.

ಶ್ರೀ ರಾಘವೇಂದ್ರಾಯ ನಮಃ ಶರ್ಕರಾಭಿಷೇಕಂ ಕರೋಮಿ

ಫಲಸ್ನಾನಂ

ಬದರೀ ಕದಲೀ ಚೂತಫಲೈಸ್ತ್ವಾಂ ಸ್ನಾಪಯಾಮ್ಯಹಮ್ ।
ಸಫಲಂ ಕುರು ಮೇ ಸರ್ವಂ ತಾರಕಸ್ತ್ವಂ ಗುರುಪ್ರಭೋ ॥ ೨೨॥

ಬದರಿ = ಬೋರೆಹಣ್ಣು, ಕದಲಿ = ಬಾಳೆಹಣ್ಣು, **ಚೂತಫಲೈಃ** = ಮಾವಿನ ಹಣ್ಣುಗಳಿಂದ, **ತ್ವಾಮ್** = ತಮ್ಮನ್ನು, **ಅಹಂ** = ನಾನು, **ಸ್ನಾಪಯಾಮಿ** = ಅಭಿಷೇಕ ಮಾಡುವೆ, **ಹೇ ಪ್ರಭೋ ಗುರೋ** = ಗುರುರಾಜರೇ, **ತ್ವಂ** = ತಾವು, **ತಾರಕಃ** = ಉದ್ಧಾರಕರು, **ಮೇ** = ನನ್ನ, **ಸರ್ವಂ** = ಸಕಲ ವಿಷಯಗಳಲ್ಲೂ, **ಸಫಲಂ ಕುರು** = ಸಾಫಲ್ಯತೆಯನ್ನು ನೀಡಿರಿ.

ಫಲಸ್ನಾನಂ ಸಮರ್ಪಯಾಮಿ

ಶುದ್ಧೋದಕ ಸ್ನಾನಮ್

ಶುದ್ಧೈಃ ಶುದ್ಧಿಪ್ರದೈಃ ಶಾಂತಶೀತಲೈಃ ಸುಖದರ್ಶನ ।
ಶುದ್ಧಸ್ನಾನಂ ಕಾರಯಿಷ್ಯೇ ಶುದ್ಧಂ ಮಾಂ ಕುರು ತೇ ಗುರೋ ॥ ೨೪॥

ಹೇ ಸುಖದರ್ಶನ = ಸುಖವಾಗಿ ದರ್ಶನ ನೀಡುವ, **ಗುರೋ** = ಗುರುಗಳೇ, **ಶುದ್ಧೈಃ** = ಶುದ್ಧಿಗಳಾದ, **ಶುದ್ಧಿಪ್ರದೈಃ** = ಪಾವಿತ್ರ್ಯತೆಯನ್ನುಂಟುಮಾಡುವ, **ಶಾಂತ ಶೀತಲೈಃ** = ಶುದ್ಧ ಹಾಗೂ ತಂಪಾದ, ಜಲದಿಂದ, **ಶುದ್ಧಸ್ನಾನಂ** = ಶುದ್ಧೋದಕ ಸ್ನಾನ ವನ್ನು, **ತೇ** = ತಮಗೆ, **ಕಾರಯಿಷ್ಯೇ** = ಮಾಡಿಸುವೆ, **ಮಾಂ** = ನನ್ನನ್ನು, **ಶುದ್ಧಂ ಕುರು** = ಶುದ್ಧರನ್ನಾಗಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಶುದ್ಧೋದಕ ಸ್ನಾನಂ ಸಮರ್ಪಯಾಮಿ

ಮಂಗಲಸ್ನಾನಂ

ವಿಧಿಬದ್ಧ ಸುತೈಲೇನ ಚಂಪಕಾದ್ಯೈಃ ಸುಗಂಧಿನಾ ।
ಕಾರಯೇ ಮಂಗಲಂ ಸ್ನಾನಂ ಕುರು ತ್ವಂ ಮಮ ಮಂಗಲಮ್ ॥ ೨೫॥

ವಿಧಿಬದ್ಧ = ವಿಧಿವತ್ತಾದ, **ಚಂಪಕಾದ್ಯೈಃ** = ಸಂಪಿಗೆ ಮೊದಲಾದವುಗಳಿಂದ, **ಸುಗಂಧಿನಾ** = ಸುಗಂಧಗಳಾಗಿ ಮಾಡಿದ, **ಸುತೈಲೇನ** = ಸುಗಂಧ ತೈಲದಿಂದ, **ಮಂಗಲ ಸ್ನಾನಂ** = ಅಭ್ಯಂಜನವನ್ನು, **ಕಾರಯೇ** = ಮಾಡಿಸುವೆ, **ತ್ವಂ** = ನೀವು, **ಮಮ**=ನನಗೆ, **ಮಂಗಲಂ ಕುರು** = ಮಂಗಲವನ್ನುಂಟುಮಾಡಿರಿ.

ಶ್ರೀ ರಾಘವೇಂದ್ರಾಯ ನಮಃ ಶುದ್ಧೋದಕಸ್ನಾನಂ ಸಮರ್ಪಯಾಮಿ

ತೀರ್ಥಸ್ನಾನ - ಗಂಗಾದಿ ತೀರ್ಥಸ್ನಾನ

ಭೂಲೋಕಮಧ್ಯಸಂಸಿದ್ಧತೀರ್ಥಪಾವನ ರೂಪಿಣಮ್।
ಸ್ನಾಪಯಾಮಿ ಸುತೀರ್ಥೋತ್ಥೈಃ ಜಲೈರ್ಮಾಂ ಪಾವಯ ಪ್ರಭೋ ॥ ೨೬॥

ಭೂಲೋಕ ಮಧ್ಯ ಸಂಸಿದ್ಧ ತೀರ್ಥಪಾವನ ರೂಪಿಣಂ = ಭೂಮಿಯಲ್ಲಿರುವ ಸಮಸ್ತ ತೀರ್ಥಗಳನ್ನು ಪವಿತ್ರೀಗೊಳಿಸುವ ಸಿದ್ಧಸಾಮರ್ಥ್ಯವುಳ್ಳ ತಮ್ಮನ್ನು, **ಸುತೀರ್ಥೋತ್ಥೈಃ ಜಲೈಃ** = ಗಂಗಾದಿ ತೀರ್ಥಜಲಗಳಿಂದ, **ಸ್ನಾಪಯಾಮಿ** = ಅಭಿಷೇಕ ಮಾಡುವೆ, **ಪ್ರಭೋ** = ಪ್ರಭುಗಳೇ, **ಮಾಂ** = ನನ್ನನ್ನು, **ಪಾವಯ** = ಪವಿತ್ರಗೊಳಿಸಿರಿ.

ವಸ್ತ್ರಸಮರ್ಪಣೆ

ಸ್ವರ್ಣಪ್ರಖ್ಯಂ ಶಶಿಪ್ರಖ್ಯಂ ರವಿಪ್ರಖ್ಯಂ ಸದಂಬರಮ್।
ಕೌಪೀನಂ ಯತಿರಾಜೇಂದ್ರ ಸವ್ಯಾನಂ ಚ ಗೃಹಾಣ ಭೋಃ ॥ ೨೭॥

ಸ್ವರ್ಣಪ್ರಖ್ಯಂ = ಸ್ವರ್ಣಸದೃಶವಾದ, **ಶಶಿಪ್ರಖ್ಯಂ** = ಚಂದ್ರನಂತೆ ಆಹ್ಲಾದಕರವಾದ, **ರವಿಪ್ರಖ್ಯಂ** = ಸೂರ್ಯನಂತೆ ಪ್ರಕಾಶಮಾನವಾದ, **ಸವ್ಯಾನಂ** = ಬಟ್ಟೆಯ ಉಡುದಾರದಿಂದ ಸಹಿತವಾದ, **ಸದಂಬರಂ** = ಶ್ರೇಷ್ಠವಸ್ತ್ರದಿಂದ ಕೂಡಿದ, **ಕೌಪೀನಂ** = ಕೌಪೀನವನ್ನು, **ಹೇ ಯತಿರಾಜೇಂದ್ರ** = ಯತಿಶ್ರೇಷ್ಠರೇ, **ಗೃಹಾಣ** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯನಮಃ ವಸ್ತ್ರಂ ಸಮರ್ಪಯಾಮಿ

ಆಭರಣ ಸಮರ್ಪಣೆ

ಊರ್ಮಿಕಾ ಮೌಕ್ತಿಕಾದಿ ಸ್ರಕ್ಕುಂಡಲಾದಿ ಸುಭೂಷಣಮ್ ।
ಗೃಹಾಣ ಗುರುರಾಜೇಂದ್ರ ಕುರು ಮಾಂ ಲೋಕ ಭೂಷಣಮ್ ॥ ೨೮॥

ಊರ್ಮಿಕಾ ಮೌಕ್ತಿಕಾದಿ ಸ್ರಕ್ಕುಂಡಲಾದಿ ಸುಭೂಷಣಮ್ = ಉಂಗುರ, ಮುತ್ತಿನ ಹಾರ, ಕರ್ಣಕುಂಡಲವೇ ಮೊದಲಾದ ಶ್ರೇಷ್ಠ ಆಭರಣಗಳನ್ನು, **ಹೇ ಗುರುರಾಜೇಂದ್ರ** = ಗುರುರಾಜರೇ, **ಗೃಹಾಣ** = ಸ್ವೀಕರಿಸಿರಿ, **ಮಾಂ** = ನನ್ನನ್ನು, **ಲೋಕಭೂಷಣಂ** = ಲೋಕಕ್ಕೆ ಆಭರಣಪ್ರಾಯನನ್ನಾಗಿ, **ಕುರು** = ಮಾಡಿರಿ.

ಆಭರಣಂ ಸಮರ್ಪಯಾಮಿ

ಊರ್ಧ್ವಪುಂಡ್ರಾದಿ ಸಮರ್ಪಣ

ದ್ವಾದಶಾಪ್ಯೂರ್ಧ್ವಪುಂಡ್ರಾಣಿ ಗೋಪೀಚಂದನ ಗಂಧತಃ ।
ವಿಷ್ಣುಪಾದೋದಕಂ ದಾಸ್ಯೇಸಾಕಂ ಶ್ರೀ ತುಲಸೀದಲ್ಯೈಃ ।
ಗೃಹಾಣ ವಿಷ್ಣುಭಕ್ತಾನಾಂ ಸಂಪ್ರದಾಯ ಪ್ರವರ್ತಕ ॥ ೨೯॥

ಗೋಪೀಚಂದನ ಗಂಧತಃ = ಗೋಪೀಚಂದನ ಹಾಗೂ ಗಂಧದಿಂದ, **ದ್ವಾದಶ** = ಹನ್ನೆರಡು, **ಊರ್ಧ್ವಪುಂಡ್ರಾಣಿ** = ಊರ್ಧ್ವಪುಂಡ್ರಗಳನ್ನು **ಶ್ರೀತುಲಸೀದಲ್ಯೈಃ ಸಾಕಂ** = ತುಲಸೀದಲ ಮಿಶ್ರಿತವಾದ, **ವಿಷ್ಣುಪಾದೋದಕಂ** = ತೀರ್ಥವನ್ನು, **ದಾಸ್ಯೇ** = ಕೊಡುವೆನು, **ವಿಷ್ಣುಭಕ್ತಾನಾಂ ಸಂಪ್ರದಾಯ ಪ್ರವರ್ತಕಃ** = ವೈಷ್ಣವರಲ್ಲಿ ಮೊದಲಿನಿಂದಲೂ ನಡೆದುಬಂದ ಪದ್ಧತಿಯನ್ನು ಮುಂದುವರೆಸುವವರಾದ, ರಾಘವೇಂದ್ರರೇ, **ಗೃಹಾಣ** = ಸ್ವೀಕರಿಸಿರಿ.

ಊರ್ಧ್ವಪುಂಡ್ರಾದಿಕಂ ಸಮರ್ಪಯಾಮಿ

ಗಂಧ ಸಮರ್ಪಣಮ್

ಗಂಧಕಕ್ಕೋಲ ಕಸ್ತೂರೀ ಕರ್ಪೂರಾಗರು ಕುಂಕುಮೈಃ ।
ಮಿಶ್ರಿತಂ ಚಂದನಂ ತುಭ್ಯಂ ದಾಸ್ಯಾಮಿ ಸ್ವೀಕುರು ಪ್ರಭೋ ॥ ೩೦॥

ಗಂಧ = ಗಂಧವು, **ಕಕ್ಕೋಲ** =ತಕ್ಕೋಲವು, **ಕಸ್ತೂರೀ** = ಮೃಗಮದವು, **ಕರ್ಪೂರ** = ಪಚ್ಚಕರ್ಪೂರವು, **ಅಗರು** = ಕೃಷ್ಣಾಗರು, **ಕುಂಕಮೈಃ** = ಕೇಸರಿಯಿಂದ, ಇವುಗಳಿಂದ, **ಮಿಶ್ರಿತಂ** = ಸಂಯುಕ್ತವಾಗಿರುವ, **ಚಂದನಂ** = ಭಗವದರ್ಪಿತ ಶ್ರೀಗಂಧವನ್ನು, **ತುಭ್ಯಂ** = ತಮಗಾಗಿ, **ದಾಸ್ಯಾಮಿ** = ಕೊಡುವೆನು, **ಹೇ ಪ್ರಭೋ** = ಪ್ರಭುಗಳೇ, **ಸ್ವೀಕುರು** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಗಂಧಂ ಸಮರ್ಪಯಾಮಿ

ಅಕ್ಷತೆ ಹಾಗೂ ಮಂತ್ರಾಕ್ಷತೆ ಸಮರ್ಪಣೆ

ಕಸ್ತೂರೀತಿಲಕಂ ಚೂರ್ಣಹರಿದ್ರಾ ತಂಡುಲೈರ್ಯುತಾನ್ ।
ಗೃಹಾಣ ಗುರುವರ್ಯ ತ್ವಮಲಂಕಾರಾರ್ಥಮಕ್ಷತಾನ್ ॥ ೩೦॥

ಕಸ್ತೂರಿ ತಿಲಕಂ = ಕಸ್ತೂರಿಯಿಂದ ಮಿಶ್ರಿತವಾದ ಅಕ್ಷತೆಯನ್ನು, **ಚೂರ್ಣ ಹರಿದ್ರಾತಂಡುಲೈಃ** = ಅರಿಷಿಣದಿಂದ ತಯಾರಿಸಿದ ಮಂತ್ರಾಕ್ಷತೆಯಿಂದಲೂ, **ಯುತಾನ್** = ಕೂಡಿರುವ, ★**ಅಕ್ಷತಾನ್** = ಮಂತ್ರಾಕ್ಷತೆಯನ್ನೂ, **ತ್ವಂ** = ನೀವು, **ಅಲಂಕಾರಾರ್ಥಂ** = ಅಲಂಕಾರಕ್ಕಾಗಿ, **ಗೃಹಾಣ** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಅಕ್ಷತಾಂ ಅಕ್ಷತಾನ್ ಸಮರ್ಪಯಾಮಿ

ಪುಷ್ಪಸಮರ್ಪಣಮ್

ಮಲ್ಲಿಕಾಮಾಲತೀಮಾಲಾಂ ತುಲಸೀದಲ ಮಾಲಿಕಾಮ್ ।
ಕೇತಕಾದೀನಿ ಪುಷ್ಪಾಣಿ ಗೃಹ್ಣೀಷ್ವ ಗುರುಸತ್ತಮ ॥ ೩೨॥

ಹೇ ಗುರುಸತ್ತಮ = ಗುರುಶ್ರೇಷ್ಠರಾದ ರಾಘವೇಂದ್ರರೆ, **ಮಲ್ಲಿಕಾಮಾಲತೀ ಮಾಲಾಂ** = ಮಲ್ಲಿಗೆ ಜಾಜಿಗಳಿಂದ ತಯಾರಿಸಿದ ಮಾಲೆಯನ್ನು, **ತುಲಸೀದಲ ಮಾಲಿಕಾಂ** = ತುಲಸೀಮಾಲೆಯನ್ನು, **ಕೇತಕಾದೀನಿ ಪುಷ್ಪಾಣಿ** = ಕೇತಕಿಯೇ ಮೊದಲಾದ ಬಿಡಿ ಹೂಗಳನ್ನು, **ಗೃಹ್ಣೀಷ್ವ** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ನಾನಾವಿಧ ಪರಿಮಳ ಪುಷ್ಪಾಣಿ ಸಮರ್ಪಯಾಮಿ

ಧೂಪ ಸಮರ್ಪಣಮ್

ವನಸ್ಪತಿರಸೋತ್ಪನ್ನಂ ಸುರಭಿಂ ಸುರಭಿಪ್ರಿಯ ।
ಮಹಾಭೋಗಿನ್ ಇಮಂ ಧೂಪಂ ಗೃಹಾಣ ಪ್ರೀತಿಮಾನ್ ಭವ ॥ ೩೪॥

ಸುರಭಿಪ್ರಿಯ = ಸುಗಂಧಪ್ರಿಯರೇ, **ವನಸ್ಪತಿರಸೋತ್ಪನ್ನಂ** = ಶ್ರೀಗಂಧಾದಿ ವೃಕ್ಷದಿಂದ ಉತ್ಪನ್ನವಾದ, **ಸುರಭಿ** = ಸುವಾಸನೆಯುಳ್ಳ, **ಧೂಪಂ** = ದಶಾಂಗಧೂಪವನ್ನು, **ಮಹಾಭೋಗಿನ್** = ಮಹಾಭೋಗಸಂಪನ್ನರಾದ ರಾಘವೇಂದ್ರರೇ, **ಗೃಹಾಣ** = ಸ್ವೀಕರಿಸಿರಿ, **ಪ್ರೀತಿಮಾನ್ ಭವ** = ನನ್ನಲ್ಲಿ ಪ್ರೀತಿಯುಳ್ಳವರಾಗಿರಿ.

ಶ್ರೀ ರಾಘವೇಂದ್ರಾಯ ನಮಃ ಧೂಪಮಾಘ್ರಾಪಯಾಮಿ

★ವಿ – ಈ ಶ್ಲೋಕದಲ್ಲಿ ಮಂತ್ರಾಕ್ಷತೆಯನ್ನು ಮತ್ತು ಅಕ್ಷತೆಯನ್ನೂ ಸಂಗ್ರಹಿಸಿ ಹೇಳಿರುವರು. ಅಕ್ಷತಾ ಎಂದರೆ ಮಂತ್ರಾಕ್ಷತೆ. ಇದು ಸ್ತ್ರೀಲಿಂಗ ಶಬ್ದ, ಅಕ್ಷತಃ ಎಂದರೆ ಹಚ್ಚಿಕೊಳ್ಳುವ ಅಕ್ಷತೆ. ಇದು ಪುಲ್ಲಿಂಗ. 'ಕಸ್ತೂರೀತಿಲಕಂ ಚೂರ್ಣಹರಿದ್ರಾತಂಡುಲೈಃ' ಎಂಬ ಪದಗಳಿಂದ ಎರಡನ್ನು ತಿಳಿಸಲಾಗಿದೆ.

ಏಕಾರ್ತಿಕಾ ಸಮರ್ಪಣಮ್

ವರ್ತಿದ್ವಯಯುತಂ ಸಾಜ್ಯಂ ದೀಪದ್ವಂದ್ವಂ ತಮೋಪಹಮ್ ।
ನಿರಂತರಪ್ರಕಾಶೋಽಪಿ ಗೃಹಾಣ ಕೃಪಯಾ ಮಯಿ ॥ ೩೫॥

ವರ್ತೀದ್ವಯಯುತಂ = ಎರಡು ಬತ್ತಿಗಳಿರುವ, **ಸಾಜ್ಯಂ** = ತುಪ್ಪದಲ್ಲಿ ಅದ್ದಿದ, **ತಮೋಪಹಂ** = ಕತ್ತಲೆ ಹಾಗೂ ಅಜ್ಞಾನವನ್ನು ಪರಿಹರಿಸುವ, **ದೀಪದ್ವಂದ್ವಂ** = ಎರಡು ದೀಪಗಳನ್ನು, ಹಾಗೆಯೇ ಮೂರುಬತ್ತಿಗಳಿಂದ ಕೂಡಿದ ಏಕಾರತಿಯನ್ನು, **ನಿರಂತರ ಪ್ರಕಾಶೋಽಪಿ** = ಅವ್ಯಾಹತಪ್ರಕಾಶಯುಕ್ತರಾದರೂ, **ಮಯಿ** = ನನ್ನಲ್ಲಿ, **ಕೃಪಯಾ** = ಅನುಗ್ರಹಕ್ಕಾಗಿ, **ಗೃಹಾಣ** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯ ನಮಃ ದೀಪದ್ವಯಂ, ಏಕಾರ್ತಿಕಾಂ ಚ ಸಮರ್ಪಯಾಮಿ

ನೈವೇದ್ಯ ಸಮರ್ಪಣಮ್

ಮಯಾಽಽನೀತಂ ಯಥಾಶಕ್ತಿ ಯಥಾಕಾಲಂ ಯಥಾಧನಮ್ ।
ಭಕ್ಷ್ಯೋಪದಂಶದಧ್ಯಾಜ್ಯಕ್ಷೀರಾದ್ಯನ್ವಿತಮೋದನಮ್ ॥ ೩೬॥

ಶುಂಠೀರಾಮಠ ಜಂಬೀರಲವಣಾದಿಸಮನ್ವಿತಮ್ ।
ತಕ್ರಂ ಚ ಚಂದನೋಶೀರ ಕರ್ಪೂರ ಘುಸೃಣಾನ್ವಿತಮ್ ॥ ೩೭॥

ಪಾನೀಯಂ ಚ ಹರೌ ವಾಯೌ ನಿವೇದ್ಯ ತ್ವಂ ಗುರೂತ್ತಮ ।
ಭುಕ್ತ್ವಾ ಪರಿಜನೈಃ ಸಾಕಂ ತುಷ್ಟೋ ಭವ ಪಿತರ್ಮಮ ॥ ೩೮॥

ಮಯಾ = ನನ್ನಿಂದ, **ಯಥಾಶಕ್ತಿ** = ಶಕ್ತ್ಯನುಸಾರವಾಗಿ, **ಯಥಾಕಾಲಂ** = ಕಾಲಾನುಸಾರವಾಗಿ, **ಯಥಾಧನಂ** = ಧನವಿದ್ದಷ್ಟು, **ಆನೀತಂ** = ತರಲ್ಪಟ್ಟ, **ಭಕ್ಷ್ಯೋಪದಂಶದಧ್ಯಾಜ್ಯಕ್ಷೀರಾದ್ಯನ್ವಿತಂ** = ಭಕ್ಷ್ಯಗಳು, ವ್ಯಂಜನ ಪದಾರ್ಥಗಳು, ಮೊಸರು, ತುಪ್ಪ, ಹಾಲು, ಇವುಗಳಿಂದ ಸಹಿತವಾದ, **ಓದನಮ್** = ಅನ್ನಾದಿ ಆಹಾರ ಪದಾರ್ಥಗಳನ್ನು, **ಶುಂಠೀ**=ಶುಂಠಿಯು, **ರಾಮಠ**= ಇಂಗು, **ಜಂಬೀರ** = ನಿಂಬೆಹಣ್ಣು, **ಲವಣ** = ಉಪ್ಪು, ಇವುಗಳಿಂದ, **ಸಮನ್ವಿತಮ್** = ಯುಕ್ತವಾದ, **ತಕ್ರಂ** =ಮಜ್ಜಿಗೆಯನ್ನು, **ಚಂದನೋಶೀರ ಕರ್ಪೂರ ಘುಸೃಣಾನ್ವಿತಮ್** = ಗಂಧ, ಲಾವಂಚ, ಪಚ್ಚ ಕರ್ಪೂರ, ಕುಂಕುಮಕೇಸರೀ ಇವುಗಳಿಂದ ಕೂಡಿದ, **ಪಾನೀಯಂ** = ಕುಡಿಯುವ ಜಲವನ್ನು, **ಹರೌ** = ಶ್ರೀಹರಿಗೆ, **ವಾಯೌ** = ವಾಯುದೇವರಿಗೂ, **ನಿವೇದ್ಯ** = ನಿವೇದಿಸಿ, **ಗುರೂತ್ತಮ** = ಗುರು

ಗಳಾದ, **ತ್ವಂ** = ತಾವು, **ಪರಿಜನೈಃ ಸಾಕಂ** = ಭಕ್ತಜನರಿಂದ ಕೂಡಿಕೊಂಡು, **ಭುಕ್ತ್ವಾ** = ಭುಂಜಿಸಿ, **ಮಮ ಪಿತಃ** = ನನ್ನ ತಂದೆಯೇ, **ತುಷ್ಟೋ ಭವ** = ಸಂತುಷ್ಟರಾಗಿರಿ.

ಶ್ರೀ ರಾಘವೇಂದ್ರಾಯ ನಮಃ ನೈವೇದ್ಯಂ ಸಮರ್ಪಯಾಮಿ

ಗುರುದಶಸ್ತೋತ್ರಪಠನಂ

ಶ್ರಿತೇತ್ಯಾದಿದಶಸ್ತೋತ್ರಪಠನಂ ತೇ ಕರೋಮ್ಯಹಮ್।
ಸಾಂಗಭೋಜನಸಾಫಲ್ಯಸಿದ್ಧ್ಯೈ ಸ್ವೀಕುರು ಸದ್ಗುರೋ★ ॥ ೩೯॥

ಹೇ **ಸದ್ಗುರೋ** = ಶ್ರೇಷ್ಠಗುರುಗಳೇ, **ಅಹಂ** = ನಾನು, **ತೇ** = ನಿಮ್ಮ, **ಶ್ರಿತೇತ್ಯಾದಿ ಸ್ತೋತ್ರಪಠನಂ** = 'ಶ್ರಿತಾನಾಂ ಸ್ವಪಾದಂ' ಎಂಬ ದಶಾಧ್ಯಾಯಿ ಸ್ತೋತ್ರವನ್ನು, **ಸಾಂಗಭೋಜನ ಸಾಫಲ್ಯಸಿದ್ಧ್ಯೈ** = ನಿವೇದಿಸಿದ ನೈವೇದ್ಯದಿಂದ ಸಫಲತೆಗಾಗಿ, **ಕರೋಮಿ** = ಪಠಿಸುವೆನು, **ಸ್ವೀಕುರು** = ಸ್ವೀಕರಿಸಿರಿ.

ಶ್ರೀ ರಾಘವೇಂದ್ರಾಯನಮಃ ದಶಸ್ತೋತ್ರಪಠನಂ ಶ್ರಾವಯಾಮಿ

ಹಸ್ತಪ್ರಕ್ಷಾಲನಮ್

ವರದೌ ಭಕ್ತಲೋಕಸ್ಯ ಗರದೌ ಸಕಲಾಪದಾಮ್ ।
ಉದಕೇನ ಕರೌ ಪಾದೌ ಪ್ರಕ್ಷಾಲಯ ಯತೀಶ್ವರ ॥ ೪೦॥

ಯತೀಶ್ವರ = ಯತಿಶ್ರೇಷ್ಠರೇ, **ಭಕ್ತಲೋಕಸ್ಯ** = ಭಕ್ತಸಮೂಹಕ್ಕೆ, **ವರದೌ** = ವರದಾಯಕಗಳಾದ, **ಸಕಲಾಪದಾಮ್** = ಸಕಲ ಆಪತ್ತುಗಳಿಗೂ, **ಗರದೌ** = ವಿಷ ಪ್ರಾಯಗಳಾದ, **ಕರೌ ಪಾದೌ** = ಹಸ್ತಪಾದಗಳನ್ನು, **ಉದಕೇನ** = ಜಲದಿಂದ, **ಪ್ರಕ್ಷಾಲಯ** = ತೊಳೆದುಕೊಳ್ಳಿರಿ.

ಶ್ರೀ ರಾಘವೇಂದ್ರಾಯ ನಮಃ ಪ್ರಕ್ಷಾಲನಂ ಸಮರ್ಪಯಾಮಿ

★ವಿ - ಶ್ರೀಮದಾಚಾರ್ಯರು ನೈವೇದ್ಯಕಾಲದಲ್ಲಿ ದ್ವಾದಶಸ್ತೋತ್ರವನ್ನು ಪಠಿಸಬೇಕೆಂದು ಆಜ್ಞಾಪಿಸಿದ್ದಾರೆ. ಅದರಂತೆ ಇಲ್ಲಿ ರಾಘವೇಂದ್ರರ ನೈವೇದ್ಯಕಾಲದಲ್ಲೂ ಗುರುದಶಸ್ತೋತ್ರವನ್ನು ಪಠಿಸಬೇಕೆಂದು ತಿಳಿಸಲಾಗಿದೆ. ಭಗವಂತನ ಗುಣಗಾನವನ್ನು ಮಾಡುವ ದ್ವಾದಶಸ್ತೋತ್ರವು ಹನ್ನೆರಡು ಅಧ್ಯಾಯವಿದ್ದರೆ, ಈ ಸ್ತೋತ್ರವು ಹತ್ತೇ ಅಧ್ಯಾಯಗಳನ್ನು ಹೊಂದಿವೆ. ಇದರಿಂದ ಹರಿ - ವಾಯು - ರಾಘವೇಂದ್ರರಿಗೆ ಇರುವ ತಾರತಮ್ಯವನ್ನು ತಿಳಿಸಲಾಗಿದೆ.

ಪುನರಾಚಮನಮ್

ಕುರುಷ್ವಾಚಮನಂ ಸ್ವಾಮಿನ್ ಮಂಗಲಾರ್ಥಂ ಮಯಾಕೃತಮ್ ।
ತ್ವನ್ಮಂತ್ರಸ್ತವರಾಜೇನ ಸಹಿತಂ ಸ್ವೀಕುರು ಪ್ರಭೋ ॥ ೪೧॥

ಹೇ ಸ್ವಾಮಿನ್ = ಪ್ರಭುಗಳೇ, **ಆಚಮನಂ** = ಭೋಜನಾನಂತರದ ಆಚಮನವನ್ನು, **ಕುರುಷ್ವ** = ಮಾಡಿರಿ, **ವಿಷ್ಣುಪಾದೋದಕಂ** = ವಿಷ್ಣುಪಾದತೀರ್ಥವನ್ನು, **ಪಿಬ** = ಸ್ವೀಕರಿಸಿರಿ, **ಹೇ ಗುರುರಾಜ** = ಗುರುರಾಜರೇ, **ತುಲಸೀಪತ್ರಂ** = ತುಲಸೀದಲವನ್ನು, **ಗೃಹಾಣ** = ಸ್ವೀಕರಿಸಿರಿ, **ಮೇ** = ನನ್ನಲ್ಲಿ, **ಪ್ರಸೀದ** = ಪ್ರಸನ್ನರಾಗಿರಿ.

ಪುನರಾಚಮನಂ ಸಮರ್ಪಯಾಮಿ

ತಾಂಬೂಲ ಸಮರ್ಪಣಮ್

ಅಪರೋಕ್ಷೀಕೃತಶ್ರೀಶ ವಿಧಿಬಂಧವಿವರ್ಜಿತ ।
ಕಾಮಚಾರ ಮಯಾಽಽನೀತಂ [೧]ತಾಂಬೂಲಂ ಪ್ರತಿಗೃಹ್ಯತಾಮ್ ॥ ೪೨॥

ಅಪರೋಕ್ಷೀಕೃತಶ್ರೀಶ = ಭಗವಂತನನ್ನು ಅಪರೋಕ್ಷವಾಗಿ ಕಂಡ ಮಹಾನುಭಾವರೇ, **ವಿಧಿಬಂಧವಿವರ್ಜಿತ** = ವಿಧಿನಿಷೇಧಗಳಿಗೆ ಬದ್ಧರಾಗದ, **ಕಾಮಚಾರಃ** = ಸ್ವೇಚ್ಛೆಯಂತೆ ವರ್ತಿಸುವರೇ, **ಮಯಾ** = ನನ್ನಿಂದ, **ಆನೀತಂ** = ತರಲ್ಪಟ್ಟ, **ತಾಂಬೂಲಂ** = ತಾಂಬೂಲವನ್ನು, **ಪ್ರತಿಗೃಹ್ಯತಾಮ್** [೨] = ಸ್ವೀಕರಿಸಿರಿ.

ತಾಂಬೂಲಂ ಸಮರ್ಪಯಾಮಿ

---

[೧](ತಾಂಬೂಲವನ್ನು ಸನ್ಯಾಸಿಗಳಿಗೆ ನೀಡುವುದು ನಿಷಿದ್ಧ. ''**ತಾಂಬೂಲಾಭ್ಯಂಜನೇ ಕ್ರೀಡಾ ಭೋಗಾಕಾಂಕ್ಷಾ ರಸಾಯನಮ್। ಪ್ರತಿಷಿದ್ಧಾನಿ ಚೈತಾನಿ ಸೇವಮಾನೇ ವ್ರಜತ್ಯಧಃ''** - ಯತಿಧರ್ಮ ಸಂಗ್ರಹ, ಈ ಪ್ರಮಾಣವು ಯತಿಗಳಿಗೆ ತಾಂಬೂಲವನ್ನು ನಿಷೇಧಿಸಿದೆ. ಆದರೂ ಈ ವಿಧಿಬಂಧವಿವರ್ಜಿತ ಎಂಬ ವಿಶೇಷಣವು ರಾಘವೇಂದ್ರರಂತಹ ಮಹಾನುಭಾವರಿಗೆ ಈ ವಿಧಿನಿಷೇಧವಿರುವುದಿಲ್ಲ ಎಂದು ಸೂಚಿಸುತ್ತದೆ.)

[೨]ವಿ - ತಾಂಬೂಲವನ್ನು ರಾಯರಿಗೆ ಹಾಕಿಕೊಳ್ಳಲು ಸಮರ್ಪಿಸುವುದಲ್ಲ. ದ್ವಾದಶಿಯಂದು ವಿಪ್ರನಿಗೆ ನೀಡಿದಂತೆ ನಿಷಿದ್ಧವಲ್ಲ.

ಅಷ್ಟ ನೀರಾಜನ ಸಮರ್ಪಣಮ್

ರಾಘವೇಂದ್ರಗುರುಂ ರಾಜಸಾರ್ವಭೌಮ ಪದಸ್ಥಿತಮ್ ।
ರಾಮಚಂದ್ರಪ್ರಿಯಂ ವಂದೇ ರಾಂ ಬೀಜ ಪ್ರತಿಪಾದಿತಮ್ ॥ ೪೩॥

ರಾಜಸಾರ್ವಭೌಮಪದಸ್ಥಿತಮ್ = ಗುರುರಾಜಸಾರ್ವಭೌಮರೆನಿಸಿರುವ, **ರಾಮಚಂದ್ರಪ್ರಿಯಂ** = ಮೂಲರಾಮನಿಗೆ ಪ್ರಿಯರಾಗಿರುವ, **ರಾಂಬೀಜ ಪ್ರತಿಪಾದಿತಮ್** = ಪಾಪದಾಹಕವಾದ ರಾಂ ಬೀಜಾಕ್ಷರದಿಂದ ಪ್ರತಿಪಾದ್ಯರಾದ, **ರಾಘವೇಂದ್ರಗುರುಂ** = ರಾಘವೇಂದ್ರಗುರುಗಳನ್ನು, **ವಂದೇ** = ನಮಸ್ಕರಿಸುವೆನು.

ಇತಿ ಪ್ರಥಮ ನೀರಾಜನಂ

ರಾಮಚಂದ್ರಮಹಾಭಕ್ತಂ ಪಾಪಾಟವ್ಯಗ್ನಿರೂಪಿಣಮ್ ।
ರಾಘವೇಂದ್ರಗುರುಂ ವಂದೇ ದ್ವಿತೀಯಾಕ್ಷರ ವೇದಿತಮ್ ॥ ೪೪॥

ರಾಮಚಂದ್ರಮಹಾಭಕ್ತಂ = ರಾಮಚಂದ್ರದೇವರ ಶ್ರೇಷ್ಠಭಕ್ತರಾದ, **ಪಾಪಟವ್ಯಗ್ನಿರೂಪಿಣಮ್** = ಪಾಪಗಳೆಂಬ ಅಡವಿಗೆ ಕಾಳ್ಗಿಚ್ಚಿನಂತಿರುವ, **ದ್ವಿತೀಯಾಕ್ಷರ ವೇದಿತಮ್** = 'ರಾ' ಎಂಬ ಎರಡನೇ ಅಕ್ಷರ ಪ್ರತಿಪಾದ್ಯರಾದ, **ರಾಘವೇಂದ್ರಗುರುಂ** = ರಾಘವೇಂದ್ರ ಗುರುಗಳನ್ನು, **ವಂದೇ** = ನಮಸ್ಕರಿಸುವೆನು.

ಇತಿ ದ್ವಿತೀಯ ನೀರಾಜನಮ್

ಘನಾಘನಾಭ ನೀಲಾಂಗಂ ಘನರೋಗ ನಿವಾರಣಮ್ ।
ಘೋರತಾಪತ್ರಯಹರಂ ತೃತೀಯಾವೇದಿತಂ ಭಜೇ ॥ ೪೫॥

ಘನಾಘನಾಭನೀಲಾಂಗಂ = **ಘನಾಘನಾಭ** = ನೀರನ್ನು ಸುರಿಸುತ್ತಿರುವ ಮೇಘದಂತೆ, **ನೀಲಾಂಗಂ** = ನಿಲಮೇಘಶ್ಯಾಮರಾದ (ಇದು ಶ್ರೀ ಕೃಷ್ಣನ ಸನ್ನಿಧಾನದಿಂದ ಉಂಟಾದ ಕಾಂತಿ), **ಘನರೋಗನಿವಾರಣಮ್** = ಪರಿಹರಿಸಲು ಅಶಕ್ಯವಾದ ರೋಗ ನಿವಾರಕರಾದ, **ಘೋರತಾಪತ್ರಯಹರಂ** = ಆಧ್ಯಾತ್ಮಿಕಾದಿತಾಪತ್ರಯಗಳನ್ನು ಪರಿಹರಿಸುವ, **ತೃತೀಯಾವೇದಿತಂ** = 'ಘ' ಎಂಬ ಅಕ್ಷರಪ್ರತಿಪಾದ್ಯರಾದ ಗುರುಗಳನ್ನು, **ಭಜೇ** = ಸ್ತುತಿಸುವೆನು.

ಇತಿ ತೃತೀಯ ನೀರಾಜನಂ ಸಮರ್ಪಯಾಮಿ

ವೇದಾಂತ ಸಾರಸರ್ವಜ್ಞಂ ವೇದವ್ಯಾಸ ಪದಾರ್ಚಕಮ್ ।
ಪ್ರಹ್ಲಾದಸ್ಯಾಂಶ ಸಂಭೂತಂ ತುರೀಯಾರ್ಣವಗಂ ಭಜೇ ॥ ೪೬॥

ವೇದಾಂತಸಾರ ಸರ್ವಜ್ಞಂ = ಉಪನಿಷತ್ತುಗಳ ಸಾರವನ್ನು ಅರಿತವರಾದ, **ವೇದವ್ಯಾಸಪದಾರ್ಚಕಂ** = ವ್ಯಾಸದೇವರನ್ನು ಪೂಜಿಸುವ, **ಪ್ರಹ್ಲಾದಸ್ಯಾಂಶಸಂಭೂತಂ** = ಪ್ರಹ್ಲಾದರಾಜರ ಅಂಶವಾದ, **ತುರೀಯಾರ್ಣವಗಂ** = 'ವೇಂ' ಎಂಬ ನಾಲ್ಕನೇ ಅಕ್ಷರ ಪ್ರತಿಪಾದ್ಯರಾದ ರಾಯರನ್ನು, **ಭಜೇ** = ಭಜಿಸುವೆನು.

ಇತಿ ಚತುರ್ಥನೀರಾಜನಮ್

ದ್ರಾವಯಂತಂ ಪಿಶಾಚಾದೀನ್ ದ್ರಾಘಿಮಾಮಯಹಾರಕಮ್।
ದ್ರಾಕ್ ಭಕ್ತೇಷ್ಟಪ್ರದಂ ವಂದೇ ಪಂಚಮಾಕ್ಷರ ವೇದಿತಮ್ ॥ ೪೭॥

ಪಿಶಾಚಾದೀನ್ = ಭೂತಪ್ರೇತ ಪಿಶಾಚಗಳನ್ನು, **ದ್ರಾವಯಂತಂ** = ದೂರ ಓಡಿಸುವ, **ದ್ರಾಘಿಮಾಮಯಹಾರಕಮ್** = ಅತ್ಯಂತ ನೀಳ (ಉದ್ದ) ವಾದ ಹಾರವನ್ನು ಧರಿಸಿರುವ, **ದ್ರಾಕ್** = ಶೀಘ್ರವಾಗಿ, **ಭಕ್ತೇಷ್ಟಪ್ರದಂ** = ಭಕ್ತರ ಇಷ್ಟಗಳನ್ನು ನೀಡುವ, **ಪಂಚಮಾಕ್ಷರವೇದಿತಂ** = 'ದ್ರ' ಎಂಬ ಐದನೇ ಅಕ್ಷರ ಪ್ರತಿಪಾದ್ಯರಾದ, ರಾಘವೇಂದ್ರರನ್ನು, **ವಂದೇ** = ಅಭಿನಂದಿಸುವೆನು.

ಇತಿ ಪಂಚಮನೀರಾಜನಂ

ಯಥಾಶಕ್ತಿ ಯಥಾಭಕ್ತಿ ಸೇವಕಾನಾಂ ಫಲಪ್ರದಮ್ ।
ಯವನಾದ್ಯೈಶ್ಚ ಸಂಸೇವ್ಯಂ ವಂದೇ ಷಷ್ಟಪ್ರಪಂಚಿತಮ್ ॥ ೪೮॥

ಯಥಾಶಕ್ತಿ = ಭಕ್ತರ ಶಕ್ತಿಗೆ ಅನುಸಾರವಾಗಿ, **ಯಥಾಭಕ್ತಿ** = ಭಕ್ತರ ಭಕ್ತಿಗನುಸಾರವಾಗಿ, **ಸೇವಕಾನಾಂ** = ಭಕ್ತಜನರಿಗೆ, **ಫಲಪ್ರದಂ** = ಫಲವನ್ನು ನೀಡುವ, **ಯವನಾದ್ಯೈಃ ಚ** = ಯವನರಿಂದ (ಮ್ಲೇಛಜನರು) ಲೂ, **ಸಂಸೇವ್ಯಂ** = ಸೇವಿಸಲ್ಪಡುವ, **ಷಷ್ಟಪ್ರಪಂಚಿತಂ** = 'ಯ' ಎಂಬ ಆರನೇ ಅಕ್ಷರ ಪ್ರತಿಪಾದ್ಯರಾದ ರಾಯರನ್ನು, **ವಂದೇ** = ನಮಸ್ಕರಿಸುವೆ.

ಇತಿ ಷಷ್ಟ ನೀರಾಜನಂ

ನಂದತೀರ್ಥ ಕೃತಾನೇಕ ಗ್ರಂಥಭಾವ ಪ್ರಕಾಶಮ್।
ಅಘವಿದ್ರಾವಕಂ ವಂದೇ ಸಪ್ತಮಾಕ್ಷರ ವೇದಿತಮ್ ॥ ೪೯॥

ನಂದತೀರ್ಥಕೃತ = ಆನಂದತೀರ್ಥರಿಂದ ರಚಿಸಲ್ಪಟ್ಟ, **ಅನೇಕಗ್ರಂಥ** = ಅಣುಭಾಷ್ಯಾದಿ ಅನೇಕ ಗ್ರಂಥಗಳ, **ಭಾವಪ್ರಕಾಶಕಮ್** = ಅಭಿಪ್ರಾಯವನ್ನು ಭಾವದೀಪಾದಿಗಳ ಮೂಲಕ ಜನರಿಗೆ ತಿಳಿಯವಂತೆ ಮಾಡಿರುವ, **ಅಘವಿದ್ರಾವಕಂ** =

ಪಾಪಪರಿಹಾರಕರಾದ, **ಸಪ್ತಮಾಕ್ಷರ ವೇದಿತಮ್** = 'ನ' ಎಂಬ ಏಳನೆಯ ಅಕ್ಷರ ಪ್ರತಿಪಾದ್ಯರಾದ, ರಾಘವೇಂದ್ರರನ್ನು, **ವಂದೇ** = ನಮಿಸುವೆನು.

ಇತಿ ಸಪ್ತಮ ನೀರಾಜನಂ

ಮಾನದಂ ಮಧ್ವಭಕ್ತಾನಾಂ ಶಠಾನಾಂ ಮಾನಹಾನಿದಮ್ ।
ಮಾನ್ಯಂ ವಿರೋಧಿನಂ ಚಾಪಿ ವಂದೇ ವಸುನಿರೂಪಿತಮ್ ॥ ೫೦॥

ಮಧ್ವಭಕ್ತಾನಾಂ=ಮಧ್ವಾಚಾರ್ಯರನ್ನು ಸೇವಿಸುವವರಿಗೆ, **ಮಾನದಂ**= ಜ್ಞಾನ, ಗೌರವಾದಿಗಳನ್ನು ನೀಡುವವರು, **ಶಠಾನಾಂ**= ಮೂರ್ಖರಿಗೆ, **ಮಾನಹಾನಿದಮ್**= ಮಾನಹಾನಿಯನ್ನುಂಟುಮಾಡುವ, **ಮಾನ್ಯಂ ವಿರೋಧಿನಂ ಚಾಪಿ**=ಸಜ್ಜನರಿಗೆ ಮಾನ್ಯರು, ದುರ್ಜನರಿಗೆ ವಿರೋಧಿಗಳಾದ, **ವಸುನಿರೂಪಿತಮ್** = ಎಂಟನೇ ಅಕ್ಷರವಾದ 'ಮ' ಎಂಬಕ್ಷರ ಪ್ರತಿಪಾದಿಸಲ್ಪಟ್ಟ ರಾಘವೇಂದ್ರರನ್ನು, **ವಂದೇ** = ನಮಸ್ಕರಿಸುವೆನು.

ಇತಿ ಅಷ್ಟಮ ನೀರಾಜನಂ

ಇತಿ ಶ್ರೀ ರಾಘವೇಂದ್ರಾಷ್ಟಾಕ್ಷರಮಂತ್ರಾತ್ಮಕಸ್ತವಮ್।
ನೀರಾಜನೇಷು ಪಠತಾಂ ರಾಘವೇಂದ್ರಃ ಪ್ರಸೀದತಿ ॥ ೫೦॥

ಇತಿ = ಹಿಂದೆ ಹೇಳಿದ ರೀತಿಯಲ್ಲಿ, ಶ್ರೀ ರಾಘವೇಂದ್ರಾಷ್ಟಾಕ್ಷರ ಮಂತ್ರಾತ್ಮಕ **ಸ್ತವಮ್** = ಶ್ರೀ ರಾಘವೇಂದ್ರ ಅಷ್ಟಾಕ್ಷರ ಮಂತ್ರರೂಪವಾದ ಸ್ತೋತ್ರವನ್ನು, **ನೀರಾಜನೇಷು** = ಮಂಗಳಾರತಿಯನ್ನು ಮಾಡುವಾಗ, **ಪಠತಾಮ್** = ಪಠಿಸುವವರಿಗೆ, **ರಾಘವೇಂದ್ರ** = ರಾಘವೇಂದ್ರರು, **ಪ್ರಸೀದತಿ** = ಸಂತುಷ್ಟರಾಗುವರು.

ಸುವರ್ಣರತ್ನರಚಿತಂ ಪುಷ್ಪಂ ಪುಷ್ಪಾಂಜಲಿಂ ತವ।
ಶ್ರೀ ರಾಘವೇಂದ್ರ, ಗುರುರಾಟ್ ದದಾಮಿ ಸ್ವೀಕುರು ಪ್ರಭೋ ॥ ೫೨॥

ಶ್ರೀ ರಾಘವೇಂದ್ರ, ಗುರುರಾಟ್ = ರಾಘವೇಂದ್ರ ಗುರುರಾಜರಿಗೆ, **ಸುವರ್ಣ ರತ್ನ ರಚಿತಂ – ಸುವರ್ಣ** = ಶೋಭನವಾದ ವರ್ಣಗಳಿಂದ ಕೂಡಿದ, **ರತ್ನರಚಿತಮ್**= ರತ್ನಪ್ರಾಯವಾದ ಮಾತುಗಳಿಂದ ರಚಿಸಿದ, **ಪುಷ್ಪ** = ಅಹಿಂಸಾದಿ ಎಂಟು ಭಾವಪುಷ್ಪಗಳನ್ನು, ಹಾಗೆಯೇ, **ಪುಷ್ಪಾಂಜಲಿಂ** = ಬೊಗಸೆ ತುಂಬ ತುಂಬಿರುವ ಪುಷ್ಪಗಳನ್ನು, ತವ = ತಮಗೆ, **ದದಾಮಿ** = ಕೊಡುವೆನು, **ಪ್ರಭೋ** = ಪ್ರಭುವೇ, **ಸ್ವೀಕುರು** = ಸ್ವೀಕರಿಸಿರಿ.

ಪುಷ್ಪಾಂಜಲಿಂ ಸಮರ್ಪಯಾಮಿ

ಜಯಶಬ್ದೈಃ ಪಾಹಿಶಬ್ದೈಃ ಗದ್ಯೈಃ ಪದ್ಯೈಃ ಪ್ರದಕ್ಷಿಣಾಂ।
ಕರೋಮಿ ರಾಘವೇಂದ್ರಾರ್ಯ ಸಂತುಷ್ಟೋ ಭವ ಸರ್ವದಾ ॥ ೫೩॥

ಹೇ ರಾಘವೇಂದ್ರಾರ್ಯ = ಪೂಜ್ಯರಾದ ರಾಘವೇಂದ್ರರೇ, **ಜಯಶಬ್ದೈಃ** = ಜಯ ಜಯ ಎಂಬ ಶಬ್ದಗಳಿಂದ ಸಹಿತವಾದ, **ಪಾಹಿಶಬ್ದೈಃ** = ಪಾಹಿ ಪಾಹಿ ಎಂಬ ಶಬ್ದಗಳಿಂದಲೂ, **ಗದ್ಯೈಃ** = ರಾಘವೇಂದ್ರ ಗದ್ಯದಿಂದಲೂ, **ಪದ್ಯೈಃ** = ರಾಘವೇಂದ್ರರ ಸ್ತೋತ್ರಗಳಿಂದ (ಸಹಿತವಾದ), **ಪ್ರದಕ್ಷಿಣಾನ್** = ಪ್ರದಕ್ಷಿಣೆಗಳನ್ನು, **ಕರೋಮಿ** = ಮಾಡುವೆನು, **ಸರ್ವದಾ** = ಯಾವಾಗಲೂ, **ಸಂತುಷ್ಟೋ ಭವ** = ಸಂತುಷ್ಟರಾಗಿರಿ.

ಪ್ರದಕ್ಷಿಣಂ ಸಮರ್ಪಯಾಮಿ

ಗುರುರಾಡ್ ರಾಘವೇಂದ್ರಸ್ಯ ಏಕೈಕಸ್ಮಿನ್ ಪ್ರದಕ್ಷಿಣೇ।
ಸಪ್ತದ್ವೀಪಮಹೀಯಾತ್ರಾಫಲಂ ವಿಂದತಿ ಮಾನವಃ ॥ ೫೪॥

ಮಾನವಃ = ಭಕ್ತನಾದ ಪುರುಷನು, **ಗುರುರಾಡ್ರಾಘವೇಂದ್ರಸ್ಯ** = ಗುರುರಾಜರಾದ ರಾಘವೇಂದ್ರರ, **ಏಕೈಕಸ್ಮಿನ್** = ಒಂದೊಂದು, **ಪ್ರದಕ್ಷಿಣೇ** = ಪ್ರದಕ್ಷಿಣೆಯಲ್ಲಿ, **ಸಪ್ತದ್ವೀಪಮಹೀಯಾತ್ರಾಫಲಂ** = ಜಂಬೂ, ಪ್ಲಕ್ಷ ಕುಶ ಮೊದಲಾದ ಏಳು ದ್ವೀಪಗಳಿಂದ ಕೂಡಿದ ಭೂಮಿಯ, **ಯಾತ್ರಾಫಲಂ** = ಯಾತ್ರೆಯ ಫಲವನ್ನು, **ವಿಂದತಿ** = ಪಡೆಯುವನು.

ಪ್ರದಕ್ಷಿಣಾನ್ ಸಮರ್ಪಯಾಮಿ

ಬಾಹುಭ್ಯಾಮಥ ಜಾನುಭ್ಯಾಂ ಶಿರಸಾ ಮನಸಾ ಹೃದಾ।
ಪಂಚಾಂಗಕಂ ಪ್ರಣಾಮಂ ತೇ ಕುರ್ವೇಽಭೀಷ್ಟಾರ್ಥದಾಯಿನೇ ॥ ೫೫॥

ಹೇ **ಅಭೀಷ್ಟದಾಯಿನೇ** = (ಬೇಡಿದವರ) ಇಷ್ಟಾರ್ಥಗಳನ್ನು ಪೂರೈಸುವ ರಾಘವೇಂದ್ರರೇ, **ತೇ** = ನಿಮಗೆ, **ಬಾಹುಭ್ಯಾಮ್** = ಭುಜಗಳಿಂದಲೂ, **ಅಥ** = ಹಾಗೆಯೇ, **ಜಾನುಭ್ಯಾಂ** = ಮಂಡಿಗಳಿಂದಲೂ, **ಶಿರಸಾ** = ತಲೆಯಿಂದಲೂ, **ಮನಸಾ** = ಮನಸ್ಸಿನಿಂದಲೂ, **ಹೃದಾ** = ಹೃದಯದಿಂದಲೂ, **ಪಂಚಾಂಗಕಂ** = ಐದು ಅಂಗಗಳಿಂದ ಕೂಡಿದ, **ಪ್ರಣಾಮಂ** = ನಮಸ್ಕಾರವನ್ನು, **ಕುರ್ವೇ** = ತಮ್ಮ ಅನುಗ್ರಹಕ್ಕಾಗಿ ಮಾಡುತ್ತೇನೆ.

ನಮಸ್ಕಾರಂ ಸಮರ್ಪಯಾಮಿ

ತವ ಸೇವಾರತಾನ್ ಕಾಂಶ್ಚಿತ್ ಭಕ್ತಾನ್ ಪ್ರೇಷಯ ಮಾಂ ಪ್ರತಿ।
ತೇಷಾಂ ಮನೋರಥಂ ತಾತ ಮಯಾ ಪುತ್ರೇಣ ಪೂರಯ ॥ ೫೬॥

ತವ = ನಿಮ್ಮ, **ಸೇವಾರತಾನ್** = ಸೇವಾಸಕ್ತರಾದ, **ಕಾಂಶ್ಚಿತ್** = ಕೆಲವು, **ಭಕ್ತಾನ್** = ಭಕ್ತಜನರನ್ನು, **ಮಾಂ ಪ್ರತಿ** = ನನ್ನ ಬಳಿ, **ಪ್ರೇಷಯ** = ಕಳುಹಿಸಿ, **ಹೇ ತಾತ** = ತಂದೆಯಾದ ಗುರುಗಳೇ, **ತೇಷಾಂ** = ಆ ಭಕ್ತಜನರ, **ಮನೋರಥಂ** = ಮನೋಭಿಲಾಷೆಯನ್ನು, **ಪುತ್ರೇಣ** = ತಮ್ಮ ಪುತ್ರನಾದ, **ಮಯಾ** = ನನ್ನ ಮೂಲಕ, **ಪೂರಯ** = ಪೂರ್ತಿಮಾಡಿಸಿರಿ.

ಅಥವಾ ಕರುಣಾಸಿಂಧೋ ಮಯಿ ಸನ್ನಿಹಿತಃ ಸದಾ।
ಪುತ್ರಸ್ಯ ಮಮ ವಾಕ್ಯೇನ ಸರ್ವಸರ್ವೇಷ್ಟದೋ ಭವ ॥ ೫೭॥

ಅಥವಾ = ಇನ್ನೊಂದು ರೀತಿಯಲ್ಲಿ, **ಹೇ ಕರುಣಾಸಿಂಧೋ** = ಕೃಪಾ ಸಮುದ್ರರೇ, **ಸದಾ** = ಯಾವಾಗಲೂ, **ಮಯಿ** = ನನ್ನಲ್ಲಿ, **ಸನ್ನಿಹಿತಃ ಸನ್** = ಸನ್ನಿಹಿತ ರಾಗಿ, **ಪುತ್ರಸ್ಯ** = ತಮ್ಮ ಪುತ್ರನಾದ, **ಮಮ** = ನನ್ನ, **ವಾಕ್ಯೇನ** = ಮಾತಿನಿಂದ, **ಸರ್ವಸರ್ವೇಷ್ಟದಃ** = ಎಲ್ಲಾ ಭಕ್ತರ ಸಮಸ್ತ ಅಭೀಷ್ಟಗಳನ್ನು ನೀಡುವವರು, **ಭವ** = ಆಗಿರಿ.

ಯೇನ ಕೇನಾಪ್ಯುಪಾಯೇನ ದೂನೇ ದುರ್ಯಶಸಾ ಭುವಿ।
ಮಾಹಾತ್ಮ್ಯಂ ಮಯಿ ವಿನ್ಯಸ್ಯ ಕುರುಂ ಮಾಂ ಲೋಕಪೂಜಿತಮ್ ॥ ೫೮॥

ಭುವಿ = ಭೂಮಿಯಲ್ಲಿ, ದುರ್ಯಶಸಾ ದೂನೇ = ಅಪಕೀರ್ತಿಯಿಂದ ನೊಂದಿರುವ, **ಮಯಿ** = ನನ್ನಲ್ಲಿ, **ಯೇನ ಕೇನಾಪ್ಯುಪಾಯೇನ**=ಯಾವುದಾದರೊಂದು ರೀತಿಯಿಂದ, **ಮಾಹಾತ್ಮ್ಯಂ** = ಮಹಿಮೆಯನ್ನು (ನನ್ನಲ್ಲಿ), **ವಿನ್ಯಸ್ಯ** = ಇಟ್ಟು, **ಮಾಂ** = ನನ್ನನ್ನು, **ಲೋಕಪೂಜಿತಮ್** = ಜನರು ಗೌರವಿಸುವಂತೆ, **ಕುರು** = ಮಾಡಿರಿ.

ಯುಕ್ತಾಯುಕ್ತಮಜಾನಾನೋ ಯಾಚೇ ತ್ವಾಂ ಬಾಲವದ್ ಗುರೋ।
ದಾತಾ ತ್ರಾತಾ ದಯಾಲುಸ್ತ್ವಂ ಯಥೇಚ್ಛಸಿ ತಥಾ ಕುರು ॥ ೫೯॥

ಹೇ ಗುರೋ = ಹೇ ಗುರುಗಳೇ, **ಯುಕ್ತಾಯುಕ್ತಮ್** = ಯೋಗ್ಯಾಯೋಗ್ಯ ವಿಷಯವನ್ನು, **ಅಜಾನಾನಃ** = ತಿಳಿಯದವನಾಗಿ, **ಬಾಲವತ್** = ಬಾಲಕನಂತೆ (ನಾನು), **ತ್ವಾ** = ತಮ್ಮನ್ನು, **ಯಾಚೇ** = ಬೇಡುವೆನು, **ದಾತಾ** = ದಾನಿಯಾದ, **ತ್ರಾತಾ** = ರಕ್ಷಕರಾದ, **ದಯಾಲುಃ** = ಕರುಣಾಶಾಲಿಗಳಾದ, **ತ್ವಮ್** = ತಾವು, **ಯಥೇಚ್ಛಸಿ** = ಹೇಗೆ ಇಚ್ಛಿಸುವಿರೋ, **ತಥಾ** = ಹಾಗೆ, **ಕುರು** = ಮಾಡಿರಿ.

ಸರ್ವಜ್ಞಾಯ ಸ್ವತಂತ್ರಾಯ ಭಕ್ತಕ್ಲೇಶವಿನಾಶಿನೇ।
ಉದಾರಚೇತಸೇ ಕಿಂ ತೇ ವದೇ ಮದ್ಭಾರವಾಹಿನೇ ॥ ೬೦॥

ಸರ್ವಜ್ಞಾಯ = ಸರ್ವವನ್ನು ಬಲ್ಲವರಾದ, **ಸ್ವತಂತ್ರಾಯ** = ಅನುಗ್ರಹಾದಿಗಳಲ್ಲಿ ಸ್ವತಂತ್ರರಾದ, **ಭಕ್ತಕ್ಲೇಶನಾಶಿನೇ** = ಭಕ್ತರ ದುಃಖಗಳನ್ನು ಹೋಗಲಾಡಿಸುವವರಾದ, **ಉದಾರಚೇತಸೇ** = ಔದಾರ್ಯಶಾಲಿಗಳಾದ, **ಮದ್ಭಾರವಾಹಿನೇ** = ನನ್ನ ಉದ್ಧರಿಸುವ ಭಾರವನ್ನು ಹೊತ್ತಿರುವ, **ತೇ** = ತಮಗೆ, **ಕಿಂ ವದೇ** = ಏನನ್ನು ಹೇಳಲಿ?

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಶಯನಾವಧಿ ಯತ್ಕೃತಂ।
ಮನೋವಾಕ್ಕಾಯಜನಿತಂ ಕರ್ಮ ಯದ್ವಾ ಶುಭಾಶುಭಮ್।
ತತ್ಸರ್ವಂ ಪ್ರೀತಯೇ ಭೂಯಾತ್ ಪಾದಯೋಸ್ತೇ ಸಮರ್ಪಯೇ ॥ ೬೧॥

ಬ್ರಾಹ್ಮೇಮುಹೂರ್ತೇ = ಉಷಃಕಾಲದಲ್ಲಿ, **ಉತ್ಥಾಯ** = ಎಚ್ಚೆತ್ತು, **ಶಯನಾವಧಿ** = ಪುನಃ ಮಲಗುವವರೆಗೆ, **ಯತ್** = ಯಾವ, **ಮನೋವಾಕ್ಕಾಯ ಜನಿತಂ** = ಮನಸ್ಸು, ಮಾತು, ದೇಹದಿಂದ ಮಾಡಿದ, **ಶುಭಾಶುಭಮ್** = ಒಳ್ಳೆಯ ಹಾಗೂ ಕೆಟ್ಟದಾದ, **ಕರ್ಮ** = ಕೆಲಸವು, **ಕೃತಮ್** = ಮಾಡಲ್ಪಟ್ಟಿತೋ, **ತತ್ಸರ್ವಂ** = ಅವೆಲ್ಲವನ್ನೂ, **ತೇ** = ನಿಮ್ಮ, **ಪ್ರೀತಯೇ** = ಪ್ರೀತಿಯ ಸಲುವಾಗಿ, **ಭೂಯಾತ್** = ಆಗಲಿ, **ಇತಿ** = ಹೀಗೆಂದು, **ತೇ ಪಾದಯೋಃ** = ತಮ್ಮ ಪಾದಗಳಲ್ಲಿ, **ಸಮರ್ಪಯೇ** = ಅರ್ಪಿಸುವೆನು.

ಇತಿ ಸಮರ್ಪಣಂ

ಕ್ಷಣೇ ಕ್ಷಣೇಽಪರಾಧಾಂಸ್ತಾನ್ ಮತ್ಕೃತಾನ್ ವೈ ಸಹಸ್ರಶಃ।
ಕ್ಷಮಸ್ವ ಗುರುರಾಜೇಂದ್ರ ಪ್ರಸೀದ ತನಯೇ ಮಯಿ ॥ ೬೨॥

ಗುರುರಾಜೇಂದ್ರ = ಗುರುಸಾರ್ವಭೌಮರೇ, **ಕ್ಷಣೇ ಕ್ಷಣೇ** = ಪ್ರತಿಕ್ಷಣದಲ್ಲಿಯೂ, **ಮತ್ಕೃತಾನ್** = ನನ್ನಿಂದ ಆಚರಿಸಲ್ಪಟ್ಟ, **ಸಹಸ್ರಶಃ** = ಸಾವಿರಾರು, **ಅಪರಾಧಾನ್** = ಅಪರಾಧಗಳನ್ನು, **ಕ್ಷಮಸ್ವ** = ಕ್ಷಮಿಸಿರಿ, **ತನಯೇ ಮಯಿ** = ಪುತ್ರನಾದ ನನ್ನಲ್ಲಿ, **ಪ್ರಸೀದ** = ಪ್ರಸನ್ನರಾಗಿರಿ.

ಇತಿ ಕ್ಷಮಾಪಣಂ

ಏವಂ ಯಃ ಕುರುತೇ ಪೂಜಾಂ ಸಕೃದ್ವಾಽಪಿ ಬಹಿರ್ಹೃದಿ।
ಗುರುರಾಜಪ್ರಸಾದೇನ ಭುಕ್ತಿಂ ಮುಕ್ತಿಂ ಚ ವಿಂದತಿ ॥ ೬೩॥

ಯಃ = ಯಾವಭಕ್ತನು, **ಹೃದಿ** = ಹೃದಯದಲ್ಲಾಗಲಿ, **ಬಹಿಃ** = ಹೃದಯದ ಹೊರಗೆ ಆಗಲಿ, **ಏವಂ** = ಈ ಪಟಲದಲ್ಲಿ ತಿಳಿಸಿದಂತೆ, **ಪೂಜಾಂ** = ಗುರುಪೂಜೆಯನ್ನು, **ಸಕೃದ್ ವಾ ಅಪಿ** = ದಿನಕ್ಕೊಂದು ಬಾರಿಯಾದರೂ, **ಕುರುತೇ** = ಪೂಜಿಸುವನೋ, **ಸಃ** = ಅವನು, **ಗುರುರಾಜಪ್ರಸಾದೇನ** = ಗುರುರಾಜರ ಅನುಗ್ರಹದಿಂದ, **ಭುಕ್ತಿಂ ಮುಕ್ತಿಂ ಚ** = ಐಹಿಕ ಪಾರತ್ರಿಕ ಸುಖವನ್ನು, **ವಿಂದತಿ** = ಪಡೆಯುವನು.

ದಿನೇ ದಿನೇ ಪ್ರಕುರ್ವೀತ ಗುರುವಾರೇ ವಿಶೇಷತಃ।
ಪೂಜಾಕಾಲೇಽಥವಾ ಭಕ್ತ್ಯಾ ಗುರುರಾಜಸ್ಯ ಸನ್ನಿಧೌ ॥ ೬೪॥

ಏವಂ = ಹೀಗೆ, **ದಿನೇ ದಿನೇ** = ಪ್ರತಿದಿನದಲ್ಲಿಯೂ, **ಅಥವಾ ವಿಶೇಷತಃ** = ವಿಶೇಷವಾಗಿ, **ಗುರುವಾರೇ** = ಗುರುವಾರದಲ್ಲಾಗಲೀ, **ಪೂಜಾಕಾಲೇ** = ಪೂಜಾಕಾಲದಲ್ಲಿ, **ಪೂಜಾಂ** = ಪೂಜೆಯನ್ನು, **ಗುರುರಾಜಸ್ಯ ಸನ್ನಿಧೌ** = ಗುರುರಾಜರ ಚಿತ್ರಪಠ, ಮೃತ್ತಿಕಾ, ಬೃಂದಾವನ ಇವುಗಳ ಸನ್ನಿಧಿಯಲ್ಲಿ, **ಭಕ್ತ್ಯಾ** = ಭಕ್ತಿಪೂರ್ವಕವಾಗಿ, **ಪ್ರಕುರ್ವೀತ** = ಮಾಡಬೇಕು.

ಇದಂ ಚ ಪೂಜಾಪಟಲಂ ಪಠತಾಂ ಸಕಲಾಪದಃ।
ನಶ್ಯಂತಿ ಸಾಂಗಪೂಜಾಯಾಃ ಫಲಂ ಪ್ರಾಪ್ನೋತ್ಯಸಂಶಯಃ ॥ ೬೫॥

ಇದಂ ಪೂಜಾಪಟಲಂ = ಈ ಪೂಜಾಪಟಲವನ್ನು, **ಪಠತಾಂ** = ಪಾರಾಯಣವನ್ನು ಮಾಡುವವರಿಗೆ, **ಸಕಲಾಪದಃ** = ಸಮಸ್ತ ಆಪತ್ತುಗಳು, **ನಶ್ಯಂತಿ** = ನಾಶಹೊಂದುವುವು, **ಚ** = ಮತ್ತು, **ಸಾಂಗಪೂಜಾಫಲಂ** = ಸಾಂಗವಾಗಿ ನೆರವೇರಿಸಿದ ಪೂಜೆಯ ಫಲವನ್ನು, **ಅಸಂಶಯಃ** = ನಿಸ್ಸಂದೇಹವಾಗಿಯೂ, **ಪ್ರಾಪ್ನೋತಿ** = ಹೊಂದುವನು.

ಕುಕೂಲಾಭಃ ಪಿಶಾಚಾನಾಂ ಕುಷ್ಠರೋಗ ನಿವಾರಣಃ ॥ ೨೬॥

ಕೀನಾಶಭಯಹಾ = ಯಮಭಯಪರಿಹಾರಕರಾದ, **ಕೀಟಭಯಹಾ** = ಸರ್ಪಾದಿ ಕೀಟಭಯ ಪರಿಹಾರಕರಾದ, **ಕೀರ್ತಿಮಂಡಿತಃ** = ಕೀರ್ತಿಯಿಂದ ಅಲಂಕೃತರಾದ, **ಪಿಶಾಚಾನಾಂ ಕುಕೂಲಾಭಃ** = ಪಿಶಾಚಿಗಳಿಗೆ ಹೊಟ್ಟಿನ ಬೆಂಕಿಪ್ರಾಯದವರು,

ಕುಶಾಸನ ಸ್ಥಿತಃ ಕುಕ್ಷಿಪೂರಕಶ್ಚ ಕುತೂಹಲೀ।
ಕುತ್ಸಿತಾಚಾರ ರಹಿತಃ ಕುಮಾರ ಸುಖವರ್ಧನಃ ॥ ೨೭॥

ಕುಶಾಸನಸ್ಥಿತಃ = ದರ್ಭಾಸನದಲ್ಲಿ ಕುಳಿತಿರುವ, **ಕುಕ್ಷಿಪೂರಕಃ** = ಉದರವನ್ನು ತುಂಬಿಸುವವರಾದ, **ಕುತೂಹಲೀ** = ಹರಿಮಹಿಮಾದಿ ವಿಷಯದಲ್ಲಿ ಕುತೂಹಲರೂ, **ಕುತ್ಸಿತಾಚಾರರಹಿತಃ** = ದುರಾಚಾರ ರಹಿತರಾದವರು, **ಕುಮಾರ ಸುಖವರ್ಧನಃ** = ಪುತ್ರಸುಖವನ್ನು ವೃದ್ಧಿಮಾಡುವರು,

ಕುಶಲಶ್ಚ ಕುಲೀನಶ್ಚ ಕುಶಾಸನವಿವರ್ಜಿತಃ।
ಕುಂಭಕೋಣಕೃತಾವಾಸಃ ಕುತೋಽಪಿ ಭಯಭಂಜನಃ ॥ ೨೮॥

ಕುಶಲಃ = ಸರ್ವವಿದ್ಯಾಕುಶಲರಾದ, **ಕುಲೀನಃ** = ಗೌತಮಕುಲ ಸಂಭೂತರಾದ, **ಕುಶಾಸನ ವಿವರ್ಜಿತರಾದ** = ಕೆಟ್ಟಶಾಸ್ತ್ರಗಳನ್ನು ಬಿಟ್ಟವರಾದ, **ಕುಂಭಕೋಣಕೃತಾವಾಸಃ** = ಕುಂಭಕೋಣದಲ್ಲಿ ಮಾಸಮಾಡಿದ, **ಕುತೋಽಪಿ ಭಯಭಂಜನಃ** = ಯಾವುದರಿಂದಲೂ ಬರುವ ಭಯವನ್ನು ಪರಿಹರಿಸುವ,

ಕೂಪಪಾತಕ ಪಾಪಘ್ನಃ ಕೂರ್ಮಾಸನಪರಿಗ್ರಹಃ।
ಕೂಷ್ಮಾಂಡಾದಿ ಪ್ರತಿಭಯಃ ಕೀರ್ತಿದಃ ಕೀರ್ತನಪ್ರಿಯಃ ॥ ೨೯॥

ಕೂಪಪಾತಕ ಪಾಪಘ್ನಃ = ಅಂಧಕೂಪಕ್ಕೆ ಬೀಳಿಸುವ ಪಾಪಪರಿಹಾರಕರಾದ, **ಕೂರ್ಮಾಸನ ಪರಿಗ್ರಹಃ** = ಕೂರ್ಮಾಸನವ್ನು ಸ್ವೀಕರಿಸಿದವರಾದ, **ಕೂಷ್ಮಾಂಡಾದಿ ಪ್ರತಿಭಯಃ** = ಕೂಷ್ಮಾಂಡಾದಿಗಳಿಗೆ ಭಯವನ್ನು ಉಂಟುಮಾಡುವವರು, **ಕೀರ್ತಿದಃ** = ಕೀರ್ತಿದಾತರು, **ಕೀರ್ತನಪ್ರಿಯಃ** = ನಾಮಸಂಕೀರ್ತನೆಗೆ ಒಲಿಯುವರು,

ಕೇಶವಾರಾಧಕಃ ಕೇತುದೋಷಘ್ನಃ ಕೇವಲೇಷ್ಟದಃ|
ಕೇತಕೀಕುಸುಮಾಸಕ್ತಃ ಕೇಸರದ್ರವಲೋಲುಪಃ ॥ ೩೦॥

ಕೇಶವಾರಾಧಕಃ = ಕೇಶವನನ್ನು ಪೂಜಿಸುವವರು, **ಕೇತುದೋಷಘ್ನಃ** = ಧೂಮ ಕೇತು ಮೊದಲಾದ ಉತ್ಪಾತಹರರು, **ಕೇವಲೇಷ್ಟದಃ** = ಇಷ್ಟವನ್ನು ಮಾತ್ರ ಕೊಡುವವರು, **ಕೇತಕೀಕುಸುಮಾಸಕ್ತಃ** = ಕೇತಕೀ ಹೂವಿನಲ್ಲಿ ಆಸಕ್ತರು, **ಕೇಸರದ್ರವ ಲೋಲುಪಃ** = ಕೇಸರಿ ಬೆರೆಸಿದ ಪಾನೀಯಪ್ರಿಯರು,

ಕೈವಲ್ಯದಾತಾ ಕೈಂಕರ್ಯತುಷ್ಟಶ್ರೀಶಶ್ಚ ಕೋಶದಃ|
ಕಾಲಾನುಸಾರದಾತಾ ಚ ಕೋಶೀ ಕೋಶಾತಕೀಪ್ರಿಯಃ ॥ ೩೧॥

ಕೈವಲ್ಯದಾತಾಃ = ಮೋಕ್ಷದಾತರು, **ಕೈಂಕರ್ಯತುಷ್ಟಶ್ರೀಶಃ** = ಸೇವೆಯಿಂದ ಲಕ್ಷ್ಮೀನಾರಾಯಣನನ್ನು ಸಂತೋಷಗೊಳಿಸಿದವರು, **ಕೋಶದಃ** = ನಿಧಿದಾತರು, **ಕಾಲಾನುಸಾರದಾತಾ** = ಕಾಲಕ್ಕೆ ಅನುಸಾರವಾಗಿ ಫಲದಾತರು, **ಕೋಶೀ** = ಅನ್ನಮಯಾದಿ ಕೋಶಗಳಲ್ಲಿರುವ ಅನಿರುದ್ಧಾದಿ ಭಗವದ್ರೂಪುಗಳನ್ನು ತಿಳಿದವರು, ಧನವಂತರು, **ಕೋಶಾತಕೀಪ್ರಿಯಃ** = ಹೀರೇ, ಪಡವಲಗಳಲ್ಲಿ ಪ್ರೀತಿಯುಳ್ಳವರು.

ಕೋಲಾಹಲ ವಿರೋಧೀಚ ಕೌಪೀನ ಪಟಲಾಂಛನಃ|
ಕಂಬುಧ್ವನಿಪ್ರಿಯಃ ಕಂಬುಗ್ರೀವಃ ಕಂಪವಿವರ್ಜಿತಃ ॥ ೩೨॥

ಕೋಲಾಹಲ ವಿರೋಧೀ = ಗುಂಪಿನ ಗಲಭೆಯನ್ನು ವಿರೋಧಿಸುವವರು, **ಕೌಪೀನಪಟಲಾಂಛನಃ** = ಕೌಪೀನ ಧಾರಣೆಯಿಂದ ಸನ್ಯಾಸಚಿಹ್ನೆಯುಳ್ಳವರು, **ಕಂಬುಧ್ವನಿಪ್ರಿಯಃ** = ಶಂಖನಾದ ಪ್ರಿಯರು, **ಕಂಬುಗ್ರೀವಃ** = ಶಂಖದಂತಹ ಕುತ್ತಿಗೆಯುಳ್ಳವರು, **ಕಂಪವಿವರ್ಜಿತಃ** = ನಡುಕವಿಲ್ಲದವರು,

ಕೃಪೀಟಯೋನಿವರ್ಚಸ್ಕಃ ಕೃತಭಕ್ತಾರ್ತಿನಾಶನಃ|
ಕೃತ್ಯಾಸನಃ ಕೃತಜ್ಞಶ್ಚ ಕೃತ್ಯಾಚೇಷ್ಟಕ ಭಂಜನಃ ॥ ೩೩॥

ಕೃಪೀಟಯೋನಿವರ್ಚಸ್ಕಃ = ಅಗ್ನಿಯಂತೆ ಕಾಂತಿಯುಳ್ಳವರು, **ಕೃತಭಕ್ತಾರ್ತಿನಾಶನಃ** = ಭಕ್ತರ ದುಃಖಪರಿಹಾರಕರು, **ಕೃತ್ತ್ಯಾಸನಃ** = ಚರ್ಮದ ಆಸನವುಳ್ಳವರು, **ಕೃತಜ್ಞಃ** = ಕೃತಜ್ಞರು, **ಕೃತ್ಯಾಚೇಷ್ಟಕಭಂಜನಃ** = ಮಾಟಾದಿ ಕೃತ್ಯೆಯ ವ್ಯಾಪಾರವನ್ನು ನಾಶಮಾಡುವವರು.

ಕೃಪಾಮಹೋದಧಿಃ ಕೃಷ್ಣಧ್ಯಾನಾಸಕ್ತಃ ಕೃಶಪ್ರಿಯಃ।
ಕಸ್ತೂರೀತಿಲಕಾಸಕ್ತಃ ಕೃತ್ತಸಂಸಾರಸಾಧ್ವಸಃ ॥ ೩೪॥

ಕೃಪಾಮಹೋದಧಿಃ = ಕೃಪಾಸಾಗರರು, **ಕೃಷ್ಣಧ್ಯಾನಾಸಕ್ತಃ** = ಶ್ರೀಕೃಷ್ಣಚಿಂತನದಲ್ಲಿ ಮಗ್ನರೂ, **ಕೃಶಪ್ರಿಯಃ** = ವ್ರತಾದಿಗಳಿಂದ ಕೃಶರಾದ ಭಕ್ತರನ್ನು ಪ್ರೀತಿಸುವರರು, **ಕಸ್ತೂರೀತಿಲಕಾಸಕ್ತಃ** = ಕಸ್ತೂರೀತಿಲಕಧಾರಣಾಸಕ್ತರು, **ಕೃತ್ತಸಂಸಾರಸಾಧ್ವಸಃ** = ಸಂಸಾರಭಯವನ್ನು ಛೇದಿಸಿದವರು.

ತ್ವಮೇವ ಶರಣಂ ಭೂಯಾ ನಾನ್ಯಃ ಕಶ್ಚನ ವಿದ್ಯತೇ ॥ ೩೫॥

ನೀವೇ ಶರಣ್ಯರು, ಬೇರೆ ಯಾರೂ ರಕ್ಷಕರಿಲ್ಲ.

ಖ

ಖಗೇಶವಾಹಭಕ್ತೇನ ಖರಪಾತಕಹಾರಿಣಾ।
ಖದೋಷಹರ್ತ್ರಾ ಖಪುರಪ್ರಿಯೇಣ ಖಲಮಾರಿಣಾ ॥ ೩೬॥

ಖಗೇಶವಾಹಭಕ್ತೇನ = ಗರುಡವಾಹನನ ಭಕ್ತರಾದ, **ಖರಪಾತಕ ಹಾರಿಣಾ** = ದುಷ್ಟಪಾತಕ ಪರಿಹಾರಕರಾದ, **ಖದೋಷ ಹರ್ತ್ರಾ** = ಇಂದ್ರಿಯ ದೋಷನಾಶಕರಾದ, **ಖಪುರಪ್ರಿಯೇಣ** = ಪರಬ್ರಹ್ಮಪುರವಾದ ವೈಕುಂಠಪ್ರಿಯರಾದ, **ಖಲಮಾರಿಣಾ** = ದುಷ್ಟರನ್ನು ನಾಶಮಾಡುವ,

ಖಾದ್ಯಪ್ರಿಯೇಣ ಮೇ ಭೂಯಾತ್ ಖಲಪ್ವಾ ಭವತಾ ಗತಿಃ।
ಖಲಹೀನಃ ಖೇದಹಂತಾ ಖಿನ್ನಚಿತ್ತ ಪ್ರಮೋದದಃ
ಖೇದಹಾ ಖುರಣೋಘ್ನಶ್ಚ ಖಂಜದುಃಖನಿವಾರಣಃ ॥ ೩೭॥

ಖಾದ್ಯಪ್ರಿಯೇಣ = ಭಕ್ಷ್ಯಪ್ರಿಯರಾದ, **ಖಲಪ್ವಾ** = ಪಾಪಗಳನ್ನು ಗುಡಿಸಿ

ಚೊಕ್ಕಟ ಮಾಡುವವರು, **ಭವತಾ** = ನಿಮ್ಮಿಂದಲೇ, **ಗತಿಃ** = ಗತಿಯು, **ಖಿಲಹೀನಃ** = ಸುಭಿಕ್ಷೆ ತರುವ, **ಖೇದಹಂತಾ** = ದುಃಖಪರಿಹಾರಕರಾದ, **ಖಿನ್ನಚಿತ್ತ ಪ್ರಮೋದದಃ** = ದುಃಖಿಗಳಿಗೆ ಸಂತೋಷವನ್ನು ನೀಡುವವರು, **ಖೇದಹಾ** = ದುಃಖಪರಿಹಾರಕರು, **ಖುರಣೋಘ್ನಃ** = ಗೊರಸಿನಂತಹ ಮೂಗನ್ನು ಸರಿಪಡಿಸುವರರು.

ಖೋಡತ್ವನಾಶಕೋ ಭೂಯಾದ್ ಅಸ್ಮದಿಷ್ಟಾರ್ಥಸಿದ್ಧಯೇ ॥ ೩೮॥

ಖೋಡತ್ವನಾಶಕ = ಕುಂಟುತನ ಪರಿಹಾರಕರಾದ ರಾಘವೇಂದ್ರರು, **ಅಸ್ಮದಿಷ್ಟಾರ್ಥಸಿದ್ಧಯೇ** = ನಮ್ಮ ಇಷ್ಟಸಿದ್ಧಿಗಾಗಿ, **ಭೂಯಾತ್** = ಆಗಲಿ.

ಗ

ಗರಘ್ನಾತ್ ಗಣನಮ್ರಾಂಘ್ರೇರ್ಗರುತ್ಮದ್ವಾಹ ಸೇವಕಾತ್।
ಗುರೋರನ್ಯತ್ರ ಮೇ ಚಿತ್ತಂ ನ ಗಚ್ಛತು ಗುಣಾರ್ಣವಾತ್ ॥ ೩೯॥

ಗರಘ್ನಾತ್ = ವಿಷಪರಿಹಾರಕರಾದ, **ಗಣನಮ್ರಾಂಘ್ರೇಃ** = ಜನಸಮೂಹದಿಂದ ನಮಿಸಲ್ಪಟ್ಟ ಪಾದಗಳುಳ್ಳ, **ಗರುತ್ಮದ್ವಾಹಸೇವಕಾತ್** = ಗರುಡವಾಹನನ ಸೇವಕರಾದ, **ಗುಣಾರ್ಣವಾತ್** = ಗುಣಸಮುದ್ರರಾದ, **ಗುರೋಃ** = ಗುರುಗಳಾದ ರಾಘವೇಂದ್ರರಿಂದ, **ಅನ್ಯತ್ರ** = ಬೇರೆಡೆಗೆ, **ಮೇ ಚಿತ್ತಂ** = ನನ್ನ ಮನಸ್ಸು, **ನ ಗಚ್ಛತು** = ಹೋಗದಿರಲಿ.

ಗಲಾತ್ತ ತುಲಸೀ ಮಾಲೋ ಗರ್ಭದೋ ಗರ್ಭದುಃಖಹಾ।
ಗರ್ತಹಾರೀ ಗಜಗತಿರ್ಗತದೋಷೋ ಗತಿಪ್ರದಃ ॥ ೪೦॥

ಗಲಾತ್ತತುಲಸೀಮಾಲಃ = ಕೊರಳಲ್ಲಿ ತುಲಸೀಮಾಲೆ ಧರಿಸಿದ, **ಗರ್ಭದಃ** = ಬಂಜೆಗೆ ಗರ್ಭ ಉಂಟಾಗುವಂತೆ ಮಾಡುವ, **ಗರ್ಭದುಃಖಘ್ನೇ**= ಗರ್ಭದೋಷ ಪರಿಹರಿಸುವ, **ಗರ್ತಹಾರೀ** = ನರಕದಲ್ಲಿ ಬೀಳುವುದನ್ನು ತಪ್ಪಿಸುವ, **ಗಜಗತಿಃ** = ಗಂಭೀರ ನಡಿಗೆ ಉಳ್ಳ, **ಗತದೋಷಃ** = ದೋಷದೂರರಾದ, **ಗತಿಪ್ರದಃ** = ಜ್ಞಾನಪ್ರದರಾದ,

ಗದಾಧರೋ ಗದಹರೋ ಗರ್ವಹಾ ಗರಿಮಾಲಯಃ।
ಗಭಸ್ತಿಮಾನ್ ಗಹ್ವರಸ್ಥೋ ಗತಭೀರ್ಗಲಿತಾಹಿತಃ ॥ ೪೧॥

ಗದಾಧರಃ = ಪ್ರಹ್ಲಾದಾವತಾರದಲ್ಲಿ ಗದೆಯನ್ನು ಧರಿಸಿದ, **ಗದಹರಃ** = ರೋಗ ಪರಿಹಾರಕರು, **ಗರ್ವಹಾ** = ಅಹಂಕಾರ ಕಳೆಯುವವರು, **ಗರಿಮಾಲಯಃ** = ಗರಿಮಾದಿ

ಅಷ್ಟಸಿದ್ಧಿಯುಳ್ಳವರು, **ಗಭಸ್ತಿಮಾನ್** = ಸೂರ್ಯನಂತೆ ಕಾಂತಿಯುಳ್ಳ, **ಗಹ್ವರಸ್ಥಃ** = ತಪಸ್ಸಿಗಾಗಿ ಗುಹೆಯಲ್ಲಿರುವವರು, **ಗತಭೀಃ** = ಭಯರಹಿತರು, **ಗಲಿತಾಹಿತಃ** = ಅನಿಷ್ಟರಹಿತರು.

ಗತಾಘೋ ಗರ್ಜಿತಾರಾತಿರ್ಗದಯಿತ್ನುರ್ಗವಾಂ ಪ್ರಿಯಃ।
ಗ್ರಸ್ತಾರಿರ್ಗ್ರಹದೋಷಘ್ನೋ ಗ್ರಹೋಚ್ಚಾಟನತತ್ಪರಃ ॥ ೪೨॥

ಗತಾಘಃ = ಪಾಪರಹಿತರು, **ಗರ್ಜಿತಾರಾತಿಃ** = ಎದುರಾಳಿಗಳ ಮುಂದೆ ಗರ್ಜನೆ ಮಾಡುವವರು, **ಗದಯಿತ್ನುಃ** = ಕಾಮನಂತೆ ಸುಂದರರು, **ಗವಾಂ ಪ್ರಿಯಃ** = ಗೋ ಪ್ರಿಯರು, **ಗ್ರಸ್ತಾರಿಃ** = ಶತ್ರುಭಕ್ಷಕರು, **ಗ್ರಹದೋಷಘ್ನಃ** = ಗ್ರಹಚಾರ ಪರಿಹಾರಕರು, **ಗ್ರಹೋಚ್ಚಾಟನ ತತ್ಪರಃ** = ಭೂತಾದಿ ಗ್ರಹಗಳನ್ನು ಬಿಡಿಸುವವರು,

ಗೀಷ್ಪತ್ಯಾಭಶ್ಚ ಗಾಯತ್ರೀಜಾಪಕೋ ಗಾಯನಪ್ರಿಯಃ।
ಗ್ರಾಮಣೀಃ ಗ್ರಾಹಕೋ ಗ್ರಾಹೀ ಗ್ರಾವಗ್ರೀವಮತಚ್ಛಿದಃ ॥ ೪೩॥

ಗೀಷ್ಪತ್ಯಾಭಃ = ಬೃಹಸ್ಪತ್ಯಾಚಾರ್ಯರ ಕಾಂತಿಯುಳ್ಳವರು, **ಗಾಯತ್ರೀಜಾಪಕಃ** = ಬ್ರಹ್ಮಗಾಯತ್ರೀ ಜಾಪಕರು, **ಗಾಯನಪ್ರಿಯಃ** = ಸಂಗೀತಪ್ರಿಯರಾದ, **ಗ್ರಾಮಣೀಃ** = ವೈಷ್ಣವರಲ್ಲಿ ಅಗ್ರಗಣ್ಯರು, **ಗ್ರಾಹಕಃ** = ಭಕ್ತಜನಗ್ರಾಹಕರು, **ಗ್ರಾವಗ್ರೀವಮತಚ್ಛಿದಃ** = ವೀರಶೈವರಾದ ಭೈರವ ಮತ್ತು ವೀರಭದ್ರರನ್ನು ಖಂಡಿಸಿದವರು

ಗ್ರಾಮಕ್ಷೇಮಕರೋ ಗ್ರಾಮ್ಯಭಯಹಾ ಗ್ರಾಹಭೀತಿಹಾ।
ಗಾತ್ರಕ್ಷೇಮಕರೋ ಗಾಮೀ ಗಿರಿಸಾರನಿಭಾಂಗಕಃ ॥ ೪೪॥

ಗ್ರಾಮಕ್ಷೇಮಕರಃ = ಊರಿಗೆ ಉಪಕಾರಿಗಳು, **ಗ್ರಾಮ್ಯಭಯಹಾ** = ಗ್ರಾಮದ ಭಯಪರಿಹಾರಕರು, **ಗ್ರಾಹಭೀತಿಹಾ** = ಮೊಸಳೆಯ ಭಯಪರಿಹಾರಕರು, **ಗಾತ್ರ ಕ್ಷೇಮಕರಃ** = ದೇಹಕ್ಷೇಮವುಂಟುಮಾಡುವರರು, **ಗಾಮೀ** = ಜ್ಞಾನಿಗಳು, **ಗಿರಿಸಾರ ನಿಭಾಂಗಕಃ** = ಉಕ್ಕಿನಂತೆ ಗಟ್ಟಿಯಾದ ದೇಹವುಳ್ಳವರು.

ಗತಭಾವಿಜನಿರ್ಗಮ್ಯೋ ಗೀರ್ವಾಣಾವಾಸಮೂಲಭೂಃ।
ಗುಣೀ ಗುಣಪ್ರಿಯೋ ಗುಹ್ಯೋ ಗುಹಾವಾಸೋ ಗುರುಪ್ರಿಯಃ ॥ ೪೫॥

ಗತಭಾವಿಜನಿಃ = ಮುಂದೆ ಜನ್ಮವಿಲ್ಲದವರು, **ಗಮ್ಯಃ** = ಜ್ಞಾನಿಗಳು, **ಗೀರ್ವಾಣಾವಾಸ ಮೂಲಭೂಃ** = ಸ್ವರ್ಗಕ್ಕೆ ಮೂಲಭೂಮಿಯಾಗಿರುವರರು, **ಗುಣೀಃ** =

ಸದ್ಗುಣಗಳು, **ಗುಣಪ್ರಿಯಃ** = ಗುಣಪ್ರಿಯರು, **ಗುಣ್ಯಃ** = ಗುಣಜನಕರು, **ಗುಹಾವಾಸಃ** = ಹೃದಯ ಗುಹೆಯಲ್ಲಿರುವವರು, **ಗುರುಪ್ರಿಯಃ** = ಗುರುಪ್ರಿಯರು,

ಗುಡಪ್ರಿಯೋ ಗುಚ್ಛಕಂಠೋ ಗುಲ್ಮಚ್ಛೇತ್ತಾ ಗುಣಾದರಃ।
ಗುಪ್ತಗುಹ್ಯೋ ಗೂಢಕರ್ಮಾ ಗುರುರಾಜಶ್ಚ ಗೂಹಿತಃ ॥ ೪೬॥

ಗುಡಪ್ರಿಯಃ = ಬೆಲ್ಲದಲ್ಲಿ ಪ್ರೀತಿಯುಳ್ಳವರು, **ಗುಚ್ಛಕಂಠಃ** = ಪುಷ್ಪಹಾರ ಧರಿಸಿದವರು, **ಗುಲ್ಮಚ್ಛೇತ್ತಾ** = ಪ್ಲೀಹರೋಗ ಪರಿಹಾರಕರು, **ಗುಣಾದರಃ** = ಗುಣವನ್ನು ಆದರಿಸುವವರು, **ಗುಪ್ತಗುಹ್ಯಃ**= ಗೋಪ್ಯ ತತ್ವಗಳನ್ನು ಬಹಿರಂಗ ಪಡಿಸದವರು, **ಗೂಢಕರ್ಮಾ** = ಗೂಢವಾಗಿ ಭಗವತ್ಕರ್ಮ ಮಾಡುವವರು, **ಗುರುರಾಜಃ** = ಗುರುಶ್ರೇಷ್ಠರು, **ಗೂಹಿತಃ** = ವಸ್ತ್ರಾದಿಗಳಿಂದ ಮುಚ್ಚಿಕೊಂಡವರು.

ಗೇಹದಾತಾ ಗೇಯಕೀರ್ತಿರ್ಗೈರಿಕಾರಂಜಿತಾಂಬರಃ।
ಗೃಹ್ಯಕ್ಷೇಮಕರೋ ಗೃಹ್ಯೋ ಗೃಹಗೋ ಗೃಹವರ್ಧನಃ ॥ ೪೭॥

ಗೇಹದಾತಾ=ಮನೆ ಮಠವನ್ನು ನೀಡುವವರು, **ಗೇಯಕೀರ್ತಿಃ**= ಗಾನ ಮಾಡಲರ್ಹವಾದ ಕೀರ್ತಿಯುಳ್ಳ, **ಗೈರಿಕಾರಂಜಿತಾಂಬರಃ**=ಕಾವಿಯಿಂದ ಕೆಂಪಾದ ವಸ್ತ್ರಧರಿಸಿದವರು, **ಗೃಹ್ಯಕ್ಷೇಮಕರಃ** = ಮನೆಯಲ್ಲಿರುವ ಸಮಸ್ತ ವಸ್ತುಗಳ ಕ್ಷೇಮವುಂಟುಮಾಡುವವರು, **ಗೃಹ್ಯಃ** = ಭಕ್ತರನ್ನು ಸ್ವೀಕರಿಸುವವರು, **ಗೃಹಗಃ** = ಭಕ್ತರಗೃಹದಲ್ಲಿರುವವರು, **ಗೃಹವರ್ಧನಃ** = ಮನೆಯನ್ನು ವೃದ್ಧಿ ಮಾಡುವವರು.

ಗೋದಾವರೀಸ್ನಾನರತೋ ಗೋಪಬಾಲಕ ಪೂಜಕಃ।
ಗೋಷ್ಪದೀಕೃತ ಸಂಸಾರ ವಾರ್ಧಿರ್ಗೋಪುರ ರಕ್ಷಕಃ ॥ ೪೮॥

ಗೋದಾವರೀ ಸ್ನಾನರತಃ = ಗೋದಾವರೀ ಸ್ನಾನಾಸಕ್ತರು, **ಗೋಪಬಾಲಕ ಪೂಜಕಃ**= ಶ್ರೀ ಕೃಷ್ಣಪೂಜಕರು (ವ್ಯಾಸರಾಗಿದ್ದಾಗ), **ಗೋಷ್ಪದೀಕೃತ ಸಂಸಾರ ವಾರ್ಧಿಃ** = ಸಂಸಾರ ಸಮುದ್ರವನ್ನು ಗೋಹೆಜ್ಜೆಯಷ್ಟು ಮಾಡುವವರು, **ಗೋಪುರರಕ್ಷಕಃ** = ಪುರದ್ವಾರವನ್ನು ರಕ್ಷಿಸುವವರು.

ಗೋಪ್ಯಮಂತ್ರಜಪೋ ಗೋಮಾನ್ ಗೋಕರ್ಣೇ ಗೋಚರಾಖಿಲಃ।
ಗೋಗ್ರಾಸದೋ ಗೋತ್ರರತ್ನಂ ಗೋಸ್ತನೀನಿಭ ಭಾಷಣಃ ॥ ೪೯॥

ಗೋಪ್ಯಮಂತ್ರಜಪಃ = ಗೋಪ್ಯಮಂತ್ರಗಳನ್ನು ಜಪಿಸುವ, **ಗೋಮಾನ್** = ಒಳ್ಳೆಯ ಮಾತನ್ನಾಡುವ, **ಗೋಕರ್ಣೀ** = ಪ್ರಹ್ಲಾದಾವತಾರದಲ್ಲಿ ಕುದುರೆಯನ್ನುಳ್ಳವರು, **ಗೋಚರಾಖಿಲಃ** = ಸರ್ವಜ್ಞರಾದವರು, **ಗೋಗ್ರಾಸದಃ** = ಗೋವುಗಳಿಗೆ ಗ್ರಾಸನೀಡುವವರು, **ಗೋತ್ರರತ್ನಂ** = ಗೌತಮ ಗೋತ್ರಕ್ಕೆ ರತ್ನದಂತಿರುವವರು, **ಗೋಸ್ತನೀನಿಭಭಾಷಣಃ** = ದ್ರಾಕ್ಷಿಗೊಂಚಲಿನಂತೆ ಮಧುರವಾದ ಮಾತುಳ್ಳವರು,

ಗೋಪ್ತಾ ಗೌತಮಶಾಸ್ತ್ರಜ್ಞೋ ಗೌರವೀ ಗೌರವಪ್ರದಃ।
ಗಂತಾ ಗಂಜಿತಶತ್ರುಶ್ಚ ಗಂಧರ್ವೋ ಗಂಧವರ್ಧನಃ ॥ ೫೦॥

ಗೋಪ್ತಾ = ಭಕ್ತರನ್ನು ರಕ್ಷಿಸುವ, **ಗೌತಮಶಾಸ್ತ್ರಜ್ಞಃ** = ತರ್ಕಶಾಸ್ತ್ರಪಂಡಿತರಾದ, **ಗೌರವೀ** = ಗೌರವವುಳ್ಳ, **ಗೌರವಪ್ರದಃ** = ಗೌರವವನ್ನು ತಂದುಕೊಡುವವರು, **ಗಂತಾ** = ಭಕ್ತರು ಕರೆವಲ್ಲಿ ಹೋಗುವ, **ಗಂಜಿತಶತ್ರುಃ** = ಶತ್ರುನಾಶಕರು, **ಗಂಧರ್ವಃ** = ಕೋಗಿಲೆಯಂತೆ ಮಧುರ ಕಂಠವುಳ್ಳವರು, **ಗಂಧವರ್ಧನಃ** = ನೆರೆಹೊರೆಯ ಸಂಬಂಧವನ್ನು ವೃದ್ಧಿಮಾಡುವವರು, ಬಲವೃದ್ಧಿಮಾಡುವವರು,

ಗಂಧೀ ಗಂಧವತೀ ಸೂನು ಗ್ರಂಥವಿದ್ ಗಂಧವಾಹವಿತ್।
ಗಂಧರ್ವಾಭೋ ಗ್ರಂಥಿಭೇದೀ ಗ್ರಂಥಕೃದ್ ಗ್ರಂಥಪಾಠಕಃ ॥ ೫೧॥

ಗಂಧೀ = ಸುಗಂಧವುಳ್ಳ, **ಗಂಧವತೀಸೂನುಗ್ರಂಥವಿದ್** = ಯೋಜನಗಾಂಧಿಯಾದ ಸತ್ಯವತಿ ಪುತ್ರವ್ಯಾಸರ ಗ್ರಂಥಭಾವವನ್ನು ತಿಳಿದವರು, **ಗಂಧವಾಹವಿತ್** = ವಾಯುದೇವರ ಗ್ರಂಥವನ್ನು ತಿಳಿದವರು, **ಗಂಧರ್ವಾಭಃ** = ಗಂಧರ್ವರಂತೆ ಕಾಂತಿಯುಳ್ಳ, **ಗ್ರಂಥಿಭೇದೀ** = ಹೃದಯಗ್ರಂಥಿಯನ್ನು ಭೇದಿಸುವವರು, **ಗ್ರಂಥಕೃತ್** = ಪರಿಮಳಾದಿ ಗ್ರಂಥಕಾರರಾದ, **ಗ್ರಂಥಪಾಠಕಃ** = ಗ್ರಂಥದ ಅಭಿಪ್ರಾಯವನ್ನು ತಿಳಿಸುವರು,

ಗಂಡಶೈಲಪ್ರಿಯೋ ಗಂಡಮಾಲಭಿದ್ ಗಂಡಕೀರತಿಃ।
ಗಂಗಾಸ್ನಾಯೀ ಚ ಗಾಂಗೇಯ ಪ್ರದೋ ಗಾಂಡೀವಮಿತ್ರವಿತ್ ॥ ೫೨॥

ಗಂಡಶೈಲಪ್ರಿಯಃ = ಬೃಂದಾವನಕ್ಕಾಗಿ ರಾಮನು ಕುಳಿತಿದ್ದ ಹೆಬ್ಬಂಡೆಯನ್ನು ಪ್ರೀತಿಸುವವರಾದ, **ಗಂಡಮಾಲಭಿದ್** = ಗಳಗಂಡವನ್ನು ಪರಿಹರಿಸುವ, **ಗಂಡಕೀರತಿಃ** = ಸಾಲಿಗ್ರಾಮಕ್ಷೇತ್ರ ಅಟನಾಸಕ್ತರಾದ, **ಗಂಗಾಸ್ನಾಯೀ** = ಗಂಗಾಸ್ನಾನ ಮಾಡು

ವವರು, **ಗಾಂಗೇಯಪ್ರದಃ** = ಸುವರ್ಣದಾತರು, **ಗಾಂಡೀವಮಿತ್ರವಿತ್** = ಶ್ರೀ ಕೃಷ್ಣ ನನ್ನು ತಿಳಿದವರು,

ಘ

ಘಟನಾನನುರೂಪಸ್ಯಾಪ್ಯರ್ಥಸ್ಯ ಘಟಕೋಘನಃ।
ಘರ್ಮಹರ್ತಾ ಘನಪ್ರೀತಿರ್ಘನಾಘನ ನಿಭಾಂಗಭಾಃ ॥ ೫೩॥

ಘಟನಾನನುರೂಪಸ್ಯ = ಹೊಂದಿಸಲಾಗದ, **ಅರ್ಥಸ್ಯ** = ಅರ್ಥದ, **ಘಟಕಃ** = ಹೊಂದಿಸುವವರು, **ಘನಃ** = ಜ್ಞಾನಘನರು, **ಘರ್ಮಹರ್ತಾ** = ತಾಪತ್ರಯ ಪರಿಹಾರ ಕರು, **ಘನಪ್ರೀತಿಃ** = ಭಗವಂತನ ಪ್ರೀತಿಯುಳ್ಳವರು, **ಘನಾಘನ ನಿಭಾಂಗಭಾಃ** = ನೀಲಮೇಘಶ್ಯಾಮರು,

ಘನಸಾರದ್ರವಾಸಿಕ್ತಕಾಯೋ ಘರ್ಘರಿಕಾಂಕನಃ।
ಘ್ರಾಣತರ್ಪಣಚಾರ್ವಂಗೋ ಘೃಣಾವಾನ್ ಘುಸೃಣಪ್ರಿಯಃ ॥ ೫೪॥

ಘನಸಾರದ್ರವಾಸಕ್ತಕಾಯಃ = ಪಚ್ಚಕರ್ಪೂರದಿಂದ ಬಳಿದ ದೇಹವುಳ್ಳ, **ಘರ್ಘರಿಕಾಂಕನಃ** = ವೀಣಾಚಿಹ್ನೆಯುಳ್ಳವರು, **ಘ್ರಾಣತರ್ಪಣಚಾರ್ವಂಗಃ** = ಘ್ರಾಣೇಂದ್ರಿಯವನ್ನು ತೃಪ್ತಿಪಡಿಸುವ ಸುಗಂಧದ ಮೈಯುಳ್ಳವರು, **ಘೃಣಾವಾನ್** = ದಯಾಸಾಗರರು, **ಘುಸೃಣಪ್ರಿಯಃ** = ಕುಂಕುಮಕೇಸರೀ ಪ್ರಿಯರು,

ಘೃತಪ್ರಿಯೋ ಘಾತಿತಾರಿಘೋಷಯಿತ್ನುಶ್ಚ ಘೋಷದಃ।
ಘೋಂಟಾಫಲಾಸ್ಥಿದ್ವಯಸಜಪಮಾಲಾಕರಾಂಬುಜಃ ॥ ೫೫॥

ಘೃತಪ್ರಿಯಃ = ಘೃತಪ್ರಿಯರಾದ, **ಘಾತಿತಾರಿಃ** = ಶತ್ರುಸಂಹಾರಕರಾದ, **ಘೋಷಯಿತ್ನುಃ** = ಗರ್ಜನೆಯನ್ನು ಮಾಡುವ, **ಘೋಷದಃ** = ವೇದಘೋಷ ಸಾಮರ್ಥ್ಯ ನೀಡುವ, **ಘೋಂಟಾಫಲಾಸ್ಥಿದ್ವಯಸ**= ಅಡಿಕೆಗಾತ್ರದಷ್ಟು ಪರಿಮಾಣದ, **ಜಪಮಾಲಾ ಕರಾಂಬುಜಃ** = ಜಪಮಣಿಯನ್ನು ಧರಿಸಿರುವ,

ಘೋರಾಮಯಪರೀಹರ್ತಾ ಘಂಟಾಪಥಗತಿಪ್ರಿಯಃ।
ಘಂಟಾನಾದಪ್ರಿಯಶ್ಚಾಥ ಜಣದ್‌ವಾದ್ಯವಿನೋದನಃ ॥ ೫೬॥

ಘೋರಾಮಯಪರೀಹರ್ತಾ = ಭಯಂಕರರೋಗ ಪರಿಹಾರಕರಾದ, **ಘಂಟಾಪಥಗತಿಪ್ರಿಯಃ**= ರಾಜಮಾರ್ಗದಲ್ಲಿ ನಡೆಯಲು ಬಯಸುವ, **ಘಂಟಾನಾದಪ್ರಿಯಃ**=

ಘಂಟಾನಾದಪ್ರಿಯರಾದ, ಜಣದ್ ವಾದ್ಯವಿನೋದಿನಃ = ವೀಣಾವಾದ್ಯದಲ್ಲಿ ಆಸಕ್ತರಾಗಿರುವ,

ಚ

ಚಕ್ರಶಂಖಾಂಕಿತ ಭುಜಶ್ಚಮೂಮದ ವಿಭಂಜನಃ।
ಚರಾಚರಕ್ಷೇಮಕರ್ತಾ ಚತುರಶ್ಚರಣಾರುಣಃ ॥ ೫೭॥

ಚಕ್ರಶಂಖಾಂಕಿತಭುಜಃ = ಭುಜಗಳಲ್ಲಿ ಚಕ್ರಶಂಖಗಳನ್ನು ಧರಿಸಿದ, **ಚಮೂಮದವಿಭಂಜನಃ** = ಸೈನ್ಯದರ್ಪವನ್ನು ನಾಶಮಾಡುವ, **ಚರಾಚರ ಕ್ಷೇಮಕರ್ತಾ** = ಸ್ಥಾವರ-ಜಂಗಮಗಳ ಕ್ಷೇಮವುಂಟುಮಾಡುವ, **ಚತುರಃ** = ಚಾತುರ್ಯವುಳ್ಳ, **ಚರಣಾರುಣಃ** = ಅರುಣಬಣ್ಣದ ಪಾತದಲವುಳ್ಳ,

ಚತುಷ್ಪದೀಸ್ತುತ್ಯಮಾನಶ್ಚತುರ್ಮುಖ ಪಿತೃಪ್ರಿಯಃ।
ಚತುಸ್ಸಾಗರ ವಿಖ್ಯಾತಃ ಚರ್ಮಾಸನ ಸಮಾಧಿಮಾನ್ ॥ ೫೮॥

ಚತುಷ್ಪದೀಸ್ತುತ್ಯಮಾನಃ = ಭಕ್ತರಿಂದ ಕೊಂಡಾಡಲ್ಪಟ್ಟ ಶ್ಲೋಕಗಳಿಂದ ಸ್ತುತ್ಯರಾದ, **ಚತುರ್ಮುಖಪಿತೃಪ್ರಿಯಃ** = ಬ್ರಹ್ಮನ ತಂದೆಯಾದ ಶ್ರೀಹರಿಗೆ ಪ್ರಿಯರಾದ, **ಚತುಃಸಾಗರ ವಿಖ್ಯಾತಃ** = ನಾಲ್ಕು ಸಮುದ್ರದವರೆಗೆ ಖ್ಯಾತಮಹಿಮರಾದ, **ಚರ್ಮಾಸನ ಸಮಾಧಿಮಾನ್** = ಧ್ಯಾನಕ್ಕಾಗಿ ಚರ್ಮಾಸನದಲ್ಲಿ ಕುಳಿತಿರುವ,

ಚತ್ವರಸ್ಥಃ ಚಕೋರಾಕ್ಷಃ ಚಂಚಲತ್ವನಿವಾರಕಃ।
ಚತುರ್ವೇದ ವಿಶೇಷಜ್ಞಃ ಚಲಾಚಲಹೃದಪ್ರಿಯಃ ॥ ೫೯॥

ಚತ್ವರಸ್ಥಃ = ವೇದಿಕೆಯ ಮೇಲೆ ಕುಳಿತಿರುವ, **ಚಕೋರಾಕ್ಷಃ** = ಚಕೋರ ಪಕ್ಷಿಯಂತೆ ನೇತ್ರಗಳುಳ್ಳ, **ಚಂಚಲತ್ವ ನಿವಾರಕಃ** = ಚಾಪಲ್ಯವನ್ನು ಪರಿಹರಿಸುವ, **ಚತುರ್ವೇದ ವಿಶೇಷಜ್ಞಃ** = ನಾಲ್ಕು ವೇದಗಳ ವಿಶೇಷವನ್ನು ಬಲ್ಲವರಾದ, **ಚಲಾಚಲ ಹೃದಪ್ರಿಯಃ** = ಚಂಚಲ ಮನಸ್ಸಿನವರನ್ನು ಇಷ್ಟಪಡದ,

ಚತುರಂಗಬಲಧ್ವಂಸೀ ಚತುರೋಪಾಯ ಶಿಕ್ಷಿತಃ।
ಚಾರುರೂಪಃ ಚಾರಸೇವ್ಯಃ ಚಾಮರದ್ವಯ ಶೋಭಿತಃ ॥ ೬೦॥

ಚತುರಂಗ ಬಲಧ್ವಂಸೀ = ಚತುರಂಗಬಲವನ್ನು ಧ್ವಂಸಗೈದ, **ಚತುರೋಪಾಯ ಶಿಕ್ಷಿತಃ** = ಸಾಮದಾನಾದಿ ಚತುರೋಪಾಯವೇತ್ತರಾದ, **ಚಾರುರೂಪಾಯ** = ಸುಂದರ

ರೂಪವುಳ್ಳ, **ಚಾರಸೇವ್ಯಾಯ** = ಗೂಢಚಾರರಿಂದ ಸೇವಿಸಲ್ಪಡುವ, **ಚಾಮರದ್ವಯ ಶೋಭಿತಾಯ** = ಪೂಜಾಕಾಲದಲ್ಲಿ ಚಾಮರದ್ವಯವನ್ನು ಹಿಡಿದಿರುವ,

ಚಿತ್ತಪ್ರಸಾದ ಜನನಃ ಚಿತ್ರಭಾನುಪ್ರಭೋಜ್ವಲಃ।
ಚಿರಜೀವೀ ಚಿತ್ತಹರಃ ಚಿತ್ರಭಾಷೀ ಚಿತಿಪ್ರದಃ ॥ ೬೧॥

ಚಿತ್ತಪ್ರಸಾದ ಜನನಃ = ಮನಃಪ್ರಸನ್ನತೆಯನ್ನು ಕೊಡುವ, **ಚಿತ್ರಭಾನುಪ್ರಭೋಜ್ವಲಃ** = ಅಗ್ನಿಯಂತೆ ಉಜ್ವಲಪ್ರಕಾಶರಾದ, **ಚಿರಜೀವೀ** = ಬೃಂದಾವನದಲ್ಲಿ ಬಹಳ ಕಾಲ ಇರುವ, **ಚಿತ್ತಹರಃ** = ಮನೋಹರರಾದ, **ಚಿತ್ರಭಾಷೀ** = ವಿಚಿತ್ರವಾದ ಭಾಷೆಗಳನ್ನು ಬಲ್ಲ (ಥಾಮಸ್‌ಮನ್ರೋ), **ಚಿತಿಪ್ರದಃ** = ಸಮ್ಯಕ್‌ಜ್ಞಾನಪ್ರದರಾದ

ಚಿತ್ರಗುಪ್ತಭಯತ್ರಾತಾ ಚಿರಂಟೀಜನಸೇವಿತಃ।
ಚಿಂತಾಮಣಿಃ ಸ್ವಭಕ್ತಾನಾಂ ಚಿಂತಿತಾರ್ಥಪ್ರದಾಯಕಃ ॥ ೬೨॥

ಚಿತ್ರಗುಪ್ತಭಯತ್ರಾತಾ = ಯಮಭಯವನ್ನು ಪರಿಹರಿಸುವ, **ಚಿರಂಟೀಜನಸೇವಿತಃ** = ಭಕ್ತಯುವತಿಯರಿಂದ ಸೇವಿಲಸ್ಪಡುವ, **ಚಿಂತಾಮಣಿಃ ಸ್ವಭಕ್ತಾನಾಂ** = ಸ್ವಭಕ್ತರಿಗೆ ಚಿಂತಿತಾರ್ಥಮಣಿಪ್ರಾಯರಾದ, **ಚಿಂತಿತಾರ್ಥಪ್ರದಾಯಕಃ** = ಮನೋಭೀಷ್ಟ ದಾತೃಗಳಾದ,

ಚಿಂತಾಹರ್ತಾ ಚಿತ್ತವಾಸೀ ಚೀರಕೌಪೀನ ಧಾರಣಃ।
ಚಿಪಿಟತ್ಯಾಗಕೃತ್ ಚುಲ್ಲಸ್ವಕ್ಷಿದಃ ಚುಲ್ಲವರ್ಧನಃ ॥ ೬೩॥

ಚಿಂತಾಹರ್ತಾ=ಚಿಂತೆಯ ಪರಿಹಾರಕರಾದ, **ಚಿತ್ತವಾಸೀ**=ಭಕ್ತರ ಚಿತ್ತದಲ್ಲಿ ವಾಸಿಸುವ, **ಚೀರಕೌಪೀನಧಾರಣಃ** = ನಾರುಮಡಿಯ ಕೌಪೀನ ಧರಿಸಿದವರು, **ಚಿಪಟತ್ಯಾಗಕೃತ್** = ವಕ್ರತ್ವ ಪರಿಹರಿಸುವ, **ಚುಲ್ಲಸ್ವಕ್ಷಿದಃ** = ನೀರು ಸುರಿಸುವ ಕಣ್ಣಿನವರಿಗೆ ಸುನೇತ್ರದಾನ ಮಾಡುವ, **ಚುಲ್ಲವರ್ಧನಃ** = ರೋಗಗ್ರಸ್ತ ಕಣ್ಣಿನ ರೋಗ ಪರಿಹಾರಕರಾದ,

ಚೂಡಾಮಣಿಃ ವೈಷ್ಣವಾನಾಂ ಚೂರ್ಣೀಕೃತ ಮಹಾಭಯಃ।
ಚೂಡಾಲಾ ಯಶಸಾ ಚೂತಫಲಾಸ್ವಾದ ವಿನೋದನಃ ॥ ೬೪॥

ವೈಷ್ಣವಾನಾಂ ಚೂಡಾಮಣಿಃ = ವೈಷ್ಣವಾಗ್ರಣಿಗಳಾದ, **ಚೂರ್ಣೀಕೃತ ಮಹಾಭಯಃ** = ಮಹಾಭಯವನ್ನು ಪರಿಹರಿಸುವ, **ಯಶಸಾ ಚೂಡಾಲಾ** = ಭದ್ರಮುಸ್ತೆ

ಯಂತೆ ಕೀರ್ತಿಹೊಂದಿರುವ, **ಚೂತಫಲಾಸ್ವಾದವಿನೋದನಃ** = ಮಾವಿನಹಣ್ಣಿನ ಸವಿಯಿಂದ ಸಂತೋಷಿಸುವವರು,

ಚೂಡಾಕರ್ಮಾದಿ ಕರ್ತೃಣಾಂ ಸನ್ನಿಧೌ ಸರ್ವದೋಷಹಾ।
ಚೇಷ್ಟಕಃ ಚೇಷ್ಟಕಧ್ವಂಸೀ ಚೈತ್ರೋತ್ಸವಮುದಂಭರಃ ॥ ೬೫॥

ಸನ್ನಿಧೌ ಚೂಡಾದಿಕರ್ತೃಣಾಂ = ತಮ್ಮ ಸನ್ನಿಧಾನದಲ್ಲಿ ಚೂಡಾಕರ್ಮಾದಿಗಳನ್ನು ಮಾಡುವವರ, **ಸರ್ವದೋಷಹಾ** = ಸಮಸ್ತ ಗ್ರಹದೋಷಗಳನ್ನು ಪರಿಹರಿಸುವ, **ಚೇಷ್ಟಕಃ** = ಸತ್ಕರ್ಮ ಮಾಡುವ, **ಚೇಷ್ಟಕಧ್ವಂಸಿ** = ಮಾಟಾದಿ ಕೃತ್ಯೆಯನ್ನು ಕಳೆಯುವ, **ಚೈತ್ರೋತ್ಸವಮುದಂಭರಃ** = ಚೈತ್ರೋತ್ಸವದಿಂದ ತೋಷಪಡಿಸುವ,

ಚೋದ್ಯಹರ್ತಾ ಚೌರನಾಶೀ ಚಿತಿಮಾಂಶ್ಚಿತ್ತರಂಜನಃ।
ಚಿಂತ್ಯಃ ಚೇತನದಾತಾ ಮೇ ಚಿಂತಾಂ ಹರತು ಸಂತತಮ್ ॥ ೬೬॥

ಚೋದ್ಯಹರ್ತಾ = ಪ್ರಶ್ನೆಗಳನ್ನು ಉತ್ತರದಿಂದ ಪರಿಹರಿಸುವ, **ಚೌರನಾಶೀ** = ದಸ್ಯನಾಶಕರಾದ, **ಚಿತಿಮಾನ್** = ಉತ್ತಮಜ್ಞಾನವುಳ್ಳ, **ಚಿತ್ತರಂಜನಃ** = ಮನೋರಂಜಕರಾದ, **ಚೇತನದಾತಾ** = ಚೈತನ್ಯದಾಯಕರಾದ, ರಾಘವೇಂದ್ರರು, **ಮೇ ಚಿಂತಾ ಸಂತತಂ ಹರತು** = ನನ್ನ ಚಿಂತೆಗಳನ್ನು ನಿರಂತರ ಹೋಗಲಾಡಿಸಲಿ.

ಚಂದ್ರಹಾಸಃ ಚಂದ್ರಕಾಂತಃ ಚಂದ್ರಃ ಚಂಡೀಶ ಪೂಜಕಃ।
ಚಕ್ಷುಃ ಪ್ರೀತಿಕರಃ ಚಂದ್ರಚಂದನದ್ರವ ಸೇವನಃ ॥ ೬೭॥

ಚಂದ್ರಹಾಸಃ = ಚಂದ್ರನಂತೆ ಆಹ್ಲಾದಕ ನಗೆಯುಳ್ಳ, **ಚಂದ್ರಕಾಂತಃ** = ಚಂದ್ರನಂತೆ ಮನೋಹರರಾದ, **ಚಂದ್ರಃ** = ಚಂದ್ರನಂತೆ ಆಹ್ಲಾದಕರಾದ, **ಚಂಡೀಶಪೂಜಕಃ** = ಗೌರೀಪತಿಯ ಪೂಜಕರಾದ, **ಚಕ್ಷುಃಪ್ರೀತಿಕರಃ** = ನಯನಾಹ್ಲಾದಜನಕರಾದ, **ಚಂದ್ರಚಂದನದ್ರವ ಸೇವಕಃ** = ಕರ್ಪೂರ ಮಿಶ್ರಿತ ಚಂದನವನ್ನು ಸೇವಿಸುವವರಾದ,

ಛ

ಛದ್ಮಹೀನಃ ಛತ್ರಭೋಗೀ, ಛಲಹಾ ಛದಲೋಚನಃ।
ಛನ್ನಜ್ಞಾನಃ ಛನ್ನಕರ್ಮಾ ಛವಿಮಾನ್ ಛಾತ್ರ ಸೇವಿತಃ ॥ ೬೮॥

ಛದ್ಮಹೀನಃ = ಕಪಟರಹಿತರಾದ, **ಛತ್ರಭೋಗೀ** = ಶ್ವೇತಚ್ಛತ್ರವನ್ನು ಭೋಗಿಸುವವರಾದ, **ಛಲಹಾ** = ಕಾಪಟ್ಯಪರಿಹಾರಕರಾದ, **ಛದಲೋಚನಃ** = ಹೊಂಗೆಯ

ಎಲೆಯಂತೆ ಕಪ್ಪುನೇತ್ರವುಳ್ಳ, **ಛನ್ನಜ್ಞಾನಃ** = ಗುಪ್ತಜ್ಞಾನವುಳ್ಳ, **ಛವಿಮಾನ್** = ಕಾಂತಿಯುಳ್ಳ, **ಛಾತ್ರಸೇವಿತಃ** = ಶಿಷ್ಯರಿಂದ ಸೇವಿಸಲ್ಪಡುವ,

ಛಾತ್ರಪ್ರಿಯಶ್ಛಾತ್ರ ರಕ್ಷೀ ಛಾಗಯಾಗಾದಿ ಶಾಸ್ತ್ರವಿತ್।
ಛತ್ರ ಚಾಮರದಾತಾ ಚ ಛತ್ರಚಾಮರ ಶೋಭಿತಃ ॥ ೬೯॥

ಛಾತ್ರಪ್ರಿಯಃ = ಶಿಷ್ಯರಲ್ಲಿ ಪ್ರೀತಿಯುಳ್ಳ, **ಛಾತ್ರರಕ್ಷೀ** = ಶಿಷ್ಯರಕ್ಷಕರಾದ, **ಛಾಗಯಾಗಾದಿ ಶಾಸ್ತ್ರವಿತ್** = ಛಾಗಯಾಗವೇ ಮೊದಲಾದ ಯಾಗಗಳನ್ನು ಬಲ್ಲವರಾದ, **ಛತ್ರಚಾಮರದಾತಾ** = ಛತ್ರಚಾಮರಾದಿ ವೈಭವವನ್ನುಂಟು ಮಾಡುವವರು, **ಛತ್ರಚಾಮರ ಶೋಭಿತಃ** = ಛತ್ರಚಾಮರ ಶೋಭಿತರಾದ,

ಛಿದ್ರಹಾರೀ ಛಿನ್ನರೋಗಶ್ಛಂದಃ ಶಾಸ್ತ್ರ ವಿಶಾರದಃ।
ಛೇದಕೋ ಭವದುಃಖಾನಾಂ ಭವತಾತ್ ಛಿನ್ನಸಾಧ್ವಸಃ ॥ ೭೦॥

ಛಿದ್ರಹಾರೀ = ಸಾಂಸಾರಿಕ ತೊಡಕನ್ನು ಪರಿಹರಿಸುವ, **ಛಿನ್ನರೋಗಃ** = ರೋಗಪರಿಹಾರಕರಾದ, **ಛಂದಃಶಾಸ್ತ್ರವಿಶಾರದಃ** = ಛಂದಶ್ಶಾಸ್ತ್ರದಲ್ಲಿ ಪಂಡಿತರಾದ, **ಭವದುಃಖಾನಾಂ ಛೇದಕಃ** = ಸಾಂಸಾರಿಕ ದುಃಖಛೇದಕರಾದ, **ಛಿನ್ನಸಾಧ್ವಸಃ** = ಭಯಪರಿಹಾರಕರಾಗಿ, **ಭವತಾತ್** = ಆಗಲಿ,

ಜ

ಜರಾಹರ್ತಾ ಜಗತ್ಪೂಜ್ಯೋ ಜಯಂತೀವ್ರತ ತತ್ಪರಃ।
ಜಯದೋ ಜಯಕರ್ತಾ ಚ ಜಗತ್ ಕ್ಷೇಮಕರೋ ಜಯೀ ॥ ೭೧॥

ಜರಾಹರ್ತಾ = ವೃದ್ಧಾಪ್ಯ ಪರಿಹಾರಕರಾದ, **ಜಗತ್ಪೂಜ್ಯೋ** = ವಿಶ್ವವಂದ್ಯರಾದ, **ಜಯಂತೀವ್ರತತತ್ಪರಃ** = ಶ್ರೀಕೃಷ್ಣಜಯಂತೀ ವ್ರತಾಸಕ್ತರಾದ, **ಜಯದಃ** = ಜಯವನ್ನೀಯುವ, **ಜಯಕರ್ತಾ** = ಜಯವನ್ನುಂಟುಮಾಡುವ, **ಜಗತ್ ಕ್ಷೇಮಕರಃ** = ಜಗತ್ತಿಗೆ ಕುಶಲವುಂಟುಮಾಡುವ, **ಜಯೀ** = ಜಯಶಾಲಿಗಳಾದ,

ಜರಾಹೀನೋ ಜನೈಃ ಸೇವ್ಯೋ ಜನಾನಂದಕರೋ ಜವೀ।
ಜನಪ್ರಿಯೋ ಜಘನ್ಯಘ್ನೋ ಜಪಾಸಕ್ತೋ ಜಗದ್ಗುರುಃ ॥ ೭೨॥

ಜರಾಹೀನಃ = ಮುಪ್ಪಿಲ್ಲದಿರುವ, **ಜನೈಃ ಸೇವ್ಯಃ** = ಸರ್ವಜನ ಸೇವ್ಯರಾದ, **ಜನಾನಂದಕರಃ** = ಜನರಿಗೆ ಆನಂದವುಂಟುಮಾಡುವ, **ಜವೀ** = ವೇಗವುಳ್ಳ, **ಜನ**

ಪ್ರಿಯಃ = ಪ್ರಸಿದ್ಧರಾದ, **ಜಘನ್ಯಘ್ನಃ** = ಕುತ್ಸಿತಕರ್ಮಗಳನ್ನು ಪರಿಹರಿಸುವ, **ಜಪಾಸಕ್ತಃ** = ಮಂತ್ರಜಪಾಸಕ್ತರಾದ, **ಜಗದ್ಗುರುಃ** = ಜಗದ್ಗುರುಗಳಾದ,

ಜರಾಯುಬಂಧ ಸಂಹರ್ತಾ ಜಲಗುಲ್ಮನಿವಾರಣಃ।
ಜಾಡ್ಯಹಾ ಜಾನಕೀಶಾರ್ಚೀ ಜಾಹ್ನವೀ ಜಲಪಾವನಃ ॥ ೭೩॥

ಜರಾಯುಬಂಧಸಂಹರ್ತಾ = ಗರ್ಭಕೋಶದೋಷಪರಿಹಾರಕರಾದ, **ಜಲಗುಲ್ಮನಿವಾರಣಃ** = ಜಲರೋಗ, ಗುಲ್ಮರೋಗ ನಿವಾರಕರಾದ, **ಜಾಡ್ಯಹಾ** = ಜಾಡ್ಯ ಪರಿಹಾರಕರಾದ, **ಜಾನಕೀಶಾರ್ಚೀ** = ಮೂಲರಾಮಾರಾಧಕರಾದ, **ಜಾಹ್ನವೀ ಜಲಪಾವನಃ** = ಗಂಗೆಯಂತೆ ಪಾವಿತ್ರ್ಯಜನಕರಾದ,

ಜಾತಮಾತ್ರಶಿಶುಕ್ಷೇಮೀ ಜ್ಯಾಯಾನ್ ಜಾಲ್ಮತ್ವವರ್ಜಿತಃ।
ಜಿಷ್ಣುರ್ಜಿನಮತಧ್ವಂಸೀ ಜಿಗೀಷುರ್ಜಿಹ್ಮವರ್ಜಿತಃ ॥ ೭೪॥

ಜಾತಮಾತ್ರಶಿಶುಕ್ಷೇಮೀ = ಹುಟ್ಟಿದ ಶಿಶುವಿನ ಕ್ಷೇಮಂಕರರು, **ಜ್ಯಾಯಾನ್** = ಶ್ರೇಷ್ಠರಾದ, **ಜಾಲ್ಮತ್ವವರ್ಜಿತಃ** = ಕ್ರೂರತ್ವವರ್ಜಿತರು, **ಜಿಷ್ಣುಃ** = ಜಯಶೀಲರಾದ, **ಜಿನಮತಧ್ವಂಸೀ** = ಜೈನಮತಖಂಡಿಸಿದ, **ಜಿಗೀಷುಃ** = ಜಯೇಚ್ಛೆಯುಳ್ಳ, **ಜಿಹ್ಮವರ್ಜಿತಃ** = ಕಪಟರಹಿತರಾದ,

ಜಗದುದ್ಧೃತಯೋ ಜಾತೋ ಜಿತಕ್ರೋಧೋ ಜಿತೇಂದ್ರಿಯಃ।
ಜಿತಾರಿವರ್ಗೋ ಜಿತದುರ್ವಾದೀ ಜಿತಮನೋಭವಃ ॥ ೭೫॥

ಜಗದುದ್ಧೃತಯೇ ಜಾತಃ = ಜಗದೋದ್ಧಾರಕ್ಕಾಗಿಯೇ ಅವತರಿಸಿದ, **ಜಿತಕ್ರೋಧಃ** = ಕೋಪವನ್ನು ಗೆದ್ದಿರುವ, **ಜಿತೇಂದ್ರಿಯಃ** = ಇಂದ್ರಿಯನಿಗ್ರಹಿಗಳಾದ, **ಜಿತಾರಿವರ್ಗಃ** = ಕಾಮಕ್ರೋಧಾದಿ ಅರಿಗಳನ್ನು ಗೆದ್ದಿರುವ, **ಜಿತದುರ್ವಾದೀ** = ದುರ್ವಾದಿಗಳನ್ನು ಗೆದ್ದಿರುವ, **ಜಿತಮನೋಭವಃ** = ಮನ್ಮಥನನ್ನು ಗೆದ್ದಿರುವ,

ಜೀವಾತುರ್ಜೀವಿಕಾ ಜೀವದಾತಾ ಜೀಮೂತವತ್ ಸ್ಥಿರಃ।
ಜೀವಿತೇಶಭಯತ್ರಾತಾ ಜೀರ್ಣಜ್ವರವಿನಾಶನಃ ॥ ೭೬॥

ಜೀವಾತುಃ = ಜೀವನೌಷಧರಾದ, **ಜೀವಿಕಾ** = ಜೀವನದಾತರು, **ಜೀವದಾತಾ** = ಪ್ರಾಣದಾತರು, **ಜೀಮೂತವತ್** = ಪರ್ವದದಂತೆ, **ಸ್ಥಿರಃ** = ಅಚಲರಾದವರು,

ಜೀವಿತೇಶ ಭಯತ್ರಾತಾ = ಯಮನ ಭಯಪರಿಹರಿಸುವ, ಜೀರ್ಣಜ್ವರವಿನಾಶನಃ = ಬಹುಕಾಲದಿಂದ ಪೀಡಿಸುತ್ತಿರುವ ಜ್ವರ ಪರಿಹಾರಕರು,

ಜುಷ್ಟಶ್ರೀನಾಥಪಾದಾಬ್ಜೋ ಜೂರ್ತಿಬಾಧಾವಿನಾಶನಃ।
ಜೇತಾ ಜ್ಯೇಷ್ಠೋ ಜ್ಯೇಷ್ಠವೃತ್ತಿಃ ಜೈವಾತ್ರಕಸಮಃ ಸತಾಮ್ ॥ ೭೭॥

ಜುಷ್ಟಶ್ರೀನಾಥಪಾದಾಬ್ಜಃ = ಶ್ರೀರಾಮಪಾದಾರಾಧಕರು, ಜೂರ್ತಿಬಾಧಾ ವಿನಾಶನಃ = ಜ್ವರಬಾಧೆಯನ್ನು ಪರಿಹರಿಸುವವರು, ಜೇತಾ = ಜಯಶಾಲಿಗಳು, ಜ್ಯೇಷ್ಠಃ = ಹಿರಿಯರು, ಜ್ಯೇಷ್ಠವೃತ್ತಿಃ = ಜ್ಯೇಷ್ಠರಂತೆ ವ್ಯವಹಾರವುಳ್ಳವರು, ಸತಾಂ ಜೈವಾತೃಕಸಮಃ = ಸಜ್ಜನರಿಗೆ ಚಂದ್ರನಂತಿರುವವರು,

ಝ

ಜ್ಯೋತ್ಸ್ನಾನಿಭಯಶಾ ಜಂಭಹಂತಾ ಜಂಬೂಫಲಪ್ರಿಯಃ।
ಝಲ್ಲರೀವಾದನಪ್ರೀತಿಃ ಝಷಕೇತೋರುಪೇಕ್ಷಕಃ ॥ ೭೮॥

ಜ್ಯೋತ್ಸ್ನಾನಿಭಯಶಾಃ = ಬೆಳದಿಂಗಳಂತೆ ಸ್ವಚ್ಛಕೀರ್ತಿಯುಳ್ಳವರು, ಜಂಭ ಹಂತಾ = ದುಷ್ಟಶಕ್ತಿ ಹಂತಕರು, ಜಂಬೂಫಲಪ್ರಿಯಃ = ಜಂಬೂಫಲದಲ್ಲಿ ಪ್ರಿಯರು, ಝಲ್ಲರೀವಾದನ ಪ್ರೀತಿಃ = ತಾಳವಾದ್ಯಪ್ರಿಯರಾದ, ಝಷಕೇತೋಃ ಉಪೇಕ್ಷಕಃ = ಮನ್ಮಥನನ್ನು ತಿರಸ್ಕರಿಸಿದವರು.

ಟ

ಝಲಾಪ್ರಿಯೋ ಝೂಣಿಹಂತಾ ಝುಂಝೂವಾತ ಭಯಾಪಹಾ।
ಜ್ಞಾನವಾನ್ ಜ್ಞಾನದಾತಾ ಚ ಜ್ಞಾನಾನಂದ ಪ್ರಕಾಶವಾನ್।
ಟಟ್ಟರೀರಹಿತಃ ಟೀಕಾತಾತ್ಪರ್ಯಾರ್ಥ ಪ್ರಬೋಧಕಃ ॥ ೭೯॥

ಝಲಾಪ್ರಿಯಃ = ಬೆಳಕಿನಪ್ರಿಯರು, ಝೂಣಿಹಂತಾ = ಅಪಶಕುನ ಪರಿಹಾರ ಕರು, ಝುಂಝೂವಾತಭಯಾಪಹಾ = ಬಿರುಗಾಳಿಯ ಭಯವನ್ನು ಪರಿಹರಿಸುವ ವರು, ಜ್ಞಾನವಾನ್ = ಸಮೀಚೀನ ಜ್ಞಾನವಂತರು, ಜ್ಞಾನದಾತಾ = ಸುಬುದ್ಧಿದಾತರು, ಜ್ಞಾನಾನಂದಪ್ರಕಾಶವಾನ್ = ಜ್ಞಾನ ಹಾಗೂ ಆನಂದವನ್ನು ಪ್ರಕಾಶಿಸುವಂತೆ ಮಾಡು ವವರು, ಟಟ್ಟರೀರಹಿತಃ = ಸುಳ್ಳು ಇಲ್ಲದವರು, ಟೀಕಾತಾತ್ಪರ್ಯಾರ್ಥ ಪ್ರಬೋಧಕಃ = ಟೀಕೆಗಳ ತಾತ್ಪರ್ಯವನ್ನು ತಿಳಿಸುವವರು,

ಠ

ಟಂಕಾರಕರಚಾರಿತ್ರಃ ಟಂಕಾಭೋ ದುರಿತಾಶ್ಮನಃ।
ಠಕ್‌ಪ್ರತ್ಯಯ ವಿಚಾರಜ್ಞಃ ಟೀಕೃತಾನ್ಯಬುಧೋಕ್ತಿಕಃ ॥ ೮೦॥

ಟಂಕಾರಕರಚಾರಿತ್ರಃ = ಆಶ್ಚರ್ಯಕರ ಚರಿತ್ರೆಯುಳ್ಳ, ದುರಿತಾಶ್ಮನಃ ಟಂಕಾಭಃ = ಪಾಪಗಳೆಂಬ ಕಲ್ಲುಗಳಿಗೆ ಚೇಣದಂತಿರುವ, ಠಕ್‌ಪ್ರತ್ಯಯವಿಚಾರಜ್ಞಃ = ಠಕ್ ಪ್ರತ್ಯಯವೇ ಮೊದಲಾದ ವ್ಯಾಕರಣಪ್ರಕ್ರಿಯೆ ತಿಳಿದವರು, ಟೀಕೃತಾನ್ಯಬುಧೋಕ್ತಿಕಃ = ಬೇರೆ ಮತದ ಪಂಡಿತರ ಮಾತುಗಳನ್ನು ನಿರಾಕರಿಸಿದವರು,

ಡ

ಡಮರುಧ್ವನಿಕೃನ್ಮಿತ್ರಂ ಡಾಕಿನೀಭಯಭಂಜನಃ।
ಡಿಂಭಸೌಖ್ಯಪ್ರದೋ ಡೋಲಾ ವಿಹಾರೋತ್ಸವ ಲೋಲುಪಃ ॥ ೮೧॥

ಡಮರುಧ್ವನಿಕೃನ್‌ಮಿತ್ರಂ = ಶಿವನಮಿತ್ರರು, ಡಾಕಿನೀಭಯಭಂಜನಃ = ಡಾಕಿನೀ ಭಯಭಂಜಕರು, **ಡಿಂಭಸೌಖ್ಯಪ್ರದಃ** = ಮಕ್ಕಳಿಗೆ ಸುಖಪ್ರದರು, **ಡೋಲಾ ವಿಹಾರೋತ್ಸವಲೋಲುಪಃ** = ಡೋಲೋತ್ಸವಪ್ರಿಯರು,

ಢ

ಢಕ್ಕಾವಾದ್ಯಪ್ರಿಯೋ ಢೌಕಮಾನೋ ಣತ್ವಾರ್ಥಕೋವಿದಃ।
ತಪಸ್ವೀ ತಪ್ತಮುದ್ರಾಂಕಃ ತಪ್ತಮುದ್ರಾಂಕನಪ್ರದಃ ॥ ೮೨॥

ಢಕ್ಕಾವಾದ್ಯಪ್ರಿಯಃ = ಡೋಲುವಾದ್ಯಪ್ರಿಯರು, ಢೌಕಮಾನಃ = ಜ್ಞಾನ ದಾತರು, ಇಷ್ಟಾರ್ಥಪ್ರದರು, ಣತ್ವಾರ್ಥಕೋವಿದಃ = ಣತ್ವಾರ್ಥಕೋವಿದರು (ವ್ಯಾಕರಣ) ತಪಸ್ವೀ = ಮಹಾತಪಸ್ವಿಗಳು, ತಪ್ತಮುದ್ರಾಂಕಃ = ತಪ್ತಮುದ್ರಾಧಾರಕರು, ತಪ್ತಮುದ್ರಾಂಕನಪ್ರದಃ = ಭಕ್ತರಿಗೆ ತಪ್ತಮುದ್ರೆಯಿಂದ ಅಂಕಿತ ಮಾಡುವವರು,

ತ

ತಪೋಧನಾಶ್ರಯಃ ತಪ್ತತಾಪಹರ್ತಾ ತಪೋಧನಃ।
ತಮೋ ಹರ್ತಾ ತ್ವರಿತದಃ ತರುಣಸ್ತರ್ಕ ಪಂಡಿತಃ ॥ ೮೩॥

ತಪೋಧನಾಶ್ರಯಃ = ತಪಸ್ವಿಗಳಿಗೆ ಆಶ್ರಯದಾತರು, ತಪ್ತತಾಪಹರ್ತಾ = ಸಂತಪ್ತರ ತಾಪಪರಿಹಾರಕರು, ತಪೋಧನಃ = ತಪೋಮೂರ್ತಿಗಳು, ತಮೋಹರ್ತಾ = ಅಜ್ಞಾನಹಾರಕರು, ತ್ವರಿತದಃ = ಶೀಘ್ರಫಲದಾತೃಗಳು, ತರುಣಃ = ತರುಣರು, ತರ್ಕಪಂಡಿತಃ = ತರ್ಕಶಾಸ್ತ್ರಪಂಡಿತರು,

ತ್ರಾಸಹರ್ತಾ ತಾಮಸಹಾ ತಾತಸ್ತಾಪಸಸೇವಿತಃ।
ತಾರಕಸ್ತ್ರಾಣದಸ್ತ್ರಾತಾ ತಪ್ತಕಾಂಚನಸನ್ನಿಭಃ ॥ ೮೪॥

ತ್ರಾಸಹರ್ತಾ = ಭಯಪರಿಹಾರಕರು, ತಾಮಸಹಾ = ಅಜ್ಞಾನನಾಶಕರು, ತಾತಃ = ತಂದೆಯಂತಿರುವವರು, ತಾಪಸಸೇವಿತಃ = ತಪಸ್ವೀ ಸೇವಿತರು, ತಾರಕಃ = ಸಂಸಾರತಾರಕರು, ತ್ರಾಣದಃ = ಶಕ್ತಿದಾತರು, ತ್ರಾತಾ = ರಕ್ಷಕರು, ತಪ್ತಕಾಂಚನ ಸನ್ನಿಭಃ = ಪುಟವಿಟ್ಟ ಚಿನ್ನದಂತೆ ಹೊಳೆಯುವವರು

ತ್ರಿವರ್ಗಫಲದಃ ತೀವ್ರಫಲದಾತಾ ತ್ರಿದೋಷಹಾ।
ತಿರಸ್ಕೃತ ಪರಸ್ತ್ಯಾಗೀ ತ್ರಿಲೋಕೀಮಾನ್ಯಸತ್ತಮಃ ॥ ೮೫॥

ತ್ರಿವರ್ಗಫಲದಃ = ಧರ್ಮಾರ್ಥಕಾಮನೆಯನ್ನು ನೀಡುವವರು, ತೀವ್ರಫಲ ದಾತಾ = ಶೀಘ್ರಫಲದಾತರು, ತ್ರಿದೋಷಹಾ = ವಾತಪಿತ್ತಕಫ ಪರಿಹರಿಸುವವರು, ತಿರಸ್ಕೃತ ಪರಃ = ಶತ್ರುಗಳನ್ನು ತಿರಸ್ಕರಿಸಿದವರು, ತ್ಯಾಗೀ = ಮಹಾತ್ಯಾಗಮಾಡಿದವರು, ತ್ರಿಲೋಕೀಮಾನ್ಯಸತ್ತಮಃ = ತ್ರಿಲೋಕಪೂಜ್ಯರು

ತೀಕ್ಷ್ಣರೂಪಃ ಪಿಶಾಚಾನಾಂ ತೀರ್ಣಸಂಸಾರಸಾಗರಃ।
ತುರುಷ್ಕಸೇವಿತಸ್ತುಲ್ಯಹೀನಸ್ತುರಗವಾಹನಃ ॥ ೮೬॥

ಪಿಶಾಚಾನಾಂ ತೀಕ್ಷ್ಣರೂಪಃ = ಪಿಶಾಚಿಗಳಿಗೆ ಕ್ರೂರರೂಪದವರು, ತೀರ್ಣ ಸಂಸಾರ ಸಾಗರಃ = ಸಂಸಾರಸಮುದ್ರ ದಾಟಿದವರು, ತುರುಷ್ಕಸೇವಿತಃ = ತುರುಷ್ಕ ರಿಂದಲೂ ಸೇವಿತರು, ತುಲ್ಯಹೀನಃ = ಅಸದೃಶರು, ತುರಗವಾಹನಃ = ಕುದುರೆಯ ವಾಹನವುಳ್ಳವರು (ಪ್ರಹ್ಲಾದ),

ತೂಲಾಯಿತೀಕೃತೌಘೌಘಸ್ತುಷ್ಟಿದಃ ತುಂಗವಿಗ್ರಹಃ।
ತೇಜಸ್ವೀ ತೈಲವಿದ್ವೇಷೀ ತೋಕಾನಾಂ ಸುಖವರ್ಧನಃ ॥ ೮೭॥

ತೂಲಾಯಿತೀಕೃತ = ಹತ್ತಿಯಂತೆ ಮಾಡಲ್ಪಟ್ಟ, **ಅಘೌಘಃ** = ಪಾಪಸಮೂಹ ವುಳ್ಳ, **ತುಷ್ಟಿದಃ** = ಸಂತೋಷನೀಡುವ, **ತೇಜಸ್ವೀ** = ತೇಜಸ್ವಿಗಳಾದ, **ತೈಲವಿದ್ವೇಷೀ** = ತೈಲವನ್ನು ದ್ವೇಷಿಸುವ, **ತೋಕಾನಾಂ ಸುಖವರ್ಧನಃ** = ಮಕ್ಕಳ ಸುಖವನ್ನು ವೃದ್ಧಿ ಮಾಡುವರು.

ತಂದ್ರೀಹರಸ್ತಂಡುಲದಃ ತಂಜಾಪುರ ಕೃತಾದರಃ।
ಸ್ಥಲದಃ ಸ್ಥಾಪಕಃ ಸ್ಥಾತಾ ಸ್ಥಿರಃ ಸ್ಥೂಲಕಲೇವರಃ ॥ ೮೮॥

ತಂದ್ರೀಹರಃ = ಆಲಸ್ಯವನ್ನು ಹೋಗಲಾಡಿಸುವ, **ತಂಡುಲದಃ** = ಅಕ್ಕಿ ಮೊದಲಾದ ಧಾನ್ಯದಾತರಾದ, **ತಂಜಾಪುರ ಕೃತಾದರಃ** = ತಂಜಾಪುರವನ್ನು ಇಷ್ಟ ಪಡುವ, **ಸ್ಥಲದಃ** = ನೆಲವನ್ನು ನೀಡುವ, **ಸ್ಥಾಪಕಃ** = ಒಂದು ಸ್ಥಳದಲ್ಲಿ ನಿಲ್ಲಿಸುವವ ರಾದ, **ಸ್ಥಾತಾ** = ನಿಶ್ಚಲರಾದ, **ಸ್ಥಿರಃ** = ಅಚಂಚಲರಾದ, **ಸ್ಥೂಲಕಲೇವರಃ** = ಸ್ಥೂಲ ವಾದ ದೇಹವುಳ್ಳ,

ದ

ಸ್ಥೇಯಾನ್ ಸ್ಥೈರ್ಯಪ್ರದಃ ಸ್ಥೇಮಾ ಸ್ಥೌರೀ ಚ ಸ್ಥಂಡಿಲೇಶಯಃ।
ದಶಾವಾನ್ ದಕ್ಷಿಣೋ ದತ್ತದೃಷ್ಟಿರ್ದಾಕ್ಷಿಣ್ಯಪೂರಿತಃ ॥ ೮೯॥

ಸ್ಥೇಯಾನ್=ಅತ್ಯಂತ ಸ್ಥಿರತೆಯುಳ್ಳ, **ಸ್ಥೈರ್ಯಪ್ರದಃ** = ಸ್ಥಿರತೆಯನ್ನು ನೀಡುವ, **ಸ್ಥೇಮಾ** = ಭಕ್ತರಕ್ಷಕರಾದ, **ಸ್ಥೌರೀ** = ಬಲಶಾಲಿಗಳಾದ, **ಸ್ಥಂಡಿಲೇಶಯಃ**= ನೆಲದ ಮೇಲೆ ಮಲಗುವ, **ದಶಾವಾನ್** = ಶ್ರೇಷ್ಠ ಅವಸ್ಥೆಗಳುಳ್ಳ, **ದಕ್ಷಿಣಃ**= ಚತುರರಾದ, **ದತ್ತದೃಷ್ಟಿಃ**= ಭಗವಂತನಲ್ಲಿ ದೃಷ್ಟಿಯುಳ್ಳ, **ದಾಕ್ಷಿಣ್ಯಪೂರಿತಃ** = ಔದಾರ್ಯಪೂರ್ಣರು.

ದಕ್ಷೋ ದಯಾಲುರ್ದಮವಾನ್ ದ್ರವಚ್ಚಿತ್ತೋ ದಧಿಪ್ರಿಯಃ।
ದ್ರವ್ಯದೋ ದರ್ಶನಾದೇವ ಪ್ರೀತೋ ದಲಿತಪಾತಕಃ ॥ ೯೦॥

ದಕ್ಷಃ = ಚಾತುರ್ಯಶಾಲಿಗಳು, **ದಯಾಲುಃ** = ಅತ್ಯಂತ ದಯವುಳ್ಳ, **ದಮ ವಾನ್** = ಇಂದ್ರಿಯನಿಗ್ರಹಶೀಲರು, **ದ್ರವಚ್ಚಿತ್ತಃ**= ಕರಗುವ ಮನಸ್ಸುಳ್ಳ, **ದಧಿಪ್ರಿಯಃ** = ದಧಿಯಲ್ಲಿರುವ ವಾಮನ ಪ್ರಿಯರು, **ದ್ರವ್ಯದಃ** = ಧನದಾತೃಗಳು, **ದರ್ಶನಾದೇವ ಪ್ರೀತಃ** = ದರ್ಶನಮಾತ್ರದಿಂದಲೇ ಪ್ರೀತರಾಗುವ, **ದಲಿತಪಾತಕಃ** = ಪಾಪ ಪರಿ ಹಾರಕರಾದ,

ದತ್ತಾಭೀಷ್ಟೋ ದಸ್ಯುಹಂತಾ ದಾಂತೋ ದಾರುಣದುಃಖಹಾ।
ದ್ವಾಸಪ್ತತಿ ಸಹಸ್ರಾಣಾಂ ನಾಡೀನಾಂ ರೂಪಭೇದವಿತ್ ॥ ೯೧॥

ದತ್ತಾಭೀಷ್ಟಃ = ಅಭೀಷ್ಟಪ್ರದರು, ದಸ್ಯುಹಂತಾ = ಕಳ್ಳರನ್ನು ನಾಶಪಡಿಸುವವರು, ದಾಂತಃ = ದಮನಶೀಲರು, ದಾರುಣದುಃಖಹಾ = ಭಯಂಕರ ದುಃಖ ಪರಿಹಾರಕರು, ದ್ವಾಸಪ್ತತಿಸಹಸ್ರಾಣಾಂ = ಎಪ್ಪತ್ತೆರಡು ಸಾವಿರ ನಾಡಿ, ನಾಡೀನಾಂ ರೂಪಭೇದವಿತ್ = ನಾಡಿಗಳಲ್ಲಿನ ಭಗವದ್ರೂಪ ತಿಳಿದವರು.

ದಾರಿದ್ರ್ಯನಾಶಕೋ ದಾತಾ ದಾಸೋ ದಾಸಪ್ರಮೋದಕೃತ್।
ದಿವೌಕಃ ಸದೃಶೋ ದಿಷ್ಟವರ್ಧನೋ ದಿವ್ಯವಿಗ್ರಹಃ ॥ ೯೧॥

ದಾರಿದ್ರ್ಯನಾಶಕಃ = ದಾರಿದ್ರ್ಯನಾಶಕರು, ದಾತಾ = ದಾನಶೀಲರು, ದಾಸಃ = ಹರಿವಾಯುದಾಸರು, ದಾಸಪ್ರಮೋದಕೃತ್ = ಭಕ್ತರಿಗೆ ಸಂತೋಷದಾಯಕರು, ದಿವೌಕಃ ಸದೃಶಃ = ದೇವತಾ ಸದೃಶರು, ದಿಷ್ಟವರ್ಧನಃ = ಪುಣ್ಯವೃದ್ಧಿಮಾಡುವವರು, ದಿವ್ಯವಿಗ್ರಹಃ = ದಿವ್ಯದೇಹವುಳ್ಳವರು.

ದೀರ್ಘಾಯುಃ ದೀರ್ಣದುರಿತೋ ದೀನಾನಾಥಗತಿಪ್ರದಃ।
ದೀರ್ಘಾಯುಷ್ಯಪ್ರದೋ ದೀರ್ಘವರ್ಜಿತೋ ದೀಪ್ತಮೂರ್ತಿಮಾನ್ ॥ ೯೩॥

ದೀರ್ಘಾಯುಃ = ದೀರ್ಘಾಯುಷ್ಮಂತರು, ದೀರ್ಣದುರಿತಃ = ಪಾಪಹಾರಕರು, ದೀನಾನಾಥಗತಿಪ್ರದಃ = ದೀನ, ಅನಾಥರಿಗೆ ಗತಿಪ್ರದರು, ದೀರ್ಘಾಯುಷ್ಯಪ್ರದಃ = ದೀರ್ಘವಾದ ಆಯುಸ್ಸನ್ನು ನೀಡುವವರು, ದೀರ್ಘವರ್ಜಿತಃ = ದೈರ್ಘ್ಯರಹಿತರು, ದೀಪ್ತಮೂರ್ತಿಮಾನ್ = ಹೊಳೆಯುವ ಶರೀರವುಳ್ಳವರು.

ದುರ್ಧರೋ ದುರ್ಲಭೋ ದುಷ್ಟಹಂತಾ ದುಷ್ಕೀರ್ತಿಭಂಜನಃ।
ದುಃಸ್ವಪ್ನದೋಷಹಾ ದುಃಖಧ್ವಂಸೀ ದ್ರುಮಸಮಾಶ್ರಯಃ ॥ ೯೪॥

ದುರ್ಧರಃ = ಗರಿಮಾಸಿದ್ಧಿಯುಳ್ಳವರು, ದುರ್ಲಭಃ = ದುರ್ಜನರಿಗೆ ದುರ್ಲಭರಾದ, ದುಷ್ಟಹಂತಾ = ದುಷ್ಟಜನ ಭಂಜಕರು, ದುಷ್ಕೀರ್ತಿಭಂಜನಃ = ಅಪಕೀರ್ತಿ ಭಂಜಕರು, ದುಃಸ್ವಪ್ನದೋಷಹಾ = ದುಃಸ್ವಪ್ನದೋಷಪರಿಹಾರಕರು, ದುಃಖಧ್ವಂಸೀ = ದುಃಖಪರಿಹಾರಕರಾದವರು, ದ್ರುಮಸಮಾಶ್ರಯಃ = ಕಲ್ಪದ್ರುಮದಂತೆ ಆಶ್ರಯದಾತರು,

ದೂಷ್ಯತ್ಯಾಗೀ ದೂರದರ್ಶೀ ದೂತಾನಾಂ ಸುಖವರ್ಧನಃ।
ದೃಷ್ಟಾಂತ ಹೀನೋ ದೃಷ್ಟಾರ್ತೋ ದೃಢಾಂಗೋ ದೃಪ್ತದರ್ಪಹೃತ್ ॥೯೫॥

ದೂಷ್ಯತ್ಯಾಗೀ = ಕೆಟ್ಟದ್ದನ್ನು ತ್ಯಾಗಮಾಡಿದವರು, **ದೂರದರ್ಶೀ** = ದೂರದರ್ಶಿಗಳು, **ದೂತಾನಾಂ ಸುಖವರ್ಧನಃ** = ದೂತರಿಗೆ ಸುಖಾಭಿವೃದ್ಧಿಯನ್ನು ಮಾಡುವವರು, **ದೃಷ್ಟಾಂತಹೀನಃ** = ಉಪಮಾರಹಿತರು, **ದೃಷ್ಟಾತಃ** = ಆರ್ತಜನರನ್ನು ದಯೆಯಿಂದ ನೋಡುವವರು, **ದೃಢಾಂಗ** = ದೃಢಕಾಯರು, **ದೃಷ್ಟದರ್ಪಹೃತ್** = ದುಷ್ಟರ ದರ್ಪಾಪಹಾರಿಗಳು.

ದೃಢಪ್ರಜ್ಞೋ ದೃಢಭಕ್ತಿರ್ದುರ್ವಿಧಾನಾಂ ಧನಪ್ರದಃ।
ದೇವಸ್ವಭಾವೋ ದೇಹೇತಿ ಯಾಚನಾಶಬ್ದಮೂಲಭಿತ್ ॥೯೬॥

ದೃಢಪ್ರಜ್ಞಃ = ದೃಢವಾದ ಜ್ಞಾನವುಳ್ಳವರು, **ದೃಢಭಕ್ತಿಃ** = ನಿಶ್ಚಲವಾದ ಭಕ್ತಿಯುಳ್ಳವರು, **ದುರ್ವಿಧಾನಾಂ ಧನಪ್ರದಃ** = ದರಿದ್ರರಿಗೆ ಧನವನ್ನು ನೀಡುವವರು, **ದೇವಸ್ವಭಾವಃ** = ದೇವತಾಸ್ವರೂಪದವರು, **ದೇಹೀತಿ ಯಾಚನಾಶಬ್ದ ಮೂಲಭಿತ್** = 'ದೇಹಿ' ಎಂದು ಬೇಡುವ ಶಬ್ದದ ಮೂಲವನ್ನು ಭೇದಿಸುವರು,

ದೂನಪ್ರಸಾದಕೃತ್ ದುಃಖವಿನಾಶೀ ದುರ್ನಯೋಜ್ಝಿತಃ।
ದೈತ್ಯಾರಿಪೂಜಕೋ ದೈವಶಾಲೀ ದೈನ್ಯವಿವರ್ಜಿತಃ ॥೯೭॥

ದೂನಪ್ರಸಾದಕೃತ್ = ದೈನ್ಯರಿಗೆ ಅನುಗ್ರಹಕರ್ತರು, **ದುಃಖವಿನಾಶೀ** = ದುಃಖನಾಶಕರು, **ದುರ್ನಯೋಜ್ಝಿತಃ** = ದುರ್ನೀತಿ ರಹಿತರು, **ದೈತ್ಯಾರಿಪೂಜಕಃ** = ಶ್ರೀಹರಿ ಪೂಜಕರು, **ದೈವಶಾಲೀ** = ಅದೃಷ್ಟಶಾಲಿಗಳು, **ದೈನ್ಯವಿವರ್ಜಿತಃ** = ದೈನ್ಯತೆ ಇಲ್ಲದವರು,

ದೋಷಾದ್ರಿಕುಲಿಶೋ ದೋಷ್ಮಾನ್ ದೋಗ್ಧಾ ದೌರ್ಭಿಕ್ಷ್ಯದೋಷಹಾ।
ದಂಡಧಾರೀ ದಂಭಹೀನೋ ದಂದಶೂಕಶಯಪ್ರಿಯಃ ॥೯೮॥

ದೋಷಾದ್ರಿಕುಲಿಶಃ = ದೋಷಪರ್ವತಕ್ಕೆ ವಜ್ರಾಯುಧರು, **ದೋಷ್ಮಾನ್** = ಸಮರ್ಥಬಾಹುಗಳಿರುವವರು, **ದೋಗ್ಧಾ** = ಅಭೀಷ್ಟಪೂರೈಸುವವರು, **ದೌರ್ಭಿಕ್ಷ್ಯದೋಷಹಾ** = ದುರ್ಭಿಕ್ಷೆಯನ್ನು ಪರಿಹರಿಸುವವರು, **ದಂಡಧಾರೀ** = ದಂಡಧರಿಸಿದವರು, **ಡಂಭಹೀನಃ** = ಕಪಟಾಚಾರರಹಿತರು, **ದಂದಶೂಕಶಯಪ್ರಿಯಃ** = ಸರ್ಪಶಯನ ನಾರಾಯಣನ ಭಕ್ತರು,

ಧ

ಧನದೋ ಧನಿಕಾರಾಧ್ಯೋ ಧನ್ಯೋ ಧರ್ಮವಿವರ್ಧನಃ।
ಧಾರಕೋ ಧಾನ್ಯದೋ ಧಾತಾ ಧಿಷಣಾವಾನ್ ಧಿನೋತು ಮಾಮ್ ॥೯೯॥

ಧನದಃ = ಧನದಾತರು, **ಧನಿಕಾರಾಧ್ಯಃ** = ಧನಿಕರಿಂದ ಪೂಜ್ಯರು, **ಧನ್ಯಃ** = ಧನ್ಯರು, **ಧರ್ಮವಿವರ್ಧನಃ** = ಧರ್ಮವನ್ನು ವೃದ್ಧಿಮಾಡುವವರು, **ಧಾರಕಃ** = ಸಜ್ಜನ ಧಾರಕರು, **ಧಾನ್ಯದಃ** = ಧಾನ್ಯದಾತರು, **ಧಾತಾ** = ವಾಯ್ವಾವೇಶಿಗಳು, **ಧಿಷಣಾವಾನ್** = ಮಹಾಪ್ರಾಜ್ಞರು, **ಮಾಂ ಧಿನೋತು** = ನನ್ನನ್ನು ಪೋಷಿಸಲಿ.

ಧೀರೋ ಧೀಮಾನ್ ಧೀಪ್ರದಾತಾ ಧೂತಾರಿಷ್ಟೋ ಧ್ರುವಾಶ್ರಯಃ।
ಧೃತಭಕ್ತಾಭಯೋ ದೃಷ್ಟೋ ಧೃತಿಮಾನ್ ಧೂತದೂಷಣಃ ॥೧೦೦॥

ಧೀರಃ = ಧೈರ್ಯಶಾಲಿಗಳಾದ, **ಧೀಮಾನ್** = ಜ್ಞಾನಿಗಳಾದ, **ಧೀಪ್ರದಾತಾ** = ಜ್ಞಾನದಾತೃಗಳಾದ, **ಧೂತಾರಿಷ್ಟಃ** = ಅನಿಷ್ಟಗಳನ್ನು ಪರಿಹರಿಸುವ, **ಧ್ರುವಾಶ್ರಯಃ** = ಸ್ಥಿರವಾದ ಆಶ್ರಯನೀಡುವ, **ಧೃತಭಕ್ತಾಭಯಃ** = ಭಕ್ತರಿಗಾಗಿ ಅಭಯಮುದ್ರೆ ಧರಿಸಿದ, **ಧೃಷ್ಟಃ** = ದೋಷಪರಿಹಾರಕರಾದ, **ಧೃತಮಾನ್** = ಧೈರ್ಯವುಳ್ಳ, ಧೂತ ದೂಷಣಃ = ದೋಷರಹಿತರಾದ,

ಧೂರ್ತಭಂಗಕರೋ ಧೇನುರೂಪೋ ಧೈರ್ಯಪ್ರವರ್ಧನಃ।
ಧೂಪಪ್ರಿಯೋ ಧೋರಣೇಭೃತ್ ಧೂಮಕೇತು ಭಯಾಪಹಃ ॥೧೦೧॥

ಧೂರ್ತಭಂಗಕರೋ = ಧೂರ್ತರನ್ನು ಮುಖಭಂಗ ಮಾಡುವ, **ಧೇನುರೂಪಃ** = ಕಾಮಧೇನುವಿನಂತಿರುವ, **ಧೈರ್ಯಪ್ರವರ್ಧನಃ** = ಧೈರ್ಯವನ್ನು ಹೆಚ್ಚಿಸುವ, **ಧೂಪಪ್ರಿಯಃ** = ಧೂಪವನ್ನು ಪ್ರೀತಿಸುವ, **ಧೋರಣೇಭೃತ್** = ಪರಂಪರೆಯನ್ನು ಸ್ಥಾಪಿಸುವ, **ಧೂಮಕೇತು ಭಯಾಪಹಂ** = ಧೂಮಕೇತುವಿನ ಭಯವನ್ನು ಪರಿ ಹರಿಸುವ,

ಧೌತವಸ್ತ್ರ ಪರೀಧಾನೋ ಧಾವಯತ್ವಹಿತಂ ಮಮ।
ನಮಸ್ತೇ ನಲಿನಾಕ್ಷಾಯ ನವಗ್ರಹ ಭಯಚ್ಛಿದೇ ॥೧೦೨॥

ಧೌತವಸ್ತ್ರಪರೀಧಾನಃ = ಶುದ್ಧವಸ್ತ್ರಧಾರಕರಾದ ರಾಯರು, **ಮಮ** = ನನ್ನ, **ಅಹಿತಂ** = ಅನಿಷ್ಟವನ್ನು, **ಧಾವಯತು** = ಶೋಧಿಸಲಿ, **ನಲಿನಾಕ್ಷಃ** = ಕಮಲದಂತೆ

ನೇತ್ರವಿರುವ, **ನವಗ್ರಹ ಭಯಚ್ಛಿದೇ** = ನವಗ್ರಹಗಳ ಭಯವನ್ನು ಪರಿಹರಿಸುವ, **ತೇ** = ತಮಗೆ, **ನಮಃ** = ನಮಸ್ಕಾರವು.

ನ

ನವಧಾ ಭಕ್ತಿಭೇದಜ್ಞೋ ನರೇಂದ್ರೋ ನರಸೇವಿತಃ।
ನಾಮಸ್ಮರಣ ಸಂತುಷ್ಟೋ ನಾರಾಯಣಪದಾಶ್ರಯಃ ॥ ೧೦೩॥

ನವಧಾಭಕ್ತಿಭೇದಜ್ಞೋ = ನವವಿಧ ಭಕ್ತಿಯಲ್ಲಿರುವ ವ್ಯತ್ಯಾಸವನ್ನು ತಿಳಿದವರು, **ನರೇಂದ್ರಃ** = ನರರಿಗೆ ಒಡೆಯರಾದ, **ನರಸೇವಿತಃ** = ನರರಿಂದ ಪೂಜಿಸಲ್ಪಡುವ, **ನಾಮಸ್ಮರಣಸಂತುಷ್ಟಃ** = ನಾಮಸ್ಮರಣೆಯಿಂದ ತುಷ್ಟಿ ಹೊಂದಿದವರು, **ನಾರಾಯಣ ಪದಾಶ್ರಯಃ** = ನಾರಾಯಣನ ಪಾದಗಳಲ್ಲಿ ಆಶ್ರಯಹೊಂದಿದವರು,

ನಾಡೀಸ್ಥೈರ್ಯಪ್ರದೋ ನಾನಾಜಾತಿಜಂತುಜನಾರ್ಚಿತಃ।
ನಾರೀದೂರೋ ನಾಯಕಶ್ಚ ನಾಗಾದ್ಯೈಶ್ವರ್ಯದಾಯಕಃ ॥ ೧೦೪॥

ನಾಡೀಸ್ಥೈರ್ಯಪ್ರದಃ = ನಾಡಿಗಳಿಗೆ ಸ್ಥಿರತೆ ನೀಡುವ, **ನಾನಾಜಾತಿ ಜಂತು ಜನಾರ್ಚಿತಃ** = ನಾನಾಜಾತಿಯ ಪ್ರಾಣಿ ಹಾಗೂ ಜನರುಗಳಿಂದ ಪೂಜಿತರಾದ, **ನಾರೀ ದೂರಃ** = ಸ್ತ್ರೀಯರಿಂದ ದೂರರಾದ, **ನಾಯಕಃ** = ಸರ್ವರಿಗೂ ನಾಯಕರಂತಿರುವ, **ನಾಗಾದ್ಯೈಶ್ವರ್ಯದಾಯಕಃ** = ಆನೆ ಮೊದಲಾದ ಅಷ್ಟೈಶ್ವರ್ಯವನ್ನು ಕೊಡುವ,

ನಿರ್ವಾಣದೋ ನಿರ್ಮಲಾತ್ಮಾ ನಿಷ್ಕಾಸಿತಪಿಶಾಚಕಃ।
ನಿಃಶ್ರೇಯಸಕರೋ ನಿಂದಾವರ್ಜಿತೋ ನಿಗಮಾರ್ಥವಿತ್ ॥ ೧೦೫॥

ನಿರ್ವಾಣದಃ = ಮುಕ್ತಿದಾಯಕರು (ಅಂತರ್ಯಾಮಿ ವಿವಕ್ಷೆ), **ನಿರ್ಮಲಾತ್ಮಾ** = ಮನಃಶುದ್ಧಿಯುಳ್ಳ, **ನಿಷ್ಕಾಸಿತ ಪಿಶಾಚಕಃ** = ಪಿಶಾಚಿಯನ್ನು ಓಡಿಸಿದವರು, **ನಿಃ ಶ್ರೇಯಸಕರಃ** = ನಿಶ್ಚಿತವಾಗಿಯೂ ಶ್ರೇಯಸ್ಸನ್ನುಂಟುಮಾಡುವವರು, **ನಿಂದಾ ವರ್ಜಿತಃ** = ನಿಂದೆಯನ್ನು ಬಿಟ್ಟವರು, **ನಿಗಮಾರ್ಥವಿತ್** = ವೇದಗಳರ್ಥ ತಿಳಿದವರು.

ನಿರಾಕೃತ ಕುವಾದೀಂದ್ರೋ ನಿರ್ಜರಾಪ್ತೋ ನಿರಾಮಯಃ।
ನಿಯಾಮಕೋ ನಿಯತಿದೋ ನಿಗ್ರಹಾನುಗ್ರಹಕ್ಷಮಃ ॥ ೧೦೬॥

ನಿರಾಕೃತಕುವಾದೀಂದ್ರಾಯ = ಮಹಾದುರ್ವಾದಿಗಳನ್ನು ಖಂಡಿಸಿದವರು, ನಿರ್ಜರಾಪ್ತಃ = ದೇವತೆಗಳಿಗೆ ಆಪ್ತರಾದ, ನಿರಾಮಯಃ = ರೋಗಬಾಧೆಯಿಲ್ಲದ, ನಿಯಾಮಕಃ = ಸರ್ವನಿಯಾಮಕರಾದ, ನಿಯತಿದಃ = ಸಂಪತ್ಪ್ರದಾಯಕರು, ನಿಗ್ರಹಾನುಗ್ರಹಕ್ಷಮಃ = ಶಾಪಾನುಗ್ರಹಶಕ್ತರು.

ನಿಷ್ಪ್ರಷ್ಟವಾಕ್ಯೋ ನಿರ್ಮುಕ್ತಬಂಧನೋ ನಿತ್ಯಸೌಖ್ಯಭುಕ್।
ನಿದಾನಂ ಸಂಪದಾಂ ನಿಷ್ಠಾ ನಿಷ್ಣಾತೋ ನಿರ್ವೃತಿಪ್ರದಃ ॥ ೧೦೭॥

ನಿಷ್ಪ್ರಷ್ಟವಾಕ್ಯಃ = ಸ್ಪಷ್ಟವಾದ ಮಾತುಳ್ಳವರು, ನಿರ್ಮುಕ್ತಬಂಧನಃ = ಬಂಧನಕ್ಕೆ ಸಿಲುಕದವರು, ನಿತ್ಯಸೌಖ್ಯಭುಕ್ = ನಿತ್ಯಸುಖಾನುಭವವುಳ್ಳ, **ಸಂಪದಾಂ ನಿದಾನಂ** = ಸಂಪತ್ತಿಗೆ ಕಾರಣರಾದ, ನಿಷ್ಠಾನಿಷ್ಣಾತಃ = ಭಗವಂತನ ನಿಷ್ಠೆಯಲ್ಲಿ ನಿಷ್ಣಾತರು, ನಿರ್ವೃತಿಪ್ರದಃ = ಆತ್ಯಂತಿಕ ಸುಖಪ್ರದರು,

ನಿರ್ಮಮೋ ನಿರಹಂಕಾರೋ ನಿತ್ಯನೀರಾಜನ ಪ್ರಿಯಃ।
ನಿಜಪ್ರದಕ್ಷಿಣೇನೈವ ಸರ್ವಯಾತ್ರಾ ಫಲಪ್ರದಃ ॥ ೧೦೮॥

ನಿರ್ಮಮಃ = ಮಮತಾರಹಿತರು, ನಿರಹಂಕಾರಃ = ಅಹಂಕಾರವರ್ಜಿತರು, ನಿತ್ಯನೀರಾಜನಪ್ರಿಯಃ = ನಿತ್ಯವು ಭಗವಂತನಿಗೆ ನೀರಾಜನವನ್ನು ಎತ್ತುವರು, ನಿಜಪ್ರದಕ್ಷಿಣೇನೈವ = ಬೃಂದಾವನ ಪ್ರದಕ್ಷಿಣೆಯಿಂದಲೇ ಸರ್ವಯಾತ್ರಾಫಲದಃ ಸಮಸ್ತತೀರ್ಥಾಟನ ಫಲವನ್ನು ಕೊಡುವ,

ನೀತಿಮಾನ್ ನುತಪಾದಾಬ್ಜೋ ನ್ಯೂನಪೂರ್ಣತ್ವವರ್ಜಿತಃ।
ನಿದ್ರಾತ್ಯಾಗೀ ನಿಸ್ಪೃಹಶ್ಚ ನಿದ್ರಾದೋಷನಿವಾರಣಃ ॥ ೧೦೯॥

ನೀತಿಮಾನ್ = ನ್ಯಾಯವಾದಿಗಳು, ನುತಪಾದಾಬ್ಜಂ = ಸಜ್ಜನರಿಂದ ಸ್ತುತವಾದ ಪಾದಕಮಲವುಳ್ಳವರು, ನ್ಯೂನಪೂರ್ಣತ್ವವರ್ಜಿತಃ = ಹಿಗ್ಗು-ಕುಗ್ಗು ಇಲ್ಲದವರು, ನಿದ್ರಾತ್ಯಾಗೀ = ನಿದ್ರೆಯನ್ನು ಬಿಟ್ಟವರು, ನಿಸ್ಪೃಃ = ವಿಷಯ ಸುಖಾಭಿಲಾಷೆ ರಹಿತರು, ನಿದ್ರಾದೋಷನಿವಾರಣಃ = ನಿದ್ರೆಯ ದೋಷವನ್ನು ಕಳೆಯುವವರು,

ನೂತನಾಂಶುಕಧಾರೀ ಚ ನೃಪಪೂಜಿತಪಾದುಕಃ।
ನೃಣಾಂ ಸುಖಪ್ರದೋ ನೇತಾ ನೇತ್ರಾನಂದ ಕರಾಕೃತಿಃ ॥ ೧೧೦॥

ನೂತನಾಂಶುಕಧಾರೀ = ನೂತನವಸ್ತ್ರವನ್ನು ಧರಿಸುವವರು, **ನೃಪಪೂಜಿತ ಪಾದುಕಃ** = ರಾಜರಿಂದ ಪೂಜಿತವಾದ ಪಾದವುಳ್ಳವರು, **ನೃಣಾಂ ಸುಖಪ್ರದಃ** = ಜನರಿಗೆ ಸುಖನೀಡುವವರು, **ನೇತಾ** = ನಾಯಕರಾದ, **ನೇತ್ರಾನಂದಕರಾಕೃತಿಃ** = ಕಣ್ಣುಗಳಿಗೆ ಆನಂದವುಂಟುಮಾಡುವ ಭವ್ಯಾಕೃತಿಯುಳ್ಳವರು.

ನಿಯಮೀ ನೈಗಮಾದ್ಯೈಶ್ಚ ಭಕ್ತಿಭಾವೇನ ಸೇವಿತಃ।
ನೇದಿಷ್ಠೋ ಭಜತಾಂ ಭಕ್ತ್ಯಾ ನೌಕಾ ಭಕ್ತಭವಾಂಬುಧೇಃ ॥ ೧೧೧॥

ನಿಯಮೀ = ಸಂಯಮಶೀಲರು, **ನೈಗಮಾದ್ಯೈಃ** = ವೈಶ್ಯರು ಮೊದಲಾದವರಿಂದ, **ಭಕ್ತಿಭಾವೇನ ಸೇವಿತಃ** = ಭಕ್ತಿಭಾವದಿಂದ ಸೇವಿಸಲ್ಪಟ್ಟ, **ಭಕ್ತ್ಯಾಭಜತಾಂ** = ಭಕ್ತಿಯಿಂದ ಭಜಿಸುವ ಭಕ್ತರಿಗೆ, **ನೇದಿಷ್ಠಃ** = ಸಮೀಪದಲ್ಲೇ ಇರುವವರು, **ಭಕ್ತ ಭವಾಂಬುಧೇಃ ನೌಕಾ** = ಭಕ್ತರ ಸಂಸಾರ ಸಾಗರಕ್ಕೆ ದೋಣಿಯಂತಿರುವವರು.

ಪ

ನಂದಾತ್ಮಜಪ್ರಿಯೋ ನಾಥೋ ನಂದನೋ ನಂದನದ್ರುಮಃ।
ಪ್ರಸನ್ನಃ ಪರಿತಾಪಘ್ನಃ ಪ್ರಸಿದ್ಧಃ ಪರತಾಪಹೃತ್ ॥ ೧೧೨॥

ನಂದಾತ್ಮಜಪ್ರಿಯಃ = ನಂದಗೋಪ ಪುತ್ರಪ್ರಿಯರಾದ, **ನಾಥಃ** = ದೀನನಾಥರಾದ, **ನಂದನಃ** = ಸಂತೋಷಪಡಿಸುವ, **ನಂದನದ್ರುಮಃ** = ಕಲ್ಪವೃಕ್ಷದಂತಿರುವ, **ಪ್ರಸನ್ನಃ** = ಪ್ರಸನ್ನಮುಖಮುದ್ರೆಯುಳ್ಳ, **ಪರಿತಾಪಘ್ನಃ** = ತಾಪಪರಿಹಾರಕರಾದ, **ಪ್ರಸಿದ್ಧಃ** = ಜಗತ್ಪ್ರಸಿದ್ಧರಾದ, **ಪರತಾಪಹೃತ್** = ಮಹಾತಾಪಗಳನ್ನು ಪರಿಹರಿಸುವ,

ಪ್ರಥಮಃ ಪ್ರತಿಪನ್ನಾರ್ಥಃ ಪ್ರಸಾಧಿತ ಮಹಾತಪಾಃ।
ಪರಾಕ್ರಮಜಿತಾರಾತಿಃ ಪ್ರತಿಮಾನ ವಿವರ್ಜಿತಃ ॥ ೧೧೩॥

ಪ್ರಥಮಃ = ಶಾಸ್ತ್ರಜ್ಞಾನಾದಿಗಳಲ್ಲಿ ಮೊದಲಿಗರಾದ, **ಪ್ರತಿಪನ್ನಾರ್ಥಃ** = ಕೃತಕೃತ್ಯರಾದ, **ಪ್ರಸಾಧಿತ ಮಹಾತಪಾಃ** = ಮಹಾತಪಸ್ವಿಗಳಾದ, **ಪರಾಕ್ರಮ ಜಿತಾರಾತಿಃ** = ಸಾಮರ್ಥ್ಯದಿಂದ ಶತ್ರುಗಳನ್ನು ಗೆದ್ದವರು, **ಪ್ರತಿಮಾನವಿವರ್ಜಿತಃ** = ಸದೃಶ ರಹಿತರು,

ಪ್ರವರಃ ಪ್ರಕ್ರಮಜ್ಞಶ್ಚ ಪರವಾದಿಜಯಪ್ರದಃ।
ಪ್ರಮುಖಃ ಪ್ರಬಲಃ ಪ್ರಜ್ಞಾಶಾಲೀ ಪ್ರತ್ಯೂಹನಾಶಕಃ ॥ ೧೧೪॥

ಪ್ರವರಃ = ಭಕ್ತಶ್ರೇಷ್ಠರು, **ಪ್ರಕ್ರಮಜ್ಞಃ** = ಸಂಪ್ರದಾಯಕೋವಿದರು, **ಪರವಾದಿ ಜಯಪ್ರದಃ** = ಪರವಾದಿ ಜಯವನ್ನುಂಟುಮಾಡುವವರು, **ಪ್ರಮುಖಃ** = ಲೋಕ ಪ್ರಸಿದ್ಧರು, **ಪ್ರಬಲಃ** = ತಪೋಬಲವುಳ್ಳವರು, **ಪ್ರಜ್ಞಾಶಾಲೀ** = ಮೇಧಾವಿಗಳು, **ಪ್ರತ್ಯೂಹನಾಶಕಃ** = ವಿಘ್ನಪರಿಹಾರಕರು,

ಪ್ರಪಂಚಸುಖದಾತಾ ಚ ಪ್ರಕೃತಿಸ್ಥಃ ಪ್ರವೃತ್ತಿಕೃತ್।
ಪ್ರಭೂತಸಂಪತ್ ಪತ್ರೋರ್ಣಧಾರೀ ಪ್ರಣವತತ್ಪರಃ ॥ ೧೧೫॥

ಪ್ರಪಂಚಸುಖದಾತಾ = ವಿಸ್ತೃತ ಭೋಗದಾತರು, **ಪ್ರಕೃತಿಸ್ಥಃ** = ಭೂಮಿಯಲ್ಲಿ ಅವತರಿಸುವವರು, ಶಾಂತಚಿತ್ತರು, **ಪ್ರವೃತ್ತಿಕೃತ್** = ಸದ್ವೃತ್ತಿಯನ್ನುಂಟು ಮಾಡುವವರು, **ಪ್ರಭೂತಸಂಪತ್** = ಮಹಾಜ್ಞಾನಾದಿ ಸಂಪತ್ತುಳ್ಳ, **ಪತ್ರೋರ್ಣ ಧಾರೀ** = ರೇಷ್ಮೆ ವಸ್ತ್ರಧಾರಿಗಳು, **ಪ್ರಣವತತ್ಪರಃ** = ಓಂಕಾರಜಪಾಸಕ್ತರು,

ಪ್ರಚಂಡಃ ಪ್ರದರಧ್ವಂಸೀ ಪ್ರತಿಗ್ರಹ ವಿವರ್ಜಿತಃ।
ಪ್ರತ್ಯಕ್ಷ ಫಲದಾತಾ ಚ ಪ್ರಸಾದಾಭಿಮುಖಃ ಪರಃ ॥ ೧೧೬॥

ಪ್ರಚಂಡಃ = ದುರ್ಜನಭಯಂಕರರು, **ಪ್ರದರಧ್ವಂಸೀ** = ಪ್ರದರವೆಂಬ ಸ್ತ್ರೀ ರೋಗ ನಾಶಕರು, **ಪ್ರತಿಗ್ರಹವಿವರ್ಜಿತಃ** = ಏನನ್ನೂ ಅಪೇಕ್ಷಿಸದಿರುವವರು, **ಪ್ರತ್ಯಕ್ಷ ಫಲದಾತಾ** = ಪ್ರತ್ಯಕ್ಷವಾಗಿ ಫಲನೀಡುವವರು, **ಪ್ರಸಾದಾಭಿಮುಖಃ** = ಭಕ್ತರಿಗೆ ಬೇಗ ಒಲಿಯುವವರು, **ಪರಃ** = ಶ್ರೇಷ್ಠರು,

ಪಾಠಕಃ ಪಾವನಃ ಪಾತಾ ಪ್ರಾಣದಾತಾ ಪ್ರಸಾದಕೃತ್।
ಪ್ರಾಪ್ತಸಿದ್ಧಿಃ ಪಾರಿಜಾತದರ್ಪಹಾ ಪಾಕಸಾಧನಃ ॥ ೧೧೭॥

ಪಾಠಕಃ = ಮಂತ್ರಪಠನಾಸಕ್ತರು, **ಪಾವನಃ** = ವಾಯ್ವಾವೇಶವುಳ್ಳವರು, **ಪಾತಾ** = ರಕ್ಷಕರು, **ಪ್ರಾಣದಾತಾ** = ಪ್ರಾಣದಾತರು, **ಪ್ರಸಾದಕೃತ್** = ಅನುಗ್ರಹಮಾಡು ವವರು, **ಪ್ರಾಪ್ತಸಿದ್ಧಿಃ** = ಸಮಸ್ತಸಿದ್ಧಿಯನ್ನು ಹೊಂದಿದವರು, **ಪಾರಿಜಾತದರ್ಪಹಾಃ** = ದಾನ ದಲ್ಲಿ ಕಲ್ಪವೃಕ್ಷದ ದರ್ಪಪರಿಹಾರಕರಾದ, **ಪಾಕಸಾಧನಃ** = ಕರ್ಮ ಸವೆಯಲು ಸಾಧನ ಭೂತರು,

ಪಾಟೀರಪಾದುಕಃ ಪಾರ್ಶ್ವವರ್ತೀ ಪಾರಾಯಣಪ್ರಿಯಃ।
ಪೀಣ್ಯಕೀಕೃತ ದುರ್ವಾದೀ ಪಿತಾ ಪೀಡಾವಿನಾಶಕಃ ॥ ೧೧೮॥

ಪಾಟೀರಪಾದುಕಃ = ಶ್ರೀಗಂಧದ ಪಾದುಕೆಯುಳ್ಳವರು, **ಪಾರ್ಶ್ವವರ್ತೀ** = ಭಕ್ತರ ಸನಿಹದಲ್ಲೇ ಇರುವವರು, **ಪಾರಾಯಣಪ್ರಿಯಃ** = ಸ್ತೋತ್ರ ಪಾಠಕರಿಗೆ ಪ್ರಿಯರು, **ಪಿಣ್ಯಾಕೀಕೃತ ದುರ್ವಾದೀ** = ವಾದಿಗಳನ್ನು ಹಿಂಡಿಯಂತೆ ನಿಸ್ಸತ್ವರನ್ನಾಗಿ ಮಾಡಿದವರು, **ಪಿತಾ** = ತಂದೆಯಂತಿರುವವರು, **ಪೀಡಾವಿನಾಶಕಃ** = ಪೀಡಾ ಪರಿಹಾರಕರು.

ಪ್ರೀತಿಮಾನ್ ಪೀತವಸನಃ ಪೀಯೂಷಂ ಪೀವರಾಂಗಕಃ।
ಪ್ರಿಯಂವದಃ ಪೀಡಿತಾಘಃ ಪುಲಕೀ ಪುಷ್ಟಿವರ್ಧನಃ ॥ ೧೧೯॥

ಪ್ರೀತಿಮಾನ್ = ಪ್ರೀತಿಯುಳ್ಳ, **ಪೀತವಸನಃ** = ಪೀತಾಂಬರಧಾರಿಗಳು (ಅಂತರ್ಯಾಮಿ ವಿವಕ್ಷೆಯಿಂದ), **ಪೀಯೂಷಂ** = ಅಮೃತಪ್ರಾಯರು, **ಪೀವರಾಂಗಕಃ** = ಪುಷ್ಟವಾದ ಅವಯವವುಳ್ಳವರು, **ಪ್ರಿಯಂವದಃ** = ಸವಿ ಮಾತುಗಳನ್ನಾಡುವವರು, **ಪೀಡಿತಾಘಃ** = ಪಾಪಗಳನ್ನು ದೂರಮಾಡುವವರು, **ಪುಲಕೀ** = ಧ್ಯಾನದಿಂದ ಪುಲಕಿತರಾದವರು, **ಪುಷ್ಟಿವರ್ಧನಃ** = ಪುಷ್ಟಿಯನ್ನು ಹೆಚ್ಚಿಸುವವರು.

ಪುತ್ರವತ್ ಪಾಲ್ಯಭಕ್ತೌಘಃ ಪುಣ್ಯಕೀರ್ತಿಃ ಪುರಸ್ಕೃತಃ।
ಪುಷ್ಪಪ್ರಿಯಃ ಪುಂಡ್ರಧಾರೀ ಪುರಸ್ಥಃ ಪುಣ್ಯವರ್ಧನಃ ॥ ೧೨೦॥

ಪುತ್ರವತ್ಪಾಲ್ಯಭಕ್ತೌಘಃ = ಭಕ್ತಸಮೂಹವನ್ನು ಮಕ್ಕಳಂತೆ ಪಾಲಿಸುವ, **ಪುಣ್ಯಕೀರ್ತಿಃ** = ಪವಿತ್ರಕೀರ್ತಿಯುಳ್ಳ, **ಪುರಸ್ಕೃತಃ** = ಬಹುಮಾನಿತರಾದ, **ಪುಷ್ಪಪ್ರಿಯಃ** = ಭಗವಂತನಿಂದ ಪೋಷಿಸಲ್ಪಟ್ಟವರಿಗೆ ಪ್ರಿಯರು, **ಪುಂಡ್ರಧಾರೀ** = ದ್ವಾದಶ ಪುಂಡ್ರ ಧರಿಸಿದವರು, **ಪುರಃಸ್ಥಃ** = ಭಕ್ತಮುಂದೆ ನಿಲ್ಲುವವರು, **ಪುಣ್ಯವರ್ಧನಃ** = ಪುಣ್ಯ ವೃದ್ಧಿಕಾರಕರು,

ಪೂರ್ಣಕಾಮಃ ಪೂರ್ವಭಾಷೀ ಪೃಥುಃ ಪೃಥುಕವರ್ಧನಃ।
ಪೃಷ್ಟಪ್ರಶ್ನಪರೀಹರ್ತಾ ಪೃಥಿವೀ ಕ್ಷೇಮಕಾರಕಃ ॥ ೧೨೧॥

ಪೂರ್ಣಕಾಮಃ = ಪೂರ್ಣಕಾಮರು, **ಪೂರ್ವಭಾಷೀ** = ಮೊದಲು ಮಾತಾಡುವವರು, **ಪೃಥುಃ** = ಮಹಾತ್ಮರು, **ಪೃಥಕವರ್ಧನಃ** = ಶಿಶುಗಳನ್ನು ಬೆಳೆಸುವವರು, **ಪೃಷ್ಟಪ್ರಶ್ನಪರೀಹರ್ತಾ** = ಕೇಳಿದ ಸಂಶಯ ಪರಿಹರಿಸುವವರು, **ಪೃಥಿವೀಕ್ಷೇಮಕಾರಕಃ** = ಲೋಕಕ್ಷೇಮವನ್ನುಂಟುಮಾಡುವವರು,

ಪೇಶಲಃ ಪ್ರೇತಭೀತಿಘ್ನಃ ಪೇಯಪಾದೋದಕಃ ಪ್ರಭುಃ।
ಪ್ರೇಂಖದ್ವಾಣೀ ವಿಲಾಸಶ್ಚ ಪ್ರೇರಕಃ ಪ್ರೇಮವರ್ಧನಃ ॥ ೧೨೨॥

ಪೇಶಲಃ = ಮೃದುಸ್ವಭಾವದವರು, **ಪ್ರೇತಭೀತಿಘ್ನಃ** = ಪ್ರೇತಗಳ ಭೀತಿಯನ್ನು ಪರಿಹರಿಸುವವರು, **ಪೇಯಪಾದೋದಕಃ** = ಇವರ ಪಾದೋದಕವು ಕುಡಿಯಲು ಯೋಗ್ಯವಾದದ್ದು, **ಪ್ರಭು** = ಸರ್ವಸಮರ್ಥರು, ***ಪ್ರೇಂಖದ್ ವಾಣೀ ವಿಲಾಸಃ** = ನರ್ತನಮಾಡುವ ಸರಸ್ವತೀ ವಿಲಾಸವುಳ್ಳವರು, **ಪ್ರೇರಕಃ** = ಸಜ್ಜನ ಪ್ರೇರಕರು, **ಪ್ರೇಮವರ್ಧನಃ** = ಭಗವದ್ಭಕ್ತಿಯನ್ನು ಹೆಚ್ಚಿಸುವವರು.

ಪೈಶುನ್ಯರಹಿತಃ ಪ್ರೋತಸುಖದಃ ಪೋಷಕಾಗ್ರಣೀಃ।
ಪ್ರೋತಧರ್ಮಾ ಪೌರುಷದಃ ಪೂರಕಃ ಪಂಕ್ತಿಪಾವನಃ ॥ ೧೨೩॥

ಪೈಶುನ್ಯರಹಿತಃ = ಮತ್ಸರರಹಿತರು, **ಪ್ರೋತಸುಖದಃ** = ನಿತ್ಯಸುಖದಾತೃಗಳು, **ಪೋಷಕಾಗ್ರಣೀಃ** = ಪೋಷಕರಲ್ಲಿ ಅಗ್ರಗಣ್ಯರು, **ಪ್ರೋತಧರ್ಮಾ** = ಧರ್ಮದಲ್ಲೀ ಮುಳುಗಿದವರು, **ಪೌರುಷದಃ** = ಪೌರುಷವನ್ನು ನೀಡುವವರು, **ಪೂರಕಃ** = ಅಭೀಷ್ಟಪೂರಕರು, **ಪಂಕ್ತಿಪಾವನಃ** = ಪಂಕ್ತಿಪಾವನರು.

ಫ

ಫಂಡಿತಃ ಫಂಕಹಾ ಫಂಪಾವಾಸೀ ಫಂಗುತ್ವವಾರಕಃ।
ಫಲೋದಯಕರಃ ಫಾಲದುರಕ್ಷರಮದಾಪಹೃತ್ ॥ ೧೨೪॥

ಫಂಡಿತಃ = ಪಂಡಿತರು, **ಫಂಕಹಾ** = ಪಾಪಪಂಕ ಕಳೆಯುವವರು, **ಫಂಪಾವಾಸೀ** = ಹಂಪೆಯಲ್ಲಿ ವಾಸಮಾಡುವವರು (ವ್ಯಾಸರಾಜರಾಗಿದ್ದಾಗ), **ಫಂಗುತ್ವವಾರಕಃ** = ಹೆಳವತ್ವಪರಿಹಾರಕರು, **ಫಲೋದಯಕರಃ** = ಫಲಲಭಿಸುವಂತೆ ಮಾಡುವವರು, **ಫಾಲದುರಕ್ಷರಮುದಾಪಹೃತ್** = ಕೆಟ್ಟ ಹಣೆಬರಹವನ್ನು ಅಳಿಸುವವರು,

ಫುಲ್ಲನೇತ್ರೋಽಥ ಫಲಿತತಪಸ್ಯಃ ಫರ್ಫರೀವಾಕ್।
ಫೂತ್ಕಾರೋಚ್ಚಾಟಿತಾನೇಕ ತಾಪತ್ರಯ ಪಿಶಾಚಕಃ ॥ ೧೨೫॥

ಫುಲ್ಲನೇತ್ರಃ = ಅರಳಿದ ಕಣ್ಣುಳ್ಳವರು, **ಫಲಿತತಪಸ್ಯಃ** = ಸಫಲ ತಪಶ್ಚರ್ಯೆ

* ಸರಸ್ವತಿಯು ಇವರ ನಾಲಿಗೆಯಲ್ಲಿ ಹಾವಭಾವವನ್ನು ತೋರುತ್ತಾ ನರ್ತಿಸುತ್ತಿರುವಳು.

ಯುಳ್ಳವರು, ಘರ್ಘರೀವಾಕ್ = ಮೃದುಮಾತುಳ್ಳವರು, **ಪೂತ್ಕಾರೋಚ್ಚಾಟಿತಾನೇಕ ತಾಪತ್ರಯ ಪಿಶಾಚಕಃ** = ಪೂತ್ಕಾರಶಬ್ದ ಮಾತ್ರದಿಂದಲೇ ತಾಪತ್ರಯ ಪಿಶಾಚಿಯನ್ನು ಓಡಿಸಿದವರು,

ಬ

ಘಾಂಟಾನೇಕಕೇತರಾಸಾಧ್ಯಕಾರ್ಯೋ ರಕ್ಷತು ಮಾಂ ಸದಾ।
ಬಲವಾನ್ ಬಹುದಾತಾ ಚ ಬದರೀ ಫಲಲೋಲುಪಃ ॥ ೧೨೬॥

ಘಾಂಟಾನೇಕೇತರಾಸಾಧ್ಯಕಾರ್ಯಃ = ಇತರರಿಗೆ ಅಸಾಧ್ಯವಾದ ಕಾರ್ಯವನ್ನು ಸುಲಭವಾಗಿ ಮಾಡುವವರು, **ಬಲವಾನ್** = ದೈವಬಲವುಳ್ಳವರು, **ಬಹುದಾತಾ** = ಬಹಳವಾಗಿ ಕೊಡುವವರೂ, **ಬದರೀಫಲಲೋಲುಪಃ** = ಬೋರೆ ಹಣ್ಣಿನಲ್ಲಿ ಆಸಕ್ತರೂ ಆದರ ರಾಯರು, **ಸದಾ ಮಾಂ ರಕ್ಷತು** = ಸರ್ವದಾ ರಕ್ಷಿಸಲಿ.

ಬಾಲಪ್ರಿಯೋ ಬ್ರಾಹ್ಮಣಾಗ್ರ್ಯೋ ಬಾಧಾಹಂತಾ ಚ ಬಾಹುದಃ।
ಬುದ್ಧಿದಾತಾ ಬುಧೋ ಬುದ್ಧಮತಘಾತೀ ಬುಧಪ್ರಿಯಃ ॥ ೧೨೭॥

ಬಾಲಪ್ರಿಯಃ = ಬಾಲಕಪ್ರಿಯರು, **ಬ್ರಾಹ್ಮಣಾಗ್ರ್ಯಃ** = ಶ್ರೇಷ್ಠಬ್ರಾಹ್ಮಣರು, **ಬಾಧಾಹಂತಾ** = ಬಾಧಾಪಹಾರಕರು, **ಬಾಹುದಃ** = ಬಾಹುಗಳನ್ನು ಕೊಡುವವರು, **ಬುದ್ಧಿದಾತಾ** = ಬುದ್ಧಿಪ್ರದರು, **ಬುಧಃ** = ಜ್ಞಾನಿಗಳು, **ಬುದ್ಧಮತಘಾತೀ** = ಬೌದ್ಧ ಮತವನ್ನು ನಿರಾಕರಿಸಿದವರು, **ಬುಧಪ್ರಿಯಃ** = ಜ್ಞಾನಿಪ್ರಿಯರು.

ವ

ವೃಂದಾವನಸ್ಥತೋಯೇನ ಸರ್ವತೀರ್ಥಫಲಪ್ರದಃ।
ವೈರಾಗ್ಯೋಲ್ಲಾಸಕರ್ತಾ ಚ ವೃಂದಾವನ ಸಮಾಶ್ರಯಃ ॥ ೧೨೮॥

ವೃಂದಾವನಸ್ಥತೋಯೇನ = ಬೃಂದಾವನದ ಅಭಿಷೇಕ ಜಲದಿಂದ, **ಸರ್ವ ತೀರ್ಥ ಫಲಪ್ರದಃ** = ಸಮಸ್ತ ತೀರ್ಥಕ್ಷೇತ್ರಫಲವನ್ನು ನೀಡುವ, **ವೈರಾಗ್ಯೋಲ್ಲಾಸ ಸಕರ್ತಾ** = ವೈರಾಗ್ಯದಲ್ಲೂ ಉಲ್ಲಾಸಕಾರಕರು, **ವೃಂದಾವನ ಸಮಾಶ್ರಯಃ** = ಬೃಂದಾ ವನದಲ್ಲಿರುವವರು,

ಬಿಲ್ವಪತ್ರಾರ್ಚನಪ್ರೀತೋ ಬಂಧುರೋಕ್ತಿಶ್ಚ ಬಂಧಹಾ।
ಬಂಧುರ್ಬಧಿರಹರ್ತಾ ಬಂಧುವಿದ್ವೇಷವಾರಣಃ ॥ ೧೨೯॥

ಬಿಲ್ವಪತ್ರಾರ್ಚನ ಪ್ರೀತಃ = ಹರಿಗರ್ಪಿತ ಬಿಲ್ವಪತ್ರಾರ್ಚನೆಯಿಂದ ಪ್ರೀತರು, **ಬಂಧುರೋಕ್ತಿಃ** = ಸುಂದರ ಮಾತುಗಳಾಡುವವರು, **ಬಂಧಹಾ**= ಬಂಧನವನ್ನು ಬಿಡಿಸುವವರು, **ಬಂಧುಃ** = ಅನಿಮಿತ್ತಬಂಧುವು, **ಬಧಿರಹರ್ತಾ** = ಕಿವುಡುತನ ಪರಿಹಾರಕರು, **ಬಂಧುದ್ವೇಷ ವಾರಣಃ** = ಬಂಧುಗಳಲ್ಲಿರುವ ದ್ವೇಷವನ್ನು ಪರಿಹರಿಸುವವರು,

ವಂಧ್ಯಾಪುತ್ರಪ್ರದತ್ವಾದ್ಯೈಃ ಯಥಾಯೋಗೇನ ಸೃಷ್ಟಿಕೃತ್।
ಭಹುಪ್ರಜಾಪಾಲಕಶ್ಚ ವೇತಾಲಾದಿಲಯಪ್ರದಃ ॥ ೧೩೦॥

ವಂಧ್ಯಾಪುತ್ರಪ್ರದತ್ವಾದ್ಯೈಃ= ಬಂಜೆಯರಿಗೆ ಪುತ್ರಸಂತಾನವನ್ನು ನೀಡುವುದೇ ಮೊದಲಾದವುಗಳಿಂದ, **ಯಥಾಯೋಗೇನ** = ತಮಗೆ ಅನುಗುಣವಾದ, **ಸೃಷ್ಟಿಕೃತ್** = ಸೃಷ್ಟಿಕರ್ತರೆನಿಸಿದವರು, **ಬಹುಪ್ರಜಾ ಪಾಲಕಃ** = ಬಹುಜನರ ಪಾಲಕರು, **ವೇತಾಲಾದಿ ಲಯಪ್ರದಃ**= ವೇತಾಳವೇ ಮೊದಲಾದವುಗಳನ್ನು ನಾಶಮಾಡುವವರು,

ಭ

ಭಕ್ತಾನಾಂ ಜಯಸಿದ್ಧ್ಯರ್ಥಂ ವಾದ್ಯಜ್ಞಾನಪ್ರದಃ ಸ್ವಯಂ।
ಭಗವದ್ಭಕ್ತ ವಿದ್ವೇಷ್ಟುಃ ಸದ್ಯಃ ಪ್ರತ್ಯಕ್ಷ ಬಂಧಕೃತ್ ॥ ೧೩೦॥

ಭಕ್ತಾನಾಂ= ವಿಷ್ಣುಭಕ್ತರಿಗೆ, **ಜಯಸಿದ್ಧ್ಯರ್ಥಂ**= ಜಯವನ್ನೀಯಲು, **ಸ್ವಯಂ** = ಸ್ವತಃ ತಾವೇ, **ವಾದ್ಯಜ್ಞಾನಪ್ರದಃ**= ವಾದಿಗಳಿಗೆ ಅಜ್ಞಾನನೀಡುವವರು, **ಭಗವದ್ಭಕ್ತ ವಿದ್ವೇಷ್ಟುಃ**= ಭಗವದ್ಭಕ್ತನನ್ನು ದ್ವೇಷಿಸುವವನಿಗೆ, **ಸದ್ಯಃ**= ಕೂಡಲೇ, **ಪ್ರತ್ಯಕ್ಷಬಂಧಕೃತ್** = ಪ್ರತ್ಯಕ್ಷವಾಗಿಯೇ ಬಂಧನವನ್ನು ಮಾಡುವವರು,

ಭಕ್ತಿದೋ ಭವ್ಯದಾತಾ ಚ ★**ಭಗಂದರನಿವಾರಣಃ।**
ಭವಸೌಖ್ಯಪ್ರದಃ ★**ಭರ್ಮಪೀಠೋ ಭಸ್ಮೀಕೃತಾಶುಭಃ** ॥ ೧೩೨॥

ಭಕ್ತಿದಃ = ಭಗವದ್ಭಕ್ತಿಯನ್ನು ನೀಡುವವರು, **ಭವ್ಯದಾತಾ ಚ** = ಮಂಗಳವನ್ನುಂಟುಮಾಡುವವರು, **ಭಗಂದರನಿವಾರಣಃ** = ಆಸನರೋಗವನ್ನು ನಿವಾರಿಸು

★ ಭಗಂದರ = ಆಸನಹುಣ್ಣು (Pistoola)
ಭರ್ಮಪೀಠ = ರಾಯರ ಹಿಂದಿನ ಪ್ರಹ್ಲಾದ ಹಾಗೂ ವ್ಯಾಸರಾಜರ ಅವತಾರಗಳಲ್ಲಿ ಸುವರ್ಣ ನಿರ್ಮಿತ ಸಿಂಹಾಸನದಲ್ಲಿ ಕುಳಿತವರು

ವವರು, ಭವಸೌಖ್ಯಪ್ರದಃ = ಸಾಂಸಾರಿಕ ಸೌಖ್ಯದಾತರು, ಭರ್ಮಪೀಠಃ = ಸುವರ್ಣ ಸಿಂಹಾಸನದಲ್ಲಿ ಕುಳಿತವರು, ಭಸ್ಮೀಕೃತಾಶುಭಃ = ಅಶುಭವನ್ನು ಸುಟ್ಟುಹಾಕಿದವರು,

ಭವಭೀತಿಹರೋ ಭಗ್ನದಾರಿದ್ರ್ಯೋ ಭಜನಪ್ರಿಯಃ।
ಭಾವಜ್ಞೋ ಭಾಸ್ಕರಪ್ರಖ್ಯೋ ಭಾಮತ್ಯಾಗೀ ಚ ಸೌಖ್ಯದಃ ॥ ೧೩೩॥

ಭವಭೀತಿ ಹರಃ = ಸಂಸಾರಭಯ ಭಂಜಕರು, ಭಗ್ನದಾರಿದ್ರ್ಯಃ = ದಾರಿದ್ರ್ಯ ಪರಿಹಾರಕರು, ಭಜನಪ್ರಿಯಃ = ಭಜಕರಿಗೆ ಪ್ರಿಯರು, ಭಾವಜ್ಞಃ = ಇಂಗಿತಜ್ಞರು, ಭಾಸ್ಕರಪ್ರಖ್ಯಃ = ಸೂರ್ಯನಂಥ ತೇಜಸ್ವಿಗಳು, ಭಾಮತ್ಯಾಗೀ = ಮನೋವಿಕಾರ ರಹಿತರು, ಭಾಗ್ಯದಃ = ಭಾಗ್ಯದಾತರು,

ಭಾವ್ಯರ್ಥ ಸೂಚಕೋ ಭಾರ್ಯಾಸಕ್ತಾನಾಮಪಿ ಸೌಖ್ಯದಃ।
ಭಕ್ತಭಾರಧರೋ ಭಕ್ತಾಧಾರೋ ಭೋಗಪ್ರಿಯಃ ಸದಾ ॥ ೧೩೪॥

ಭಾವ್ಯರ್ಥಸೂಚಕಃ = ಭವಿಷ್ಯದರ್ಥವನ್ನು ಸೂಚಿಸುವವರು, ಭಾರ್ಯಾಸಕ್ತಾನಾಮಪಿ ಸೌಖ್ಯದಃ = ಭಾರ್ಯೆಯಲ್ಲಿ ಆಸಕ್ತರಾದವರಿಗೂ ಸುಖದಾತೃಗಳು, ಭಕ್ತ ಭಾರಧರಃ = ಭಕ್ತರ ಭಾರವನ್ನು ಹೊತ್ತವರು, ಭಕ್ತಾಧಾರಃ = ಭಕ್ತರಿಗೆ ಆಧಾರ ಭೂತರು, ಸದಾ ಭೋಗಪ್ರಿಯಃ = ಅನಿಷಿದ್ಧ ಭೋಗಗಳನ್ನು ಅನುಭವಿಸುವವರು,

ಭಿಕ್ಷುರ್ಭೀಮಪದಾಸಕ್ತೋ ಭುಕ್ತಿಮುಕ್ತಿಫಲಪ್ರದಃ।
ಭೂತಪ್ರೇತ ಪಿಶಾಚಾದಿ ಭಯಪೀಡಾ ನಿವಾರಣಃ ॥ ೧೩೫॥

ಭಿಕ್ಷುಃ = ಸನ್ಯಾಸಿಶ್ರೇಷ್ಠರು, ಭೀಮಪದಾಸಕ್ತಃ = ಭೀಮನ ಪಾದದಲ್ಲಿ ಆಸಕ್ತರು, ಭುಕ್ತಿಮುಕ್ತಿ ಫಲಪ್ರದಃ = ಐಹಿಕ-ಪಾರತ್ರಿಕ ಭೋಗ ನೀಡುವವರು, ಭೂತಪ್ರೇತ ಪಿಶಾಚಾದಿ ಭಯಪೀಡಾ ನಿವಾರಣಃ = ಭೂತಪ್ರೇತಪಿಶಾಚಾದಿಗಳ ಭಯ ಹಾಗೂ ಪೀಡೆಯನ್ನು ನಿವಾರಿಸುವವರು,

ಭೂಮಾ ಭೂತಿಪ್ರದೋ ಭೂರಿದಾತಾ ಭೂಪತಿವಂದಿತಃ।
ಭ್ರೂಣಕರ್ತಾ ಭೃತ್ಯಭರ್ತಾ ಭಕ್ತವಶ್ಯಶ್ಚ ಭೇಷಜಮ್ ॥ ೧೩೬॥

ಭೂಮಾ = ಗುಣಪೂರ್ಣರು, ಭೂತಿಪ್ರದಃ = ಐಶ್ವರ್ಯದಾತರು, ಭೂರಿದಾತಾ = ಬಹಳವಾಗಿ ಕೊಡುವವರು, ಭೂಪತಿವಂದಿತಃ = ರಾಜಮಹಾರಾಜರು

ಗಳಿಂದ ವಂದಿತರು, **ಭ್ರೂಣಕರ್ತಾ** = ಭ್ರೂಣವನ್ನುಂಟುಮಾಡುವವರು, **ಭೃತ್ಯಭರ್ತಾ** = ಭೃತ್ಯಪೋಷಕರು, **ಭಕ್ತವಶ್ಯಃ** = ಭಕ್ತರಿಗೆ ವಶರಾದವರು, **ಭೇಷಜಂ** = ಭವರೋಗಕ್ಕೆ ಔಷಧಿಪ್ರಾಯರು,

ಭೈರವೋ ಭವರೋಗಸ್ಯ ಭೋಕ್ತಾ ಭೋಜನದಾಯಕಃ।
ಭೌರಿಕೋ ಭೌತಿಕಾರಿಷ್ಟಹರ್ತಾ ಭೌಮಜದೋಷಹಾ ॥ ೧೩೭॥

ಭವರೋಗಸ್ಯ ಭೈರವಃ = ಸಂಸಾರರೋಗಕ್ಕೆ ಭಯಂಕರರು, **ಭೋಕ್ತಾ** = ಭೋಗಿಗಳು, **ಭೋಜನದಾಯಕಃ** = ಭೋಜನದಾತರು, **ಭೌರಿಕಃ** = ಕೋಶಾಧ್ಯಕ್ಷರು, **ಭೌತಿಕಾರಿಷ್ಟಹರ್ತಾ** = ಆದಿಭೌತಿಕಾದಿ ಅನಿಷ್ಟಪರಿಹಾರಕರು, **ಭೌಮಜದೋಷಹಾ** = ಮಂಗಳ ದೋಷಪರಿಹಾರಕರು,

ಮ

ಭಂಗಪ್ರದೋಽರಿಮೋದಸ್ಯ ಭ್ರಾಂತಿಹೀನೋಽವತಾತ್ ಸ ಮಾಂ।
ಮಲ್ಲಿಕಾಕುಸುಮಾಸಕ್ತೋ ಮಥಿತಾನ್ಯಮತೋ ಮಹಾನ್ ॥ ೧೩೮॥

ಅರಿಮೋದಸ್ಯ ಭಂಗಪ್ರದಃ = ಶತ್ರುಗಳ ಸುಖಕ್ಕೆ ಭಂಗವನ್ನು ಉಂಟುಮಾಡುವವರು, **ಭ್ರಾಂತಿಹೀನಃ** = ಭ್ರಾಂತಿರಹಿತರು, **ಮಲ್ಲಿಕಾಕುಸುಮಾಸಕ್ತಃ** = ಮಲ್ಲಿಗೆ ಹೂವನ್ನು ಪ್ರೀತಿಸುವ, **ಮಥಿತಾನ್ಯಮತಃ** = ಅನ್ಯಮತಗಳನ್ನು ಮಥನ ಮಾಡಿದವರು, **ಮಹಾನ್ ಸಃ** = ಮಹಾತ್ಮರಾದ ರಾಯರು, **ಮಾಂ** = ನನ್ನನ್ನು, **ಅವತಾತ್** = ರಕ್ಷಿಸಲಿ,

ಮಸೃಣತ್ವಙ್ ಮರುತ್ಪ್ರಖ್ಯೋ ಮಹಾಂಧನಯನಪ್ರದಃ।
ಮಹೋದಯೋ ಮನ್ಯುಹೀನೋ ಮಹಾವೀರ ಪದಾರ್ಚಕಃ ॥ ೧೩೯॥

ಮಸೃಣತ್ವಕ್ = ಮೃದುವಾದ ಚರ್ಮವುಳ್ಳವರು, **ಮರುತ್ಪ್ರಖ್ಯಃ** = ಕರ್ಮಜ ದೇವತೆಗಳಿಗೆ ಸಮರು, **ಮಹಾಂಧನಯನಪ್ರದಃ** = ಜನ್ಮಾಂಧರಿಗೂ ನೇತ್ರದಾತೃಗಳು, **ಮಹೋದಯಃ** = ಶ್ರೇಷ್ಠವಾದ ಅವತಾರವುಳ್ಳವರು, **ಮನ್ಯುಹೀನಃ** = ಕೋಪ ವರ್ಜಿತರು, **ಮಹಾವೀರ ಪದಾರ್ಚಕಃ** = ಮಹಾವೀರನಾದ ಶ್ರೀರಾಮನ ಅರ್ಚಕರು,

ಮಲೀಮಸಮಲಧ್ವಂಸೀ ಮುಕುರಃ ಶಾಸ್ತ್ರಸಂವಿದಾಂ।
ಮಹಿಷೀಕ್ಷೇತ್ರಗೋ ಮಧ್ವಮತದುಗ್ಧಾಬ್ಧಿಚಂದ್ರಮಾಃ ॥ ೧೪೦॥

ಮಲೀಮಸಮಲಧ್ವಂಸೀ = ದುಷ್ಟರ ದುಷ್ಟತನವನ್ನು ನಾಶಮಾಡುವವರು, ಶಾಸ್ತ್ರಸಂವಿದಾಂ ಮುಕುರಃ = ಶಾಸ್ತ್ರವೇತ್ತರಿಗೆ ಆದರ್ಶರು, ಮಹಿಷೀಕ್ಷೇತ್ರಗಃ = ಮಹಿಷೀಕ್ಷೇತ್ರ ವಾಸಿಗಳು (ಸತ್ಯಸಂಧರಾಗಿ), ಮಧ್ವಮತದುಗ್ಧಾಬ್ಧಿಚಂದ್ರಮಾಃ = ಮಧ್ವಮತವೆಂಬ ಕ್ಷೀರಸಮುದ್ರದಲ್ಲಿ ಅವತರಿಸಿದ ಚಂದ್ರನಂತಿರುವವರು,

ಮನಃಪ್ರಮೋದಜನನೋ ಮತ್ತಾನಾಂ ಮದಭಂಜನಃ।
ಮಹಾಯಶಾ ಮಹಾತ್ಯಾಗೀ ಮಹಾಭೋಗೀ ಮಹಾಮನಾಃ ॥ ೧೪೦॥

ಮನಃಪ್ರಮೋದ ಜನನಃ = ಮನಸ್ಸಿಗೆ ಸಂತೋಷಜನಕರು, ಮತ್ತಾನಾಂ ಮದ ಭಂಜನಃ = ಮತ್ತರ ಮದಭಂಜಕರು, ಮಹಾಯಶಾಃ = ಮಹಾಯಶೋವಂತರು, ಮಹಾತ್ಯಾಗೀ = ಮಹಾತ್ಯಾಗ ಮಾಡುವವರು, ಮಹಾಭೋಗೀ = ಮಹಾಸುಖಾನುಭವವುಳ್ಳವರು, ಮಹಾಮನಾಃ = ಪ್ರಶಸ್ತಮನಸ್ಸುಳ್ಳವರು,

ಮಾರಿಕಾ ಭಯಹರ್ತಾ ಚ ಮಾತ್ಸರ್ಯರಹಿತಾಂತಕಃ।
ಮಾಯಾಹರ್ತಾ ಮಾನದಾತಾ ಮಾತಾ ಮಾರ್ಗಪ್ರದರ್ಶಕಃ ॥ ೧೪೨॥

ಮಾರಿಕಾಭಯ ಹರ್ತಾ = ಮಾರಿಬೇನೆಯ ಭಯ ಪರಿಹಾರಕರು, ಮಾತ್ಸರ್ಯ ರಹಿತಾಂತರಃ = ಮಾತ್ಸರ್ಯರಹಿತ ಹೃದಯರು, ಮಾಯಾಹರ್ತಾ = ಅಜ್ಞಾನ ಪರಿಹಾರಕರು, ಮಾನದಾತಾ = ಸುಜ್ಞಾನದಾತರು, ಮಾತಾ = ಮಾತೃಭಾವದವರು, ಮಾರ್ಗಪ್ರದರ್ಶಕಃ = ಮಾರ್ಗದರ್ಶಕರು,

ಮಾರ್ಗಣೇಷ್ಟ ಪ್ರದಾತಾ ಚ ಮಾಲತೀಕುಸುಮಪ್ರಿಯಃ।
ಮುಖ್ಯೋ ಮುಖ್ಯಗುರುರ್ಮುಖ್ಯಪಾಲಕೋ ಮಿತಭಾಷಣಃ ॥ ೧೪೩॥

ಮಾರ್ಗಣೇಷ್ಟಪ್ರದಾತಾ = ಬೇಡಿದವರ ಇಷ್ಟಾರ್ಥಪೂರಕರು, ಮಾಲತೀ ಕುಸುಮಪ್ರಿಯಃ = ಜಾಜೀಹೂಗಳ ಪ್ರಿಯರು, ಮುಖ್ಯಃ = ಜ್ಞಾನಿಪ್ರಮುಖರು, ಮುಖ್ಯ ಗುರುಃ = ಪ್ರಮುಖರಾದ ಗುರುಗಳು, ಮುಖ್ಯಪಾಲಕಃ = ಪಾಲಿಸುವವರಲ್ಲಿ ಮುಖ್ಯರು, ಮಿತಭಾಷಣಃ = ಮಿತಭಾಷಿಗಳು,

ಮಿಲಿತಾರಿರ್ಮುಮಾರ್ಷುಶ್ಚ ಮೂಕಾನಾಂ ದಿವ್ಯವಾಕ್ಪ್ರದಃ।
ಮೂರ್ಧಾಭಿಷಿಕ್ತೋ ಮೂಢತ್ವಹಾರೀ ಮೂರ್ಛನರೋಗಹಾ ॥ ೧೪೪॥

ಮೀಲಿತಾರಿಃ = ಶತ್ರುಗಳ ಬಾಯಿ ಮುಚ್ಚಿದವರು, **ಮುಮೂರ್ಷುಃ** = ಸ್ವಚ್ಛಂದ ಮೃತ್ಯುವನ್ನು ಇಚ್ಛಿಸಿದವರು, ಭೀಮನ ಗದಾಘಾತದಿಂದ ಮರಣವನ್ನು ಇಚ್ಛಿಸಿದವರು (ಬಾಹ್ಲೀಕಾವತಾರ), **ಮೂಕಾನಾಂ ದಿವ್ಯವಾಕ್‌ಪ್ರದಃ** = ಮೂಕರಿಗೆ ದಿವ್ಯವಾದ ವಾಕ್ ಶಕ್ತಿ ಪ್ರದಾತರು, **ಮೂರ್ಧಾಭಿಷಿಕ್ತಃ** = ವೇದಾಂತಸಾಮ್ರಾಜ್ಯದಲ್ಲಿ ಅಭಿಷಿಕ್ತರು, **ಮೂಢತ್ವಹಾರೀ** = ಮೌಢ್ಯವನ್ನು ಕಳೆಯುವವರು, **ಮೂರ್ಛನರೋಗಹಾ** = ಅಪಸ್ಮಾರವನ್ನು ಪರಿಹರಿಸುವವರು,

ಮೃಷಾವಚನ ಹೀನಶ್ಚ ಮೃತ್ಯುಹರ್ತಾ ಮೃದುಕ್ರಮಃ।
ಮೃದಂಗ ವಾದನರುಚಿರ್ಮೃಗ್ಯೋ ಮೃಷ್ಟಾನ್ನದಾಯಕಃ ॥೧೪೫॥

ಮೃಷಾವಚನ ಹೀನಃ = ಸುಳ್ಳನ್ನು ಹೇಳದವರು, **ಮೃತ್ಯುಹರ್ತಾ** = ಅಪಮೃತ್ಯ ಪರಿಹಾರಕರು, **ಮೃದುಕ್ರಮಃ** = ಕೋಮಲ ನಡಿಗೆಯವರು, **ಮೃದಂಗವಾಹನ ರುಚಿಃ** = ಮೃದಂಗವಾದ್ಯಾಭಿರುಚಿಯವರು, **ಮೃಗ್ಯಃ** = ತಿಳಿಯಲು ಯೋಗ್ಯರು, **ಮೃಷ್ಟಾನ್ನ ದಾಯಕಃ** = ಮಿಷ್ಟಾನ್ನದಾತರು,

ಮೃತ್ತಿಕಾಸೇವನೇನೈವ ಸರ್ವರೋಗ ನಿವಾರಣಃ।
ಮೇಧಾವೀ ಮೇಹರೋಗಘ್ನೋ ಮೇಧ್ಯರೂಪಶ್ಚ ಮೇದುರಃ ॥೧೪೬॥

ಮೃತ್ತಿಕಾಸೇವನೇನೈವ = ಕೇವಲ ಮೃತ್ತಿಕೆಯನ್ನು ಸೇವಿಸುವುದರಿಂದಲೇ, **ಸರ್ವರೋಗ ನಿವಾರಣಃ** = ಸಮಸ್ತರೋಗಗಳ ನಿವಾರಕರು, **ಮೇಧಾವೀ** = ಮೇಧಾಶಕ್ತಿಯನ್ನುಳ್ಳವರು, **ಮೇಹರೋಗಘ್ನಃ** = ಮಧುಮೇಹ ರೋಗವನ್ನು ನಾಶಮಾಡುವವರು, **ಮೇಧ್ಯರೂಪಃ** = ಪವಿತ್ರಸ್ವರೂಪರು, **ಮೇದುರಃ** = ಗುಣ ಪೂರ್ಣರು,

ಮೇಘಗಂಭೀರ ನಿನದೋ ಮೈಥಿಲೀ ವಲ್ಲಭಾರ್ಚಕಃ।
ಮೋದಕೃನ್ ಮೋದಕಾಸಕ್ತೋ ಮೋಹಹಾ ಮೋಕ್ಷದಾಯಕಃ ॥೧೪೭॥

ಮೇಘಗಂಭೀರ ನಿನದಃ = ಮೇಘದಂತೆ ಗಂಭೀರಸ್ವರವುಳ್ಳವರು, **ಮೈಥಿಲೀ ವಲ್ಲಭಾರ್ಚಕಃ** = ಸೀತಾಪತಿಯ ಅರ್ಚಕರು, **ಮೋದಕೃತ್** = ಸಂತೋಷವುಂಟು ಮಾಡುವವರು, **ಮೋಹಹಾ** = ಮೋಹವನ್ನು ನಾಶಪಡಿಸುವವರು, **ಮೋಕ್ಷದಾಯಕಃ** = ಮೋಕ್ಷದಾತೃಗಳು.

ಮೌನವ್ರತಪ್ರಿಯೋ ಮೌನೀ ಮಂತ್ರಾಲಯ ಕೃತಾಲಯಃ।
ಮಾಂಗಲ್ಯಬೀಜಮಹಿಮಾ ಮಂಡಿತೋ ಮಂಗಲಪ್ರದಃ ॥ ೧೪೮॥

ಮೌನವ್ರತಪ್ರಿಯಃ = ಮೌನವ್ರತಪ್ರಿಯರು, **ಮೌನೀ** = ಮನನಶೀಲರು, **ಮಂತ್ರಾಲಯಕೃತಾಲಯಃ** = ಮಂತ್ರಾಲಯದಲ್ಲಿ ವಾಸಮಾಡುವವರು, **ಮಾಂಗಲ್ಯ ಬೀಜಮಹಿಮಾ** = ಮಂಗಲಕರವಾದ ಬೀಜಾಕ್ಷರವನ್ನು ಬರೆದು ಧಾನ್ಯವನ್ನು ವೃದ್ಧಿ ಮಾಡಿದ ಮಹಿಮೆಯುಳ್ಳವರು, **ಮಂಡಿತಃ** = ಸಿಂಹಾಸನಾಲಂಕೃತರು, **ಮಂಗಲಪ್ರದಃ** = ಮಂಗಲಪ್ರದರು,

ಯ

ಯಷ್ಟಿಧಾರೀ ಯಮಾಸಕ್ತೋ ಯಾಚಕಾಮರ ಭೂರುಹಃ।
ಯಾತ ಯಾಮ ಪರಿತ್ಯಾಗೀ ಯಾಪ್ಯತ್ಯಾಗೀ ಯತೀಶ್ವರಃ ॥ ೧೪೯॥

ಯಷ್ಟಿಧಾರೀ = ದಂಡಧಾರಿಗಳು, **ಯಮಾಸಕ್ತಃ** = ಸಂಯಮಿಗಳು, **ಯಾಚಕಾ ಮರಭೂರುಹಃ** = ಯಾಚಕರ ಕಲ್ಪವೃಕ್ಷದಂತಿರುವವರು, **ಯಾತಯಾಮಪರಿತ್ಯಾಗೀ** = ಹಳಸಿದ ವಸ್ತುಗಳನ್ನು ಬಿಟ್ಟವರು, **ಯಾಪ್ಯತ್ಯಾಗೀ** = ಬಿಡಬೇಕಾದದ್ದನ್ನು ಬಿಟ್ಟವರು, **ಯತೀಶ್ವರಃ** = ಯತಿವರ್ಯರು,

ಯುಕ್ತಿಮಾನ್ ಯಕ್ಷಭೀತಿಘ್ನೋ ಯೋಗೀ ಯಂತಾ ಚ ಯಂತ್ರವಿತ್।
ಯೌಕ್ತಿಕೋ ಯೋಗ್ಯ ಫಲದೋ ಯೋಷಿತ್ ಸಂಗವಿವರ್ಜಿತಃ ॥ ೧೫೦॥

ಯುಕ್ತಿಮಾನ್ = ಯುಕ್ತಿಶಾಲಿಗಳು, **ಯಕ್ಷಭೀತಿಘ್ನಃ** = ಯಕ್ಷಗಂಧರ್ವರ ಭಯ ಹಾರಕರು, **ಯೋಗೀ** = ಸಾಧನೋಪಾಯವುಳ್ಳವರು, **ಯಂತಾ** = ನಿಯಾಮಕರು, **ಯಂತ್ರವಿತ್** = ಯಂತ್ರಜ್ಞಾನವುಳ್ಳವರು, **ಯೌಕ್ತಿಕಃ** = ಯುಕ್ತಿಪ್ರಯೋಗಮಾಡು ವವರು, **ಯೋಗ್ಯಫಲದಃ** = ಯೋಗ್ಯತೆಗೆ ತಕ್ಕಫಲ ನೀಡುವವರು, **ಯೋಷಿತ್ಸಂಗ ವಿವರ್ಜಿತಃ** = ಸ್ತ್ರೀಸಂಗ ವರ್ಜಿತರು (ವ್ಯಾಸಾವತಾರದಲ್ಲಿ)

ರ

ಯೋಗೀಂದ್ರತೀರ್ಥವಂದ್ಯಾಂಘ್ರಿರ್ಯಾನಾದ್ಯೈಶ್ವರ್ಯಭೋಗವಾನ್।
ರಸಿಕಾಗ್ರೇಸರೋ ರಮ್ಯೋ ರಾಷ್ಟ್ರಕ್ಷೇಮ ವಿಧಾಯಕಃ ॥ ೧೫೧॥

ಯೋಗೀಂದ್ರತೀರ್ಥ ವಂದ್ಯಾಂಘ್ರಿಃ = ಯೋಗೀಂದ್ರತೀರ್ಥರಿಂದ ವಂದ್ಯವಾದ

ಪಾದವುಳ್ಳವರು, ರಸಿಕಾಗ್ರೇಸರಃ = ಭಕ್ತರಸಿಕಾಗ್ರೇಸರರು, ರಮ್ಯಃ = ಮನೋಹರರು, **ರಾಷ್ಟ್ರಕ್ಷೇಮವಿಧಾಯಕಃ** = ರಾಷ್ಟ್ರ ಕ್ಷೇಮಕಾರಕರು,

ರಾಜಾಧಿರಾಜೋ ರಕ್ಷೋಘ್ನೋ ರಾಗದ್ವೇಷ ವಿವರ್ಜಿತಃ।
ರಾಜರಾಜಾಯಿತೋ ರಾಘವೇಂದ್ರತೀರ್ಥೋ ಜಯತ್ಯಲಮ್ ॥ ೧೫೨॥

ರಾಜಾಧಿರಾಜಃ = ರಾಜರಿಗೂ ರಾಜರು, ರಕ್ಷೋಘ್ನಃ = ರಾಕ್ಷಸರ ನಾಶಕರು, **ರಾಗದ್ವೇಷವಿವರ್ಜಿತಃ** = ರಾಗದ್ವೇಷವನ್ನು ಬಿಟ್ಟವರು, **ರಾಜರಾಜಾಯಿತಃ** = ಕುಬೇರ ನಂತಿರುವವರು, **ರಾಘವೇಂದ್ರತೀರ್ಥಃ** = ರಾಘವೇಂದ್ರ ತೀರ್ಥರು, **ಅಲಂಜಯಃ** = ಉತ್ಕೃಷ್ಟರಾಗಿದ್ದಾರೆ,

ರಿಕ್ತಪ್ರಿಯೋ ರೀತಿಮಾಂಶ್ಚ ರುಕ್ಮದೋ ರೂಕ್ಷವರ್ಜಿತಃ।
ರೇವಾಸ್ನಾಯೀ ರೈಕ್ವಖಂಡವ್ಯಾಖ್ಯಾತಾ ರೋಮಹರ್ಷಣಃ ॥ ೧೫೩॥

ರಿಕ್ತಪ್ರಿಯಃ = ದರಿದ್ರಭಕ್ತರನ್ನು ಪ್ರೀತಿಸುವವರು, **ರೀತಿಮಾನ್** = ಒಳ್ಳೆಯ ನಡತೆಯುಳ್ಳವರು, **ರುಕ್ಮದಃ** = ಸಂಪತ್ಪ್ರದಾತರು, **ರೂಕ್ಷ್ಮವರ್ಜಿತಃ** = ಕಾಠಿಣ್ಯರಹಿತರು, **ರೇವಾಸ್ನಾಯೀ** = ನರ್ಮದಾ ನದಿಯಲ್ಲಿ ಮಿಂದವರು, **ರೈಕ್ವಖಂಡವ್ಯಾಖ್ಯಾತಾ** = ರೈಕ್ವಮುನಿಯಿಂದುಪದಿಷ್ಟ ಸಂವರ್ಗಖಂಡವನ್ನು ವ್ಯಾಖ್ಯಾನಿಸಿದವರು, **ರೋಮ ಹರ್ಷಣಃ** = ಪುಳಕಿತರನ್ನಾಗಿಸುವವರು,

ಲ

ರೋಗಹಾ ರೌರವಾಘಘ್ನೋ ರಂತಾ ರಕ್ಷಣತತ್ಪರಃ।
ಲಕ್ಷ್ಮಣೋ ಲಾಭದೋ ಲಿಪ್ತಗಂಧೋ ಲೀಲಾಯತಿತ್ವಧೃತ್ ॥ ೧೫೪॥

ರೋಗಹಾ = ರೋಗಪರಿಹಾರಕರು, **ರೌರವಾಘಘ್ನಃ** = ರೌರವಕ್ಕೆ ಬೀಳುವ ಪಾಪನಾಶಕರು, **ರಂತಾ** = ಭಗವಂತನಲ್ಲಿ ರಮಿಸುವವರು, **ರಕ್ಷಣತತ್ಪರಃ** = ರಕ್ಷಣೆ ಯಲ್ಲಿ ಆಸಕ್ತರು, **ಲಕ್ಷ್ಮಣಃ** = ದ್ವಾದಶಚಿಹ್ನೆ ಧರಿಸಿ, ಸುಲಕ್ಷಣಗಾತ್ರರು, **ಲಾಭದಃ** = ಲಾಭದಾಯಕರು, **ಲಿಪ್ತಗಂಧಃ** = ಗಂಧಲೇಪನವುಳ್ಳವರು, **ಲೀಲಾಯತಿತ್ವಧೃತ್** = ಸ್ವೇಚ್ಛೆಯಿಂದಲೇ ಯತಿಯಾದವರು,

ಲುಪ್ತಾರಿಗರ್ವೋ ಲೂನಾಘಮೂಲೋ ಲೇಖರ್ಷಭಾಯಿತಃ।
ಲೋಕಪ್ರಿಯೋ ಲೌಲ್ಯಹೀನೋ ಲಂಕಾರಾತಿಪದಾರ್ಚಕಃ ॥ ೧೫೫॥

ಲುಪ್ತಾರಿಗರ್ವಃ = ಶತ್ರುಗಳ ಗರ್ವಮುರಿದವರು, **ಲೂನಾಘಮೂಲಃ** = ಪಾಪಕ್ಕೆ ಮೂಲವಾದ ಅಜ್ಞಾನವನ್ನು ಕಳೆದವರು, **ಲೇಖರ್ಷಭಾಯಿತಃ** = ಇಂದ್ರನಂತಿರುವವರು, **ಲೋಕಪ್ರಿಯಃ** = ಜನಪ್ರಿಯರಾದವರು, **ಲೌಲ್ಯಹೀನಃ** = ಚಾಂಚಲ್ಯರಹಿತರು, **ಲಂಕಾರಾತಿಪದಾರ್ಚಕಃ** = ರಾವಣ ಶತ್ರುವಾದ ಶ್ರೀ ರಾಮನ ಅರ್ಚಕರು,

ವ

ವ್ಯತೀಪಾತಾದಿ ದೋಷಘ್ನೋ ವ್ಯವಹಾರ ಜಯಪ್ರದಃ।
ವಾಚಂಯಮೋ ವರ್ಧಮಾನೋ ವಿವೇಕೀ ವಿತ್ತದೋ ವಿಭುಃ ॥ ೧೫೬॥

ವ್ಯತೀಪಾತಾದಿದೋಷಘ್ನಃ = ದುಃಶಕುನ ಮುಂತಾದ ದೋಷವನ್ನು ಕಳೆಯುವವರು, **ವ್ಯವಹಾರ ಜಯಪ್ರದಃ** = ವ್ಯವಹಾರದಲ್ಲಿ ಜಯ ನೀಡುವವರು, **ವಾಚಂಯಮಃ** = ಮೌನವ್ರತಾಚರಣೆಯುಳ್ಳವರು, **ವರ್ಧಮಾನಃ** = ವೃದ್ಧಿಯನ್ನು ಹೊಂದುವವರು, **ವಿವೇಕೀ** = ವಿವೇಕಶಾಲಿಗಳು, **ವಿತ್ತದಃ** = ಧನದಾತರು, **ವಿಭುಃ** = ಪ್ರಭುಗಳು,

ವ್ಯಂಗಸ್ವಂಗ ಪ್ರದೋ ವ್ಯಾಘ್ರಭಯಹಾ ವಜ್ರಭೀತಿಹೃತ್।
ವಕ್ತಾ ವದಾನ್ಯೋ ವಿನಯೀ ವಮಿಹಾ ವ್ಯಾಧಿಹಾರಕಃ ॥ ೧೫೭॥

ವ್ಯಂಗಸ್ವಂಗಪ್ರದಃ = ಅಂಗವಿಕಲರಿಗೆ ಅಂಗಸೌಷ್ಠವವನ್ನು ನೀಡುವವರು, **ವ್ಯಾಘ್ರಭಯಹಾ** = ವ್ಯಾಘ್ರಭಯಪರಿಹಾರಕರು, **ವಜ್ರಭೀತಿಹೃತ್** = ಸಿಡಿಲಿನ ಭಯ ಪರಿಹಾರಕರು, **ವಕ್ತಾ** = ಉಪದೇಶಕರು, **ವದಾನ್ಯಃ** = ದಾನಶೀಲರು, **ವಿನಯೀ** = ವಿನೀತರು, **ವಮಿಹಾ** = ವಾಂತಿ ಮಾಡುವ ರೋಗ ಪರಿಹಾರಕರು, **ವ್ಯಾಧಿಕಾರಕಃ** = ದೈಹಿಕ ರೋಗಗಳನ್ನು ಹೋಗಲಾಡಿಸುವವರು,

ವಿನೀತೋ ವಿದಿತಾಶೇಷೋ ವಿಪತ್ತಿಪರಿಹಾರಕಃ।
ವಿಶಾರದೋ ವ್ಯಸನಹಾ ವಿಪ್ರಲಾಪ ವಿವರ್ಜಿತಃ ॥ ೧೫೮॥

ವಿನೀತಃ = ವಿನಯಶಾಲಿಗಳು, **ವಿದಿತಾಶೇಷಃ** = ಸಮಸ್ತವನ್ನು ತಿಳಿದವರು, **ವಿಪತ್ತಿ ಪರಿಹಾರಕಃ** = ವಿಪತ್ತುಗಳನ್ನು ಪರಿಹಾರಕರು, **ವಿಶಾರದಃ** = ಸಮಸ್ತವಿದ್ಯಾವಿಶಾರದರು, **ವ್ಯಸನಹಾ** = ದುಶ್ಚಟವನ್ನು ಪರಿಹರಿಸುವವರು, **ವಿಪ್ರಲಾಪವಿವರ್ಜಿತಃ** = ಅನರ್ಥಕಮಾತನ್ನು ಆಡದವರು,

ವಿಷಘ್ನೋ ವಿಸ್ಮಯಕರೋ ವಿನುತಾಂಘ್ರಿರ್ವಿಕಲ್ಪಹೃತ್।
ವಿನೇತಾ ವಿಕ್ರಮಶ್ಲಾಘ್ಯೋ ವಿಲಾಸೀ ವಿಮಲಾಶಯಃ ॥೧೫೯॥

ವಿಷಘ್ನಃ = ವಿಷಪರಿಹಾರಕರು, **ವಿಸ್ಮಯಕರಃ** = ಆಶ್ಚರ್ಯಜನಕರು, **ವಿನುತಾಂಘ್ರಿಃ** = ಪ್ರಶಂಸನೀಯ ಪಾದಗಳುಳ್ಳವರು, **ವಿಕಲ್ಪಹೃತ್** = ಭ್ರಾಂತಿ ಪರಿಹಾರಕರು, **ವಿನೇತಾ** = ವಿಶಿಷ್ಟನಾಯಕರು, **ವಿಕ್ರಮಶ್ಲಾಘ್ಯಃ** = ಶ್ಲಾಘ್ಯವಾದ ಪರಾ ಕ್ರಮವುಳ್ಳವರು, **ವಿಲಾಸೀ** = ವಿಲಾಸವುಳ್ಳವರು, **ವಿಮಲಾಶಯಃ** = ನಿರ್ಮಲಾಂತಃ ಕರಣವುಳ್ಳವರು,

ವಿತಂಡಾವರ್ಜಿತೋ ವ್ಯಾಪ್ತೋ ವ್ರೀಹಿದೋ ವೀತಕಲ್ಮಷಃ।
ವ್ಯುಷ್ಟಿದೋ ವೃಷ್ಟಿದೋ ವೃತ್ತಿದಾತಾ ವೇದಾಂತಪಾರಗಃ ॥೧೬೦॥

ವಿತಂಡಾವರ್ಜಿತಃ = ಕ್ಷುಲ್ಲಕವಾಗಿ ಮಾತನಾಡದವರು, **ವ್ಯಾಪ್ತಃ** = ಸರ್ವತ್ರ ವ್ಯಾಪ್ತರು, **ವ್ರೀಹಿದಃ** = ಧಾನ್ಯವನ್ನು ನೀಡುವವರು, **ವೀತಕಲ್ಮಶಃ** = ಕಲ್ಮಷರಹಿತರು, **ವ್ಯುಷ್ಟಿದಃ** = ಸಮೃದ್ಧಿನೀಡುವವರು, **ವೃಷ್ಟಿದಃ** = ಮಳೆಗರೆಯುವರು, **ವೇದಾಂತಪಾರಗಃ** = ವೇದಾಂತಪಾರಂಗತರು,

ವೈದ್ಯೋ ವೈಭವದಾತಾ ಚ ವೈತಾಲಿಕ ವರಸ್ತುತಃ।
ವೈಕುಂಠಭಜನಾಸಕ್ತೋ ವೋಢಾ ವಂಶಾಭಿವೃದ್ಧಿಕೃತ್ ॥೧೬೧॥

ವೈದ್ಯಃ = ರೋಗಚಿಕಿತ್ಸಕರು, **ವೈಭವದಾತಾ** = ಘನತೆಯನ್ನು ನೀಡುವವರು, **ವೈತಾಲಿಕ ವರಸ್ತುತಃ** = ಭಟ್ಟಂಗಿಗಳಿಂದ ಸ್ತುತರು, **ವೈಕುಂಠಭಜನಾಸಕ್ತಂ** = ಭಗವಂತನ ಭಜನೆಯಲ್ಲಿ ಆಸಕ್ತರು, **ವೋಢಾ** = ರಕ್ಷಣೆಯ ಭಾರ ಹೊತ್ತವರು, **ವಂಶಾಭಿವೃದ್ಧಿಕೃತ್** = ವಂಶಾಭಿವೃದ್ಧಿ ಮಾಡುವವರು,

ಶ

ವಂಚನಾರಹಿತೋ ವಂಧ್ಯಾವತ್ಸದೋ ವರದಾಗ್ರಣೀಃ।
ಶರಣಂ ಶಮಸಂಪನ್ನಃ ಶರ್ಕರಾಮಧುಭಾಷಣಃ ॥ ೧೬೨॥

ವಂಚನಾರಹಿತಃ = ಕಪಟವಿಲ್ಲದವರು, **ವಂಧ್ಯಾವತ್ಸದಃ** = ಬಂಜೆಗೆ ಸಂತಾನ ನೀಡುವವರು, **ವರದಾಗ್ರಣೀಃ** = ವರ ನೀಡುವವರಲ್ಲಿ ಅಗ್ರಗಣ್ಯರು, **ಶರಣಂ** = ರಕ್ಷಕರು, **ಶಮಸಂಪನ್ನಃ** = ಭಗವನ್ನಿಷ್ಟಬುದ್ಧಿಯವರು, **ಶರ್ಕರಾಮಧುಭಾಷಣಃ** = ಸಕ್ಕರೆ, ಜೇನಿನಂತಹ ಮಾತುಗಾರರು,

ಶರೀರ ಕ್ಷೇಮಕಾರೀ ಚ ಶಕ್ತಿಮಾನ್ ಶಶಿಸುಂದರಃ|
ಶಾಪಾನುಗ್ರಹ ಶಕ್ತಶ್ಚ ಶಾಸ್ತಾ ಶಾಸ್ತ್ರ ವಿಶಾರದಃ ॥ ೧೬೩॥

ಶರೀರಕ್ಷೇಮಕಾರೀ = ಶರೀರಕ್ಕೆ ಕ್ಷೇಮವನ್ನುಂಟುಮಾಡುವವರು, **ಶಕ್ತಿಮಾನ್** = ಶಕ್ತಿಶಾಲಿಗಳು, **ಶಶಿಸುಂದರಃ** = ಚಂದ್ರನಂತೆ ಸುಂದರರು, **ಶಾಪಾನುಗ್ರಹಶಕ್ತಃ** = ಶಾಪಗ್ರಸ್ತರಲ್ಲೂ ಅನುಗ್ರಹಮಾಡಲು ಶಕ್ತರಾದವರು, **ಶಾಸ್ತಾ** = ಶಾಸನ ಮಾಡುವವರು, **ಶಾಸ್ತ್ರ ವಿಶಾರದಃ** = ಶಾಸ್ತ್ರ ಪಂಡಿತರು,

ಶಾಂತಃ ಶಿರಃ ಶೂಲಹರ್ತಾ ಶಿವಃ ಶಿಖರಿಣೀ ಪ್ರಿಯಃ|
ಶಿವದಃ ಶಿಶಿರಃ ಶ್ಲಾಘ್ಯಃ ಶ್ರದ್ಧಾಲುಃ ಶ್ರೀ ಪ್ರದಾಯಕಃ ॥ ೧೬೪॥

ಶಾಂತಃ = ಶಾಂತಸ್ವಭಾವದವರು, **ಶಿರಃ ಶೂಲಹರ್ತಾ** = ತಲೆನೋವನ್ನು ಪರಿಹರಿಸುವವರು, **ಶಿವಃ** = ಮಂಗಳಸ್ವರೂಪರು, **ಶಿಖರಿಣೀ ಪ್ರಿಯಃ** = ಸಕ್ಕರೆ ಸೇರಿಸಿದ ಮೊಸರಿನ ಪ್ರಿಯರು, **ಶಿವದಃ** = ಮಂಗಲಪ್ರದರು, **ಶಿಶಿರಃ** = ಆಹ್ಲಾದಕರು, **ಶ್ಲಾಘ್ಯಃ** = ಶ್ಲಾಘ್ಯ ಗುಣೋಪೇತರು, **ಶ್ರದ್ಧಾಲುಃ** = ಧಾರ್ಮಿಕ ನಂಬಿಕೆಯುಳ್ಳವರು, **ಶ್ರೀ ಪ್ರದಾಯಕಃ** = ಸಂಪತ್ಪ್ರದಾಯಕರು,

ಶೀಘ್ರಪ್ರಸಾದಃ ಶೀತಘ್ನಃ ಶುದ್ಧಿಕೃತ್ ಶುಭವರ್ಧನಃ|
ಶ್ರುತವಾನ್ ಶೂನ್ಯಹಾ ಶೂರಃ ಶ್ರೇಷ್ಠಃ ಶುಶ್ರೂಷ ಸೌಖ್ಯದಃ ॥ ೧೬೫॥

ಶೀಘ್ರಪ್ರಸಾದತಃ = ಬೇಗನೆ ಪ್ರಸನ್ನರಾಗುವವರು, **ಶೀತಘ್ನಃ** = ಶೀತರೋಗ ನಾಶಕರು, **ಶುದ್ಧಿಕೃತ್** = ಶುದ್ಧಿಕಾರಕರು, **ಶುಭವರ್ಧನಃ** = ಶುಭವನ್ನು ವೃದ್ಧಿಸುವವರು, **ಶ್ರುತವಾನ್** = ಅಧಿಕವಾಗಿ ಶಾಸ್ತ್ರಶ್ರವಣ ಮಾಡಿದವರು, **ಶೂನ್ಯಹಾ** = ಶೂನ್ಯತೆಯನ್ನು ಕಳೆಯುವವರು, **ಶೂರಃ** = ಶೂರರು, **ಶ್ರೇಷ್ಠಃ** = ಶ್ರೇಷ್ಠರು, **ಶುಶ್ರೂಷು ಸೌಖ್ಯದಃ** = ಭಜಕಜನರಿಗೆ ಸೌಖ್ಯದಾತೃಗಳು,

ಶ್ವೇತವಸ್ತ್ರಪ್ರಿಯಃ ಶೈಲವಾಸೀ ಶೈವಪ್ರಭಂಜನಃ|
ಶೋಕಹರ್ತಾ ಶೋಭನಾಂಗಃ ಶೌರ್ಯೌದಾರ್ಯಗುಣಾನ್ವಿತಃ ॥ ೧೬೬॥

ಶ್ವೇತವಸ್ತ್ರಪ್ರಿಯಃ = ಶುಕ್ಲಾಂಬರಧಾರೀ ಭಗವದ್ಭಕ್ತರು, **ಶೈಲವಾಸೀ** = ತಪಸ್ಸಿಗಾಗಿ ಶೈಲದಲ್ಲಿ ವಾಸಿಸುವವರು, **ಶೈವಪ್ರಭಂಜನಃ** = ಮಧುರೆಯ ಭೈರವಭಟ್ಟನೆಂಬಶೈವನನ್ನು ಖಂಡಿಸಿದವರು, **ಶೋಭನಾಂಗಃ** = ಸುಲಕ್ಷಣ

ಶರೀರವುಳ್ಳವರು, **ಶೌರ್ಯೌದಾರ್ಯಗುಣಾನ್ವಿತಃ** = ಶೌರ್ಯ ಉದಾರತೆ ಗುಣ ವುಳ್ಳವರು,

ಶ್ಲೇಷ್ಮಹರ್ತಾ ಶಂಕರಶ್ಚ ಶೃಂಖಲಾಬಂಧಮೋಚಕಃ।
ಶೃಂಗಾರಪ್ರೀತಿಜನಕಃ ಶಂಕಾಹಾರೀ ಚ ಶಂಸಿತಃ ॥೧೬೭॥

ಶ್ಲೇಷ್ಮಹರ್ತಾ = ಕಫದೋಷಹಾರಕರು, **ಶಂಕರಃ** = ಸುಖದಾತರು, **ಶೃಂಖಲಾ ಬಂಧಮೋಚಕಃ** = ಸಂಕೋಲೆಯ ಬಂಧದಿಂದ ಮೋಚನಗೊಳಿಸಿದವರು, **ಶೃಂಗಾರ ಪ್ರೀತಿ ಜನಕಃ** = ಶೃಂಗಾರದಲ್ಲಿ ಪ್ರೀತಿಯನ್ನುಂಟುಮಾಡುವವರು, **ಶಂಕಾಹಾರೀ** = ಸಂಶಯ ಪರಿಹಾರಕರು, **ಶಂಸಿತಃ** = ಪ್ರಶಂಸಿಸಲ್ಪಟ್ಟವರು,

ಷ

ಷಂಢಪುಂಸ್ತ್ವಪ್ರದಃ ಷೋಢಾ ಷಡ್ವೈರಿರಹಿತಃ ಸದಾ।
ಭೂಯಾತ್ ಷೋಡಶಮಾಂಗಲ್ಯ ಪ್ರದಾತಾ ಷಟ್ಪ್ರಯೋಗವಿತ್ ॥೧೬೮॥

ಷಂಢಪುಂಸ್ತ್ವಪ್ರದಃ = ನಪುಂಸಕರಿಗೆ ಪುಂಸ್ತ್ವಪ್ರದರು, **ಷೋಢಾ** = ಸಹನ ಶೀಲರು, **ಸದಾಷಡ್ವೈರಿರಹಿತಃ** = ಯಾವಾಗಲೂ ಕಾಮಾದಿ ಆರುಶತ್ರುರಹಿತರು, **ಷಟ್ ಪ್ರಯೋಗವಿತ್** = ಸಂಧಿ, ವಿಗ್ರಹಾದಿ ಆರು ಪ್ರಯೋಜತಜ್ಞರು, **ಷೋಡಶ ಮಾಂಗಲ್ಯ ಪ್ರದಾತಾ** = ಹದಿನಾರು ಮಂಗಲವಸ್ತು ಪ್ರದಾತರಾಗಿ, **ಭೂಯಾತ್** = ಆಗಲಿ,

ಸ

ಸತ್ಯಸಂಧಃ ಸಮಾಧಿಸ್ಥಃ ಸರಲಃ ಸತ್ತಮಃ ಸುಖೀ।
ಸಮರ್ಥಃ ಸಜ್ಜನಃ ಸಾಧುಃ ಸಾಧೀಯಾನ್ ಸಂಪ್ರದಾಯದಃ ॥೧೬೯॥

ಸತ್ಯಸಂಧಃ = ಸತ್ಯಪ್ರತಿಜ್ಞೆಯುಳ್ಳವರು, ಸತ್ಯಸಂಧರು, **ಸಮಾಧಿಸ್ಥಃ** = ಸಮಾಧಿ ಅವಸ್ಥೆಯಲ್ಲಿರುವವರು, **ಸರಲಃ** = ಸರಳ ವ್ಯಕ್ತಿಗಳು, **ಸತ್ತಮಃ** = ಅತ್ಯಂತ ಶ್ರೇಷ್ಠರು, **ಸುಖೀ** = ಸುಖಿಗಳು, **ಸಮರ್ಥಃ** = ಅಘಟಿತಘಟನಾಶಕ್ತರು, **ಸಜ್ಜನಃ** = ಸಜ್ಜನರು, **ಸಾಧುಃ** = ಸಾಧುಗಳು, **ಸಾಧೀಯಾನ್** = ಅತ್ಯಂತ ಶ್ರೇಷ್ಠರಾದವರು, **ಸಂಪ್ರದಾಯದಃ** = ವೈಷ್ಣವಸಂಪ್ರದಾಯ ನೀಡಿದವರು,

ಸಾತ್ವಿಕಃ ಸಾಹಸೀ ಸ್ವಾಮೀ ಸಾರ್ವಭೌಮತ್ವ ಸಾರವಿತ್।
ಸರ್ವಾವಗುಣಹೀನಶ್ಚ ಸದಾಚಾರಾನುಮೋದಕಃ ॥೧೭೦॥

ಸಾತ್ವಿಕಃ = ಸಾತ್ವಿಕ ಸ್ವಭಾವವುಳ್ಳ, **ಸಾಹಸೀ** = ಸಾಹಸಿಗಳಾದ, **ಸ್ವಾಮೀ** = ಸ್ವಾಮಿಗಳಾದ, **ಸಾರ್ವಭೌಮಃ** = ಗುರುಸಾರ್ವಭೌಮರಾದ, **ಸಾರವಿತ್** = ಸಾರಾಸಾರವೇತ್ತರಾದ, **ಸರ್ವಾವಗುಣಹೀನಃ** = ಸಮಸ್ತ ದುರ್ಗುಣವನ್ನು ಬಿಟ್ಟ, **ಸದಾಚಾರಾನುಮೋದಕಃ** = ಸದಾಚಾರವನ್ನು ಅನುಮೋದಿಸುವವರಾದ,

ಸರ್ವಭೂತ ದಯಾಶಾಲೀ ಸತ್ಯಧರ್ಮರತಃ ಸಮಃ।
ಸ್ವನಾಮಕೀರ್ತನಾದ್ ವೇದಶಾಸ್ತ್ರಾರ್ಥ ಸಿದ್ಧಿದಃ ॥ ೧೭೧॥

ಸರ್ವಭೂತದಯಾಶಾಲೀ = ಎಲ್ಲಾ ಪ್ರಾಣಿಗಳಲ್ಲೂ ದಯೆಯುಳ್ಳ, **ಸತ್ಯಧರ್ಮರತಃ** = ಸತ್ಯ ಹಾಗೂ ಧರ್ಮಗಳಲ್ಲಿ ಆಸಕ್ತರಾದ, **ಸಮಃ** = ಸುಖದುಃಖಗಳಲ್ಲಿ ಸಮರಾದ, **ಸ್ವನಾಮಕೀರ್ತನಾದ್** = ತಮ್ಮ ಹೆಸರನ್ನು ಕೀರ್ತನ ಮಾಡುವುದರಿಂದ, **ವೇದಶಾಸ್ತ್ರಾರ್ಥಸಿದ್ಧಿದಃ** = ವೇದಶಾಸ್ತ್ರಗಳ ಅರ್ಥಜ್ಞಾನವನ್ನುಂಟುಮಾಡುವ,

ಸ್ವಭಕ್ತಾನಾಂ ದುರಾಚಾರಸಹನಃ ಸುಸ್ಮಿತಾನನಃ।
ಸರ್ವತಂತ್ರ ಸ್ವತಂತ್ರಶ್ಚ ಸುಧೀಂದ್ರಕರ ಕಂಜಜಃ ॥ ೧೭೨॥

ಸ್ವಭಕ್ತಾನಾಂ = ತಮ್ಮ ಭಕ್ತರ, **ದುರಾಚಾರ ಸಹನಃ** = ದುರಾಚಾರವನ್ನು ಸಹಿಸುವ, **ಸುಸ್ಮಿತಾನನಃ** = ಮಂದಹಾಸ ಮುಖವುಳ್ಳ, **ಸರ್ವತಂತ್ರಸ್ವತಂತ್ರಃ** = ಸರ್ವಶಾಸ್ತ್ರಗಳಲ್ಲೂ ಸ್ವತಂತ್ರರಾದ, **ಸುಧೀಂದ್ರಕರ ಕಂಜಜಃ** = ಸುಧೀಂದ್ರತೀರ್ಥ ಕರಕಮಲ ಸಂಜಾತರಾದ,

ಸಿದ್ಧಿದಃ ಸಿದ್ಧಸಂಕಲ್ಪಃ ಸಿದ್ಧಾರ್ಥಃ ಸಿದ್ಧಿಸಾಧನಃ।
ಸ್ವಪ್ನವಕ್ತಾ ಸ್ವಾದುವೃತ್ತಿಃ ಸ್ವಸ್ತಿದಾತಾ ಸಭಾ ಜಯೀ ॥ ೧೭೩॥

ಸಿದ್ಧಿದಃ = ತಪಸ್ಸಿದ್ಧಿಯನ್ನು ನೀಡುವ, **ಸಿದ್ಧಸಂಕಲ್ಪಃ** = ಬಯಸಿದ್ದೆಲ್ಲವನ್ನೂ ಪಡೆಯುವ, **ಸಿದ್ಧಾರ್ಥಃ** = ಕೃತಾರ್ಥರಾದ, **ಸಿದ್ಧಿಸಾಧನಃ** = ಸಿದ್ಧವಾದ ಯೋಗೋಪಾಯವುಳ್ಳ, **ಸ್ವಪ್ನವಕ್ತಾ** = ಸ್ವಪ್ನದಲ್ಲಿ ಬಂದು ಸಲಹೆನೀಡುವ, **ಸ್ವಾದುವೃತ್ತಿಃ** = ಮನಸ್ಸಿಗೆ ಹಿತವಾದ ವೃತ್ತಿಯುಳ್ಳ, **ಸ್ವಸ್ತಿದಾತಾ** = ಮಂಗಳದಾಯಕರು, **ಸಭಾಜಯೀ** = ಸಭೆಗಳಲ್ಲಿ ಜಯಗಲಿಸುವವರು,

ಸೀಮಾವಾನ್ ಸುರಭಿಃ ಸೂನುದಾತಾ ಸೂನೃತಭಾಷಣಃ।
ಸುಗ್ರೀವಃ ಸುಮನಾಃ ಸ್ನಿಗ್ಧಃ ಸೂಚಕಃ ಸೇವಕೇಷ್ಟದಃ ॥ ೧೭೪॥

ಸೀಮಾವಾನ್ = ಮರ್ಯಾದಾ ಪುರುಷರು, **ಸುರಭಿಃ** = ಸುಗಂಧವುಳ್ಳವರು, **ಸೂನುದಾತಾ** = ಪುತ್ರದಾಯಕರು, **ಸೂನೃತಭಾಷಣಃ** = ಸಮೀಚೀನ ಭಾಷಣವುಳ್ಳವರು, **ಸುಗ್ರೀವಃ** = ಸುಂದರಕಂಠವುಳ್ಳವರು, **ಸುಮನಾಃ** = ಶುದ್ಧಾಂತಃಕರಣವುಳ್ಳವರು, **ಸ್ನಿಗ್ಧಃ** = ಸ್ನೇಹಪೂರ್ಣರು, **ಸೂಚಕಃ** = ಭವಿಷ್ಯಸೂಚಕರು, **ಸೇವಕೇಷ್ಟದಃ** = ದಾಸರಿಗೆ ಇಷ್ಟಪೂರೈಸುವರರು.

ಸೇತುಃ ಸ್ವೈರಚರಃ ಸೌಮ್ಯ ಸೌಮ್ಯಃ ಸೌಭಾಗ್ಯದಾಯಕಃ।
ಸೋಮಭಾಃ ಸಂಮತಃ ಸಂಧಿಕರ್ತಾ ಸಂಸಾರಸೌಖ್ಯದಃ ॥ ೧೭೫॥

ಸೇತುಃ = ಸಂಸಾರತಾರಕರು, **ಸ್ವೈರಚರಃ** = ಸ್ವತಂತ್ರರು, **ಸೌಮ್ಯಸೌಮ್ಯಃ** = ಅತ್ಯಂತ ಸೌಮ್ಯಗುಣವುಳ್ಳವರು, **ಸೌಭಾಗ್ಯದಾಯಕಃ** = ಸೌಭಾಗ್ಯನೀಡುವವರು, **ಸೋಮಭಾಃ** = ಚಂದ್ರನಂತೆ ಕಾಂತಿಯುಳ್ಳವರು, **ಸಂಮತಃ** = ಎಲ್ಲರಿಗೂ ಬೇಕಾದವರು, **ಸಂಧಿಕರ್ತಾ** = ಸಂಧಾನಕಾರಕರು, **ಸಂಸಾರಸೌಖ್ಯದಃ** = ಸಂಸಾರಸೌಖ್ಯ ನೀಡುವವರು,

ಸಂಖ್ಯಾವಾನ್ ಸಂಗರಹಿತಃ ಸಂಗ್ರಹೀ ಸಂತತಿಪ್ರದಃ।
ಸ್ಮೃತಿಮಾತ್ರೇಣ ಸಂತುಷ್ಟಃ ಸರ್ವವಿದ್ಯಾ ವಿಶಾರದಃ ॥ ೧೭೬॥

ಸಂಖ್ಯಾವಾನ್ = ವಿದ್ವಾಂಸರು, **ಸಂಗರಹಿತಃ** = ಐಹಿಕ ಸಂಗ ತ್ಯಜಿಸಿದವರು, **ಸಂಗ್ರಹೀ** = ಅಪಾರಶಿಷ್ಯ ಸಂಗ್ರಹವುಳ್ಳವರು, **ಸಂತತಿಪ್ರದಃ** = ಸಂತಾನ ನೀಡುವವರು, **ಸ್ಮೃತಿಮಾತ್ರೇಣ ಸಂತುಷ್ಟಃ** = ಸ್ಮರಣ ಮಾತ್ರದಿಂದಲೇ ಸಂತುಷ್ಟರಾಗುವವರು, **ಸರ್ವವಿದ್ಯಾ ವಿಶಾರದಃ** = ಸಕಲ ವಿದ್ಯಾ ಪಾರಂಗತರು,

ಸ/ಹ

ಸುಕಲಃ ಸುಕುಮಾರಾಂಗಃ ಸಿಂಹ ಸಂಹನನಸ್ತಥಾ
ಹರಿಸೇವಾಪರೋ ಹಾರಮಂಡಿತೋ ಹಠವರ್ಜಿತಃ ॥ ೧೭೭॥

ಸುಕಲಃ = ಅರವತ್ತನಾಲ್ಕು ಕಲೆಯಲ್ಲಿ ಪ್ರವೀಣರು, **ಸುಕುಮಾರಾಂಗಃ** = ಕೋಮಲಾವಯವುಳ್ಳವರು, **ಸಿಂಹಸಂಹನನಃ** = ಸುಂದರರು, **ಹರಿಸೇವಾಪರಃ** = ಹರಿಸೇವಾಸಕ್ತರು, **ಹಾರಮಂಡಿತಃ** = ಹಾರಾಲಂಕೃತಶರೀರರು, **ಹಠವರ್ಜಿತಃ** = ಹಠವಿಲ್ಲದವರು,

ಹಿತೋ ಹುತಾಗ್ನಿರ್ಹೇತುಶ್ಚ ಹೇಮದೋ ಹೈಮಪೀಠಗಃ।
ಹೃದಯಾಲುರ್ಹರ್ಷಮಾಣೋ ಹೋತಾ ಹಂಸಶ್ಚ ಹೇಯಹಾ ॥ ೧೭೮॥

ಹಿತಃ = ಹಿತೈಷಿಗಳು, **ಹುತಾಗ್ನಿಃ** = ರತ್ನಹಾರವನ್ನು ಅಗ್ನಿಗೆ ಅರ್ಪಿಸಿದವರು, **ಹೇತುಃ** = ಸುಖಕಾರಣರು, **ಹೇಮದಃ** = ಹೇಮವನ್ನು ನೀಡುವವರು, **ಹೈಮಪೀಠಗಃ** = ಸುವರ್ಣಸಿಂಹಾಸನದಲ್ಲಿ ರಾರಾಜಿಸುವವರು, **ಹೃದಯಾಲುಃ** = ದಯಾಲುಗಳು, **ಹರ್ಷಮಾಣಃ** = ಹರ್ಷಗೊಳ್ಳುವವರು, **ಹೋತಾ** = ಪೂರ್ವಾಶ್ರಮದಲ್ಲಿ ವೈಶ್ವದೇವಾದಿಗಳನ್ನು ಮಾಡಿದವರು, **ಹಂಸಃ** = ಪರಮಹಂಸಾಶ್ರಮಿಗಳು, **ಹೇಯಹಾ** = ಹೇಯವನ್ನು ಪರಿಹರಿಸುವರು,

ಲ–ಕ್ಷ

ಲಲಿತೋ ಲಬ್ಧನಿರ್ವಾಣೋ ಲಕ್ಷ್ಮೀ ಲಾವಣ್ಯಲಕ್ಷಿತಃ।
ಕ್ಷಮಾಶೀಲಃ ಕ್ಷಾಮಹರಃ ಕ್ಷಿತಿಸ್ಥಃ ಕ್ಷೀಣಪಾತಕಃ ॥ ೧೭೯॥

ಲಲಿತಃ = ಮನೋಹರರು, **ಲಬ್ಧನಿರ್ವಾಣಃ** = ಜೀವನ್ಮುಕ್ತರು, **ಲಕ್ಷ್ಮೀ** = ಸುಲಕ್ಷಣರು, **ಲಾವಣ್ಯಲಕ್ಷಿತಃ** = ಲಾವಣ್ಯಯುಕ್ತರು, **ಕ್ಷಮಾಶೀಲಃ** = ಕ್ಷಮಾವಂತರು, **ಕ್ಷಾಮಹರಃ** = ಕ್ಷಾಮವನ್ನು ಪರಿಹರಿಸುವವರು, **ಕ್ಷಿತಿಸ್ಥಃ** = ಅನುಗ್ರಹಕ್ಕಾಗಿ ಭೂಮಿಯಲ್ಲಿರುವವರು, **ಕ್ಷೀಣಪಾತಕಃ** = ಪಾಪಪರಿಹಾರಕರು,

ಕ್ಷುದ್ರಬಾಧಾಪಹರ್ತಾ ಚ ಕ್ಷೇತ್ರಜ್ಞಃ ಕ್ಷೇಮದಃ ಕ್ಷಮಃ।
ಕ್ಷೋಧಹಂತಾ ಕ್ಷೌದ್ರದೃಷ್ಟಿಃ ಕ್ಷಂತಾ ಭಕ್ತಕೃತಾಗಸಾಮ್ ॥ ೧೮೦॥

ಕ್ಷುದ್ರಬಾಧಾಪಹರ್ತಾ = ಕ್ಷುದ್ರೋಪದ್ರವ ಪರಿಹಾರಕರು, **ಕ್ಷೇತ್ರಜ್ಞಃ** = ತಮ್ಮಲ್ಲಿರುವ ಭಗವಂತನನ್ನು ತಿಳಿದವರು, **ಕ್ಷೇಮದಃ** = ಕ್ಷೇಮದಾಯಕರು, **ಕ್ಷಮಃ** = ದಯಾಲುಗಳು, **ಕ್ಷೋದಹಂತಾ** = ಕ್ಷೋಭೆಯನ್ನು ಕಳೆಯುವವರು, **ಕ್ಷೌದ್ರದೃಷ್ಟಿಃ** = ಜೇನಿನಂತಹ ಮಧುರ ದೃಷ್ಟಿಯುಳ್ಳವರು, **ಭಕ್ತಕೃತಾಗಸಾಮ್ ಕ್ಷಂತಾ** = ಭಕ್ತಾಪರಾಧಗಳನ್ನು ಕ್ಷಮಿಸುವವರು,

ಇತಿ ಶ್ರೀ ರಾಘವೇಂದ್ರಾರ್ಯ ಗುರುರಾಜಸ್ಯ ಯೋಗಿನಃ।
ಚತುರ್ವಿಂಶತಿ ಸಂಯುಕ್ತಂ ನಾಮ್ನಾಂ ಸಾಹಸ್ರಮೀರಿತಮ್ ॥ ೧೮೧॥

ಇತಿ = ಹೀಗೆ, **ಯೋಗಿನಃ** = ಯೋಗಿಗಳಾದ, ಶ್ರೀ ರಾಘವೇಂದ್ರಾರ್ಯ

ಗುರುರಾಜಸ್ಯ = ಶ್ರೀ ರಾಘವೇಂದ್ರ ಗುರುರಾಜರ, **ಚತುರ್ವಿಂಶತಿ ಸಂಯುಕ್ತಂ** = ಇಪ್ಪತ್ತನಾಲ್ಕರಿಂದ ಕೂಡಿದ, **ನಾಮ್ನಾಂ ಸಾಹಸ್ರಂ** = ಸಹಸ್ರನಾಮಗಳು, **ಈರಿತಮ್** = ವಿವರಿಸಲ್ಪಟ್ಟಿತು.

ಇತಿ ಶ್ರೀ ಕೃಷ್ಣಾವಧೂತ ವಿರಚಿತೇ ಶ್ರೀ ರಾಘವೇಂದ್ರ ತಂತ್ರೇ ಪ್ರತ್ಯಕ್ಷ ಸಿದ್ಧಿಪ್ರದೇ ಚತುರ್ವಿಂಶತಿ ಸಾಹಸ್ರನಾಮಾನುಕೀರ್ತನಂ ನಾಮ ಅಷ್ಟಮೋಧ್ಯಾಯಃ

ನವಮ ಪಟಲಮ್

ಶ್ರೀ ಗುರುದಶ ಸ್ತೋತ್ರಮ್

ಅಧ್ಯಾಯ ೧ - ಅಭಯಪ್ರದಾನ ಸ್ತೋತ್ರಮ್

ಯಾ ಕೃತಾ ದ್ವಾದಶಾಧ್ಯಾಯೀ ಗುರುರಾಜ ಸ್ತುತಿರ್ಮಯಾ।
ಗುರುರಾಜಾಜ್ಞಯಾಸ್ಶೈವ ದಶಧ್ಯಾಯೀ ವಿರಚ್ಯತೇ॥

ಶ್ರಿತಾನಾಂ ಸ್ವಪಾದಂ ಮನೋಭೀಷ್ಟದಾನೇ
ಸುರದ್ರು ಪ್ರಮೋದ ಪ್ರದಾದಿ ಪ್ರಭಾವ।
ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥ ೧॥

ಅರ್ಥ - **ಸ್ವಪಾದಂ** = ರಾಯರ ಪಾದವನ್ನು, **ಶ್ರಿತಾನಾಂ** = ಆಶ್ರಯಿಸಿದವರಿಗೆ, **ಮನೋಭೀಷ್ಟದಾನೇ** = ಮನದಭಿಲಾಷೆಯನ್ನು ನೀಡುವುದರಲ್ಲಿ, **ಸುರದ್ರುಪ್ರಮೋದ ಪ್ರದಾದಿ ಪ್ರಭಾವ**-**ಸುರದ್ರು**=ಕಲ್ಪವೃಕ್ಷಕ್ಕೆ, **ಪ್ರಮೋದಪ್ರದ**= ಆನಂದವನ್ನು ಕೊಡುವ, **ಆದಿಪ್ರಭಾವ** = ಮೂಲಸಾಮರ್ಥ್ಯವುಳ್ಳ, **ಶ್ರೀ ಗುರೋಃ** = ಉತ್ತಮಗುರುಗಳಾದ, **ರಾಘವೇಂದ್ರ** = ರಾಘವೇಂದ್ರರೇ, **ತ್ವಂ** = ತಾವು, **ಸದಾ** = ಯಾವಾಗಲೂ, **ಅವ** = ರಕ್ಷಿಸಿರಿ, **ಪ್ರಭೋ** = ರಾಘವೇಂದ್ರ ಪ್ರಭುಗಳೇ, **ಮೇ** = ನನ್ನ, **ಶಿರಸಿ** = ತಲೆಯಮೇಲೆ, **ಹಸ್ತಂ** = ಅಭಯಹಸ್ತವನ್ನು, **ಆಶು** = ಕೂಡಲೇ, **ನಿಧೇಹಿ** = ಇಟ್ಟು ಅನುಗ್ರಹಿಸಿರಿ.

ರಜೋಹೀನ ತೇಽಹೀನಪಾದಾಂಬುಜಾತಂ
ಪ್ರಪನ್ನಃ ಪ್ರಯಾತಿ ಪ್ರಕೃಷ್ಟ ಪ್ರಮೋದಮ್।
ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥ ೨॥

ರಜೋಹೀನ = ರಜೋಗುಣರಹಿತರಾದ, ಸಾತ್ವಿಕರಾದ ರಾಘವೇಂದ್ರರೇ, **ತೇ** = ನಿಮ್ಮ, **ಅಹೀನ ಪಾದಾಂಬುಜಾತಂ** = ಶ್ರೇಷ್ಠವಾದ ಪಾದಪದ್ಮಗಳನ್ನು, **ಪ್ರಪನ್ನಃ** = ಶರಣು ಹೊಂದಿದವನು, **ಪ್ರಕೃಷ್ಟಪ್ರಮೋದಂ** = ಉತ್ತಮವಾದ ಸಂತೋಷವನ್ನು,

ಪ್ರಯಾತಿ = ಹೊಂದುವನು, **ಪ್ರಭೋ** = ರಾಘವೇಂದ್ರ ಪ್ರಭುಗಳೇ, **ಮೇ** = ನನ್ನ, ಶಿರಸಿ = ತಲೆಯಮೇಲೆ, **ಹಸ್ತಂ** = ಅಭಯಹಸ್ತವನ್ನು, **ಆಶು** = ಕೂಡಲೇ, **ನಿಧೇಹಿ** = ಇಟ್ಟು ಅನುಗ್ರಹಿಸಿರಿ.

ಘನಾನಂದ ತೇ ಪಾದಪದ್ಮಂ ಪ್ರವಿಂದನ್
ಅನಂದೋಽಪ್ಯಮಂದಂ ಸದಾನಂದಮೇತಿ।
ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥ ೩॥

ಘನಾನಂದ = ಉತ್ಕೃಷ್ಟವಾದ ಆನಂದವುಳ್ಳ ರಾಘವೇಂದ್ರರೇ, **ತೇ** = ತಮ್ಮ, **ಪಾದಪದ್ಮಂ** = ಪಾದಕಮಲಗಳನ್ನು, **ಪ್ರವಿಂದನ್** = ಶರಣು ಹೊಂದುವನು, **ಅನಂದಃ ಅಪಿ** = ದುಃಖಿಯಾಗಿದ್ದರೂ, **ಸದಾ** = ನಿತ್ಯವಾದ, **ಅಮಂದಃ** = ಅಲ್ಪವಲ್ಲದ, **ಆನಂದಂ ಏತಿ** = ಮೋಕ್ಷಾನಂದವನ್ನು ಪಡೆಯುವನು, **ಪ್ರಭೋ** = ರಾಘವೇಂದ್ರ ಪ್ರಭುಗಳೇ, **ಮೇ** = ನನ್ನ, **ಶಿರಸಿ** = ತಲೆಯಮೇಲೆ, **ಹಸ್ತಂ** = ಅಭಯಹಸ್ತವನ್ನು, **ಆಶು** = ಕೂಡಲೇ, **ನಿಧೇಹಿ** = ಇಟ್ಟು ಅನುಗ್ರಹಿಸಿರಿ.

ವದಾನ್ಯೋ ವದಾನ್ಯೋ ವದಾನ್ಯಾಸ್ತಿ ಕಸ್ತ್ವಾಮ್।
ತತೋಽಹಂ ಯತೇಹಂತ ತೇ ಪಾದಮಾಪ್ತಃ।
ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥ ೪॥

ವದಾನ್ಯ = ಔದಾರ್ಯಗುಣವುಳ್ಳ ರಾಘವೇಂದ್ರರೇ, **ತ್ವಾ(ವಿನಾ)** = ತಮ್ಮನ್ನು ಹೊರತುಪಡಿಸಿ, **ಅನ್ಯಃ** = ಬೇರೆಯಾದ, **ವದಾನ್ಯಃ** = ಉದಾರಿಯಾದವರು, **ಕಃ ಅಸ್ತಿ** = ಯಾರಿರುವರು, **ವದ** = ಹೇಳಿರಿ, **ತತಃ** = ಆ ಕಾರಣದಿಂದ, **ಯತೇ**= ಪರಮ ಹಂಸಾಶ್ರಮಿಗಳಾದ ರಾಯರೇ, **ತೇ ಪಾದಂ** = ತಮ್ಮ ಪಾದಗಳನ್ನು, **ಆಪ್ತಃ** = ಶರಣು ಹೊಂದಿರುವೆನು, **ಪ್ರಭೋ** = ರಾಘವೇಂದ್ರ ಪ್ರಭುಗಳೇ, **ಮೇ** = ನನ್ನ, **ಶಿರಸಿ** = ತಲೆಯಮೇಲೆ, **ಹಸ್ತಂ** = ಅಭಯಹಸ್ತವನ್ನು, **ಆಶು** = ಕೂಡಲೇ, **ನಿಧೇಹಿ** = ಇಟ್ಟು ಅನುಗ್ರಹಿಸಿರಿ.

ದಯಾಲೋ ದಯಾಲೋ ದಯಾಲೋ ದಯಾಲೋ
ದಯಾಂ ಕುರ್ವಮೋಘಾಂ ಪದಂ ತೇ ಪ್ರಪದ್ಯೇ।

ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥ ೫॥

ದಯಾಲೋ = ಧರ್ಮರೂಪಪುರುಷಾರ್ಥವನ್ನು ನೀಡುವ, **ದಯಾಲೋ** = ಅರ್ಥರೂಪ ಪುರುಷಾರ್ಥ ನೀಡುವ, **ದಯಾಲೋ** = ಕಾಮರೂಪ ಪುರುಷಾರ್ಥ ನೀಡುವ, **ದಯಾಲೋ** = ಮೋಕ್ಷರೂಪ ಪುರುಷಾರ್ಥ ನೀಡಿ ದಯಾಲುಗಳಾದ ರಾಘವೇಂದ್ರರೇ, (**ಮಯಿ**=ನನ್ನಲ್ಲಿ), **ಅಮೋಘಾಂ** = ವ್ಯರ್ಥವಲ್ಲದ, **ದಯಾಂ ಕುರು** = ದಯೆಯನ್ನು ಮಾಡಿರಿ, **ತೇ ಪಾದಂ** = ತಮ್ಮ ಪಾದಗಳನ್ನು, **ಪ್ರಪದ್ಯೇ** = ಶರಣು ಹೊಂದಿರುವೆ.

ಯಥಾಶಕ್ತಿ ಪಾದಸ್ತುತಿಂ ತೇಽಪ್ಪಣಾರ್ಯ-
ಪ್ರಗೀತಾಂ ಪಠಂತಃ ಪ್ರಮೋದಂ ಭಜಂತಿ।
ಅವ ತ್ವಂ ಸದಾ ಶ್ರೀ ಗುರೋಽರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥ ೬॥

ಅಪ್ಪಣಾರ್ಯಪ್ರಗೀತಾಂ = ಅಪ್ಪಣಾಚಾರ್ಯರಿಂದ ರಚಿಸಲ್ಪಟ್ಟಿರುವ (ಗಾನ ಮಾಡಲ್ಪಟ್ಟ), **ತೇ** = ತಮ್ಮ, **ಪಾದಸ್ತುತಿಂ** = ರಾಘವೇಂದ್ರಸ್ತೋತ್ರವನ್ನು, **ಯಥಾಶಕ್ತಿ ಪಠಂತಃ** = ಶಕ್ತಿಯಿದ್ದಷ್ಟು ಪಠಿಸುವವರು, **ಪ್ರಮೋದಂ** = ಸಂತೋಷವನ್ನು, **ಭಜಂತಿ** = ಹೊಂದುವರು.

ನ ಜಾನಾಮಿ ತೇ ಪಾದಸೇವಾವಿಧಾನಂ
ಯಥಾಶಕ್ತಿ ಕಿಂತು ಸ್ವಯಂ ಸ್ತೌಮಿ ನೌಮಿ।
ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ।
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ ॥೭॥

ತೇ= ತಮ್ಮ, **ಪಾದಸೇವಾವಿಧಾನಂ**= ಪಾದಸೇವೆಯನ್ನು ಮಾಡುವ ರೀತಿಯನ್ನು, **ನ ಜಾನಾಮಿ** = ತಿಳಿಯದಿರುವೆನು, **ಕಿಂತು** = ಆದರೆ, **ಸ್ವಯಂ** = ಸ್ವತಃ ನಾನೇ, **ಯಥಾಶಕ್ತಿ** = ಶಕ್ತಿಯಿದ್ದಷ್ಟು, **ಸ್ತೌಮಿ** = ಸ್ತುತಿಸುವೆನು, **ನೌಮಿ** = ನಮಸ್ಕರಿಸುವೆನು.

ಮಹಾಪದ್ ವಿನಾಶಾಯ ತೇ ಪಾದರೇಣುಃ
ಪ್ರಭುಃ ಸ್ಯಾದತಸ್ತ್ವಾಂ ವಿಪನ್ನೋಽಹಮಾಪ್ತಃ।

ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾತು ಹಸ್ತಂ ನಿಧೇಹಿ **॥೮॥**

ಮಹಾಪದ್‌ವಿನಾಶಾಯ = ಮಹಾಆಪತ್ತುಗಳನ್ನು ನಾಶಮಾಡಲು, **ತೇ** = ತಮ್ಮ, **ಪಾದರೇಣುಃ** = ಪಾದಧೂಳಿಯೂ, **ಪ್ರಭುಃಸ್ಯಾತ್** = ಸಮರ್ಥವಾಗಿದೆ, **ಅತಃ** = ಆದ್ದರಿಂದ, **ವಿಪನ್ನಃ ಅಹಂ** = ಆಪತ್ತಿನಲ್ಲಿರುವ ನಾನು, **ತ್ವಾಂ** = ತಮ್ಮನ್ನು, **ಆಪ್ತಃ** = ಮೊರೆ ಹೊಂದಿರುವೆನು.

***ಭುಜಂಗೇ ಭುಜಂಗೇನ ಕೃಷ್ಣಾವಧೂತೇ-**
ನ ಗೀತಂ ಸುಗೀತೇನ ಲೋಕೇ ಪಠೇದ್ ಯಃ।
ಅವ ತ್ವಂ ಸದಾ ಶ್ರೀ ಗುರೋ ರಾಘವೇಂದ್ರ
ಪ್ರಭೋ ಮೇ ಶಿರಸ್ಯಾಶು ಹಸ್ತಂ ನಿಧೇಹಿ **॥೯॥**

ಭುಜಂಗೇ = ಭುಜಂಗಪ್ರಯಾತ (ಸರ್ಪನಡಿಗೆ) ವೃತ್ತದಲ್ಲಿ, **ಭುಜಂಗೇನ** = ಮೊದಲು ಮಹಾಕಾಮುಕನಂತಿದ್ದ, **ಅಭುಜಂಗೇನ** = ಈಗ ಗುರುಗಳ ಅನುಗ್ರಹದಿಂದ ಅಕಾರವಾಚ್ಯ ಭಗವಂತನನ್ನು ಕಾಮಿಸುವವನಾದ, **ಕೃಷ್ಣಾವಧೂತೇನ** = ಶ್ರೀ ಕೃಷ್ಣಾವಧೂತರಿಂದ, **ಸುಗೀತೇನ** = ರಾಗಬದ್ಧವಾಗಿ, ಹಾಡಲ್ಪಟ್ಟ, **ಗೀತಂ** = ಈ ಅಭಯ ಪ್ರದಾನಸ್ತೋತ್ರವನ್ನು, **ಯಃ** = ಯಾರು, **ಪಠೇತ್** = ಪಾರಾಯಣವನ್ನು ಮಾಡುವನೋ, (**ತಂ** = ಆ ಭಕ್ತನನ್ನು), ಶ್ರೀ ಗುರೋ ರಾಘವೇಂದ್ರ, ತ್ವಂ ಸದಾ ಅವ, ಶಿರಸಿ ಹಸ್ತಂ, ಆಶು, ನಿಧೇಹಿ.

ಇತಿ ಶ್ರೀ ಕೃಷ್ಣಾವಧೂತವಿರಚಿತೇ, ಶ್ರೀಮದ್ರಾಘವೇಂದ್ರತಂತ್ರೇ ಪ್ರತ್ಯಕ್ಷಸಿದ್ಧಿಪ್ರದೇ ದಶಸ್ತೋತ್ರ ಪಟಲೇ ಅಭಯಪ್ರದಾನಂ ನಾಮ ಪ್ರಥಮೋಽಧ್ಯಾಯಃ

---

* ಅವಧೂತರು ಈ ಸ್ತೋತ್ರವನ್ನು 'ಭುಜಂಗಪ್ರಯಾತ' ವೃತ್ತದಲ್ಲಿ ರಚಿಸಿರುವರು. 'ಭುಜಂಗ ಪ್ರಯಾತ' ಎಂದರೆ ಹಾವಿನ ನಡಿಗೆ. ಪ್ರತಿಪಾದದಲ್ಲೂ ಹನ್ನೆರಡು ಅಕ್ಷರಗಳಿದ್ದು ನಾಲ್ಕು ಯುಗಣಗಳಿಂದ ಯುಕ್ತವಾಗಿರುತ್ತದೆ. ರಾಯರ ಕರುಣೆಯಿಂದ ಭಯವು ಸರ್ಪದ ನಡಿಗೆಯಂತೆ ಬೇಗ ಮಾಯವಾಗಿ ಅಭಯವು ದೊರೆಯುವುದು ಖಂಡಿತವೆಂದು ಸೂಚಿಸಿದ್ದಾರೆ.

ಅಥ ದ್ವಿತೀಯೋಧ್ಯಾಯಃ

ಆಪತ್ಪರಿಹರಣ ಸ್ತೋತ್ರಮ್ (ಅಶ್ವಧಾಟೀ)

★ಶ್ರೀ ಕಾಮುಕಾಯ ಬಹುಶೋಕಾಯ ತತ್ಸುಖಮಭೀಕಾಶು ಯಚ್ಛಸಿ ಹಿ ಭೋ
ಲೋಕಾಯ ತದ್ದುರಿತಪಾಕಾಪ್ತಪಂಗು ಜಡಮೂಕಾದಿಭಾವಹರಣ।
ಶ್ರೀರಾಘವೇಂದ್ರ, ಪದವೀರ್ಯಾದಿಭೋಗಭವಘೋರಾಘಮಾಶು ಹರಭೋ
ದಾರಾತ್ಮಜಾದಿಭವ ವಾರಾಶಿಸಂಭವದಪಾರಾಪದಃ ಶಮಯಭೋಃ ॥ ೧॥

ಭೋ ಅಭೀಕ = ಭಯರಹಿತರಾದ ರಾಘವೇಂದ್ರರೇ, **ಶ್ರೀ ಕಾಮುಕಾಯ** = ಐಹಿಕ ಸಂಪತ್ತನ್ನು ಇಚ್ಛಿಸುವ, **ಬಹುಶೋಕಾಯ** = ಬಹಳ ಶೋಕದಿಂದಿರುವ, **ಲೋಕಾಯ** = ಭಕ್ತಜನರಿಗೆ, **ತತ್ಸುಖಂ** = ಅವರಿಗೆ ಬೇಕಾದ ಸುಖವನ್ನು, **ಆಶು** = ಕೂಡಲೇ, **ಯಚ್ಛಸಿ ಹಿ** = ನಿಶ್ಚಿತವಾಗಿ ನೀಡುವಿರಿ, **ತದ್ದುರಿತಪಾಕಾಪ್ತ** = ಭಕ್ತರ ಪಾಪಗಳು ಪರಿಪಕ್ವವಾದಾಗ ಅದರಿಂದ ಬಂದೊದಗಿದ, **ಪಂಗುಜಡಮೂಕಾದಿ ಭಾವಹರಣ, ಪಂಗುಭಾವ** = ಕುಂಟುತನ, **ಜಡಭಾವ** = ಜಾಡ್ಯ (ಅಜ್ಞತ್ವ), **ಮೂಕಭಾವ** = ಮೂಕತನ, **ಆದಿ** = ಇವೇ ಮೊದಲಾದವುಗಳನ್ನು, **ಹರಣ** = ಪರಿಹರಿಸುವ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು , **ಪದವೀರ್ಯಾದಿಭೋಗಭವ ಘೋರಾಘಂ** = **ಪದ** = ಅಧಿಕಾರ, **ವೀರ್ಯ** = **ಸಾಮರ್ಥ್ಯ ಆದಿ** = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, ಆಶು = ಕೂಡಲೇ, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವ ವಾರಾಶಿ ಸಂಭವದ್** - **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

★ ವಾದಿರಾಜರ ದಶಾವತಾರಸ್ತುತಿಯ ಅಶ್ವಧಾಟಿಯಲ್ಲಿ ರಚಿಸಿದ್ದಾರೆ. ಪ್ರಥಮಪಾದದಲ್ಲಿ ಒಂದಕ್ಷರವನ್ನು ಉದ್ದೇಶಪೂರ್ವಕವಾಗಿಯೇ ಕಡಿಮೆ ಮಾಡಿದ್ದಾರೆ. ಧಾಟಿಯಲ್ಲಿ ಸಾಗಲು 'ಭೋ' ಎಂಬ ಪದ ಸೇರಿಸಲಾಗಿದೆ.

ರಾಜಾದಿ ಭಕ್ತಜನ ಪೂಜಾಲಸತ್ಪದ ಪಯೋಜಾಂಬುಬಿಂದುರಪಿ
ಬೀಜಾಯತೇ ಸುವಿಧಿಭೂಜಾಯ ದೂನನೃಷು ತೇ ಜಾಗರೂಕ ಕರುಣ।
ಶ್ರೀ ರಾಘವೇಂದ್ರಪದವೀರ್ಯಾದಿಭೋಗಭವಘೋರಾಘಮಾಶುಹರ ಭೋಃ
ದಾರಾತ್ಮಜಾದಿಭವವಾರಾಶಿಸಂಭವದಪಾರಾಪದಃಶಮಯಭೋಃ ॥ ೨॥

ದೂನನೃಷು = ದುಃಖಿತಜನರಲ್ಲಿ, **ಜಾಗರೂಕರುಣ** = ಜಾಗೃತದಯೆಯುಳ್ಳ ರಾಘವೇಂದ್ರರೇ, **ತೇ** = ನಿಮ್ಮ, **ರಾಜಾದಿ ಭಕ್ತಜನಪೂಜಾಲಸತ್ಪದ ಪಯೋಜಾಂಬು ಬಿಂದುಃ** = **ರಾಜಾದಿ** = ರಾಜರೇ ಮೊದಲಾದ, **ಭಕ್ತಜನ** = ಭಕ್ತರ, **ಪೂಜಾಲಸತ್** = ಪೂಜೆಯಿಂದ, **ಲಸತ್** = ಶೋಭಿಸುವ, **ಪದಪಯೋಜ** = ಪಾದಕಮಲಗಳ, **ಅಂಬುಬಿಂದುಃ ಅಪಿ** = ಜಲಕಣವೂ ಕೂಡ, **ಸುವಿಧಿಭೂಜಾಯ** = ಸಮೀಚೀನವಾದ ಅದೃಷ್ಟವೆಂಬ ವೃಕ್ಷ ಮೊಳೆಯಲು, **ಬೀಜಾಯತೇ** = ಬೀಜದಂತಾಗುತ್ತದೆ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು , **ಪದವೀರ್ಯಾದಿಭೋಗಭವ ಘೋರಾಘಂ** = **ಪದ** = ಅಧಿಕಾರ, **ವೀರ್ಯಾ** = **ಸಾಮರ್ಥ್ಯ ಆದಿ** = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, **ಆಶು** = ಕೂಡಲೇ, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವ ವಾರಾಶಿ ಸಂಭವದ್** - **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವ ವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯ ವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ಘೋಟೀಮದೇಭವರಶಾಟೀವಿರಾಜಿನೃಪ ಕೋಟೀಶಿರೋವಿಧೃತ
ಕೋಟೀರರತ್ನಪರಿಪಾಟೀಭೃಶಾರುಣಿತ ಪಾಟೀರ ಪಾದುಕವಿಭೋ।
ಶ್ರೀ ರಾಘವೇಂದ್ರ ಪದವೀರ್ಯಾದಿ ಭೋಗಭವಘೋರಾಘಮಾಶುಹರಭೋಃ
ದಾರಾತ್ಮಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೩॥

ವಿಭೋ = ಸಮರ್ಥರಾದ ಗುರುಗಳೇ, **ಘೋಟೀಮದೇಭವರಶಾಟೀ ವಿರಾಜಿ** = **ಘೋಟೀ** = ಕುದುರೆಗಳು, **ಮಧೇಭ** = ಮದದ ಆನೆಗಳು, **ವರಶಾಟೀ** = ಶ್ರೇಷ್ಠ ವಸ್ತ್ರಗಳು ಇವುಗಳಿಂದ, **ವಿರಾಜಿ** = ಶೋಭಿಸುತ್ತಿರುವ, **ನೃಪಕೋಟೀ** = ರಾಜರುಗಳ, **ಶಿರೋ ವಿಧೃತ** = ತಲೆಯಲ್ಲಿ ಧರಿಸಲ್ಪಟ್ಟ, **ಕೋಟೀರ ರತ್ನ** = **ಪರಿಪಾಟೀ** = ಕಿರೀಟ ಮಣಿಗಳ ಕ್ರಮದಿಂದ, **ಭೃಶಾರುಣಿತ** = ಬಹಳವಾಗಿ ಕೆಂಪಾಗಿ ಮಾಡಲ್ಪಟ್ಟ, **ಪಾಟೀರ ಪಾದುಕ** = ಚಂದನದ ಪಾದುಕೆಗಳುಳ್ಳ, **ಶ್ರೀ ರಾಘವೇಂದ್ರ** = ರಾಘವೇಂದ್ರ

ಗುರುಗಳೇ, ತಾವು, ಪದವೀರ್ಯಾದಿಭೋಗಭವಘೋರಾಘಂ = ಪದ = ಅಧಿಕಾರ, ವೀರ್ಯಾ = ಸಾಮರ್ಥ್ಯ ಆದಿ = ಇವೇ ಮೊದಲಾದ, ಭೋಗ = ಭೋಗಗಳ ಅನುಭವಿಸುವಿಕೆಯಿಂದ, ಭವ = ಉಂಟಾದ, ಘೋರಾಘಂ = ಮಹಾಪಾಪವನ್ನು, ಆಶು = ಕೂಡಲೇ, ಹರ = ಪರಿಹರಿಸಿರಿ, ದಾರಾತ್ಮಜಾದಿಭವವಾರಾಶಿ ಸಂಭವದ್ - ದಾರಾ = ಹೆಂಡತಿ, ಆತ್ಮಜಾದಿ = ಪುತ್ರರೇ ಮೊದಲಾದ, ಭವವಾರಾಶಿ ಸಂಭವದ್ = ಸಂಸಾರ ಸಾಗರದಿಂದುಂಟಾದ, ಅಪಾರಾಪದಃ = ದಾಟಲಶಕ್ಯವಾದ ಆಪತ್ತುಗಳನ್ನು, ಶಮಯ = ಶಮನಗೊಳಿಸಿರಿ.

ವೇದಾದಿ ದೂಷಕ ಕುವಾದಾದರಾಧ್ಯ ಸುಮನೋದಾವದಾಹಕ ಮ-
ಹಾದಾವದೋಷವಿಧುರೇ ದಾನವದ್ವಿಷಿ ಮಮಾದಾಯ ಧೇಹಿ ಹೃದಯಮ್।
ಶ್ರೀ ರಾಘವೇಂದ್ರ ಪದವೀರ್ಯಾದಿ ಭೋಗಭವ ಘೋರಾಘಮಾಶುಹರಭೋಃ
ದಾರಾತ್ಮಾಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೪॥

ವೇದಾದಿ ದೂಷಕಕುವಾದಾದರ = ವೇದ ಉಪನಿಷತ್ ದೂಷಕರಾದ, ಹಾಗೂ ಕುವಾದದಲ್ಲಿ ಆದರವುಳ್ಳ, **ಅಧಿ ಅಸುಮನೋದಾವದಾಹಕ** = ಅಧಿಕ ಸಂಖ್ಯೆಯಲ್ಲಿರುವ, ದೈತ್ಯರೆಂಬ ಕಾಡಿಗೆ ದಾವಾಗ್ನಿಯಂತಿರುವ ಶ್ರೀ ರಾಘವೇಂದ್ರರೇ, **ಮಮ** = ನನ್ನ, **ಹೃದಯಂ** = ಮನಸ್ಸನ್ನು, **ಆದಾಯ** = ವಿಷಯಗಳಿಂದ ಎಳೆದು, **ಮಹಾದಾವದೋಷವಿಧುರೇ** = ದಾವಾನಲದಂತಿರುವ ದೋಷಗಳಿಂದ ಮುಕ್ತನಾದ, **ದಾನವದ್ವಿಷಿ** = ದಾನವವೈರಿಯಾದ ಶ್ರೀ ರಾಮಚಂದ್ರನಲ್ಲಿ, **ಧೇಹಿ** = ಇಡಿರಿ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು, **ಪದವೀರ್ಯಾದಿಭೋಗಭವ ಘೋರಾಘಂ** = **ಪದ** = ಅಧಿಕಾರ, **ವೀಯಾ**=ಸಾಮರ್ಥ್ಯ, **ಆದಿ**=ಇವೇ ಮೊದಲಾದ, **ಭೋಗ**= ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, **ಆಶು** = ಕೂಡಲೇ, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವವಾರಾಶಿ ಸಂಭವದ್** - **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ದ್ರಾಕ್ಷಾಮಧುಕ್ಷರಣ ಶಿಕ್ಷಾಕರಾಮಲ ಕಟಾಕ್ಷಾವಲೋಕತ ಉತ
ತತ್ಕ್ಷಾಮತಾಂ ಹರಸಿ ಭಿಕ್ಷಾಟಕಸ್ಯ ಭುವಿ ಲಕ್ಷಾಧಿಕಸ್ಯ ಸಪದಿ

ಶ್ರೀ ರಾಘವೇಂದ್ರ ಪದವೀರ್ಯಾದಿ ಭೋಗಭವ ಘೋರಾಘಮಾಶುಹರಭೋಃ
ದಾರಾತ್ಮಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೫॥

ದ್ರಾಕ್ಷಾಮಧುಕ್ಷರಣಶಿಕ್ಷಾಕರ = ದ್ರಾಕ್ಷಿಹಣ್ಣಿಗೂ ಮಧುವನ್ನು ಸುರಿಸುವ ತರಬೇತಿಯನ್ನು ಕೊಡುವ, **ಉತ** = ಹಾಗೆಯೇ, **ಅಮಲಕಟಾಕ್ಷಾವಲೋಕತಃ** = ನಿರ್ಮಲವಾದ ಕುಡಿನೋಟದಿಂದಲೇ, **ಭುವಿ** = ಭೂಮಿಯಲ್ಲಿ, **ಲಕ್ಷಾಧಿಕಸ್ಯ** = ಲಕ್ಷಾಂತರ ಸಂಖ್ಯೆಯಲ್ಲಿರುವ, **ಭಿಕ್ಷಾಟಕಸ್ಯ** = ಯಾಚಕರ, **ತತ್** = ಪ್ರಸಿದ್ಧವಾದ, **ಕ್ಷಾಮತಾಂ** = ದಾರಿದ್ರ್ಯವನ್ನು, ಕೃಶತ್ವವನ್ನು, **ಹರಸಿ** = ಪರಿಹರಿಸುವಿರಿ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು , **ಪದವೀರ್ಯಾದಿಭೋಗಭವ ಘೋರಾಘಂ** = **ಪದ** = ಅಧಿಕಾರ, **ವೀರ್ಯಾ** = ಸಾಮರ್ಥ್ಯ **ಆದಿ** = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, **ಆಶು** = ಕೂಡಲೇ, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವ ವಾರಾಶಿ ಸಂಭವದ್** - **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವ ವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯ ವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ಯಾನಾದಿಸಂಪದಮನೂನಾಮವಾಪ್ತುಮಹಮಾನಾಯಿ ಪೂರ್ವಸುಕೃ-
ತೇನಾಗ್ರ್ಯ ತೇ ಪದಮತೋಽನಾದಿ ದುರ್ದುರಿತಮಾನಾಶಯಾಶು ಮಮಭೋಃ
ಶ್ರೀ ರಾಘವೇಂದ್ರ ಪದವೀರ್ಯಾದಿ ಭೋಗಭವ ಘೋರಾಘಮಾಶುಹರಭೋಃ
ದಾರಾತ್ಮಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೬॥

ಅಗ್ರ್ಯ = ಅಗ್ರಮಾನ್ಯ ಗುರುಗಳೇ, **ಅನೂನಾಂ** = ಕೊರತೆಯಿಲ್ಲದ, **ಯಾನಾದಿ ಸಂಪದಂ** = ವಾಹನವೇ ಮೊದಲಾದ ಸಂಪತ್ತನ್ನು, **ಆಪ್ತುಂ** = ಹೊಂದಲು, **ಅಹಂ** = ನಾನು, **ತೇ ಪದಂ** = ತಮ್ಮ ಪಾದವನ್ನು, ಕುರಿತು, **ಪೂರ್ವಸುಕೃತೇನ** = ಪೂರ್ವ ಪುಣ್ಯ ದಿಂದ, **ಆನಾಯಿ** = ತರಲ್ಪಟ್ಟಿದ್ದೇನೆ, **ಅತಃ** = ಆದ್ದರಿಂದ, **ಮಮ** = ನನ್ನ, **ಅನಾದಿ ದುರ್ದುರಿತಂ** = ಅನಾದಿಯಾದ ಪಾಪವನ್ನು, **ಆಶು** = ಕೂಡಲೇ, **ಆ ನಾಶಯ**= ಪೂರ್ಣ ವಾಗಿ ನಾಶಮಾಡಿರಿ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು, **ಪದ ವೀರ್ಯಾದಿಭೋಗಭವಘೋರಾಘಂ**= ಪದ = ಅಧಿಕಾರ, **ವೀರ್ಯಾ**= ಸಾಮರ್ಥ್ಯ, **ಆದಿ** = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, ಆಶು = ಕೂಡಲೇ, **ಹರ** = ಪರಿಹರಿ

ಸಿರಿ, **ದಾರಾತ್ಮಜಾದಿಭವವಾರಾಶಿ ಸಂಭವದ್** - ದಾರಾ = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವವಾರಾಶಿ ಸಂಭವದ್** = ಸಂಸಾರಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ನಾಗಾರಿವಾಹಪದಯೋಗಾದರಾಮಿತದಾಗಾರದಾರಧನ
ಭೋಗಾನವಾಪ್ತುಮನುರಾಗಾತ್ ತವಾಂಘ್ರಿಮತಿವೇಗಾದುಪೈಮಿ ಸುಖದಮ್।
ಶ್ರೀ ರಾಘವೇಂದ್ರ, ಪದವೀರ್ಯಾದಿ ಭೋಗಭವ ಘೋರಾಘಮಾಶುಹರಭೋಃ
ದಾರಾತ್ಮಾಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೭॥

ನಾಗಾರಿವಾಹಪದಯೋಗಾದರ = **ನಾಗಾರಿವಾಹ** = ಗರುಡವಾಹನನ, **ಪದಯೋಗ** = ಪಾದಧ್ಯಾನದಲ್ಲಿ, **ಆದರ** = ಆದರವುಳ್ಳ, **ಅಮಿತದಯ** = ಮಹಾ ಕರುಣೆಯುಳ್ಳ, **ಅಗಾರದಾರಧನ ಭೋಗಾನ್** = ಗೃಹ, ಪತ್ನೀ, ಸಂಪತ್ತು ಮೊದಲಾದ ಭೋಗಗಳನ್ನು, **ಅವಾಪ್ತುಂ** = ಹೊಂದಲು, **ಅನುರಾಗಾತ್** = ಪ್ರೇಮದಿಂದ, **ಅತಿ ವೇಗಾತ್** = ಅತೀ ವೇಗದಿಂದ, **ಸುಖದಂ** = ಸುಖವನ್ನೀಯುವ, **ತವ ಅಂಘ್ರಿಂ** = ತಮ್ಮ ಪಾದಗಳನ್ನು, **ಉಪೈಮಿ** = ಆಶ್ರಯಿಸಿರುವೆ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು, **ಪದವೀರ್ಯಾದಿಭೋಗಭವಘೋರಾಘಂ** = **ಪದ** = ಅಧಿಕಾರ, **ವೀರ್ಯಾ** = **ಸಾಮರ್ಥ್ಯ** ಆದಿ = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, **ಆಶು** = ಕೂಡಲೇ, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವವಾರಾಶಿ ಸಂಭವದ್** - **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ಮಂತ್ರಾಲಯಸ್ಥ ತವ ಮಂತ್ರಾದಿಜಪ್ತುರರಿಮಂತ್ರಾದಿ ಸಂಹತಿರ
ತಂತ್ರಾಭವತ್ಯಖಿಲತಂತ್ರಾಧಿಕೇಷ್ವಪರತಂತ್ರಾವಮಾಮುಪಗತಮ್
ಶ್ರೀ ರಾಘವೇಂದ್ರ, ಪದವೀರ್ಯಾದಿ ಭೋಗಭವ ಘೋರಾಘಮಾಶುಹರಭೋಃ
ದಾರಾತ್ಮಾಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೮॥

ಹೇ ಮಂತ್ರಾಲಯಸ್ಥ = ಮಂತ್ರಾಲಯವಾಸಿಗಳೇ, **ತವ** = ತಮ್ಮ, **ಮಂತ್ರಾದಿ ಜಪ್ತುಃ** = ಅಷ್ಟಾಕ್ಷರ ಮಂತ್ರವನ್ನು ಜಪಿಸುವವರಿಗೆ, **ಅರಿಮಂತ್ರಾದಿ ಸಂಹತಿಃ** = ಶತ್ರುಗಳ ಗುಪ್ತಾಲೋಚನೆಗಳ ಸಮೂಹವು, **ಅತಂತ್ರಾಭವತಿ** = ವ್ಯರ್ಥವಾಗುತ್ತದೆ. **ಅಖಿಲ**

ತಂತ್ರೇಷು = ಸಮಸ್ತಶಾಸ್ತ್ರಗಳಲ್ಲಿ, **ಅಪರತಂತ್ರ** = ಸರ್ವತಂತ್ರ ಸ್ವತಂತ್ರರಾದ ತಾವು, **ಉಪಗತಮ್** = ತಮ್ಮಲ್ಲಿಗೆ ಬಂದಿರುವ, **ಮಾಂ** = ನನ್ನನ್ನು, **ಅವ** = ಗಕ್ಷಿಸಿರಿ, **ಶ್ರೀ ರಾಘವೇಂದ್ರ** = ರಾಘವೇಂದ್ರ ಗುರುಗಳೇ, ತಾವು , **ಪದವೀಯರ್ಾದಿಭೋಗಭವ ಘೋರಾಘಂ** = **ಪದ** = ಅಧಿಕಾರ, **ವೀಯಾ** = **ಸಾಮರ್ಥ್ಯ** ಆದಿ = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆ ಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, **ಆಶು** = **ಕೂಡಲೇ**, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವ ವಾರಾಶಿ ಸಂಭವದ್** – **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವ ವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ಕೃಷ್ಣಾವಧೂತಕೃತಮಿಷ್ಟಾರ್ಥದಾನಚಣಮಷ್ಟಾರ್ಣಮಂತ್ರ ಪರಿ
ಪುಷ್ಟಾತುಲಸ್ತವಮಕಷ್ಟಾವಹಂ ಶುಭಮರಿಷ್ಟಾಪಹರಂ ಪಠತಿಯಃ
ಶ್ರೀ ರಾಘವೇಂದ್ರ ಪದವೀಯರ್ಾದಿ ಭೋಗಭವ ಘೋರಾಘಮಾಶುಹರಭೋಃ
ದಾರಾತ್ಮಜಾದಿ ಭವವಾರಾಶಿ ಸಂಭವದಪಾರಾಪದಃ ಶಮಯ ಭೋಃ ॥ ೯॥

ಯಃ = ಯಾರು, **ಇಷ್ಟಾರ್ಥದಾನಚಣಂ** = ಅಭೀಷ್ಟಗಳನ್ನು ಕೊಡುವುದರಲ್ಲಿ ಪ್ರಸಿದ್ಧವಾದ, **ಅಕಷ್ಟಾವಹಂ** = ಪಠಿಸಲು ಕಷ್ಟವಲ್ಲದ, **ಅರಿಷ್ಟಾಪಹರಂ** = ಆಪತ್ತನ್ನು ಪರಿಹರಿಸುವ, **ಶುಭಂ** = ಮಂಗಳಕರವಾದ, **ಅಷ್ಟಾರ್ಣಮಂತ್ರಪರಿಪುಷ್ಟಾತುಲಸ್ತವಂ** = ಶ್ರೀ ರಾಘವೇಂದ್ರಾಯ ನಮಃ ಎಂಬ ಎಂಟು ಅಕ್ಷರಗಳಿಂದ, ಪುಷ್ಟಿ ಹೊಂದಿರುವುದ ರಿಂದ, ಅಸಾಧಾರಣವಾದ ಈ ಸ್ತೋತ್ರವನ್ನು, **ಯಃ** = ಯಾರು, **ಪಠತಿ** = ಪಠಿಸು ವರೋ, ಅವರಿಗೆ, **ಶುಭಮ್** = ಮಂಗಳವಾಗುವುದು. **ಶ್ರೀ ರಾಘವೇಂದ್ರ** = ರಾಘ ವೇಂದ್ರ ಗುರುಗಳೇ, ತಾವು , **ಪದವೀಯರ್ಾದಿಭೋಗಭವ ಘೋರಾಘಂ** = **ಪದ** = ಅಧಿಕಾರ, **ವೀಯಾ** = **ಸಾಮರ್ಥ್ಯ** ಆದಿ = ಇವೇ ಮೊದಲಾದ, **ಭೋಗ** = ಭೋಗಗಳ ಅನುಭವಿಸುವಿಕೆಯಿಂದ, **ಭವ** = ಉಂಟಾದ, **ಘೋರಾಘಂ** = ಮಹಾಪಾಪವನ್ನು, **ಆಶು** = ಕೂಡಲೇ, **ಹರ** = ಪರಿಹರಿಸಿರಿ, **ದಾರಾತ್ಮಜಾದಿಭವವಾರಾಶಿ ಸಂಭವದ್** – **ದಾರಾ** = ಹೆಂಡತಿ, **ಆತ್ಮಜಾದಿ** = ಪುತ್ರರೇ ಮೊದಲಾದ, **ಭವವಾರಾಶಿ ಸಂಭವದ್** = ಸಂಸಾರ ಸಾಗರದಿಂದುಂಟಾದ, **ಅಪಾರಾಪದಃ** = ದಾಟಲಶಕ್ಯವಾದ ಆಪತ್ತುಗಳನ್ನು, **ಶಮಯ** = ಶಮನಗೊಳಿಸಿರಿ.

ಇತಿ ಶ್ರೀ ಕೃಷ್ಣಾವಧೂತ ಪಂಡಿತಕೃತೌ ಪ್ರತ್ಯಕ್ಷಸಿದ್ಧಿಪ್ರದೇ ಶ್ರೀ ರಾಘವೇಂದ್ರತಂತ್ರೇ
ದಶಸ್ತೋತ್ರಪಟಲೇ ಆಪತ್ಪರಿಹರಣಸ್ತೋತ್ರಂ ಸಂಪೂರ್ಣಂ

ಅಧ್ಯಾಯ ೩

ದುಃಖಹರಣ ಸ್ತೋತ್ರಮ್

ಶ್ರೀಪತಿಬೋಧ ವಿಬೋಧಕ ಬಾಧಕ ಸಾಧಿತ ಸಾಧನ ಭೋಃ ।
ರಾಘವೇಂದ್ರಗುರುರಾಜಭವೋದ್ಭವದುಃಖಮಿದಂ ಮೇ ಪರಿಹರ ಭೋಃ ॥ ೧॥

ಶ್ರೀಪತಿಬೋಧವಿಬೋಧಕ = ಶ್ರೀಪತಿಯ ಜ್ಞಾನವನ್ನು ಉಪದೇಶಿಸುವ, **ಬಾಧಕಬಾಧಕ** = ತತ್ವಜ್ಞಾನಬಾಧಕರಿಗೂ ಬಾಧಕವಾದ, **ಸಾಧಿತಸಾಧನ** = ಸಾಧಿಸಲ್ಪಟ್ಟ ಮೋಕ್ಷೋಪಾಯಗಳುಳ್ಳ, **ರಾಘವೇಂದ್ರ ಗುರುರಾಜ** = ರಾಘವೇಂದ್ರ ಗುರುಗಳೇ, **ಮೇ** = ನನ್ನ, **ಇದಂ** = ಈ, **ಭವೋದ್ಭವ ದುಃಖಂ** = ಸಾಂಸಾರಿಕ ದುಃಖವನ್ನು, **ಪರಿಹರ** = ಪರಿಹರಿಸಿರಿ.

ರಾಜಮುಖೀರತಿಸಂಭ್ರಮಲೋಲುಪಚಿತ್ತತಯಾ ವ್ಯಚರಂ ಬಹುಭೋಃ ।
ರಾಘವೇಂದ್ರ ಗುರುರಾಜ ಭವೋದ್ಭವದುಃಖಮಿದಂ ಮೇ ಪರಿಹರ ಭೋಃ॥೨॥

ರಾಜಮುಖೀರತಿ ಸಂಭ್ರಮಲೋಲುಪಚಿತ್ತತಯಾ = **ರಾಜಮುಖೀರತಿ** = ಚಂದ್ರಮುಖಿಯರಾದ ಸ್ತ್ರೀಯರೊಂದಿಗೆ ವಿಹಾರದ, **ಸಂಭ್ರಮಲೋಲಪಚಿತ್ತತಯಾ** = ಸಂಭ್ರಮದಲ್ಲಿ ಆಸಕ್ತವಾದ ಮನಸ್ಸಿನಿಂದ, **ಬಹು** = ಬಹಳವಾಗಿ, **ವ್ಯಚರಮ್** = ತಿರುಗಾಡಿದೆ, ರಾಘವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ಘಟತಾಂ ಮೇ ಕಥಮಸ್ಯ ದುರಾಚರಣಂ ಚರತೋ ಹಿತಕೃದ್ ಭುವಿ ಭೋಃ।
ರಾಘವೇಂದ್ರ ಗುರುರಾಜ ಭವೋದ್ಭವದುಃಖಮಿದಂ ಮೇ ಪರಿಹರ ಭೋಃ॥೩॥

ದುರಾಚರಣಂ = ದುರಾಚಾರಿಯಾಗಿ, **ಚರತಃ** = ಸಂಚರಿಸುವ, **ಅಸ್ಯ** = ಈ, **ಮೇ** = ನನಗೆ, **ಭುವಿ** = ಭೂಮಿಯಲ್ಲಿ, **ಹಿತಕೃತ್** = ನಿಮಗಿಂತ ಬೇರೆಯಾದ ಹಿತ ಬಯಸುವವನೊಬ್ಬನು, **ಕಥಂ ಘಟತಾಂ** = ಹೇಗೆ ದೊರಕಿಯಾನು?, ರಾಘ ವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ವೇದಪುರಾಣವಿರುದ್ಧಕೃತೋ ಮೇ ನಾನ್ಯಃ ತ್ವತ್ತಃ ಪಾತಾ ಭೋಃ।
ರಾಘವೇಂದ್ರಗುರುರಾಜ ಭವೋದ್ಭವ ದುಃಖಮಿದಂ ಮೇ ಪರಿಹರ ಭೋಃ॥೪॥

ವೇದಪುರಾಣ ವಿರುದ್ಧಕೃತಃ = ವೇದ, ಪುರಾಣಗಳಿಗೆ ವಿರುದ್ಧವಾಗಿ ಆಚರಿಸುವ, **ಮೇ** = ನನಗೆ, **ತ್ವತ್ತಃ** = ನಿಮಗಿಂತ, **ಅನ್ಯಃ** = ಬೇರೆ, **ಪಾತಾ** = ರಕ್ಷಕರು, **ನ** = ಇರುವುದಿಲ್ಲ. ರಾಘವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ದ್ರಾಗಿಷ್ಟಂ ದಾಸ್ಯಸಿ ಭಕ್ತೇಭ್ಯಸ್ತ್ವಮಿತಿ ಶ್ರುತ್ವಾ ತ್ವಾಪಂ ಭೋಃ।
ರಾಘವೇಂದ್ರ ಗುರುರಾಜ ಭವೋದ್ಭವ ದುಃಖಮಿದಂ ಪರಿಹರ ಭೋಃ ॥ ೫॥

ತ್ವಂ = ತಾವು, **ಭಕ್ತೇಭ್ಯಃ** = ಭಕ್ತರಿಗೆ, **ದ್ರಾಕ್** = ಕೂಡಲೇ, **ಇಷ್ಟಂ** = ಅಭೀಷ್ಟವನ್ನು, **ದಾಸ್ಯಸಿ ಇತಿ** = ಕೊಡುವಿರೆಂದು, **ಶ್ರುತ್ವಾ** = ಕೇಳಿ, **ತ್ವಾಂ ಆಪಂ** = ತಮ್ಮನ್ನು ಆಶ್ರಯಿಸಿದೆನು, ರಾಘವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ಯದ್ಯಪಿ ದಯಾಲುರಿತಿ ವಿಖ್ಯಾತಸ್ತರ್ಹೀದೃಕ್ಷಂ ಮಾಮುದ್ಧರ ಭೋಃ।
ರಾಘವೇಂದ್ರ ಗುರುರಾಜ ಭವೋದ್ಭವ ದುಃಖಮಿದಂ ಮೇ ಪರಿಹರ ಭೋಃ॥ ೬॥

ಯದಿ = ಯಾವ ಪಕ್ಷದಲ್ಲಿ, **ದಯಾಲುರಿತಿ** = ತಾವು ದಯಾಪೂರ್ಣರೆಂದು, **ವಿಖ್ಯಾತಃ ಅಸಿ ತರ್ಹಿ** = ಪ್ರಸಿದ್ಧರಾಗಿರುವುದೇ ಆದಲ್ಲಿ, **ಈದೃಕ್ಷಂ** = ಈ ಸ್ಥಿತಿಯಲ್ಲಿರುವ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರಮಾಡಿರಿ, ರಾಘವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ನಮಮೋದ್ಧರ್ತಾ ಚೇತ್ ತ್ವಂ ಭುವಿ ತೇ ದಿವಿಜದ್ರುಮ ಇತಿ ಸುಯಶಃ ಕಿಂ ಭೋಃ।
ರಾಘವೇಂದ್ರ ಗುರುರಾಜ ಭವೋದ್ಭವ ದುಃಖಮಿದಂ ಮೇ ಪರಿಹರ ಭೋಃ॥ ೭॥

ತ್ವಂ = ತಾವು, **ಮಮ** = ನನ್ನ, **ಉದ್ಧರ್ತಾ ನ ಚೇತ್** = ಉದ್ಧಾರಕರು ಆಗದಿದ್ದಲ್ಲಿ, **ಭುವಿ** = ಭೂಮಿಯಲ್ಲಿ, **ತೇ** = ನಿಮಗೆ, **ದಿವಿಜದ್ರುಮ ಇತಿ** = ಕಾಮಿತ ಕಲ್ಪವೃಕ್ಷ ಎಂಬ, **ಸುಯಶಃ** = ಶ್ರೇಷ್ಠವಾದ ಕೀರ್ತಿಯು, **ಕಿಮ್** = ಹೇಗೆ ಬಂದಿತು?, ರಾಘವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ಮಾಯಾಪಾಶವಿಬದ್ಧೋ ನಾಹಂ ಜಾನೇ ವಿವೇಕಲವಮಪಿ ಭೋಃ।
ರಾಘವೇಂದ್ರ ಗುರುರಾಜ ಭವೋದ್ಭವ ದುಃಖಮಿದಂ ಮೇ ಪರಿಹರ ಭೋಃ॥ ೮॥

ಮಾಯಾಪಾಶವಿಬದ್ಧಃ ಅಹಮ್ = ಸಂಸಾರಪಾಶದಿಂದ ಬಂಧಿತನಾಗಿರುವ ನಾನು, **ವಿವೇಕಲವಮಪಿ** = ಸ್ವಲ್ಪವಾದ ವಿವೇಚನಾಶಕ್ತಿಯನ್ನು, ಕೂಡ, **ನ ಜಾನೇ** = ತಿಳಿದಿಲ್ಲ, ರಾಘವೇಂದ್ರರೇ, ಸಾಂಸಾರಿಕ ದುಃಖವನ್ನು ಪರಿಹರಿಸಿರಿ.

ಕೃಷ್ಣಾವಧೂತವಿರಚಿತಮಷ್ಟಕಮೇತತ್ ಪಠತಾಂ ಸಕಲಂ ಭೋಃ।
ರಾಘವೇಂದ್ರಗುರುರಾಜ ಭವೋದ್ಭವ ದುಃಖಮಿದಂ ಪರಿಹರ ಭೋಃ ॥ ೯॥

ಕೃಷ್ಣಾವಧೂತ ವಿರಚಿತಂ = ಕೃಷ್ಣಾವಧೂತ ಪಂಡಿತರಿಂದ ರಚಿಸಲ್ಪಟ್ಟ, **ಏತತ್ ಅಷ್ಟಕಂ** = ಈ ಎಂಟು ಸ್ತೋತ್ರಗುಚ್ಛವನ್ನು, **ಪಠತಾಂ** = ಪಠಿಸುವವರಿಗೆ, **ಸಕಲಂ** = ಸಮಸ್ತ ಇಷ್ಟಾರ್ಥವೂ ಕೈಗೂಡುವುವು, **ರಾಘವೇಂದ್ರ ಗುರುರಾಜ** = ರಾಘವೇಂದ್ರ ಗುರುರಾಜರೇ, **ಮೇ** = ನನ್ನ, **ಭವೋದ್ಭವ ದುಃಖಮಿದಂ** = ಈ ಸಾಂಸಾರಿಕ ದುಃಖವನ್ನು, **ಪರಿಹರ** = ಪರಿಹರಿಸಿರಿ.

ಇತಿ ಕೃಷ್ಣಾವಧೂತ ವಿರಚಿತ ರಾಘವೇಂದ್ರ ತಂತ್ರೇ ದಶಸ್ತೋತ್ರಪಟಲೇ
ದುಃಖಹರಣ ಸ್ತೋತ್ರಂ ಸಂಪೂರ್ಣಮ್

ಅಧ್ಯಾಯ ೪

ಕರಾವಲಂಬನ ಸ್ತೋತ್ರಮ್ (ಪಾಲಯಾಚ್ಯುತಧಾಟಿ)

ಶ್ರೀಧರಾಂಘ್ರಿಸರೋರುಹೇ ದಿಶ ದಾಸತಾಮನುದಾಸತಾಂ
ತದ್ವಧೂಪವನಾದಿಕೇಷ್ವನುದಾಸತಾಮನುದಾಸತಾಮ್।
ರಾಘವೇಂದ್ರಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೧॥

ಶ್ರೀಧರಾಂಘ್ರಿ ಸರೋರುಹೇ = ಲಕ್ಷ್ಮೀಪತಿಯ ಪಾದಾರವಿಂದಗಳಲ್ಲಿ, **ದಾಸತಾಂ** = ದಾಸ್ಯಭಾವವನ್ನು, **ಅನುದಾಸ್ಯತಾಮ್** = ಭಗವದ್ಭಕ್ತರ ದಾಸ್ಯಭಾವವನ್ನೂ, **ದಿಶ** = ದಯಪಾಲಿಸಿರಿ, **ತದ್ವಧೂ ಪವನಾದಿಕೇಷು** = ಭಗವಂತನ ಪತ್ನಿಯಾದ ಲಕ್ಷ್ಮೀ ದೇವಿಯಲ್ಲಿ ಹಾಗೂ ವಾಯುದೇವರೇ ಮೊದಲಾದವರಲ್ಲಿ, **ಅನುದಾಸತಾಮನು ದಾಸತಾಮ್** = ದಾಸಾನುದಾಸ ಭಾವವನ್ನು, **ದಿಶ** = ಕೊಡಿರಿ, **ರಾಘವೇಂದ್ರ** = ರಾಘವೇಂದ್ರರೇ, **ಮೇ** = ನನಗೆ, **ತವ** = ನಿಮ್ಮ, **ಕರಾಶ್ರಯಂ** = ಕರಾವಲಂಬನವನ್ನು,

ದೇಹಿ = ಕೊಡಿರಿ, **ಮಾಂ** = ನನ್ನನ್ನು, **ಏಹಿ** = ಸಮೀಪಿಸಿ, **ಹೇ ವರದ** = ವರನೀಡುವವರೇ, ರಾಘವೇಂದ್ರ, **ಕರಾಶ್ರಯಂ** = ಹರಿವಾಯುಗಳ ಕರಾವಲಂಬನವನ್ನು, **ದಿಶ** = ಕೊಡಿರಿ, **ತಂ** = ಹರಿವಾಯುಗಳ ಕರಾವಲಂಬನವನ್ನು, **ಅಕ್ಷತಂ ಕುರು** = ನಾಶವಾಗದಂತೆ ಮಾಡಿರಿ, ಹಾಗೆಯೇ, **ರಕ್ಷ** = ರಕ್ಷಿಸಿರಿ.

ರಾಮಯಾ ಹೃತಹೃತ್ ತ್ವಹಂ ನ ಲಭೇ ಸುಖಂ ನ ಲಭೇ ಸುಖಂ
ಕಿಂ ಕರೋಮಿ ಹತಾಶಯಶ್ಚರಿತಾಸ್ಮ್ಯಹಂ ಮೃಗತೃಷ್ಣಯಾ।
ರಾಘವೇಂದ್ರ ಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರ ಕರಾಶ್ರಯಂ ದಿಶ ರಕ್ಷ ತಂ ಕುರು ಚಾಕ್ಷತಮ್ ॥ ೨॥

ರಾಮಯಾ = ಸುಂದರಿಯರಿಂದ, **ಹೃತಹೃತ್** = ಸೆಳೆಯಲ್ಪಟ್ಟವ, **ಅಹಂ** = ನಾನು, ಸುಖಂ ನ ಲಭೇ, ಸುಖಂ ನಲಭೇ = ನಿಶ್ಚಿತವಾಗಿಯೂ ಸುಖವನ್ನು ಹೊಂದುತ್ತಿಲ್ಲ, **ಕಿಂ ಕರೋಮಿ** = ಏನು ಮಾಡಲಿ? **ಹತಾಶಯಃ** = ಹತಾಶನಂತಾಗಿ, **ಮೃಗತೃಷ್ಣಯಾ** = ಮರುಮರೀಚಿಕೆಯಿಂದ, **ಚರಿತಾ ಅಸ್ಮಿ** = ತಿರುಗುತ್ತಿರುವೆನು, ಹೇ ರಾಘವೇಂದ್ರ, ತವ ಕರಾಶ್ರಯಂ ದೇಹಿ, ವರದ ಮಾಂ ಏಹಿ, ರಾಘವೇಂದ್ರ ಕರಾಶ್ರಯಂ ಮೇ ದಿಶ, ತಂ ರಕ್ಷ, ಅಕ್ಷತಂ ಕುರು, ರಕ್ಷ.

ಘಾತುಕಂ ಮಮ ಪೂರ್ವಕರ್ಮ ವಿಬಾಧತೇ ಪ್ರವಿಬಾಧತೇ
ತೇನ ಸಂಸೃತಿಸಾಗರೇ ಭ್ರಮತೋ ಮಮ ಭ್ರಮತೋ ಮಮ।
ರಾಘವೇಂದ್ರಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೩॥

ಘಾತುಕಂ = ಕ್ರೂರಸ್ವಭಾವದ, **ಮಮ** = ನನ್ನ, **ಪೂರ್ವಕರ್ಮ** = ಪ್ರಾಚೀನ ಕರ್ಮವು, ವಿಬಾಧತೇ, ಪ್ರವಿಬಾಧತೇ = ಅತಿಯಾಗಿ ಬಾಧಿಸುತ್ತಿದೆ, **ತೇನ** = ಆದ್ದರಿಂದಲೇ, **ಸಂಸೃತಿ ಸಾಗರೇ** = ಸಂಸಾರಸಮುದ್ರದಲ್ಲಿ, **ಭ್ರಮತಃ ಮಮ** = ಅತಿಯಾಗಿ ಸುತ್ತುತ್ತಿರುವ ನನಗೆ, ರಾಘವೇಂದ್ರ, **ತವ ಕರಾಶ್ರಯಂ** = ಕರಾವಲಂಬನವನ್ನು, **ದಿಶ** = ಕೊಡಿರಿ.

ವೇದ್ಮಿ ಕಿಂಚನ ಸಾಧನಂ ನ ಹಿ ಸದ್ಗತೇರ್ಮಮ ಸದ್ಗತೇ
ಮಾರ್ಗಮಾಶು ವಿಮುಕ್ತಿದಂ ಪ್ರತಿದರ್ಶಯ ಪ್ರತಿದರ್ಶಯ।

ರಾಘವೇಂದ್ರಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೪॥

ಸದ್ಗತೇ = ಸದ್ಗತಿಯನ್ನು ನೀಡುವ ರಾಘವೇಂದ್ರರೇ, **ಮಮ** = ನನಗೆ, **ಸದ್ಗತೇಃ** = ಸದ್ಗತಿಯನ್ನು ಹೊಂದುವುದಕ್ಕೆ, **ಕಿಂಚನ ಸಾಧನಂ** = ಉಪಾಯವಾವುದನ್ನು, **ನ ವೇದ್ಮಿ** = ತಿಳಿದಿಲ್ಲ, **ವಿಮುಕ್ತಿದಂ ಮಾರ್ಗಂ** = ಮುಕ್ತಿ ಹೊಂದುವ ಉಪಾಯವನ್ನು, **ಆಶು** = ಕೂಡಲೇ, **ಪ್ರತಿದರ್ಶಯ, ಪ್ರತಿದರ್ಶಯ** = ಖಂಡಿತವಾಗಿ ತೋರಿಸಿರಿ, ರಾಘವೇಂದ್ರ ತವ ಕರಾವಲಂಬನಂ ದೇಹಿ.

ದ್ರಾವಯಾಽಽಶು ಮಮಾಪದಂ ನಿಯತಾಯತಾಮನಯಾಽಽಗತಾಂ
ಅನ್ಯಥಾ ತವ ಭಕ್ತದುಃಖಹರಪ್ರಥಾ ತು ಭವೇದ್ ವೃಥಾ।
ರಾಘವೇಂದ್ರಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೫॥

ಮಮ = ನನ್ನ, **ಅನಯಾಗತಾಂ** = ಹೇಳಬಾರದಂತಹ ಅನ್ಯಾಯಮಾರ್ಗದಿಂದ ಬಂದಿರುವ, **ನಿಯತಾಯತಾಂ** = ನಿಶ್ಚಿತವಾಗಿಯೂ ಮಹತ್ತಾದ, **ಆಪದಂ** = ಆಪತ್ತನ್ನು, **ಆಶು** = ಈ ಕೂಡಲೇ, **ದ್ರಾವಯ** = ದೂರ ಓಡಿಸಿರಿ, **ಅನ್ಯಥಾ** = ದೂರಮಾಡದಿದ್ದರೆ, **ತವ** = ತಮಗಿರುವ, **ಭಕ್ತದುಃಖಹರಪ್ರಥಾ** = ಭಕ್ತರ ದುಃಖಪರಿಹಾರಕರೆಂಬ ಬಿರುದು, **ವೃಥಾಭವೇತ್** = ವ್ಯರ್ಥವಾದೀತು, ರಾಘವೇಂದ್ರ ತವ ಕರಾಶ್ರಯಂ ದೇಹಿ.

ಯಾಮಿ ಕಂ ತ್ವದೃತೇ ಪಿತಃ ಶರಣಂ ವದಾಶರಣಃ ಪ್ರಭೋ
ಪುತ್ರವತ್ಸಲತಾ ಪಿತುಸ್ತವ ನಾಸ್ತಿ ಕಿಂ ತವ ನಾಸ್ತಿ ಕಿಮ್।
ರಾಘವೇಂದ್ರಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೬॥

ಪಿತಃ ಪ್ರಭೋ = ತಂದೆ ಹಾಗೂ ಪ್ರಭುಗಳಾದ ರಾಘವೇಂದ್ರರೇ, **ಅಶರಣಃ** = ಅನಾಥನಾದ ನಾನು, **ತ್ವದ್ ಋತೇ** = ತಮ್ಮನ್ನು ಬಿಟ್ಟು, **ಕಂ ಶರಣಂ ಯಾಮಿ?** = ಯಾರನ್ನು ಶರಣು ಹೊಂದಲಿ, **ವದ** = ಹೇಳಿರಿ, **ಪಿತುಃ ತವ** = ತಂದೆಯಾದ ತಮಗೆ, **ಪುತ್ರವತ್ಸಲತಾ** = ಪುತ್ರವಾತ್ಸಲ್ಯವು, **ನಾಸ್ತಿ ಕಿಮ್** = ಇಲ್ಲವೇನು? ರಾಘವೇಂದ್ರ ತವ ಕರಾಶ್ರಯಂ ದೇಹಿ.

ಮಾನಯಸ್ವ ಸುತಸ್ಯ ಮೇ ಬಹು ಭಾಷಣಂ ಕರುಣೇಷಣಂ
ವಕ್ರವಾಗಪಿ ಬಾಲಕಸ್ಯ ಮುದಂ ಪಿತುಃ ಕುರುತೇ ನ ಕಿಮ್।
ರಾಘವೇಂದ್ರಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೭॥

ಸುತಸ್ಯ = ಪುತ್ರನಾದ, **ಮೇ** = ನನ್ನ, **ಕರುಣೇಷಣಂ** = ದೀನನಾಗಿ ಬೇಡುವ, **ಭಾಷಣಂ** = ಭಾಷಣದಂತೆ, **ಬಹು** = ಬಹಳವಾಗಿದ್ದರೂ, **ಮಾನಯಸ್ವ** = ಮಾನ್ಯ ಮಾಡಿರಿ, **ಬಾಲಕಸ್ಯ** = ಬಾಲಕನ, ವಕ್ರವಾಗ್ ಅಪಿ = ತೊದಲು ನುಡಿಯೂ, **ಪಿತುಃ** = ತಂದೆಗೆ, **ಮುದಂ** = ಸಂತೋಷವನ್ನು, ನ ಕುರುತೇ ಕಿಂ = ಮಾಡುವುದಿಲ್ಲವೇನು? ಖಂಡಿತವಾಗಿಯೂ ಮಾಡುತ್ತದೆ. ರಾಘವೇಂದ್ರ ತವ ಕರಾಶ್ರಯಂ ದೇಹಿ.

ಕೃಷ್ಣನಾಮಯುತಾವಧೂತಕೃತಂ ತವ ಸ್ತವಮಾದರಾತ್
ಯಃ ಪಠೇದಿಹ ತಸ್ಯ ಸತ್ಸುಖಮಾದಿಶಾಭಯಮಾದಿಶ।
ರಾಘವೇಂದ್ರ ಕರಾಶ್ರಯಂ ತವ ದೇಹಿ ಮೇ ವರದೈಹಿ ಮಾಂ
ರಾಘವೇಂದ್ರ ಕರಾಶ್ರಯಂ ದಿಶ ರಕ್ಷತಂ ಕುರು ಚಾಕ್ಷತಮ್ ॥ ೮॥

ಕೃಷ್ಣನಾಮಯುತಾವಧೂತಕೃತಂ = ಕೃಷ್ಣಾವಧೂತರಿಂದ ರಚಿಸಲ್ಪಟ್ಟ, **ತವಸ್ತವಂ** = ತಮ್ಮ ಸ್ತೋತ್ರವನ್ನು, ಆದರಾತ್ = ಆದರ ಪೂರ್ವಕವಾಗಿ, **ಯಃ ಪಠೇತ್** = ಯಾರು ಪಾರಾಯಣಮಾಡುವನೋ, ತಸ್ಯ = ಆ ಭಕ್ತನಿಗೆ, **ಸತ್ ಸುಖಂ**=ಶ್ರೇಷ್ಠ ಸುಖವನ್ನು, ಆದಿಶ = ನೀಡಿರಿ, ಅಭಯಂ ಆದಿಶ = ಅಭಯವನ್ನು ನೀಡಿರಿ, **ರಾಘವೇಂದ್ರ** = ರಾಘವೇಂದ್ರರೇ, ತವ = ತಮ್ಮ, ಕರಾಶ್ರಯಂ = ಕರಾವಲಂಬನವನ್ನು, **ಮೇ** = ನನಗೆ, **ದೇಹಿ** = ಕೊಡಿರಿ, ರಾಘವೇಂದ್ರ ಕರಾಶ್ರಯಂ= ಮೂಲರಾಮ ಹಾಗೂ ವಾಯುದೇವರ ಕರಾವಲಂಬನವನ್ನೂ, ಮೇ ದಿಶ = ನನಗೆ ಕೊಡಿಸಿರಿ, **ತಂ** = ಕರಾವಲಂಬನವನ್ನು, ರಕ್ಷ = ರಕ್ಷಿಸಿರಿ, ಅಕ್ಷತಂ ಕುರು = ಶಾಶ್ವತವಾಗಿರುವಂತೆ ಮಾಡಿರಿ.

ಇತಿ ಶ್ರೀ ಕೃಷ್ಣಾವಧೂತ ರಚಿತ ಶ್ರೀ ರಾಘವೇಂದ್ರತಂತ್ರೇ
ದಶಸ್ತೋತ್ರಪಟಲೀ ಚತುರ್ಥೋಽಧ್ಯಾಯಃ

ಅಧ್ಯಾಯ ೨೪

ಸಂಸಾರೋದ್ಧರಣ ಸ್ತೋತ್ರಮ್

ಶ್ರಿತಲೋಕಾಮರಭೂರುಹ ಸದೃಶಾಂಘ್ರೇ ಕೃಪಯಾ ಭೋಃ।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥೧॥

ಶ್ರಿತಲೋಕ = ಆಶ್ರಿತಜನರಿಗೆ, **ಅಮರಭೂರುಹಸದೃಶಾಂಘ್ರೇ** = ದೇವತಾ ವೃಕ್ಷವಾದ ಕಲ್ಪವೃಕ್ಷದಂತಹ ಪಾದಗಳುಳ್ಳ, **ಅಯಿಗುರುರಾಜ** = ಎಲೋ ಗುರುರಾಜರೇ, **ಕೃಪಯಾ** = ದಯೆಯಿಂದ, **ಸಂಸೃತಿ ಕೂಪೇ** = ಸಂಸಾರವೆಂಬ ಬಾವಿಯಲ್ಲಿ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರ ಮಾಡಿರಿ.

ರಮಣೀ ರೈ ಸುತ ಮೋಹಿತ ಮನಸಂ ಮೋದದ ಭೋ ಭೋಃ।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥೨॥

ರಮಣೀ = ಹೆಂಡತಿಯು, **ರೈ** = ಸಂಪತ್ತು, **ಸುತ** = ಪುತ್ರಾದಿಗಳಿಂದ, **ಮೋಹಿತ ಮನಸಂ** = ಮೋಹಗೊಂಡ ಅಂತಃಕರಣವುಳ್ಳ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರ ಮಾಡಿರಿ.

ಘನಸಚ್ಚಿತ್ಸುಖ ಪೂರಿತ ಕರುಣಾಸಾಗರ ಭೋಃ ಭೋಃ।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥೩॥

ಘನಸಚ್ಚಿತ್ಸುಖ ಪೂರಿತ = ಜ್ಞಾನ ಹಾಗೂ ಸುಖದಿಂದ ತುಂಬಿರುವ, **ಕರುಣಾಗರ** = ದಯಾವಾರಿಧಿಗಳೇ, ಸಂಸೃತಿ ಕೂಪೇ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರ ಮಾಡಿರಿ.

ವರದೇಶಾಮಿತ ಚಿತ್ರಚರಿತಭೂಭಾಸುರ ಭೋ ಭೋಃ।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥೪॥

ವರದೇಶ = ವರವನ್ನು ಕೊಡುವವರಿಗೆ ಈಶರಾದ, **ಅಮಿತಚಿತ್ರಚರಿತ** = ಮಿತಿಯಿಲ್ಲದ ವಿಚಿತ್ರಗಳಾದ ಚರಿತ್ರೆಗಳಿಂದ, **ಭೂಭಾಸುರ** = ಭೂಮಿಯಲ್ಲಿ ಭಾಸಮಾನರಾಗಿರುವ, **ಗುರುರಾಜ** = ಗುರುರಾಜರೇ, **ಸಂಸೃತಿ ಕೂಪೇ** = ಸಂಸಾರವೆಂಬ ಬಾವಿಯಲ್ಲಿ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರ ಮಾಡಿರಿ.

ದರಚಕ್ರಾಂಕಿತ ಕಂಠಗ ತುಲಸೀ ಮಾಲಿಕ ಭೋ ಭೋ:।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥ ೫॥

ಹೇ ಯತಿವರ್ಯ = ಯತಿಶ್ರೇಷ್ಠರೇ, **ಅಮಿತಬೋಧ** = ಮಧ್ವಾಚಾರ್ಯರ, **ಸುಮತ ವಿಸ್ತಾರಕ** = ಸುಮತವನ್ನು ಪ್ರಚಾರಗೊಳಿಸಿದ, **ಅಯಿ ಗುರುರಾಜ** = ಎಲೋ ಗುರುರಾಜರೇ, **ಕೃಪಯಾ** = ದಯೆಯಿಂದ, **ಸಂಸೃತಿ ಕೂಪೇ** = ಸಂಸಾರ ವೆಂಬ ಬಾವಿಯಲ್ಲಿ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರ ಮಾಡಿರಿ.

ನಮತಾಮಿಷ್ಟದ ಕುಷ್ಟಮುಖ ಮಹಾಕಷ್ಟಹ ಭೋ ಭೋ:।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥ ೬॥

ನಮತಾಂ = ನಮಿಸುವವರಿಗೆ, **ಇಷ್ಟದ** = ಇಷ್ಟಾರ್ಥಗಳನ್ನು ನೀಡುವ, **ಕುಷ್ಟಮುಖಮಹಾಕಷ್ಟಹ** = ಕುಷ್ಟರೋಗವೇ ಮೊದಲಾದ ಕಷ್ಟಗಳನ್ನು ನಾಶಮಾಡುವ, **ಅಯಿ ಗುರುರಾಜ** = ಎಲೋ ಗುರುರಾಜರೇ, **ಕೃಪಯಾ** = ದಯೆಯಿಂದ, **ಸಂಸೃತಿ ಕೂಪೇ** = ಸಂಸಾರವೆಂಬ ಬಾವಿಯಲ್ಲಿ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, ಉದ್ಧರ = ಉದ್ಧಾರ ಮಾಡಿರಿ.

ಮಮತಾ ಭಕ್ತಜನೇ ಸುತ ಇವ ಜಾಗರ್ತಿ ಹಿ ಭೋ ಭೋ:।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿ ಕೂಪೇ ॥ ೭॥

ಭಕ್ತಜನೇ = ಭಕ್ತರಲ್ಲಿ, **ಮಮತಾ** = ತಮ್ಮವರೆಂಬ ಭಾವನೆಯು, **ಸುತೇ ಇವ** = ಪುತ್ರನಲ್ಲಿರುವಂತೆ, **ಜಾಗರ್ತಿ** = ಎಚ್ಚರವಾಗಿದೆ, **ಗುರುರಾಜ** = ಗುರುರಾಜರೇ, ಸಂಸೃತಿ **ಕೂಪೇ** = ಸಂಸಾರಕೂಪದಲ್ಲಿ, **ಪತಿತಂ** = ಬಿದ್ದಿರುವ, **ಮಾಂ** = ನನ್ನನ್ನು, ಉದ್ಧರ = ಉದ್ಧರಿಸಿ.

ಸ್ತವನಂ ಕೃಷ್ಣಾವಧೂತ ರಚಿತಂ ಯಃ ಪಠತೀದಮ್।
ಗುರುರಾಜೋದ್ಧರ ಮಾಮಯಿ ಪತಿತಂ ಸಂಸೃತಿಕೂಪೇ ॥ ೮॥

ಕೃಷ್ಣಾವಧೂತರಚಿತಂ ಸ್ತವನಂ = ಕೃಷ್ಣಾವಧೂತರು ರಚಿಸಿರುವ, **ಇದಂ** = ಈ ಸ್ತೋತ್ರವನ್ನು, **ಯಃ ಪಠತಿ** = ಯಾರು ಪಠಿಸುವರೋ, **ತಂ** = ಅವನನ್ನು, **ಉದ್ಧರ** = ಉದ್ಧರಿಸಿರಿ.

ಇತಿ ಶ್ರೀ ರಾಘವೇಂದ್ರ ತಂತ್ರೇ ದಶಸ್ತೋತ್ರ ಪಟಲೇ
ಸಂಸಾರೋದ್ಧರಣ ಸ್ತೋತ್ರಮ್

ಅಧ್ಯಾಯ ೭

ಹೃದ್ರೋಗಹರಣ ಸ್ತೋತ್ರಮ್

ಶ್ರೀರಾಮೇ ಗುಣಧಾಮನಿ ವಿನಿಹಿತ ಚಿತ್ತಪ್ರಭೋ ದಯಾಪೂರ್ಣ।
ಗುರುರಾಡುದಾರಭಾವ ತ್ವಂ ಹರ ಹೃದ್ರೋಗಮತಿತೂರ್ಣಮ್ ॥ ೧॥

ಗುಣಧಾಮನಿ = ಗುಣಾಕರನಾದ, **ಶ್ರೀ ರಾಮೇ** = ಶ್ರೀ ರಾಮಚಂದ್ರನಲ್ಲಿ, **ವಿನಿಹಿತ ಚಿತ್ತ** = ಇಡಲ್ಪಟ್ಟ ಮನಸ್ಸುಳ್ಳ, **ಪ್ರಭೋ** = ಸ್ವಾಮಿಯಾಗಿರುವ, **ದಯಾಪೂರ್ಣ** = ದಯಾಸಾಗರರಾದ, **ಉದಾರ ಭಾವ** = ಉದಾರಿಗಳಾದ, **ಗುರುರಾಟ್** = ಗುರುರಾಜರೇ, **ತ್ವಂ** = ನೀವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಕೂಡಲೇ, **ಹರ** = ಪರಿಹರಿಸಿರಿ.

ರಾಜೀವಾಕ್ಷೀಕಾಂಕ್ಷಾಪೂರಣ ಸಂತಾಪ ಸಂತತಾಭ್ಯಸ್ತಮ್।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಮ್ ॥೨॥

ಮೇ = ನನ್ನ, **ಚೇತಃ** = ಅಂತಃಕರಣವು, **ರಾಜೀವಾಕ್ಷೀ** = ಕಮಲಾಕ್ಷಿಯರ, **ಕಾಂಕ್ಷಾಪೂರಣ** = ಇಚ್ಛೆಗಳನ್ನು ಪೂರೈಸುವುದರಿಂದ, ಉಂಟಾದ ಸಂತಾಪವನ್ನು ಪಡೆಯುವುದರಲ್ಲಿ, **ಸಂತತಾಭ್ಯಸ್ತಮ್** = ನಿರಂತರ ಅಭ್ಯಾಸವುಳ್ಳದ್ದಾಗಿದೆ, **ಹೇ ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, **ಹರ** = ಪರಿಹರಿಸಿರಿ.

ಘೋರಾಶಾಭಿಧಭೂತಾವಿಷ್ಟಂ ಭೃಶಮಸ್ಥಿರಂ ಸದಾ ಭ್ರಮತಿ ।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಮ್ ॥ ೩॥

ಮೇ = ನನ್ನ, **ಚೇತಃ** = ಅಂತಃಕರಣವು, **ಘೋರಾಶಾಭಿಧ** = ಘೋರವಾದ ಆಸೆಯೆಂಬ, **ಭೂತಾವಿಷ್ಟಂ** = ಭೂತದಿಂದ ಆವಿಷ್ಟವಾಗಿ, **ಸದಾ** = ಯಾವಾಗಲೂ, **ಭೃಶಂ** = ಬಹಳವಾಗಿ, **ಅಸ್ಥಿರಂ** = ಚಂಚಲವಾಗಿ, **ಭ್ರಮತಿ** = ಸಂಚರಿಸುತ್ತದೆ, **ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, **ಹರ** = ಪರಿಹರಿಸಿರಿ.

ವೇದಪುರಾಣ ಸುಮಾರ್ಗಾನುಜ್ಝಿತ್ವಾ ದುಷ್ಟನೀಚಮಾರ್ಗಚರಮ್।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಮ್ ॥ ೪॥

ಮೇ ಚೇತಃ = ನನ್ನ ಮನಸ್ಸು, **ವೇದಪುರಾಣ ಸುಮಾರ್ಗಾತ್** = ವೇದ ಪುರಾಣೋಕ್ತ ಸನ್ಮಾರ್ಗಗಳನ್ನು, **ಉಜ್ಝಿತ್ವಾ** = ಬಿಟ್ಟು, **ದುಷ್ಟನೀಚ ಮಾರ್ಗಚರಂ** = ದುಷ್ಟ ಹಾಗೂ ನೀಚವಾದ ಮಾರ್ಗದಲ್ಲಿ ಸಂಚರಿಸುತ್ತಿದೆ, **ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, **ಹರ** = ಪರಿಹರಿಸಿರಿ.

ದ್ರಾಗಿಷ್ಟಾರ್ಥದಮೀಶಮಲಬ್ಧ್ವಾನ್ಯಾನುಪಾಸ್ಯ ಬಹುಖಿನ್ನಮ್ ।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಂ ॥ ೫॥

ಮೇ ಚೇತಃ = ನನ್ನ ಚಿತ್ತವು, **ದ್ರಾಕ್** = ಶೀಘ್ರವಾಗಿ, **ಇಷ್ಟಾರ್ಥದಂ** = ಇಷ್ಟಾರ್ಥವನ್ನು ಕೊಡುವ, **ಈಶಂ** = ತಮ್ಮಂತಹ ಸ್ವಾಮಿಯನ್ನು, **ಅಲಬ್ಧ್ವಾ** = ಹೊಂದದೆ, **ಅನ್ಯಾನ್** = ಬೇರೆಯವರನ್ನು, **ಉಪಾಸ್ಯ** = ಸೇವಿಸಿ, **ಬಹುಖಿನ್ನಮ್** = ಬಹಳವಾಗಿ ಖತಿಗೊಂಡಿದೆ, **ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯ ರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, **ಹರ** = ಪರಿಹರಿಸಿರಿ.

ಯತ್ನಾತ್ ಕಾಪುರುಷಾಧಿಕ ಸೇವಾವಿಧಿನಾಪಿ ನಾಪ ಕಾಮ್ಯಾರ್ಥಮ್।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಮ್ ॥ ೬॥

ಮೇ ಚೇತಃ = ನನ್ನ ಮನಸ್ಸು, **ಯತ್ನಾತ್** = ಬಹಳ ಪ್ರಯತ್ನವನ್ನು ಮಾಡಿ, ಕಾಪುರುಷಾಧಿಕಸೇವಾವಿಧಿನಾ **ಅಪಿ** = ಕುತ್ಸಿತ ಪುರುಷರ ಸೇವೆಯಿಂದಲೂ,

ಕಾಮ್ಯಾರ್ಥಂ = ಬಯಸಿದ ಕಾಮನೆಗಳನ್ನು, ನ ಆಪ = ಹೊಂದಲಿಲ್ಲ, **ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, ಹರ = ಪರಿಹರಿಸಿರಿ.

ನರ್ತೇತ್ವದ್ ಭುವಿ ಕಂಚನ ಜಾನೀತೇಽನ್ಯಂ ಕಲೌ ಸುರದ್ರುಸಮಮ್।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಮ್ ॥ ೭॥

ಮೇ ಚೇತಃ = ನನ್ನ ಚಿತ್ತವು, **ಭುವಿ** = ಭೂಮಿಯಲ್ಲಿ, **ತ್ವದ್ ಋತೇ** = ನಿಮ್ಮನ್ನು ಹೊರತು, **ಕಲೌ ಸುರದ್ರುಸಮಂ** = ಕಲಿಯುಗದ ಕಲ್ಪವೃಕ್ಷದಂತಿರುವ, **ಅನ್ಯ ಕಂಚನ** = ಬೇರೆ ಯಾರೊಬ್ಬನನ್ನು, **ನ ಜಾನೀತೇ** = ತಿಳಿಯುವುದಿಲ್ಲ, **ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, ಹರ = ಪರಿಹರಿಸಿರಿ.

ಮಹಿಮಾನಂ ತವ ಭೂಯಃ ಶ್ರುತ್ವಾ ತ್ವತ್ಪಾದ ಪಂಕಜಂ ಪ್ರಾಪ್ತಮ್।
ಚೇತೋ ಮೇ ಗುರುರಾಜ ತ್ವಂ ಹರ ಹೃದ್ರೋಗಮತಿತೂರ್ಣಮ್ ॥ ೮॥

ಮೇ ಚೇತಃ = ನನ್ನ ಮನಸ್ಸು, ತವ = ತಮ್ಮ, **ಮಹಿಮಾನಂ** = ಮಹಿಮೆಗಳನ್ನು, **ಭೂಯಃ** = ಪುನಃಪುನಃ, **ಶ್ರುತ್ವಾ** = ಕೇಳಿ, **ತ್ವತ್ಪಾದ ಪಂಕಜಂ** = ತಮ್ಮ ಪಾದಪದ್ಮಗಳನ್ನು, **ಪ್ರಾಪ್ತಮ್** = ಹೊಂದಿದೆ, **ಗುರುರಾಜ** = ಗುರುರಾಜರೇ, **ತ್ವಂ** = ತಾವು, **ಹೃದ್ರೋಗಂ** = ಹೃದಯರೋಗವನ್ನು, **ಅತಿತೂರ್ಣಂ** = ಅತೀ ಶೀಘ್ರವಾಗಿ, ಹರ = ಪರಿಹರಿಸಿರಿ.

ಕೃಷ್ಣಾವಧೂತ ರಚಿತಂ ಪಥ್ಯೋಪೇತಂ ಮನೋರೋಗಹರಮ್।
ಸ್ತೋತ್ರಂ ಮೇ ಪಠತಾಂ ತ್ವಂ ಸಂಹರ ಹೃದ್ರೋಗಮತಿತೂರ್ಣಮ್ ॥ ೯॥

ಕೃಷ್ಣಾವಧೂತ ರಚಿತಂ = ಕೃಷ್ಣಾವಧೂತರಿಂದ ರಚಿಸಲ್ಪಟ್ಟ, **ಪಥ್ಯೋಪೇತಂ** = ಪಥ್ಯವಾಗಿರುವ, **ಮನೋರೋಗ ಪರಮ್** = ಮನಸ್ಸಿನ ಸಂತಾಪವನ್ನು ಕಳೆಯುವ, **ತೇ ಸ್ತೋತ್ರಂ** = ಮನಸ್ಸಿನ ಸಂತಾಪವನ್ನು ಕಳೆಯುವ, **ತೇ ಸ್ತೋತ್ರಂ** = ತಮ್ಮ ಸ್ತೋತ್ರವನ್ನು, **ಪಠತಾಂ** = ಪಠಿಸುವವರಿಗೆ, **ತ್ವಂ** = ನೀವು, **ಹೃದ್ರೋಗಂ** = ಹೃದಯ ರೋಗವನ್ನು, **ಅತಿತೂರ್ಣಂ** = ಕೂಡಲೇ, ಹರ = ಪರಿಹರಿಸಿರಿ.

ಇತಿ ಶ್ರೀ ರಾಘವೇಂದ್ರತಂತ್ರೇ ದಶಪಟಲೇ
ಹೃದ್ರೋಗಹರಣಂನಾಮ ಷಷ್ಟೋಽಧ್ಯಾಯಃ

ಅಧ್ಯಾಯ ೭

ಪ್ರತಿಕೂಲ ಸ್ವಾನುಕೂಲೀಕರಣ ಸ್ತೋತ್ರಂ

ಶ್ರೀ ಭೂಪೇ ಕೂಪೇ ಸುಖವಾರಾಂ ಕೃತಚಿತ್ತಂ
ಚಿತ್ತೇ ತ್ವಾಂ ಧ್ಯಾಯಾಮಿ ಚ ಭೂಯೋಽಹಮಮತ್ತಃ।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ ॥೧॥

ಸುಖವಾರಾಂ ಕೂಪೇ = ಸುಖವೆಂಬ ನೀರಿನ ಬುಗ್ಗೆಯಂತಿರುವ, **ಶ್ರೀ ಭೂಪೇ** = ಶ್ರೀ ಭೂಪತಿಯಾದ ನಾರಾಯಣನಲ್ಲಿ, **ಕೃತಚಿತ್ತಂ** = ಮನಸ್ಸನ್ನು ನೆಟ್ಟಿರುವ, **ತ್ವಾಂ** = ತಮ್ಮನ್ನು, **ಅಹಂ** = ನಾನು, **ಅಮತ್ತಃ** = ಮತ್ತನಾಗದೆ, **ಭೂಯಃ** = ಪುನಃಪುನಃ, **ಚಿತ್ತೇ ಧ್ಯಾಯಾಮಿ** = ಮನಃಪೂರ್ವಕವಾಗಿ ಧ್ಯಾನಮಾಡುವೆನು, **ಸ್ವಾಮಿನ್ ಭೂಮನ್** = ಪ್ರಭುಗಳು ಹಾಗೂ ಗುಣಪೂರ್ಣರೂ ಆದ, **ಭೋ ಗುರುರಾಜ** = ಗುರುರಾಜರೇ, **ಪ್ರತಿಕೂಲಂ** = ಪ್ರತಿಕೂಲರಾಗಿರುವ, **ದಾರಾಪತ್ಯಾದ್ಯಂ** = ಹೆಂಡತಿ ಮಕ್ಕಳು ಮೊದಲಾದ, **ಸಕಲಂ** = ಸಮಸ್ತ ಜನರನ್ನೂ, **ಅನುಕೂಲಂ ಕುರು** = ಅನುಕೂಲರನ್ನಾಗಿ ಮಾಡಿರಿ.

ರಾಷ್ಟ್ರೇ ರಾಷ್ಟ್ರೇ ಖ್ಯಾತಯಶಸ್ತೋಮ ವಿಭಾಸಿನ್।
ವಾಸಿನ್ ಧ್ಯಾತುಶ್ಚೇತಸಿ ದಾತಃ ಕರುಣಾವನ್।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ ॥೨॥

ರಾಷ್ಟ್ರೇ ರಾಷ್ಟ್ರೇ = ದೇಶದಾದ್ಯಂತ, **ಖ್ಯಾತಯಶಸ್ತೋಮ** = ಪ್ರಸಿದ್ಧವಾದ ಕೀರ್ತಿ ಸಮೂಹದಿಂದ, **ವಿಭಾಸಿನ್** = ಪ್ರಕಾಶಿಸುವವರೇ, **ಧ್ಯಾತುಃ ಚೇತಸಿ** = ಧ್ಯಾನಿಸುವವರ ಮನಸ್ಸಿನಲ್ಲಿ, **ವಾಸಿನ್** = ವಾಸಮಾಡುವವರೇ, **ದಾತಃ** = ದಾನಿಗಳೇ, **ಕರುಣಾವನ್** = ಕರುಣಾಶಾಲಿಗಳೇ, ಗುರುರಾಜರೇ, **ಪ್ರತಿಕೂಲಂ ದಾರಾಪತ್ಯಾದ್ಯಂ** ಸಕಲಂ ಅನುಕೂಲಂ ಕುರು.

ಘೋರೇ ಸಂಸಾರೇ ಪತಿತೋಽಹಂ ತವ ಪುತ್ರಃ
ಕುತ್ರಾವೇಯಂ ತ್ವಾಮಪಹಾಯ ಪ್ರಭುಮಿಷ್ಟಮ್।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ **॥ ೩॥**

ತವ = ತಮ್ಮ, **ಪುತ್ರಃ** = ಮಗನಾದ, **ಅಹಮ್** = ನಾನು, **ಘೋರೇ ಸಂಸಾರೇ** = ಆಳ, ಘೋರವಾದ ಸಂಸಾರದಲ್ಲಿ, **ಪತಿತಃ** = ಬಿದ್ದಿರುವೆನು, **ಇಷ್ಟಂ** = ಪ್ರಿಯರಾದ, **ಪ್ರಭುಂ** = ಸ್ವಾಮಿಯಾದ, **ತ್ವಾಂ** = ತಮ್ಮನ್ನು, **ಅಪಹಾಯ** = ಹೊರತು ಅನ್ಯರನ್ನು, **ಕುತ್ರ** = ಎಲ್ಲಿ, **ಅವೇಯಂ** = ಹುಡುಕಿ ತಿಳಿಯಲಿ? ಗುರುರಾಜ, ಪ್ರತಿಕೂಲಂ ದಾರಾ ಪತ್ಯಾದ್ಯ ಅನುಕೂಲಂ ಕುರು.

ವೇದಾಹಂ ನೋ ಸದ್ಗತಿಹೇತುಂ ತವ ಪೋತಃ।
ಪೋತಂ ಪಾದಾದನ್ಯದ್ ಋತೇ ಸಂಸೃತಿವಾರ್ಧೇಃ।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ **॥ ೪॥**

ತವ **ಪೋತಃ** = ತಮ್ಮ ಪುತ್ರನಾದ, ಅಹಂ = ನಾನು, **ತವ ಪಾದಾದ್ ಋತೇ** = ತಮ್ಮ ಪಾದದ ಹೊರತಾಗಿ, **ಸಂಸೃತಿವಾರ್ಧೇಃ** = ಸಂಸಾರ ಸಾಗರಕ್ಕೆ, **ಸದ್ಗತಿಹೇತುಂ** = ಸದ್ಗತಿಗೆ ಕಾರಣವಾದ, **ಪೋತಂ** = ದೋಣಿಯನ್ನು, **ನೋ ವೇದ** = ತಿಳಿದಿಲ್ಲ, ಸ್ವಾಮಿನ್ ದಾರಾಪತ್ಯಾದ್ಯಂ ಅನುಕೂಲಂ ಕುರು.

ದ್ರಾವಂ ದ್ರಾವಂ ನಶ್ಯತಿ ಕಷ್ಟಂ ತವ ದೃಷ್ಟ್ಯಾಂ
ಕಷ್ಟ್ಯಾಪಂ ತ್ವಾತಃ ಕುರು ತುಷ್ಟಂ ವೃಷಪುಷ್ಟಮ್।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ **॥ ೫॥**

ತವ = ತಮ್ಮ, **ದೃಷ್ಟ್ಯಾಂ ಸತ್ಯಾಂ** = ಕಟಾಕ್ಷ ಬೀಳುತ್ತಿರಲು, **ಕಷ್ಟಂ** = ಕಷ್ಟವು, **ದ್ರಾವಂ ದ್ರಾವಂ ನಶ್ಯತಿ** = ಬೇಗ ಬೇಗನೆ ನಶಿಸುತ್ತದೆ, **ಅತಃ** = ಆದ್ದರಿಂದಲೇ, **ಕಷ್ಟೀ** = ಕಷ್ಟವನ್ನನುಭವಿಸುತ್ತಿರುವ, ನಾನು, **ತ್ವಾ** = ತಮ್ಮನ್ನು, **ಆಪಂ** = ಶರಣು ಹೋಗಿದ್ದೇನೆ, **ವೃಷಪುಷ್ಟಂ** = ನನ್ನನ್ನು ಧರ್ಮವೆಂಬ ಎತ್ತಿನಿಂದ ಪುಷ್ಟಿಗೊಳಿಸಿ, **ತುಷ್ಟಃ ಕುರು** = ಸಂತುಷ್ಟನಾಗಿಸಿರಿ, ಗುರುರಾಜ ದಾರಾಪತ್ಯಾದಿಕಂ ಸರ್ವಂ ಅನುಕೂಲಂ ಕುರು.

ಯತ್ಯತುಚ್ಚ ತ್ವತ್ಪದರೇಣುಂ ಗತಮಾನೌ
ದಾರ್ಯಂ ಧಾರ್ಯಂ ಮೂರ್ಧನಿ ವಾರ್ಯನ್ನದಮೀಡೇ।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ ॥ ೫॥

ಯತ್ಯತುಚ್ಚ = ಯತಿಶೇಖರರೇ, **ಗತಮಾನೌದಾರ್ಯಂ** = ಅಪರಿಮಿತವಾದ ಔದಾರ್ಯ ಹೊಂದಿರುವ, **ಮೂರ್ಧನಿ ಧಾರ್ಯಂ** = ಶಿರಸ್ಸಿನಲ್ಲಿ ಧರಿಸಲು ಯೋಗ್ಯವಾದ, **ವಾರ್ಯನ್ನದಂ** = ನೀರು ಅನ್ನಗಳನ್ನು ಕೊಡುವ, **ತ್ವತ್ಪದರೇಣುಂ** = ತಮ್ಮ ಪಾದಧೂಳಿಯನ್ನು, **ಈಡೇ** = ಸ್ತೋತ್ರಮಾಡುವೆನು.

ನಾನಾ ನಾನಾ ದೈವಕದಂಬೇ ಸವಿಲಂಬೇ
ಲಂಬೇ ಸ್ಮಾಲಂಬಂ ಸುಖದಂ ತ್ವಾಮವಿಲಂಬಮ್।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ ॥ ೬॥

ನಾನಾ = ಅನೇಕ ವಿಧಗಳಾದ, **ನಾನಾ** = ಅನೇಕ ಸಂಖ್ಯೆಯಲ್ಲಿರುವ, **ದೈವಕದಂಬೇ** = ದೇವತಾ ಸಮೂಹವೂ ಕೂಡ, **ಸವಿಲಂಬೇ ಸತಿ** = ಫಲ ನೀಡಲು ವಿಲಂಬ ಮಾಡುತ್ತಿರಲು, **ಅವಿಲಂಬಂ** = ತಡಮಾಡದೇ, **ತ್ವಾಂ** = ನಿಮ್ಮನ್ನು, **ಸುಖದಂ** = ಸುಖನೀಡುವ, **ಆಲಂಬಂ** = ಆಲಂಬನವೆಂದು, **ಲಂಬೇ ಸ್ಮ** = ಅವಲಂಬಿಸಿದೆನು.

ಮಂತ್ರಂ ತೇ ಮಂತ್ರಾಲಯಧಾಮನ್ ಭುವಿ ಜಪ್ತುಃ
ಪಾತುಃ ಪಾದಾಂಭೋ ಲಘು ನಶ್ಯತ್ಯತಿದುಃಖಮ್।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಮ್ ॥ ೭॥

ಹೇ ಮಂತ್ರಾಲಯಧಾಮನ್ = ಮಂತ್ರಾಲಯವಾಸಿಗಳೇ, **ತೇ** = ನಿಮ್ಮ, **ಮಂತ್ರಂ** = ಮಂತ್ರವನ್ನು, **ಭುವಿ** = ಭೂಮಿಯಲ್ಲಿ, **ಜಪ್ತುಃ** = ಜಪಮಾಡುವವರಿಗೆ, ಹಾಗೂ, **ಪಾದಾಂಭೋ** = ಪಾದೋದಕವನ್ನು, **ಪಾತುಃ** = ಪಾನ ಮಾಡುವವನಿಗೆ, **ಅತಿದುಃಖಂ** = ಅತಿದುಃಖವೂ, **ಲಘು** = ಹಗುರವಾಗಿ, **ನಶ್ಯತಿ** = ನಾಶ ಹೊಂದುತ್ತದೆ.

ಚಕ್ರೇಽಷ್ಟಶ್ಲೋಕೀಮವಧೂತಃ ಕವಿಕೃಷ್ಣಃ
ತತ್ಪಾಠೇನ ತ್ವಂ ಭವ ತುಷ್ಟೋ ಹರ ಕಷ್ಟಮ್।
ಸ್ವಾಮಿನ್ ಭೂಮನ್ ಭೋ ಗುರುರಾಜ ಪ್ರತಿಕೂಲಂ
ದಾರಾಪತ್ಯಾದ್ಯಂ ಸಕಲಂ ಕುರ್ವನುಕೂಲಂ ॥ ೯॥

ಅವಧೂತಃ ಕವಿಕೃಷ್ಣಃ = ಕೃಷ್ಣಾವಧೂತ ಕವಿಗಳು, **ಅಷ್ಟಶ್ಲೋಕೀಂ** = ಎಂಟು ಶ್ಲೋಕಗಳನ್ನು, **ಚಕ್ರೇ** = ರಚಿಸಿದರು, **ತತ್ಪಾಠೇನ** = ಅಷ್ಟಶ್ಲೋಕೀ ಪಠನದಿಂದ, **ತ್ವಂ** = ತಾವು, **ತುಷ್ಟೋ ಭವ** = ಸಂತುಷ್ಟರಾಗಿರಿ, **ಸ್ವಾಮಿನ್ ಭೂಮನ್** = ಸ್ವಾಮಿಯೂ, ಪ್ರಭುವೂ ಆಗಿರುವ, **ಗುರುರಾಜ** = ಗುರುರಾಜರೇ, **ಪ್ರತಿಕೂಲಂ** = ವಿರುದ್ಧರಾಗಿರುವ, **ದಾರಾಪತ್ಯಾದ್ಯಂ** = ಹೆಂಡತಿ ಮಕ್ಕಳೇ ಮೊದಲಾದ, **ಸಕಲಂ** = ಎಲ್ಲರನ್ನೂ, **ಅನುಕೂಲಂ ಕುರು** = ಅನುಕೂಲರನ್ನಾಗಿ ಮಾಡಿರಿ.

ಇತಿ ಶ್ರೀ ಕೃಷ್ಣಾವಧೂತಕೃತ ರಾಘವೇಂದ್ರ ತಂತ್ರೇ ದಶಸ್ತೋತ್ರಪಟಲೇ
ಪ್ರತಿಕೂಲಸ್ವಾನುಕೂಲೀಕರಣಂ ನಾಮ ಸಪ್ತಮೋಽಧ್ಯಾಯಃ

ಅಧ್ಯಾಯ ೮

ಸಂತೋಷಪ್ರದ ಸ್ತೋತ್ರಮ್

ಶ್ರೀಧಾಮನಿ ನರಿ ಮಾ ಧಾವಯ ಮಮ ಬೋಧಾತಿರಹಿತ ಚಿತ್ತಂ
ಬಾಧಾಪಹರದಸಾಧಾರಣ ಗುಣ ಮೇಧಾವಿವರ ವಿನಾ ತ್ವಾಮ್।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೧॥

ಬಾಧಾಪಹರದ್ = ಪೀಡೆಗಳನ್ನು ತೊಲಗಿಸುವ, **ಅಸಾಧಾರಣ ಗುಣ** = ವಿಶಿಷ್ಟ ಗುಣವುಳ್ಳವರೇ, **ಮಾ** = ನನ್ನನ್ನು, **ನರಿ** = ಪರಮಪುರುಷನಾದ, **ಶ್ರೀ ಧಾಮನಿ** = ಶ್ರೀಪತಿಯಲ್ಲಿ, **ಧಾವಯ** = ಓಡುವಂತೆ ಮಾಡಿರಿ, **ಹೇ ಮೇಧಾವಿವರ** = ಮೇಧಾವಿಗಳಲ್ಲಿ ಶ್ರೇಷ್ಠರೇ, **ಮಮ** = ನನ್ನ, **ಬೋಧಾತಿರಹಿತ ಚಿತ್ತಂ** = ವಿವೇಕ ಲೇಶವೂ ಇಲ್ಲದ ಮನಸ್ಸನ್ನು, **ತ್ವಾಂ ವಿನಾ** = ನಿಮ್ಮ ಹೊರತಾಗಿ, ಬೇರೇ ಕಡೆಗೆ, **ಮಾ ಧಾವಯ** = ಹೋಗಲಿಸಬೇಡಿರಿ, **ಅಮರವರಭೂಜಾಯಿತ** = ಕಲ್ಪವೃಕ್ಷದಂತಿರುವ, **ದಯಾಲೋ** = ದಯಾಲುಗಳಾದ, **ಗುರುರಾಜ** = ಗುರುರಾಜರೇ, **ಅನಸಿ** = ರಥದಲ್ಲಿ, **ರಾಜಾ** =

ರಾಜರಂತೆ, **ಜೋಷಂ** = ಸುಮ್ಮನೆ **ಕಿಂ ಅಸಿ** = ಏಕೆ ಕುಳಿತಿರುವಿರಿ, **ತೋಷಂ ದಿಶ ದಿಶ** = ಮುದವನ್ನು ನೀಡಿರಿ, **ದೋಷಂ ಪರಿಹರ** = ದೋಷಗಳನ್ನು ಪರಿಹರಿಸಿರಿ, **ಮೇ** = ನನಗೆ, **ಶರಣಂ** = ರಕ್ಷಕರಾಗಿರಿ.

ರಾಮಾಕಟಿತಟಸೋಮಾನನಕುಚಸೀಮಾರುಚಿಮನುಭೋಕ್ತುಂ
ಹೇಮಾಭರಣಕಸಾಮಾದಿಭಿರಪಿ ಮಾಮಾಪ್ತಮವಧುನೀತೇ।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೨॥

ರಾಮಾ = ಸುಂದರಸ್ತ್ರೀಯರ, **ಕಟಿತಟ** = ಕಟಿ ಪ್ರದೇಶದ, **ಸೋಮಾನನ** = ಚಂದ್ರನಂತಿರುವ ಮುಖಗಳ, **ಕುಚ ಸೀಮಾ** = ಕುಚಪ್ರದೇಶದ, **ರುಚಿಂ** = ಸೌಂದರ್ಯವನ್ನು, **ಅನುಭೋಕ್ತುಂ** = ಅನುಭವಿಸಲು, **ಹೇಮಾಭರಣಕ** = ಸುವರ್ಣಾಭರಣಗಳು, **ಸಾಮಾದಿಭಿರಪಿ** = ಸಾಂತ್ವನಮಾತುಗಳಿಂದಲೂ, **ಆಪ್ತಂ** = ಅವರನ್ನು ಸಮೀಪಿಸಿದ, **ಮಾಂ** = ನನ್ನನ್ನು, **ಅವಧುನೀತೇ** = ತಿರಸ್ಕರಿಸುವಳು. ಗುರುರಾಜ, ಅಮರವರ ಭೂಜಾಯಿತ, ದಯಾಲೋ ಅನಸಿ ರಾಜಾ ತ್ವಂ ಜೋಷಂ ಕಿಮ್ ಅಸಿ, ದೋಷಂ ಪರಿಹರ, ತೋಷಂ ದಿಶ ದಿಶ ಮೇ ಶರಣಂ ಭವ.

ಘರ್ಮಾಪಹರಣಶರ್ಮಾವಹ ತವ ಭರ್ಮಾಭಿಕಲಿತ ಪಾದೂ-
ನರ್ಮಾನತಜನಕರ್ಮಾಹಿತಮಪಿ ಧರ್ಮಾಯಯಸಿ ಮಹಾತ್ಮನ್।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೩॥

ಘರ್ಮಾಪಹರಣ = ಸಂಸಾರಬೇಗೆಯನ್ನು ಪರಿಹರಿಸುವ, **ಶರ್ಮಾವಹ** = ಸುಖವನ್ನು ನೀಡುವ, **ತವ** = ತಮ್ಮದಾದ, **ಭರ್ಮಾಕಲಿತ** = ಸುವರ್ಣಖಚಿತವಾದ, **ಪಾದೂ** = ಪಾದುಕೆಗಳಿಗೆ, **ನರ್ಮಾನತಜನ** = ತಮಾಷೆಗಾಗಿ ನಮಿಸಿರುವ ಜನಗಳ, **ಕರ್ಮ** = ಕರ್ಮವೂ ಕೂಡ, **ಅಹಿತಂ ಅಪಿ** = ಅನಿಷ್ಟವಾಗಿದ್ದರೂ, **ಧರ್ಮಾಯಯಸಿ** = ಧರ್ಮವನ್ನಾಗಿ ಮಾಡುವಿರಿ, ಗುರುರಾಜ ತೋಷಂ ದಿಶ ದಿಶ, ದೋಷಂ ಪರಿಹರ.

ವೇಲಾವನಮತಿಮೇಲಾಬ್ಧಿಸಲಿಲಮಾಲಾಮನುಭವಿತಾ ಚೇತ್
ಕೀಲಾಲಧಿಮಣಿ ಜಾಲಾಕೃತಿಯಶಸೋ ಲಾಘವಮುದದೇಃ ಸ್ಯಾತ್।

ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೪॥

ವೇಲಾವನಂ = ಸಮುದ್ರದಂಡೆಯಲ್ಲಿರುವ ವನವು, **ಅತಿವೇಲಾಬ್ಧಿಸಲಿಲ ಮಾಲಾಂ** = ಅಪರಿಮಿತವಾದ ಸಾಗರಜಲದ ಸಮೂಹವನ್ನು, **ಅನುಭವಿತಾ ಚೇತ್** = ಸ್ವೀಕರಿಸುವುದಾದರೆ, **ಕೀಲಾಲಧಿ** = ಅಪಾರಜಲಕ್ಕೆ ಆಶ್ರಯವಾಗಿರುವಿಕೆ, **ಮಣಿಜಾಲಾಕೃತಿ** = ರತ್ನ ಸಮೂಹದ ರೂಪವಾದ, **ಯಶಸಃ** = ಕೀರ್ತಿಯುಳ್ಳ, **ಉದಧೇಃ** = ಸಮುದ್ರಕ್ಕೆ, **ಲಾಘವಂ ಸ್ಯಾತ್** = ಕುಂದುಂಟಾದೀತು, ಗುರುರಾಜ ತೋಷಂ ದಿಶ ದಿಶ ದೋಷಂ ಪರಿಹರ.

ದ್ರಾಗಾಗತ ಸುಜನಾಗಾರ ತುರಗ ನಾಗಾದಿ ವಿವಿಧ ಸಂಪತ್
ತ್ಯಾಗಾದರ ಕರುಣಾಗಾರ ಬಹುಲಭೋಗಾಪಕ ಪದಪದ್ಮ।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೫॥

ದ್ರಾಕ್ = ಶೀಘ್ರವಾಗಿ, **ಆಗತ** = ಬಂದಿರುವ (ಬೇರೆಯವರನ್ನು ಕೇಳಲು ಹೋಗದೆ ರಾಯರ ಸಮೀಪಕ್ಕೆ ಶೀಘ್ರವಾಗಿ ಬಂದಿರುವ) **ಸುಜನ** = ಸಜ್ಜನರಿಗೆ, **ಅಗಾರ** = ಮನೆ, **ತುರಗ** = ಕುದುರೆ, **ನಾಗಾದಿ** = ಆನೆಯೇ ಮೊದಲಾದ, **ವಿವಿಧ ಸಂಪತ್** = ನಾನಾವಿಧ ಸಂಪತ್ತನ್ನು, **ತ್ಯಾಗಾದರ** = ನೀಡುವುದರಲ್ಲಿ ಆಸಕ್ತಿಯುಳ್ಳ, **ಕರುಣಾಗಾರ** = ಕರುಣಾಳುಗಳೇ, **ಬಹುಲಭೋಗಾಪಕ** = ಬಹುವಿಧವಾದ ಭೋಗಗಳನ್ನು ಕೊಡುವ, **ಪದಪದ್ಮ** = ಪಾದಕಮಲವುಳ್ಳ, ಗುರುಗಳೇ, ತೋಷಂ ದಿಶ ದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ

ಯಂ ಕಾಮಯತಿ ಕಲಂಕಾವಹ ಬಹುಪಂಕಾಕೃತಿರಪಿ ಯತ್ ತ್ವಂ
ತಂ ಕಾಮಮಿಮಮಶಂಕಾಕಲಿತಮಲಂ ಕಾರಯಸಿ ಹಿ ತೇನ।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೬॥

ಗುರುರಾಜ = ಗುರುರಾಜರೇ ತಾವು, **ಕಲಂಕಾವಹ** = ಕಲಂಕವನ್ನುಂಟು ಮಾಡುವ, **ಬಹುಪಂಕ** = ಬಹಳವಾದ ಪಾಪವೆಂಬ ಹೆಸರಿನ, **ಆಕೃತಿಃ ಅಪಿ** = ಸ್ವರೂಪವುಳ್ಳವನೂ ಕೂಡ, **ಯಂ ಕಾಮಂ** = ಯಾವ ಅಭಿಲಾಷೆಯನ್ನು, **ಕಾಮಯತಿ**

= ಇಚ್ಛಿಸುವನೋ, ತಂ ಕಾಮಂ = ಆ ಕಾಮನೆಗಳನ್ನು, **ಅಶಂಕಾಕಲಿತಂ** = ಸಂಶಯವಿಲ್ಲದೆ, **ಅಲಂ ಕಾರಯಸಿ** = ಪೂರ್ಣಗೊಳಿಸುವಿರಿ, **ತೇನ** = ಇಂತಹ ಸಾಮರ್ಥ್ಯವುಳ್ಳವರಾದ್ದರಿಂದಲೇ, ಗುರುರಾಜ, ಮೇ ಶರಣಂ ಭವ.

ನಾರೀತಿ ಗದಿತ ಮಾರೀಗ್ರಹ ಗತಿ ಘೋರೀಕೃತ ಭವವಾರ್ಧೇಃ
ತಾರೀಭವ ಮಯಿ ಚಾರೀ ಭವತಿ ಹಿ ಕಾ ರೀತಿರಿಯಮುಪೇಕ್ಷಾ।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೭॥

ನಾರೀತಿ ಗದಿತ = ನಾರೀ ಎಂದು ಹೇಳಲ್ಪಟ್ಟ, **ಮಾರೀಗ್ರಹ** = ದುಷ್ಟಗ್ರಹದ, **ಗತಿ** = ಓಡಾಡುವಿಕೆಯಿಂದ, **ಘೋರೀಕೃತ** = ಭಯಂಕರವಾಗಿ ಮಾಡಲ್ಪಟ್ಟ, **ಭವವಾರ್ಧೇ** = ಸಂಸಾರವೆಂಬ ಸಾಗರಕ್ಕೆ, **ತಾರೀಭವ** = ದಾಟಿಸುವ ದೋಣಿಯಾಗಿರಿ, **ಮಯಿ** = ನಾನು, **ಚಾರೀಭವತಿ** = ನಿಮ್ಮ ಸುತ್ತಲೂ ತಿರುಗುತ್ತಿರುವಾಗ, **ಇಯಂ ಉಪೇಕ್ಷಾ** = ಈ ತಿರಸ್ಕಾರವು, **ಕಾ ರೀತಿಃ** = ಯಾವ ರೀತಿಯದು? ಗುರುರಾಜ, ತೋಷಂ ದಿಶ ದಿಶ ದೋಷಂ ಪರಿಹರ.

ಮಂದಾಶಯಮಪಿ ವೃಂದಾರಕಕುರುವೃಂದಾಭಯಸಿ ತಥಾಂಧಂ
ಶಂದಾಶು ವಿತರ ಕಂದಾಸಿತತನುನಂದಾತ್ಮಜಪದಭಕ್ತಿಮ್।
ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಳೋ ॥ ೮॥

ಮಂದಾಶಯಂ = ಮಂದಬುದ್ಧಿಯವನನ್ನು, **ತಥಾ ಅಂಧಂ** = ಕುರುಡನನ್ನೂ ಕೂಡ, **ವೃಂದಾರಕ ಕುರುವಿಂದಾಭಯಸಿ** = **ವೃಂದಾರಕ** = ದೇವತೆಗಳಲ್ಲಿ, **ಕುರುವಿಂದಾ ಭಯಸಿ** = ಶ್ರೇಷ್ಠ ಕೆಂಪುರತ್ನದಂತಿರುವ ಬೃಹಸ್ಪತಿಯಂತೆ ಮಾಡುವಿರಿ, **ಶಂದ** = ಸುಖಿದಾತೃಗಳೇ, **ಆಶು** = ಬೇಗನೇ, **ಕಂದಾಸಿತತನು** = ಜಲಪೂರ್ಣವಾಗಿ ಕಪ್ಪಾದ ಮೇಘದಂತಿರುವ, **ನಂದಾತ್ಮಜ** = ನೀಲಮೇಘಶ್ಯಾಮನಾದ ನಂದನಂದನನನ್ನು, **ಪದಭಕ್ತಿಂ** = ಪಾದಗಳಲ್ಲಿ ಭಕ್ತಿಯನ್ನು, **ವಿತರ** = ನೀಡಿರಿ. ಗುರುರಾಜ ತೋಷಂ ದಿಶ ದಿಶ, ದೋಷಂ ಪರಿಹರ

ಕೃಷ್ಣಾಭಿದಕವಿರಷ್ಟಾರ್ಣಕಮನು ಪುಷ್ಟಾಂ ನುತಿಮವಧೂತಃ
ಕಷ್ಟಾರ್ಜಿತಮತಿರಿಷ್ಟಾರ್ಥದ ತವ ಶಿಷ್ಟಾರ್ಪಯತಿ ವಿರಚ್ಯ।

ರಾಜಾನಸಿ ಗುರುರಾಜಾಮರವರ ಭೂಜಾಯಿತ ಶರಣಂ ಮೇ
ತೋಷಂ ದಿಶದಿಶ ದೋಷಂ ಪರಿಹರ ಜೋಷಂ ಕಿಮಸಿ ದಯಾಲೋ ॥ ೮॥

ಇಷ್ಟಾರ್ಥದ ಶಿಷ್ಟ = ಇಷ್ಟಾರ್ಥವನ್ನು ಕೊಡುವ ಸದ್ಗುರುಗಳೇ, **ಕಷ್ಟಾರ್ಜಿತ ಮತಿಃ** = ಕಷ್ಟಪಟ್ಟು ಸಂಪಾದಿಸಿದ ಮತಿಯುಳ್ಳ, **ಅವಧೂತಃ ಕೃಷ್ಣಾಭಿಧಕವಿಃ** = ವಿರಕ್ತರಾದ ಕೃಷ್ಣಕವಿಗಳು, **ಅಷ್ಟಾರ್ಣಕಮನು** = ಶ್ರೀ ರಾಘವೇಂದ್ರಾಯನಮಃ ಎಂಬ ಅಷ್ಟಾಕ್ಷರ ಮಂತ್ರದಿಂದ ಪುಷ್ಟಿಹೊಂದಿದ, **ತವ ನುತಿಂ** = ತಮ್ಮ ಸ್ತೋತ್ರವನ್ನು, **ವಿರಚ್ಯ** = ರಚಿಸಿ, **ಅರ್ಪಯತಿ** = ತಮಗೆ ಅರ್ಪಿಸುವನು, **ಗುರುರಾಜ** = ಗುರುರಾಜರೇ, **ಅಮರವರ ಭೂಜಾಯಿತ** = ಕಲ್ಪವೃಕ್ಷದಂತಿರುವ, **ದಯಾಲೋ** = ದಯಾಲುಗಳೇ, **ಅನಸಿ** = ರಥದಲ್ಲಿ, **ರಾಜಾ** = ರಾಜರಾಗಿ, **ಜೋಷಂ** = ಅನುಗ್ರಹಿಸದೇ ಸುಮ್ಮನೆ, **ಕಿಂ ಅಪಿ** = ಏಕೆ ಕುಳಿತಿರುವಿರಿ, **ಮೇ** = ನನಗೆ, **ಶರಣಂ** = ರಕ್ಷಕರಾಗಿ ಬನ್ನಿ, **ತೋಷಂ ದಿಶ ದಿಶ** = ಸಂತೋಷ ನೀಡಿರಿ, **ದೋಷಂ ಪರಿಹರ** = ಪಾಪಗಳನ್ನು ಪರಿಹರಿಸಿರಿ.

ಇತಿ ಶ್ರೀ ಕೃಷ್ಣಾವಧೂತಕವಿರಚಿತೇ ರಾಘವೇಂದ್ರ ತಂತ್ರೇ ದಶಸ್ತೋತ್ರಪಟಲೇ ಸಂತೋಷಪ್ರದಸ್ತೋತ್ರಂ ನಾಮ ಅಷ್ಟಮೋಽಧ್ಯಾಯಃ

ಅಧ್ಯಾಯ ೯

ದಾರಿದ್ರ್ಯಮೋಚನ ಸ್ತೋತ್ರಮ್

ಶ್ರಿತಾನಾಂ ಪಾದಂ ತೇ ಸಕಲವಿಧಯಾ ಶೋಕಹರಣಃ
ತ್ವಮೇವಾಂಬಾ ತಾತಸ್ತ್ವಮಸಿ ಮಮ ಮಿತ್ರಂ ಸರಲಹೃತ್।
ಪ್ರದಾತುಂ ಸ್ವಚ್ಛಂದಂ ದ್ರವಿಣಮನೃಣಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೧॥

ತೇ ಪಾದಂ ಶ್ರಿತಾನಾಂ = ತಮ್ಮ ಪಾದವನ್ನು ಆಶ್ರಯ ಮಾಡಿದವರ, **ಸಕಲ ವಿಧಯಾ** = ಎಲ್ಲಾ ರೀತಿಯಿಂದಲೂ, **ಶೋಕಹರಣಃ** = ದುಃಖವನ್ನು ಪರಿಹರಿಸುವ, **ತ್ವಮೇವ** = ತಾವೇನೆ, **ಮಮ ಅಂಬಾ ಅಸಿ** = ನನ್ನ ತಾಯಿಯಾಗಿರುವಿರಿ, **ತ್ವಮೇವ ತಾತಃ ಅಸಿ** = ನೀವೇ ತಂದೆಯೂ ಆಗಿರುವಿರಿ, **ಸರಲಹೃತ್ ಮಿತ್ರಂ ಅಸಿ** = ಸಹೃದಯನಾದ ಮಿತ್ರನಾಗಿರುವಿರಿ, **ವತ್ಸಲ** = ಶಿಷ್ಯವಾತ್ಸಲ್ಯವುಳ್ಳ, **ಗುರೋಃ** =

ಗುರುಗಳೇ, ಸ್ವಚ್ಛಂದಂ ಪ್ರದಾತುಂ = ಯಥೇಚ್ಛವಾಗಿ ಕೊಡಲು, ಕಲತ್ರಾದ್ಯೈಃ ಸಾಕಂ = ಹೆಂಡತಿ ಮಕ್ಕಳೊಂದಿಗೆ ಕೂಡಿ, ಸತತಂ ಅನುಭೋಕ್ತುಂ = ನಿರಂತರ ಸುಖವನ್ನು ಅನುಭವಿಸಲು, ಅನೃಣಂ = ಸಾಲದಿಂದ ರಹಿತವಾದ, ದ್ರವಿಣಂ = ಧನವನ್ನು, ವಿತರ = ನೀಡಿರಿ.

ರತಂ ವಾ ದುಷ್ಕಾರ್ಯೇ ತ್ಯಜತಿ ಸುತಮಂಬಾ ಕಿಮು ಪಿತಾ
ಕೃಪಾಂ ಕೃತ್ವಾ ಶಿಶ್ನೋದರಕೃತಮಹಾಗಸ್ಯಪಿ ಮಯಿ।
ಪ್ರದಾತುಂ ಸ್ವಚ್ಛಂದಂ ದ್ರವಿಣಮನೃಣಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೨॥

ದುಷ್ಕಾರ್ಯೇ ರತಂ = ಕೆಟ್ಟಕೆಲಸದಲ್ಲಿ ಆಸಕ್ತನಾದ, **ಸುತಂ** = ಪುತ್ರನನ್ನು, **ಅಂಬಾ, ಪಿತಾ ವಾ ತ್ಯಜತಿ ಕಿಮ್** = ತಾಯಿಯಾಗಲಿ, ತಂದೆಯಾಗಲಿ ಬಿಡುವರೇನು? **ಶಿಶ್ನೋದರ ಕೃತಮಹಾಗಸಿ ಅಪಿ** = ಗುಹ್ಯಾಂಗ ಮತ್ತು ಹೊಟ್ಟೆಪಾಡಿಗಾಗಿ ಮಾಡಿದ ಮಹಾಪರಾಧವನ್ನು ಮಾಡಿದ್ದರೂ ಕೂಡ, **ಮಯಿ** = ನನ್ನಲ್ಲಿ, **ಕೃಪಾಂ** = ದಯೆಯನ್ನು, **ಕೃತ್ವಾ** = ಮಾಡಿ, **ಸ್ವಚ್ಛಂದಂ ಪ್ರದಾತುಂ** = ಯಥೇಚ್ಛವಾಗಿ ದಾನಮಾಡಲು, **ಅನೃಣಂ ದ್ರವಿಣಂ** = ಋಣಮುಕ್ತವಾದ ಧನವನ್ನು, ವಿತರ = ಕೊಡಿರಿ.

ಘನಾಘೋ ವಾ ದೀನೋ ವಾವಯವ ವಿಕಲೋ ವಾಕ್ಷವಿಕಲಃ
ಪ್ರಪನ್ನಶ್ಚೇತ್ ಪಾದಂ ತವ ಸುಖಯಸೀತ್ಯಾಗಮಮಹಮ್।
ಪ್ರದಾತುಂ ಸ್ವಚ್ಛಂದಂ ದ್ರವಿಣಮನೃಣಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೩॥

ಘನಾಘಃ ವಾ = ಮಹಾಪಾಪಿಯಾಗಿರಲಿ, **ದೀನಃ ವಾ** = ದೀನನಾಗಿರಲಿ, **ಅವಯವವಿಕಲಃ** = ಅಂಗವಿಕಲನಾಗಿರಲಿ, **ಅಕ್ಷವಿಕಲಃ ವಾ** = ಕಣ್ಣಿಲ್ಲದ ಕುರುಡನಾಗಲಿ, **ತವ ಪಾದಂ** = ತಮ್ಮ ಪಾದಗಳನ್ನು, **ಪ್ರಪನ್ನಃ ಚೇತ್** = ಶರಣು ಹೊಕ್ಕರೇ, **ಸುಖಯಸಿ** = ಸುಖನೀಡುವಿರಿ, **ಇತಿ** = ಹೀಗೆಂದು, **ಅಹಂ** = ನಾನು, **ಆಗಮಂ** = ನಿಮ್ಮಲ್ಲಿಗೆ ಬಂದಿರುವೆನು, ಸ್ವಚ್ಛಂದಂ ಪ್ರದಾತುಂ, ಸತತಂ ಅನುಭೋಕ್ತುಂ ಚ ಅನೃಣಂ ದ್ರವಿಣಂ ವಿತರ.

ವದಾನ್ಯಾತ್ ತ್ವದ್ ಭೂಮೌ ದಿವಿ ಸುರಭಿಕಲ್ಪದ್ರುಮದೃಷದಾಂ
ಲಘುತ್ವಂ ಜಾನೇಽಹಂ ವಿತರಣಮಿದಂ ವೀಕ್ಷ್ಯ ಭವತಃ।

ಪ್ರದಾತುಂ ಸ್ವಚ್ಛಂದಂ ದ್ರವಿಣಮನ್ಯಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೪॥

ಅಹಂ = ನಾನು, **ಭೂಮೌ** = ಭೂಮಿಯಲ್ಲಿ, **ಭವತಃ** = ತಮ್ಮ, **ಇದಂ ವಿತರಣಂ ವೀಕ್ಷ್ಯ** = ದಾನಮಾಡುವ ರೀತಿಯನ್ನು ನೋಡಿ, **ವದಾನ್ಯಾತ್ ತ್ವತ್** = ಉದಾರಿಗಳಾದ ನಿಮಗಿಂತಲೂ, **ದಿವಿ** = ಸ್ವರ್ಗದಲ್ಲಿರುವ, **ಸುರಭಿಕಲ್ಪದ್ರುಮಷದಾಂ** = ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಿಗೆ, **ಲಘುತ್ವಂ ಜಾನೇ** = ಕಡಮೆಯನ್ನಾಗಿ ತಿಳಿಯುವೆನು, ಸ್ವಚ್ಛಂದಂ ದ್ರವಿಣಂ ವಿತರ.

ದ್ರವತ್ ಕಾರುಣ್ಯ ಶ್ರೀಪರಿಮಲಸಮುದ್ಗಾರಿಹೃದಯ
ತ್ವದನ್ಯೋ ದಾತಾ ಚೇದ್ ಭವತಿ ಕಥಮಾಯಾಮಿ ವದ ಮೇ।
ಪ್ರದಾತುಂ ಸ್ವಚ್ಛಂದಂ ದ್ರವಿಣಮನ್ಯಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೫॥

ದ್ರವತ್‌ಕಾರುಣ್ಯ ಶ್ರೀ = ಹರಿಯುವ ಕರುಣೆಯೆಂಬ ಸಂಪತ್ತಿನ, **ಪರಿಮಳ** = ಗಂಧವನ್ನು, **ಸಮುದ್ಗಾರಿ** = ಹೊರಸೂಸುವ, **ಹೃದಯ** = ಅಂತಃಕರಣವುಳ್ಳವರೇ, **ಮೇ** = ನನಗೆ, **ತ್ವದನ್ಯಃ** = ನಿಮಗಿಂತ ಬೇರೆಯಾದ, **ದಾತಾ ಭವತಿ ಚೇತ್** = ದಾನಿಯು ಇರುವುದಾದರೆ, **ಕಥಂ ಆಯಾಮಿ** = ನಿಮ್ಮ ಬಳಿಗೆ ಏಕೆ ಬರುವೆನು? **ವದ** = ಹೇಳಿರಿ, ಅತಃ ದ್ರವಿಣಂ ವಿತರ.

ಯಥಾಶಕ್ತ್ಯಾಽಽರಾಧ್ಯ ಪ್ರಸಭಮಮರಾನಪ್ಯಥ ನರಾನ್
ವ್ರಜನ್ ದೇಶಂ ದೇಶಂ ಶ್ರಮಜನಿರಭೂವಂ ನ ಚ ಧನೀ।
ಪ್ರದಾತುಂ ಸ್ವಚ್ಛಂದಂ ದ್ರವಿಣಮನ್ಯಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೬॥

ಅಮರಾನ್ = ದೇವತೆಗಳನ್ನು, **ಅಥ ನರಾನ್** = ಮತ್ತು ಮನುಷ್ಯರನ್ನು, **ಯಥಾಶಕ್ತಿ ಪ್ರಸಭಂ** = ಶಕ್ತಿಯಿದ್ದಕ್ಕಿಂತಲೂ ಹೆಚ್ಚಾಗಿ, **ಆರಾಧ್ಯ ಅಪಿ** = ಆರಾಧಿಸಿದರೂ, **ದೇಶಂ ದೇಶಂ ವ್ರಜನ್ ಅಪಿ** = ಪ್ರತಿದೇಶವನ್ನು ಸುತ್ತಿದರೂ ಕೂಡ, **ಶ್ರಮಜನಿಃ ಅಭೂವಂ** = ಬಳಲಿದೆನು, ಹೊರತು, **ನ ಚ ಧನಿ** = ಧನಿಕನಾಗಲಿಲ್ಲ.

ನ ಬಾಧಂತೇ ದಾರಾ ಕಿಮಿದಮಧುನಾ ಮೇ ಪ್ರಿಯ ದಿಶೇ-
ತ್ಯಮುಂ ಮಾ ದಾರಿದ್ರ್ಯ ವ್ಯಸನಪರಿಪಿಂಡೀಕೃತಹೃದಯಮ್।

ಪ್ರದಾತುಂ ಸ್ವಚ್ಛಂದಂ ದ್ರವಿಣಮನೃಣಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೭॥

ಹೇ ಪ್ರಿಯ = ಪ್ರಿಯನೇ, ಇದಂ = ಈ ವಸ್ತುವನ್ನು, ಮೇ = ನನಗೆ, ದಿಶ ಇತಿ = ತೆಗೆಸಿಕೊಡು ಎಂದು, ದಾರಾಃ = ಹೆಂಡತಿಯು, ದಾರಿದ್ರ್ಯ ವ್ಯಸನ ಪರಿಪಿಂಡೀಕೃತ ಹೃದಮ್ = ಬಡತನ ವ್ಯಸನದಿಂದ ಹಿಂಡಿದ ಹೃದಯವುಳ್ಳ, ಅಮುಂ ಮಾಂ = ನನ್ನನ್ನು, ನ ಬಾಧಂತೇ = ಪೀಡಿಸುವುದಿಲ್ಲ, ಕಿಮ್ ಇದಮ್ = ಏನಿದು? ಇದೂ ಒಂದು ಜೀವನವೇ?

ಮಹೋದಾರೇ ಭೂಮ್ನಿ ತ್ವಯಿ ಪಿತರಿ ಪುತ್ರೋಽಹಮಧುನಾ
ಜರತ್ಕಾಕಾವಸ್ಥಾಂ ಭೃಶಮನುಭವಾಮೀಶಂ ಕಿಮಿದಮ್।
ಪ್ರದಾತುಂ ಸ್ವಚ್ಛಂದಂ ದ್ರವಿಣಮನೃಣಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೮॥

ಮಹೋದಾರೇ = ಮಹಾ ಉದಾರಿಗಳಾದ, ಭೂಮ್ನಿ = ಪೂರ್ಣರಾದ, ತ್ವಯಿ = ತಾವು, ಪಿತರಿ ಸತಿ = ತಂದೆಯಾಗಿರುವಾಗ, ಪುತ್ರಃ ಅಹಂ = ಪುತ್ರನಾದ ನಾನು, ಅಧುನಾ = ಈಗ, ಜರತ್ಕಾಕಾವಸ್ಥಾಂ = ಹಾರಲು ಬಾರದ ಮುದಿ ಕಾಗೆಯ ದುರವಸ್ಥೆಯನ್ನು, ಕಥಂ = ಹೇಗೆ, ಅನುಭವಾಮಿ = ಅನುಭವಿಸುವೆನು? ಈಶ ವತ್ಸಲ ಗುರೋ = ಸಮರ್ಥರಾದ ಪ್ರಿಯಗುರುಗಳೇ, ಸ್ವಚ್ಛಂದಂ ಪ್ರದಾತುಂ = ಯಥೇಚ್ಛವಾಗಿ ದಾನ ಮಾಡಲು, ಕಲತ್ರಾದ್ಯೈಃ ಸಾಕಂ = ಹೆಂಡತಿಮಕ್ಕಳಿಂದ ಕೂಡಿ, ಸುಖಮನು ಭೋಕ್ತುಂ = ಸುಖವನ್ನನುಭವಿಸಲು, ಅನೃಣಂ ದ್ರವಿಣಂ = ಸಾಲವಿಲ್ಲದ ಧನವನ್ನು, ವಿತರ = ಕೊಡಿರಿ.

ಗುರೋಃ ಪುತ್ರಃ ಸುಕವಿರವಧೂತಃ ಸ್ತವಮಹಂ
ಚಕಾರೈಕಶ್ವಾಸಾತ್ ಸರಲಮಿಮಮಾದೃತ್ಯ ಪಠತಾಮ್।
ಪ್ರದಾತುಂ ಸ್ವಚ್ಛಂದಂ ದ್ರವಿಣಮನೃಣಂ ವತ್ಸಲ ಗುರೋ
ಕಲತ್ರಾದ್ಯೈಃ ಸಾಕಂ ಸತತಮನುಭೋಕ್ತುಂ ಚ ವಿತರ ॥ ೯॥

ಗುರೋಃ ಪುತ್ರಃ = ಗುರುಗಳ ಪುತ್ರರಾದ, ಅವಧೂತಃ ಸುಕವಿಃ ಅಹಂ = ಕೃಷ್ಣಾವಧೂತ ಕವಿಯಾದ ನಾನು, ಸರಲಂ = ಸರಲವಾದ, ಸ್ತವಂ = ಈ ಸ್ತೋತ್ರವನ್ನು, ಏಕಶ್ವಾಸಾತ್ = ಒಂದೇ ಉಸುರಿನಿಂದ, ಚಕಾರ = ರಚಿಸಿರುವೆನು. ಇಮಂ ಸ್ತೋತ್ರಂ

= ಈ ಸ್ತೋತ್ರವನ್ನು, ಆದೃತ್ಯ = ಭಕ್ತ್ಯಾದರಪೂರ್ವಕವಾಗಿ, ಪಠತಾಂ = ಪಠಿಸುವವರಿಗೆ, ಸ್ವಚ್ಛಂದಂ ದ್ರವಿಣಂ ವಿತರ = ಯಥೇಚ್ಛ ಧನವನ್ನು ನೀಡಿರಿ.

ಇತಿ ಶ್ರೀ ಕೃಷ್ಣಾವಧೂತಕವಿರಚಿತೇ ರಾಘವೇಂದ್ರ ತಂತ್ರೇ
ದಶಸ್ತೋತ್ರಪಟಲೇ ನವಮೋऽಧ್ಯಾಯಃ

ಅಧ್ಯಾಯ ೧೦

ಗುರುಕರುಣಾಸಂಪಾದನ ಸ್ತೋತ್ರಮ್

ಶ್ರೀ ಪ್ರಾಪ್ತ್ಯೈ ಪ್ರಚುರತೃಷಾಪಿಶಾಚಕಃ ಸ-
ನ್ನಾಜನ್ಮಪ್ರಕಟಿತ ತೀರ್ಥಕಾಕಭಾವಃ।
ದಾರಿದ್ರ್ಯಪ್ರಿಯಸುಹೃದಂ ತಥಾಪಿ ದಾತ-
ರ್ಮಾಂ ಪಾತ್ರೇ ಸಮಿತಮುಪೇಕ್ಷಸೇ ಕ್ವ ಯಾಮಿ ॥ ೧॥

ಹೇ ದಾತಃ = ದಾನಿಗಳೇ, ಶ್ರೀಪ್ರಾಪ್ತ್ಯೈ = ಸಂಪತ್ತಿನ ಲಾಭಕ್ಕಾಗಿ, ಪ್ರಚುರ ತೃಷ್ಣಾಪಿಶಾಚಕಃ ಸನ್ = ಅತ್ಯಾಶೆಯೆಂಬ ಪಿಶಾಚಗ್ರಸ್ತನಾಗಿ, ಆಜನ್ಮ = ಹುಟ್ಟಿನಿಂದಾರಂಭಿಸಿ, ಪ್ರಕಟಿತ = ತೋರಿಸಲ್ಪಟ್ಟ, ತೀರ್ಥಕಾಕಭಾವಃ = ತೀರ್ಥಕ್ಷೇತ್ರ ದಲ್ಲಿರುವ ಕಾಗೆಯಂತೆ, (ಆಸಮ್ = ಆದೆನು), ತಥಾಪಿ = ಹೀಗಿದ್ದರೂ, ದಾರಿದ್ರ್ಯಪ್ರಿಯ ಸುಹೃದಂ = ದಾರಿದ್ರ್ಯವಿದ್ದರೂ ಭಕ್ತರಾದವರ ಮಿತ್ರರಾದ, ಪಾತ್ರೇ ಸಮಿತಂ = ಯೋಗ್ಯರಾದ ತಮ್ಮಲ್ಲಿ, ಬಂದಿರುವ, ಮಾಂ = ನನ್ನನ್ನು, ಉಪೇಕ್ಷಸೇ ಚೇತ್ = ತಿರಸ್ಕರಿಸಿದರೇ, ಕ್ವಯಾಮಿ = ಎಲ್ಲಿಗೆ ಹೋಗಲಿ?

ರಾಕೇಂದು ಪ್ರತಿಮಮುಖೀಮವೇಕ್ಷ್ಯ ಚಿತ್ತಂ
ಲೋಲಂತೀಂ ಶುನಕಕುಧೀಸ್ತದಾನುಕೂಲ್ಯೇ।
ಶಂಯುರ್ನಾಭವಮನಯಾ ತಥಾಪಿ ಭೂಯ-
ಶ್ಚೂಡಾಲಃ ಸ್ವಜನವಿರೋಧಜಾಪಕೀರ್ತ್ಯಾ ॥ ೨॥

★ ಈ ಸ್ತೋತ್ರವು ಪ್ರಹರ್ಷಿಣೀ ವೃತ್ತದಲ್ಲಿದೆ. ಗುರುಗಳನ್ನು ಪ್ರಹರ್ಷಗೊಳಿಸಲು ಮಾಡಿದ್ದಾರೆ. ಗುರುಗಳು ಸಂತುಷ್ಟರಾದರೆ ಹೆಜ್ಜೆಹೆಜ್ಜೆಗೂ ಮನೋಭಿಲಾಷೆಯನ್ನು ಕೊಟ್ಟು ಸಂತೋಷಪಡಿಸುವರೆಂಬ ಸೂಚನೆ ಮ-ನ-ಜ-ರ ಗಣ ಹಾಗೂ ಒಂದು ಗುರುವಿನಲ್ಲಿದೆ. ಸುಮಧ್ವವಿಜಯದಲ್ಲಿ ಮಧ್ವಾಚಾರ್ಯರ ಮಹಿಮೆಯು ಈ ಪ್ರಹರ್ಷಿಣೀವೃತ್ತದಲ್ಲಿಯೇ ವರ್ಣಿಸಲಾಗಿದೆ.

ಶುನಕಬುದ್ಧೀಃ = ನಾಯಿಬುದ್ಧಿಯುಳ್ಳ ನಾನು, **ರಾಕೇಂದುಪ್ರತಿಮಮುಖೀಂ** = ಪೌರ್ಣಮೆಯ ಚಂದ್ರನಂತೆ ಮುಖವುಳ್ಳ, **ಚಿತ್ತಂ ಲೋಲಂತೀಂ** = ಮನಸ್ಸನ್ನೇ ಕದಡುವ, ಹೆಣ್ಣನ್ನು, **ಅವೇಕ್ಷ್ಯ** = ನೋಡಿ, **ತದಾನುಕೂಲ್ಯೇ** = ಅವಳು ಅನುಕೂಲಳಾದರೂ, **ಅನಯಾ** = ಈ ನಾರಿಯಿಂದ, **ಶಂಯುಃ** = ಸುಖಪಡೆದವನು, **ನ ಅಭವಂ** = ಆಗಲಿಲ್ಲ, **ತಥಾಪಿ** = ಆದರೂ, **ಭೂಯಃ** = ಮೊದಲಿಗಿಂತಲೂ, **ಸ್ವಜನವಿರೋಧಕಜ** = ಸ್ವಬಂಧುಗಳ ವಿರೋಧದಿಂದ ಉಂಟಾದ, **ಅಪಕೀರ್ತ್ಯಾ** = ಅಪಯಶಸ್ಸಿನಿಂದ, **ಚೂಡಾಲಃ ಅಭವಂ** = ಮೂರ್ಧನ್ಯನಾದೆ.

ಘರ್ಮಾರ್ತೋ ದಿಶಿ ದಿಶಿ ಚಾರಪಾಶಚಾರಂ
ಸಂಚರ್ಯ ಕ್ಷಣಮಪಿ ವಿಶ್ರಮಂ ನ ಚಾಪಮ್।
ಕಾಪೇಯಸ್ತದಪಿ ಮಲೀಮಸೇ ಧನಾಶಾ-
ಭಾರೇಣ ಪ್ರತಿಗೃಹಮೇಮ್ಯಕಿಂಚನೋಽಪಿ ॥ ೩॥

ಘರ್ಮಾರ್ತಃ = ಬಿಸಿಲಿನ ಬೇಗೆಯಿಂದ ನೊಂದು, **ದಿಶಿದಿಶಿ** = ಎಲ್ಲೆಡೆಯಲ್ಲಿಯೂ, **ಚಾರಪಾಶಚಾರಂ** = ಎಲ್ಲೆಡೆ ಸಂಚರಿಸುವ ಪಾಶದಿಂದ ಕಟ್ಟಿ ಹಾಕಿದವನಂತೆ, **ಸಂಚರ್ಯ** = ಸಂಚರಿಸಿ, **ಕ್ಷಣಮಪಿ** = ಒಂದು ಕ್ಷಣವೂ, **ವಿಶ್ರಮಂ** = ವಿರಾಮವನ್ನು, **ನಾಪಂ** = ಹೊಂದಲಿಲ್ಲ, **ತದಪಿ** = ಹೀಗಿದ್ದರೂ, **ಕಾಪೇಯಃ** = ಕಪಿವರ್ತನೆಯುಳ್ಳ ನಾನು, **ಧನಾಶಾಭಾರೇಣ** = ಹಣದಾಸೆಯಿಂದ, **ಮಲೀಮಸಃ** = ಮಲಿನನಾಗಿ, **ಅಂಕಿಚನಃ** = ದರಿದ್ರನಾಗಿ, **ಪ್ರತಿಗೃಹಂ ಏಮಿ** = ಪ್ರತಿಮನೆಗೂ ಹೋಗುತ್ತಿರುವೆನು.

ವೇದಾಂತೇ ನ ಕಿಮಪಿ ಸಾಹಸಂ ಮಯಾಽತ್ತಂ
ಸಂಸರ್ತುರ್ಮಮ ಧಿಷಣಾಭವಚ್ಛಿಲಾಭಾ।
ಶ್ರೀಲಾನಾಂ ದ್ವಿಜಕಕ ಇತ್ಯನಾದೃತೋ ವಾ
ಪಶ್ಚಾದ್ವಾಪುರತ ಉತಾನುಗಾದಿಕೋಽಹಮ್ ॥ ೪॥

ವೇದಾಂತೇ = ಉಪನಿಷತ್ತಿನಲ್ಲಿ, **ಕಿಮಪಿ** = ಯಾವುದೇ ರೀತಿಯ, **ಸಾಹಸಂ** = ಪ್ರಯತ್ನವು, **ಮಯಾ**= ನನ್ನಿಂದ, **ನ ಆತ್ತಂ** = ಮಾಡಲಾಗಲಿಲ್ಲ, **ಸಂಸರ್ತುಃ** = ಸಂಚಾರಿಯಾದ, **ಮಮ** = ನನ್ನ, **ಧಿಷಣಾ** = ಬುದ್ಧಿಶಕ್ತಿಯು, **ಶಿಲಾಭಾ** = ಶಿಲೆಯಂತೆ ಜಡವಾಯಿತು, **ಅಹಂ** = ನಾನು, **ದ್ವಿಜಕಕಃ ಇತಿ** = ಕುತ್ಸಿತ ಬ್ರಾಹ್ಮಣನೆಂದು, **ಅನಾದರಃ ಅಭವಂ** = ತಿರಸ್ಕಾರ ಹೊಂದಿದೆನು, **ಶ್ರೀಲಾನಾಂ** = ಸಂಪತ್ತುಳ್ಳ ಶ್ರೀಮಂತರ,

ಪಶ್ಚಾದ್ವಾ ಪುರತಃ ವಾ = ಹಿಂದೆ ಹಾಗೂ ಮುಂದೆ, **ಅನುಗಾದಿಕಃ ಅಭವಂ** = ಅನುಸರಿಸಿ ಹೋಗುವವನಾದೆ.

ದಾರಾ ಮೇ ತಿಲಕಟು ಕಲ್ಪಯಂತಿ ಚಿತ್ತಂ
ವ್ರಾತೀನೋ ಧನಿಕತಾಯಾಪಿ ನಾಪಮರ್ಥಮ್।
ತಸ್ಮಾನ್ಮಾಮನುಪಧಿಕಂ ಸುಪುತ್ರಕಂ ತೇ
ತಾತೇಷ್ಟಪ್ರದ ಕುರು ರಾಘವೇಂದ್ರ ತೀರ್ಥ ॥ ೫॥

ಮೇ ದಾರಾಃ = ನನ್ನ ಹೆಂಡತಿಯು, **ಚಿತ್ತಂ** = ತನ್ನ ಮನಸ್ಸನ್ನು, **ತಿಲಕಟು** = ಅತ್ಯಂತ ಕಠಿಣವಾಗಿ, **ಕಲ್ಪಯಂತಿ** = ಮಾಡುತ್ತಾಳೆ, **ವ್ರಾತೀನಃ** = ಶ್ರಮಜೀವಿಯಾದರೂ, **ಧನಿಕತಯಾ** = ಧನಿಕನಂತೆ, **ಅರ್ಥಂ ನಾಪಂ** = ಹೊಂದಲಿಲ್ಲ, **ಇಷ್ಟಪ್ರದ ತಾತ ರಾಘವೇಂದ್ರ ತೀರ್ಥ** = ಇಷ್ಟ ನೀಡುವ ತಂದೆ ರಾಘವೇಂದ್ರರೇ, **ಅನುಪಧಿಕಂ** = ನಿಷ್ಕಪಟಿಯಾಗಿ, ಬಂದಿರುವ, **ಮಾಂ** = ನನ್ನನ್ನು, **ಸುಪುತ್ರಕಂ ಕುರು** = ತಮ್ಮ ಶ್ರೇಷ್ಠ ಪುತ್ರನನ್ನಾಗಿ ಸ್ವೀಕರಿಸಿರಿ.

ಯಂ ಯಂ ವಾ ಜನಮಹಮಾಶ್ರಯೇ ಸುಖಾಯ
ಪ್ರಾರಬ್ಧಾನ್ಮಮ ಸ ಸ ಕರ್ಮಣೋ ಜಹಾತಿ।
ಹೃದ್ರೋಗಃ ಪ್ರಪಚತಿ ರೂಪಮದ್ಯ ತತ್ಕ-
ಸ್ತಂ ಕ್ಷಿಪ್ರಂ ಪ್ರಶಮಯ ಮಾಂ ಸುಖೀಕುರು ತ್ವಮ್ ॥ ೬॥

ಅಹಂ = ನಾನು, **ಯಂ ಯಂ ಜನಂ** = ಯಾವ ವ್ಯಕ್ತಿಗಳನ್ನು, **ಸುಖಾಯ** = ಸುಖಕ್ಕಾಗಿ, **ಆಶ್ರಯೇ** = ಹೊಂದುವೆನೋ, **ಸ ಸಃ** = ಆ ವ್ಯಕ್ತಿಗಳೆಲ್ಲರೂ, **ಮಮ** = ನನ್ನ, **ಪ್ರಾರಬ್ಧಾತ್ ಕರ್ಮಣಃ** = ಪ್ರಾರಬ್ಧಕರ್ಮದಿಂದ, **ಜಹಾತಿ** = ಬಿಡುತ್ತಾರೆ, **ಕಃ ಹೃದ್ರೋಗಃ** = ಕುತ್ಸಿತವಾದ ಮನೋವ್ಯಥೆಯು, **ಅದ್ಯ** = ಈಗ, **ರೂಪಂ** = ಈ ದೇಹವನ್ನು, **ಪ್ರಪಚತಿ** = ಸುಡುತ್ತಿದೆ, **ತ್ವಂ** = ನೀವು, **ಕ್ಷಿಪ್ರಂ** = ಕೂಡಲೇ, **ತಂ** = ಆ ದುಃಖವನ್ನು, **ಪ್ರಶಮಯ** = ಶಾಂತಗೊಳಿಸಿ, **ಮಾಂ** = ನನ್ನನ್ನು, **ಸುಖೀಕುರು** = ಸುಖಿಯನ್ನಾಗಿರಿಸಿರಿ.

ನರ್ವೃತ್ತಃ ಪ್ರತಿಮಂಗನಾಥನಾಶೀ-
ರುಷ್ಣಾಲುಃ ಸತತಮಹಂ ಹಿಮಾಲುರೇಷಃ।

ಕಿಂ ಕುರ್ಯಾಮಿಹ ಪರಸಾಧನಾನ್ಯುಪಾಯೀ
ಕೃತ್ಯೇ ತ್ವಂ ಗುರುವರ ಮೇ ಗತಿಂ ಪ್ರದೇಹಿ ॥ ೭॥

ಅಹಂ = ನಾನು, **ಅಂಗನಾಧನಾಶೀಃ** = ಹೆಣ್ಣುಹೊನ್ನುಗಳನ್ನು ಆಶಿಸಿ, **ನರ್ನೃತ್ತಃ** = ಅತಿಯಾಗಿ ಕುಣಿಯುತ್ತಿದ್ದೇನೆ, **ಏಷಃ** = ನಾನು, **ಸತತಂ** = ಯಾವಾಗಲೂ, **ಉಷ್ಣಾಲುಃ ಹಿಮಾಲುಃ** = ಸುಖದುಃಖಗಳೆಂಬ ದ್ವಂದ್ವದಲ್ಲಿರುವೆನು, **ಉಪಾಯೀ** = ದ್ವಂದ್ವಗಳನ್ನು ಸದೆಬಡೆಯುವ ಉಪಾಯವುಳ್ಳವನಾಗಿ, **ಇಹ ಪರ ಸಾಧನಾನಿ** = ಇಹಕ್ಕೂ ಪರಕ್ಕೂ ಸಾಧನಗಳನ್ನು, **ಕಿಂ ಕುರ್ಯಾಂ** = ಮಾಡಲು ಸಾಧ್ಯವೇನು? **ಗುರುವರ ತ್ವಂ** = ಗುರುರಾಜರೇ ತಾವು, **ಕೃತ್ಯೇ** = ಕರ್ತವ್ಯದಲ್ಲಿ, **ಮೇ** = ನನಗೆ, **ಗತಿಂ ದೇಹಿ** = ಮಾರ್ಗವನ್ನು ತೋರಿಸಿ.

ಮಾರೋದೀರಿತಿ ಚಿರದೂನಮಾನಸಂ ಮಾ-
ಮಾಶ್ವಸ್ಯ ಪ್ರಕಟಯ ಮಯ್ಯುದಾರಭಾವಮ್।
ಯಾಚೇ ತ್ವಾಂ ಯತಿವರ ರಾಘವೇಂದ್ರ ತೀರ್ಥಾ-
ನನ್ಯಾಪ್ಯಾಂ ಪಿತೃಬಲತಾಂ ತ್ವಯಾಹಮಾಪ್ತುಮ್ ॥ ೮॥

ಚಿರದೂನಮಾನಸಂ = ಬಹುಕಾಲ ನೊಂದಮನಸ್ಸುಳ್ಳ, **ಮಾಂ** = ನನ್ನನ್ನು, **ಮಾ ರೋದೀಃ** = ಅಳಬೇಡವೆಂದು, **ಆಶ್ವಾಸ್ಯ** = ಆಶ್ವಾಸನೆ ನೀಡಿ, **ಮಯಿ** = ನನ್ನಲ್ಲಿ, **ಉದಾರಭಾವಂ** = ಔದಾರ್ಯವನ್ನು, **ಪ್ರಕಟಯ** = ಪ್ರಕಟಗೊಳಿಸಿರಿ, **ಯತಿವರ ರಾಘವೇಂದ್ರ ತೀರ್ಥ** = ಯತಿ ರಾಘವೇಂದ್ರರೇ, **ಅಹಂ** = ನಾನು, **ಅನನ್ಯಾಪ್ಯಾಂ** = ಬೇರೆಯವರಿಂದ ಹೊಂದಲಾಗದ, **ಪಿತೃಬಲತಾಂ** = ಪಿತೃಭಾಗ್ಯವನ್ನು, **ತ್ವಯಾ** = ನಿಮ್ಮಿಂದ, **ಆಪ್ತುಂ** = ಹೊಂದಲು, **ತ್ವಾಂ ಯಾಚೇ** = ತಮ್ಮನ್ನೇ ಬೇಡುವೆ.

ಕೃಷ್ಣಾಖ್ಯಃ ಕವಿರವಧೂತ ಈಶಜೂಟೀ
ಸಂಸರ್ಪತ್ ಸುರಸರಿದಾಭವಾಗ್ವಿಲಾಸಃ।
ಸ್ತೋತ್ರಂ ಶ್ರೀ ಗುರುವರ ಪಾದಯೋರ್ವಿತನ್ವ-
ನ್ನಾಪೇದೇ ಸಪದಿ ತದಿಷ್ಟಪುತ್ರಭಾವಮ್ ॥ ೯॥

ಅವಧೂತಃ ಕೃಷ್ಣಾಖ್ಯ ಕವಿಃ = ಕೃಷ್ಣಾವಧೂತಕವಿಯು, **ಈಶಜೂಟಿ** = ರುದ್ರದೇವರ ಜಟೆಯಿಂದ, **ಸಂಸರ್ಪತ್** = ಹೊರಸೂಸುವ, **ಸುರಸರಿದಾಭಃ** = ಗಂಗಾನದಿಯಂತೆ ಇರುವ, **ವಾಗ್ವಿಲಾಸಃ** = ವಾಗ್ವೈಖರಿಯುಳ್ಳವನಾಗಿ, **ಶ್ರೀ ಗುರುವರ**

ಪಾದಯೋಃ = ಗುರುರಾಜರ ಪಾದಗಳ, **ಸ್ತೋತ್ರಂ** = ಸ್ತುತಿಯನ್ನು, **ವಿತನ್ವನ್** = ಮಾಡುವವನಾಗಿ, **ಸಪದಿ** = ಕೂಡಲೇ, **ತದಿಷ್ಟಪುತ್ರಭಾವಂ** = ಗುರುಗಳಿಗೆ ಅಚ್ಚು ಮೆಚ್ಚಿನ ಪುತ್ರನ ಸ್ಥಾನವನ್ನು, **ಆಪೇದೇ** = ಹೊಂದಿದನು.

ಇತಿ ಶ್ರೀ ಕೃಷ್ಣಾವಧೂತ ವಿರಚಿತರಾಘವೇಂದ್ರ ತಂತ್ರೇ ದಶಸ್ತೋತ್ರಪಟಲೇ ಗುರುಕರುಣಾಸಂಪಾದನ ಸ್ತೋತ್ರಂ ನಾಮ ನವಮ ಪಟಲಃ

ದಶಮ ಪಟಲಮ್

ಪ್ರದಕ್ಷಿಣಾಗದ್ಯಂ

ಜಯಜಯ ಗುರುರಾಜ। ಜಯ ಜಯ ಜಗತಃ ಕ್ಷೇಮಾಯ, ಶ್ರೀ ರಾಘವೇಂದ್ರ ಗುರುಸಾರ್ವಭೌಮ ಭೋ, ಶರಣಾಗತ ಭೂಭೃನ್ನಿಕುರಂಬಂ, ನಾನ್ಯಾಲಂಬಂ, ವಿಗತ ವಿಲಂಬಂ ರಕ್ಷಿತುಕಾಮಂ, ಸುಗುಣಾರಾಮಂ ದೋಷವಿರಾಮಂ, ಗ್ರಹಣೇ ಭೀಮಂ, ಬುಧಜನ ಸಂದೇಹಹರಂ, ವಂದೇ ಮಯಿ ಕುರುಮಂದೇ, ಸಂತತ ಕರುಣಾಂ, ಶೋಕಹರಣಾಂ, ಪಾರ್ವಣಹರಿಣಾಂಕಾನನರಮಣೀಯಾಕೃತಿ ಹರಿಣೀಲೋಚನ ತರುಣೀ, ಲೀಲಾಸರಣೀಲೋಲುಪಚಿತ್ತೇ ಯೌವ್ವನಮತ್ತೇ, ವಿನಿಹತವಿತ್ತೇ, ವಿಗತ ಮಹತ್ತೇ, ವನಮದಮತ್ತೇಭಕುಂಭವೃತ್ತೇ ಸ್ತನೇ ಪ್ರದತ್ತೇಹೇ, ಹಾ ಹತಶೀಲೆ, ಕಪಟ ಶೀಲೇ, ಶ್ರೀಲಗೃಹಾನ್ ವಾ ಗಾಮಂ ಗಾಮಂ, ದೀನಾರಾನ್ ವಾ ಯಾಚಂಯಾಚಂ, ಹೀನನರಾನ್ ವಾ ಸೇವಂ ಸೇವಂ, ಪರದಾರಾನ್ ವಾ ದರ್ಶಂ ದರ್ಶಂ, ಸಂಚಿತ ಪಾಪೇ, ಕುಂಚಿತಪುಣ್ಯೇ, ವಂಚಿತಸಾಧೌ। ಪಂಚಮರಾಗೇ ಪಂಚಿತಕರ್ಣೇ, ಪಂಚಶರಾಸ್ತ್ರೈಃ ಅಂಚಿತಬಾಧೇ, ಸುಲಭಕ್ರೋಧೇ, ವಿಗತ ವಿಬೋಧೇ, ವಿವೇಕಹೀನೇ, ಕಾಂಕ್ಷಿತ ಯಾನೇ, ಮತಾಪಮಾನೇ, ಭವಮಧಿ ರೂಢೇ, ಭಾವಿತು ಮೂಢೇ, ಕೈತವಗೂಢೇ, ಮಯಿ ಗುಣಲೇಶೋಽಪಿ ನ ಹಿ, ರಮೇಶೋಪಾಸನಯೇಶೋ ಶಕಲಂ ಕರ್ತುಂ ಚಾನ್ಯತ್ ಕರ್ತುಂ, ತತ್ತೇಂಘ್ರ್ಯಂ ಭೋಜಂ ಪ್ರಾಪಂ ಭೋ, ಜಯ ಜಯ ಗುರುರಾಜ ಗುರುರಾಜ ॥ ೧॥

ಗುರುರಾಜ ಜಯಜಯ = ಗುರುರಾಜರೇ ಜಯಶಾಲಿಗಳಾಗಿರಿ, **ಜಗತಃ ಕ್ಷೇಮಾಯ ಜಯ ಜಯ** = ಜಗತ್ತಿನ ಕಲ್ಯಾಣಕ್ಕಾಗಿ ಜಯಶಾಲಿಗಳಾಗಿರಿ, ಶ್ರೀ ರಾಘವೇಂದ್ರ, **ಗುರುಸಾರ್ವಭೌಮ** = ರಾಘವೇಂದ್ರ, ಗುರುಸಾರ್ವಭೌಮರೇ, **ಶರಣಾಗತಭೂಭೃನ್ನಿಕುರಂಬಂ** = ಮೊರೆ ಹೊಕ್ಕಿರುವ ರಾಜರ ಸಮೂಹವುಳ್ಳ, **ನಾನ್ಯಾಲಂಬಂ** = ನೀವಲ್ಲದೆ ಬೇರೆ ರಕ್ಷಕರಿಲ್ಲದಿರುವ, **ವಿಗತ ವಿಲಂಬಂ** = ತಡಮಾಡದೆ ಶೀಘ್ರವಾಗಿ, **ರಕ್ಷಿತು ಕಾಮಂ** = ಭಕ್ತರನ್ನು ರಕ್ಷಿಸುವ ಇಚ್ಛೆಯುಳ್ಳ, **ಸುಗುಣಾರಾಮಂ** = ಸುಗುಣಗಳ ಖನಿಯಾದ, **ದೋಷವಿರಾಮಂ** = ದೋಷಗಳಿಂದ ಮುಕ್ತರಾದ,

ಗ್ರಹಣೇಭೀಮಂ = ಭಕ್ತರನ್ನು ಸ್ವೀಕರಿಸುವುದರಲ್ಲಿ ಭೀಮಸಂತಿರುವ, **ಬುಧಜನ ಸಂದೇಹಹರಂ** = ಪಂಡಿತರ ಸಂದೇಹವನ್ನು ಪರಿಹರಿಸುವ, **ತ್ವಾಂ** = ನಿಮ್ಮನ್ನು, **ವಂದೇ** = ಅಭಿವಂದಿಸುವೆ, **ಪಾರ್ವಣಹರಿಣಾಂಕಾನನರಮಣೀಯಾಕೃತಿ ಹರಿಲೋಚನ ತರುಣೀಲೀಲಾಸರಣೀ ಲೋಲುಪಚಿತ್ತೇ - ಪಾರ್ವಣಹರಿಣಾಂಕ** = ಪೂರ್ಣಿಮಾ ಚಂದ್ರನಂತೆ, **ಆನನ** = ಮುಖವುಳ್ಳ, **ರಮಣೀಯಾಕೃತಿ** = ಮನೋಹರವಾದ ಅವಯವಗಳುಳ್ಳ, **ಹರಿಣೀಲೋಚನ** = ಜಿಂಕೆಯಂತೆ ಕಣ್ಣುಗಳುಳ್ಳ, **ತರುಣೀ** = ತರುಣಿಯರ, **ಲೀಲಾ ಸರಣೀ** = ವಿಹಾರದ ಮಾರ್ಗದಲ್ಲಿ, **ಲೋಲುಪಚಿತ್ತೇ** = ಅತ್ಯಾಸಕ್ತವಾಗುವ ಮನಸ್ಸುಳ್ಳ, **ಯೌವ್ವನಮತ್ತೇ** = ಯೌವ್ವನದಿಂದ ಮತ್ತನಾದ, **ವಿನಿಹತವಿತ್ತೇ** = ನಾಶವಾದ ಸಂಪತ್ತುಳ್ಳ, **ವಿಗತಮಹತ್ತೇ** = ಮಹತ್ವರಹಿತನಾದ, **ವನಮದ ಮತ್ತೇಭಕುಂಭವೃತ್ತೇ** = ಮದಭರಿತವಾದ ಆನೆಯ ಕುಂಭಸ್ಥಳದಂತೆ ವೃತ್ತಾಕಾರವಾದ, **ಸ್ತನೇಪ್ರದತ್ತೇಹೇ** = ಸ್ತನಗಳಲ್ಲಿ ಇಡಲ್ಪಟ್ಟ ಬಯಕೆಯುಳ್ಳ, **ಹಾ ಹತಶೀಲೇ** = ಚಾರಿತ್ರ್ಯವನ್ನು ಕಳೆದು ಕೊಂಡ, **ಕುತ್ಸಿತಶೀಲೇ** = ದುರಾಚಾರಿಯಾದ, **ಕಪಟಶ್ರೀಲೇ** = ಕಪಟದಿಂದ ಶ್ರೀಮಂತನಾದ, **ಮಂದೇ ಮಯಿ** = ಮಂದಮತಿಯಾದ ನನ್ನಲ್ಲಿ, **ಸಂತತಂ** = ನಿರಂತರವಾದ, **ಶೋಕಹರಣಾಂ** = ಶೋಕವನ್ನು ಪರಿಹರಿಸುವ, **ಕರುಣಾಂ** = ದಯೆಯನ್ನು, **ಕುರು** = ಮಾಡಿರಿ, **ಅಹಂ** = ನಾನಾದರೂ, **ಶ್ರೀಲಗೃಹಾನ್** = ಹಣಕ್ಕಾಗಿ ಶ್ರೀಮಂತರ ಮನೆಗಳನ್ನು, **ವಾ ಗ್ರಾಮಂ ಗ್ರಾಮಂ** = ಅಲೆಯುತ್ತಾ, **ದೀನಾರಾನ್ ವಾ** = ಸುವರ್ಣ ನಾಣ್ಯಗಳನ್ನು, **ಯಾಚಂ ಯಾಚಂ** = ಬಹಳವಾಗಿ ಬೇಡುತ್ತಾ, **ಹೀನ ನರಾನ್ ವಾ** = ಹೀನ ವ್ಯಕ್ತಿಗಳನ್ನು, **ಸೇವಂ ಸೇವಂ** = ಅತಿಯಾಗಿ ಸೇವಿಸುತ್ತಾ, **ಪರ ದಾರಾನ್ ವಾ** = ಪರಸ್ತ್ರೀಯರನ್ನು, **ದರ್ಶಂ ದರ್ಶಂ** = ಅತಿಯಾಗಿ ನೋಡುತ್ತಾ, **ಸಂಚಿತಪಾಪೇ** = ಪಾಪಸಂಗ್ರಹವುಳ್ಳ, **ಕುಂಚಿತಪುಣ್ಯೇ** = ಹ್ರಾಸವಾದ ಪುಣ್ಯವುಳ್ಳ, **ವಂಚಿತಸಾಧೌ** = ಸಾಧುಗಳನ್ನು ವಂಚಿಸಿದ, **ಪಂಚಮರಾಗೇ** = ಕೋಗಿಲೆಯುತಹ ಸ್ತ್ರೀಯರ ಪಂಚಮರಾಗದಲ್ಲಿ, **ಪಂಚಿತಕರ್ಣೇ** = ಕಿವಿಗಳುಳ್ಳ ವಿಸ್ತೃತವಾದ, **ಪಂಚ ಶರಾಸ್ತ್ರೈಃ** = ಕಾಮಬಾಣಗಳಿಂದ, **ಅಂಚಿತಬಾಧೇ** = ಬಾಧೆಯಿಂದ ಬಗ್ಗಿಸಲ್ಪಟ್ಟ, **ಸುಲಭಕ್ರೋಧೇ** = ಶೀಘ್ರಕೋಪಿಯಾದ, **ವಿಗತ ವಿಬೋಧೇ** = ಮೋಹವುಳ್ಳ, **ವಿವೇಕ ಹೀನೇ** = ವಿವೇಕಶೂನ್ಯನಾದ, **ಕಾಂಕ್ಷಿತಯಾನೇ** = ವಾಹನಾದಿಗಳನ್ನು ಇಚ್ಛಿಸಿದ, **ಮತಾಪಮಾನೇ** = ಅವಮಾನವನ್ನು ಒಪ್ಪಿಕೊಳ್ಳುವ, **ಭವಂ ಅಧಿರೂಢೇ** = ಸಂಸಾರದಲ್ಲಿ ಮುಳುಗಿರುವ, **ಭಾವಿತುಂ ಮೂಢೇ** = ತಿಳಿಯಲೂ ಬಾರದ, **ಕೈತವಗೂಢೇ** = ಹೃದಯದಲ್ಲಿ ಕಪಟತುಂಬಿರುವ, **ಮಯಿ** = ನನ್ನಲ್ಲಿ, **ಗುಣಲೇಶೋಽಪಿ** = ಸ್ವಲ್ಪ ಗುಣವೂ, **ನ ಹಿ** = ಇರುವುದಿಲ್ಲ, **ತ್ವಂ** =

ತಾವಾದರೂ, **ರಮೇಶೋಪಾಸನಯಾ** = ರಮಾರಮಣನ ಉಪಾಸನೆಯಿಂದ, **ಶಕಲಂ ಕರ್ತುಂ** = ಪಾಪಗಳನ್ನು ಕತ್ತರಿಸಲು, **ಈಶಃ** = ಸಮರ್ಥರಿರುವಿರಿ, **ಚ** = ಹಾಗೆಯೇ, **ಅನ್ಯತ್ಕರ್ತುಂ** = ಬೇರೆ ಏನನ್ನಾದರೂ ಮಾಡಲೂ, **ಈಶಃ** = ಸಮರ್ಥರಿರುವಿರಿ, **ತತ್** = ಆ ಕಾರಣದಿಂದಲೇ, **ತೇ** = ತಮ್ಮ, **ಅಂಘ್ರ್ಯಂಭೋಜಂ** = ಪಾದಕಮಲವನ್ನು, **ಪ್ರಾಪಂ** = ಮೊರೆ ಹೊಕ್ಕಿರುವೆನು, ಭೋ ಗುರುರಾಜ ಜಯ ಜಯ.

ಯತಿವರ ಮಾಯೋಪಹತೋ ಭೂಯೋ ದಾರಾಪತ್ಯಾದಿಕ ಸಂಸೃತ್ಯಾಮನು ಭೂಯೈವಂ ದುಃಖಮಭೂವಂ, ಪುತ್ರೋಽಹಂ ತೇ ಹಿಮಕರಶಾಂತೇ, ಕಮಲಾ ಕಾಂತೇಡಿತ ಚರಣಾಂತೇ, ಕೃತವಿಶ್ರಾಂತೇ, ನಿತರಾಂ ಮಾಂ ತೇ ಪದರುದ್‌ಧ್ವಾಂಕ್ಷೇ, ಸ್ವಾರ್ಥಾಕಾಂಕ್ಷೇ ಸ್ಮರದಾಕಾಂಕ್ಷೇ ಕನಕಮಯಘಟೀ ಕನತ್ಕುಚತಟೀ ಲಸತ್ತನು ಪಟೀರಲಕ್ಷಿತ ಕಟೀರಲಘುಶ್ರೋಣೀರ್ಭ್ರಮರಶ್ರೇಣೀಸನ್ನಿಭವೇಣೀರ್ಮಂಜುಲ ವಾಣೀರ್ನಯನ ಜಿತೈಣೀಃ, ಕುಚಭರತಾಂತಾಃ, ಕಪಟಸ್ವಾಂತಾಃ, ಕಲಿಭಿರಶಾಂತಾಃ, ವಿಲೋಕ್ಯ ಕಾಂತಾಃ, ಚಂಚಲಮನಸಾ, ಭ್ರಾಂತಸ್ತರಸಾ, ಮೋಹಾಽಽವರ್ತೇ, ಸುಚಿರಂ ವರ್ತೇ, ಪ್ರೀತ್ಯೈ ತಾಸಾಮುತ್ತಮವಾಸಾಂಸ್ಯನರ್ಘ್ಯ ಭೂಷಾದಿಕಾನೀ ಪಾಮಾಽಲಂಬ್ಯಾಹಂ, ಕುಂಚಿತ ದೇಹಂ ಧನಿನಾಂ ಗೇಹಂ, ತ್ವರಿತಂಗತ್ವಾ, ದೀನೋ ಭೂತ್ವಾ, ಸ್ತವನಂ ಕೃತ್ವಾ, ಪರೀ ಚರಿತ್ವಾ ಕೋಶಂ ನಾಪಂ, ಕ್ಲೇಶಮವಾಪಂ, ವಿಪುಲಾಽಲಾಪಂ, ಕೃತ ಜಪಲೋಪಂ, ಧೃತಾವಲೇಪಂ, ಸಾಧಿತಕಪಟಂ, ಮುಖ ವೀತಪಟಂ, ಧೃತಜಪಮಾಲಂ, ಭುವಿಜನಜಾಲಂ ಸುವಂಚಯಾನೋ ವಿಹಂಗ ಯಾನೋಪಾಸನಹೀನೋ, ವ್ಯಚರಂ ನಿತ್ಯಂ, ನರಕಂ ಸತ್ಯಂ, ಭವತೀತ್ಯಾಲೋಚ್ಯ, ಸಂಪ್ರತಿ ಲೋಪಾಗತಶರಣಾಗತ ಜನಭರಣಾದರವಂತಂ ತ್ವಾಂ ಪಿತರಂ ಮತ್ವಾಽಧು ನಾಗತೋ ಭೋ ಜಯ ಜಯ ಗುರುರಾಜ ಗುರುರಾಜ ॥ ೨॥

ಯತಿವರ = ಯತಿಶ್ರೇಷ್ಠರಾದ ರಾಘವೇಂದ್ರರೇ, **ಅಹಮ್** = ನಾನು, ಭೂಯಃ = ಪುನಃಪುನಃ **ದಾರಾಪುತ್ರಾದಿ ಸಂಸೃತ್ಯಾಂ** = ಪತ್ನೀಪುತ್ರಾದಿ ಸಂಸಾರದಲ್ಲಿ, **ಮಾಯೋಪಹತಃ** = ಮಾಯೆಯಿಂದ ಬಾಧಿತನಾಗಿ, **ಏವಂ** = ಹೀಗೆ, **ದುಃಖಂ** = ದುಃಖವನ್ನು, **ಅನುಭೂಯ** = ಅನುಭವಸಿ, **ಹಿಮಕರಶಾಂತೇ** = ಚಂದ್ರನಂತೆ ಆಹ್ಲಾದಜನಕಗಳಾದ, **ಕಮಲಾಕಾಂತೇಡಿತಚರಣಾಂತೇ** = ಲಕ್ಷ್ಮೀಪತಿಯ ಸ್ತುತ್ಯಪಾದಗಳ ಸಮೀಪದಲ್ಲಿ, **ಕೃತವಿಶ್ರಾಂತೇ** = ಭಗವಂತನ ಪದತಲದಲ್ಲಿ ವಿಶ್ರಮಿಸಿರುವ, **ತೇ** = ನಿಮ್ಮ, **ನಿತರಾಂ ಪುತ್ರಃ** = ನಿಶ್ಚಿತವಾಗಿಯೂ ಪುತ್ರನಾಗಿ, **ಅಭೂವಂ** = ಆದೆನು, ಹಾಗೆಯೇ = **ಪದರುದ್‌ಧ್ವಾಂಕ್ಷೇ** = ಮೋಕ್ಷಪದವಿಯನ್ನು ತಡೆಯುವ ಅಜ್ಞಾನವುಳ್ಳ, **ಸ್ವಾರ್ಥಾ ಕಾಂಕ್ಷೇ** =

ಹೆಣ್ಣುಹೊನ್ನುಗಳನ್ನು ಬಯಸುವ, **ಸ್ಮರದಾಕಾಂಕ್ಷೀ** = ಮನ್ಮಥಲೀಲೆಯ ಆಸೆಯುಳ್ಳ, **ಮಯಿ** = ನಾನು, **ಕನಕ ಮಯಘಟೀ ಕನತ್** = ಸುವರ್ಣಮಯ ಘಟದಂತೆ ಶೋಭಿಸುತ್ತಿರುವ, **ಕುಚತಟೀ ಲಸತ್** = ಕುಚಪ್ರದೇಶಗಳಲ್ಲಿ ಹೊಳೆಯುವ, **ತನುಪಟೀಃ** = ಸೂಕ್ಷ್ಮವಾದ ವಸ್ತ್ರಗಳುಳ್ಳ, **ಅಲಕ್ಷಿತ ಕಟೀಃ** = ಅತೀ ಸೂಕ್ಷ್ಮವಾದ ನಡುಭಾಗಗಳುಳ್ಳ, **ಅಲಘುಶ್ರೋಣೀಃ** = ವಿಸ್ತೃತವಾದ ನಿತಂಬಗಳುಳ್ಳ, **ಭ್ರಮರಶ್ರೇಣೀಸನ್ನಿಭವೇಣೀಃ** = ದುಂಬಿಗಳ ಸಾಲುಗಳೆಂಬಂತೆ ತೋರುವ ಜಡೆಗಳುಳ್ಳ, **ಮಂಜುಲವಾಣೀಃ** = ಮಂಜುಲವಾದ ಮಾತುಗಳುಳ್ಳ, **ನಯನ ಜಿತೈಣೀಃ** = ಜಿಂಕೆಗಳ ನಯನಗಳಿರುವ, **ಕುಚಭರತಾಂತಾಃ** = ಕುಚಗಳ ಭಾರದಿಂದ ಗ್ಲಾನಿಹೊಂದಿರುವ, **ಕಪಟಸ್ವಾಂತಾಃ** = ಕಪಟಾಂತಃಕರಣಗಳುಳ್ಳ, **ಕಲಿಭಿರಶಾಂತಾಃ** = ಕಲಹದಿಂದ ಕದಡಿದ ಮನಸ್ಸುಳ್ಳ, **ಕಾಂತಾಃ** = ಕಾಮಿನೀಸ್ತ್ರೀಯರನ್ನು, **ವಿಲೋಕ್ಯ** = ನೋಡಿ, **ಚಂಚಲಮನಸಾ** = ಚಪಲ ಮನಸ್ಸುಳ್ಳ, **ತರಸಾ ಭ್ರಾಂತಃ** = ಕೂಡಲೇ ಭ್ರಾಂತಿಯನ್ನು ಹೊಂದಿ, **ಮೋಹಾಽಽವರ್ತೇ** = ಮೋಹವೆಂಬ ಸುಳಿಯಲ್ಲಿ, **ಸುಚಿರಂ ವರ್ತೇ** = ಬಹುಕಾಲ ಸುತ್ತಿದೆನು, **ತಾಸಾಂ** = ಆ ಕಾಮಿನಿಯರ, **ಪ್ರೀತ್ಯೈ** = ಮನವೊಲಿಸುವ ಸಲುವಾಗಿ, **ಉತ್ತಮವಾಸಾಂಸಿ** = ಶ್ರೇಷ್ಟವಾದ ವಸ್ತ್ರಗಳು, **ಅನರ್ಘ್ಯಭೂಷಾದಿಕಾನಿನೀಷಾಂ** = ಅಮೂಲ್ಯ ಆಭರಣಗಳನ್ನು ತರುವ ಇಚ್ಛೆಯನ್ನು, **ಆಲಂಬ್ಯ** = ಹೊಂದಿದ, **ಅಹಂ** = ನಾನು, **ಕುಂಚಿತದೇಹಂ** = ಸಂಕುಚಿತಮನಸ್ಸುಳ್ಳ (ಉದಾರಿಗಳಾಗದ), **ಧನಿನಾಂ** = ಧನಿಕರ, **ಗೇಹಂ** = ಮನೆಗಳಿಗೆ, **ತ್ವರಿತಂ ಗತ್ವಾ** = ವೇಗವಾಗಿ ಹೋಗಿ, **ದೀನೋ ಭೂತ್ವಾ** = ದೀನನಾಗಿ, **ಸ್ತವನಂ ಕೃತ್ವಾ** = ಅವರನ್ನು ಸ್ತೋತ್ರಮಾಡಿ, **ಪರೀಚರಿತ್ವಾ** = ಪರಿಚಾರಿಕೆಯನ್ನು ಮಾಡಿದರೂ, **ಕೋಶಂ ನ ಆಪಂ** = ಧನವನ್ನು ಪಡೆಯಲಾಗಲಿಲ್ಲ, **ಕ್ಲೇಶಂ ಅವಾಪಂ** = ದುಃಖವನ್ನು ಹೊಂದಿದೆ, **ವಿಪುಲಾಲಾಪಂ** = ಬಹುವಾಗಿ ಮಾತನಾಡುವವನಂತೆ, **ಕೃತಜಪಲೋಪಂ** = ಲುಪ್ತವಾದ ಜಪತಪಾದಿಳುಳ್ಳ, **ಧೃತಾವಲೇಪಂ** = ಧನಿಕರ ತಿರಸ್ಕಾರವನ್ನು ಮನಸ್ಸಿನಲ್ಲಿ ಹೊಂದಿದ್ದ, **ಸಾಧಿತಕಪಟಂ** = ಕಪಟವನ್ನೇ ಮಾಡಲು ನಿಶ್ಚಯಿಸಿದ್ದ, **ಮುಖವೀತಪಟಂ** = ಬಟ್ಟೆಯಿಂದ ಮುಖವನ್ನು ಮುಚ್ಚಿದ (ವೇಷವನ್ನು ಬದಲಾಯಿಸಿ), **ಧೃತಜಪಮಾಲಂ** = ಕೈಯಲ್ಲಿ ಜಪಮಾಲೆಯನ್ನು ಧರಿಸಿದ ವ್ಯಕ್ತಿಯು ಹೇಗೋ ಹಾಗೆ, **ಭುವಿ ಜನಜಾಲಂ** = ಭೂಮಿಯಲ್ಲಿರುವ ಜನಸಮೂಹವನ್ನು, **ಸುವಂಚಯಾನಃ** = ಚತುರತೆಯಿಂದ ಮೋಸಗೊಳಿಸುತ್ತಾ, **ವಿಹಂಗಯಾನೋಪಾಸನಹೀನಃ** = ಗರುಡವಾಹನನಾದ ನಾರಾಯಣನ ಉಪಾಸನೆಯಿಂದ ದೂರನಾಗಿ, **ನಿತ್ಯಂ ವ್ಯಚರಂ** = ಬಹುಕಾಲದವರೆಗೆ ಬಹುದೇಶಗಳನ್ನು ಸುತ್ತಿದೆ, **ನರಕಂ ಸತ್ಯಂ ಭವತಿ ಇತಿ** = ಈ ದುರ್ವ್ಯಾಪಾರದಿಂದ ನಿತ್ಯನರಕವು ನನಗೆ ಖಂಡಿತ

ಬರುತ್ತದೆ ಎಂದು, **ಆಲೋಚ್ಯ** = ಆಲೋಚಿಸಿ, **ಸಂಪ್ರತಿ** = ಈಗ, **ಲೋಪಾऽऽಗತ** = ಪಾಪಲೋಪಗಳಿಗಾಗಿ ಬಂದಿರುವ, **ಶರಣಾಗತಜನ** = ಮೊರೆಹೊಕ್ಕವರ, **ಭರಣಾದರವಂತಂ** = ರಕ್ಷಿಸುವುದರಲ್ಲಿ ಅತ್ಯಾದರವುಳ್ಳ, **ತ್ವಾಂ** = ತಮ್ಮನ್ನು, **ಪಿತರಂ ಮತ್ವಾ** = ನೀವೇ ತಂದೆಯೆಂದು ತಿಳಿದು, **ಅಧುನಾ ಆಗತಃ** = ಈಗ ನಿಮ್ಮ ಬಳಿ ಬಂದಿರುವೆ, ಭೋ ಗುರುರಾಜ ಜಯ ಜಯ ಪಾಲಯ ಮಾಂ.

ಕೃಷ್ಣಾವಧೂತಂ ಮಾಂ ಕುರು ಪೂತಂ, ತವ ಪದ ಪೋತಂ ತ್ವಮೇವ ಶರಣಂ ನಾನ್ಯತ್ ಕರಣಂ ಭವಭಯ ಹರಣಂ, ತ್ವದಭಯಹಸ್ತಂ, ದತ್ತಸಮಸ್ತಂ, ನಿಧೇಹಿ ಮಸ್ತೇ, ಜಗತಿ ಸಮಸ್ತೇ, ಸದೃಶಃ ಕಸ್ತೇ, ಸಮಸ್ತತಂತ್ರ - ಸ್ವತಂತ್ರ ಮಂತ್ರಾಲಯಕೃತಧಾಮನ್, ಶುಭಗುಣ ಭೂಮನ್, ಉದಾರಧೀಮಂಸ್ತವ ಮಹಿಮಾನಂ, ನಿರಸ್ತಮಾನಂ, ಪ್ರಕಾಶಮಾನಂ, ನಿಶಮ್ಯನಿಕಟಂ, ಭಕ್ತಿಪ್ರಕಟಂ, ಪ್ರಾಪ್ತಜನಾನಾಂ ಭಜಮಾನಾನಾಂ, ತ್ವರಿತಂ ನಾನಾಭೀಪ್ಸಿತದಾನಾಲಂಬಿತವಲಯಂ, ಕೃತಪಾಪಲಯಂ, ತ್ವಾಮಾऽऽಲೋಕ್ಯಾದರಾತ್ ತ್ರಿಲೋಕ್ಯಾಮನುಪಮಚರಿತಂ, ಮಮಬಹುದುರಿತಂ, ದೂರೀಕುರ್ಯಾ ದಿತಿ ಮತ್ವಾರ್ಯಾಗತಮುದ್ಧರ ಮಾಮಿತರಾಸುಗಮಾಮುದ್ಧೃತಿ ವಿದ್ಯಾಂಯಾಸ್ಯನ ವದ್ಯಾಂ, ಪ್ರತಿಹತನಿದ್ರೈಃ ಸೌಧಸಮುದ್ರೈಸ್ತುಂಗ ತರಂಗೈಃ ಪ್ರೇಮಕುರಂಗೈಃ ಸಂಭೃತಸಂಗೈಃ ಲಲಿತಾಪಾಂಗೈಃ, ಪಶ್ಯನ್ ಸದಯಂ, ಮೋದಿತ ಹೃದಯಂ, ಕುರು ತವ ಶಕ್ತಿಂ, ವಕ್ತುಮಶಕ್ತಿಂ ಭಜಮಾನೋऽಹಂ, ನಾಶಕ ಮೇಘಸ್ಫೀತಮನೀಷೋ ಹೇಯವಿಶೇಷೋ, ವಿಷಾದಪೂರೇ, ನಿರ್ಗತಸಾರೇऽಸ್ಥಿರ ಸಂಸಾರೇ, ಸುಖಾವಭಾಸಂ, ದುಃಖವಿಕಾಸಂ, ಬಹುಮನ್ವಾನಃ, ಕಿಂ ತನ್ವಾನಃ ಸುಖೀ ಭವೇಯಂ, ತವ ಪದಿ ಸೇಯಂ ಪ್ರಣಾಮರೀತಿಃ ಪಾಲಯ ಮಾಂ ಭೋः। ಜಯ ಜಯ ಗುರುರಾಜ ಗುರುರಾಜ ॥ ೩॥

ಭೋ ಗುರುರಾಜ=ಗುರುರಾಜರೇ, **ತವಪದಪೋತಂ** = ನಿಮ್ಮ ಪಾದದಾಸನಾದ ಈ ಮಗುವನ್ನು, **ಕೃಷ್ಣಾವಧೂತಂ ಮಾಂ** = ಕೃಷ್ಣಾವಧೂತನಾದ ನನ್ನನ್ನು, **ಪೂತಂ ಕುರು** = ಪವಿತ್ರೀಗೊಳಿಸಿರಿ, **ತ್ವಮೇವ ಶರಣಂ** = ನನಗೆ ನೀವೇ ಗತಿಯು, **ಭವಭಯ ಹರಣಂ** = ಸಾಂಸಾರಿಕ ಭಯವನ್ನು ಪರಿಹರಿಸಲು ಸಮರ್ಥವಾದ, **ಅನ್ಯತ್ ಕರಣಂ ನ** = ಬೇರೆ ಸಾಧನವು ಇರುವುದಿಲ್ಲ, **ದತ್ತಸಮಸ್ತಂ ತ್ವತ್ ಅಭಯಹಸ್ತಂ** = ಸಕಲ ಇಷ್ಟಾರ್ಥಗಳನ್ನು ಕೊಡಲು ಸಮರ್ಥವಾದ ನಿಮ್ಮ ಅಭಯಹಸ್ತವನ್ನು, **ಮಸ್ತೇ** = ನನ್ನ ತಲೆಯ ಮೇಲೆ, **ನಿಧೇಹಿ** = ಇಡಿರಿ, **ಜಗತಿ** = ಜಗತ್ತಿನಲ್ಲಿ, **ತೇ** = ನಿಮಗೆ, **ಸಮಃ** = ಸಮಾನನಾಗಲಿ, **ಸದೃಶಃ** = ಸದೃಶವಾದವನಾಗಲೀ, **ಕಃ** = ಯಾರಿರುವನು?

ಹೇ ಸಮಸ್ತತಂತ್ರಸ್ವತಂತ್ರ = ಸಕಲಶಾಸ್ತ್ರಗಳಲ್ಲೂ ಸ್ವತಂತ್ರರಾದ, **ಮಂತ್ರಾಲಯ ಕೃತಧಾಮನ್** = ಮಂತ್ರಾಲಯದಲ್ಲಿ ನೆಲೆಸಿರುವ, **ಶುಭಗುಣಭೂಮನ್** = ಸಮೀಚೀನ ಗುಣಗಳಿಂದ ಪೂರ್ಣರಾದವರೇ, **ಉದಾರ ಧೀಮನ್** = ವಿಶಾಲಬುದ್ಧಿಯುಳ್ಳವರೇ, **ತವ** = ತಮ್ಮದ್ದಾದ, **ನಿರಸ್ತಮಾನಂ** = ಅಳತೆಗೆ ಸಿಲುಕದ, **ಪ್ರಕಾಶಮಾನಂ** = ಶೋಭಿಸುವ, **ಮಹಿಮಾನಂ** = ಮಹಿಮಾತಿಶಯವನ್ನು, **ನಿಶಮ್ಯ** = ಕೇಳಿ, **ನಿಕಟಂ ಪ್ರಾಪ್ತ ಜನಾನಾಂ** = ತಮ್ಮ ಸಮೀಪಕ್ಕೆ ಬಂದಿರುವ ಜನರ, **ಭಕ್ತಿ ಪ್ರಕಟಂ** = ಭಕ್ತಿಯಿಂದ ಮಾತ್ರ ಪ್ರಕಟರಾಗುವ, **ಭಜಮಾನಾನಾಂ ತ್ವರಿತಂ** = ಭಜಕರಿಗೆ ವಿಷಯದಲ್ಲಿ ಅನುಗ್ರಹಿಸಲು ತ್ವರೆಯುಳ್ಳವರಾದ, **ನಾನಾಭೀಪ್ಸಿತ ದಾನಾಲಂಬಿತವಲಯಂ** = ನಾನಾಭೀಷ್ಟಗಳನ್ನು ನೀಡಲೆಂದು ಹೊಂದಿರುವ ಭಕ್ತರಿರುವ ಪ್ರದೇಶವುಳ್ಳ, **ಕೃತಪಾಪವಲಯಂ**=ಪಾಪಗಳನ್ನು ಲಯಗೊಳಿಸಿದ, **ತ್ರಿಲೋಕ್ಯಾಂ**=ಮೂರ್ಲೋಕದಲ್ಲಿಯೂ, **ಅನುಪಮಚರಿತಂ** = ಉಪಮೆಯಿಲ್ಲದ ಚಾರಿತ್ರ್ಯವುಳ್ಳ, **ತ್ವಾಂ** = ತಮ್ಮನ್ನು, **ಆದರಾತ್**= ಭಕ್ತ್ಯಾದರಗಳಿಂದ, **ಆಲೋಕ್ಯ** = ಸಂದರ್ಶಿಸಿ, **ಮಮ** = ನನ್ನ, **ಬಹುದುರಿತಂ** = ಬಹಳ ಪಾಪಗಳನ್ನು, **ದೂರೀಕುರ್ಯಾತ್ ಇತಿ** = ದೂರ ಮಾಡುವಿರೆಂದು, **ಮತ್ವಾ** =ತಿಳಿದು, **ಹೇ ಆರ್ಯ** = ಪೂಜ್ಯರಾದವರೇ, **ಆಗತಂ ಮಾಂ**=ತಮ್ಮನ್ನು ಸಮೀಪಿಸಿರುವ ನನ್ನನ್ನು, **ಉದ್ಧರ** = ಉದ್ಧಾರ ಮಾಡಿರಿ, **ಇತರಾಸುಗಮಾಂ** = ಬೇರೆಯವರಿಂದ ಪಡೆಯಲಾಗದ, **ಅನವದ್ಯಾಂ** = ಪಕ್ಷಪಾತಾದಿ ದೋಷರಹಿತವಾದ, **ಉದ್ಧೃತಿವಿದ್ಯಾಂ** = ಉದ್ಧಾರ ಮಾಡುವ ವಿದ್ಯೆಯನ್ನು, **ಯಾಸಿ** = ಹೊಂದಿರುವಿರಿ, **ಅಪ್ರತಿಹತನಿದ್ರೈಃ** = ನಿದ್ರೆಯಿಂದ ತಡೆಯಿಲ್ಲದಿರುವ, **ತುಂಗತರಂಗೈಃ** = ಎತ್ತರವಾದ ಅಲೆಗಳುಳ್ಳ, **ಸೌಧಸಮುದ್ರೈಃ** = ಅಮೃತಸಮುದ್ರದಂತಿರುವ, **ಪ್ರೇಮಕುರಂಗೈಃ** = ಪ್ರೇಮವೆಂಬ ಜಿಂಕೆಗಳಿಂದ, **ಸಂಭೃತ ಸಂಗೈಃ** = ಸಂಪಾದಿಸಲ್ಪಟ್ಟ ಸಂಗವುಳ್ಳ, **ಲಲಿತಾ ಪಾಂಗೈಃ** = ಮನೋಹರವಾದ ಕುಡಿ ನೋಟಗಳಿಂದ, **ಸದಯಂ** = ದಯೆಯಿಂದ ಕೂಡಿದ್ದು ಹೇಗೋ ಹಾಗೆ, **ಪಶ್ಯನ್** = ನೋಡುವವರಾಗಿ, **ಮೋದಿತಹೃದಯಂ** = ಸಂತುಷ್ಟ ಹೃದಯವುಳ್ಳವನನ್ನಾಗಿ, **ಕುರು** = ಮಾಡಿರಿ, **ತವಶಕ್ತಿಂ** = ತಮ್ಮ ಸಾಮರ್ಥ್ಯವನ್ನು, **ವಕ್ತುಂ ಅಶಕ್ತಿಂ** = ವರ್ಣಿಸಲು ಅಸಮರ್ಥನೆಯನ್ನು, **ಭಜಮಾನಃ ಅಹಂ** = ಹೊಂದಿರುವ ನಾನು, **ನಾಶಕಮೇಘ ಸ್ಥಿತಮನೀಷಃ** = ಪ್ರಳಯಕಾಲದ ಮೇಘದಲ್ಲಿ ಹೊಳೆಯುವ ಮಿಂಚಿನಂತೆ, ಚಂಚಲ ಬುದ್ಧಿಯುಳ್ಳ, **ಹೇಯ ವಿಶೇಷಃ**= ಹೇಯವಾದ ವಿಚಾರವೆ ವಿಶೇಷವಾಗಿ ಇರುವ, **ಅಹಂ** = ನಾನು, **ವಿಷಾದಪೂರೇ** = ದುಃಖ ಭೂಯಿಷ್ಠವಾದ, **ನಿರ್ಗತಸಾರೇ** = ಸಾರ ರಹಿತವಾದ, **ಅಸ್ಥಿರ ಸಂಸಾರೇ** = ಅಶಾಶ್ವತ ಸಂಸಾರದಲ್ಲಿ, **ಸುಖಾವಭಾಸಂ** = ಸುಖ ದಂತೆ ತೋರುವ, **ದುಃಖವಿಕಾಸಂ** =

ದುಃಖಭೂಯಿಷ್ಠವಾದ, **ಸಾಂಸಾರಿಕ ಬಹು ಮನ್ವಾನಃ** = ಸುಖವನ್ನೇ ಆದರಿಸುವವ, ನಾನು, **ಕಿಂ ತನ್ವಾನಃ ಸುಖೀಭವೇಯಂ** = ಏನನ್ನು ಮಾಡಿದರೆ ಸುಖಿಯಾದೇನು? ತಿಳಿಸಿ, **ತವ ಪದಿ** = ತಮ್ಮ ಪಾದಾರವಿಂದ ಗಳಲ್ಲಿ, **ಸಾ ಇಯಂ** = ಹಿಂದೆ ವಿವರಿಸಿದ ರೀತಿಯು, **ಪ್ರಣಾಮರೀತಿಃ** = ಪ್ರಣಾಮವನ್ನು ಮಾಡುವ ರೀತಿಯಾಗಿದೆ ಹೇ ಗುರು ರಾಜ ಜಯ ಜಯ.

ಇತಿ ಶ್ರೀಮತ್ಕೃಷ್ಣಾವಧೂತವಿರಚಿತೇ ಶ್ರೀ ರಾಘವೇಂದ್ರತಂತ್ರೇ ಪ್ರತ್ಯಕ್ಷಸಿದ್ಧಿಪ್ರದೇ ಖಗಗತಿರ್ನಾಮ ಪ್ರದಕ್ಷಿಣಾಗದ್ಯಂ ನಾಮ ದಶಮೋಽಧ್ಯಾಯಃ

ಅಥ ಏಕಾದಶ ಪಟಲಮ್

ಗಾಥಾಸ್ತುತಿಃ

ಅಜ್ಞಾನನಾಶಾಯ ವಿಜ್ಞಾನಪೂರ್ಣಾಯ
ಸುಜ್ಞಾನದಾತ್ರೇ ನಮಸ್ತೇ ಗುರೋ।
ಶ್ರೀ ರಾಘವೇಂದ್ರಾಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥೧॥

ಅರ್ಥ – ಅಜ್ಞಾನನಾಶಾಯ = ಅಜ್ಞಾನವನ್ನು ಹೋಗಲಾಡಿಸುವ, **ವಿಜ್ಞಾನ ಪೂರ್ಣಾಯ** = ವಿಶಿಷ್ಟವಾದ ಜ್ಞಾನಪೂರ್ಣರಾದ, **ಸುಜ್ಞಾನದಾತ್ರೇ** = ಸಮೀಚೀನ ವಾದ ಜ್ಞಾನವನ್ನು ಕೊಡುವ, **ಹೇ ರಾಘವೇಂದ್ರಾರ್ಯಗುರೋ** = ರಾಘವೇಂದ್ರ ಗುರುಗಳೇ, **ತೇ** = ನಿಮಗೆ, **ನಮಃ** = ನಮಸ್ಕಾರವು, **ಹೇ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಆನಂದರೂಪಾಯ ನಂದಾತ್ಮಜ ಶ್ರೀ
ಪದಾಂಭೋಜಭಾಜೇ ನಮಸ್ತೇ ಗುರೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀರಾಘವೇಂದ್ರಾರ್ಯ ಪಾಹಿ ಪ್ರಭೋ ॥೨॥

ಆನಂದರೂಪಾಯ = ಆನಂದರೂಪರಾದ, **ನಂದಾತ್ಮಜ ಶ್ರೀಪದಾಂಭೋಜ ಭಾಜೇ – ನಂದಾತ್ಮಜ** = ನಂದನಂದನನಾದ ಶ್ರೀ ಕೃಷ್ಣನ, **ಶ್ರೀಪದಾಂಭೋಜ** = ಕಾಂತಿಯುಕ್ತ ಪಾದಕಮಲಗಳನ್ನು, **ಭಾಜೇ** = ಸೇವಿಸುವ, **ಹೇ ರಾಘವೇಂದ್ರಾರ್ಯ ಗುರೋ ತೇ ನಮಃ** = ನಿಮಗೆ ಧನ್ಯವಾದಗಳು, **ಹೇ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

★ ಈ ಪಟಲದಲ್ಲಿ ಅಕಾರಾದಿ ಐವತ್ತೊಂದು ಅಕ್ಷರ ಪ್ರತಿಪಾದ್ಯನಾದ ಅಜಾದಿ ಭಗವದ್ರೂಪಗಳನ್ನು ರಾಘವೇಂದ್ರರನ್ನೂ ಸ್ತುತಿಸಿ ಇದನ್ನು 'ಗಾಥಾಸ್ತುತಿ' ಎಂದಿದ್ದಾರೆ.

ಇಷ್ಟಪ್ರದಾನೇನ ಕಷ್ಟಪ್ರಹಾಣೇನ
ಶಿಷ್ಟಸ್ತುತ ಶ್ರೀ ಪದಾಂಭೋಜ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩॥

ಇಷ್ಟಪ್ರದಾನೇನ = ಇಷ್ಟಾರ್ಥವನ್ನು ನೀಡುವುದರಿಂದಲೂ, **ಕಷ್ಟಪ್ರಹಾಣೇನ** = ಕಷ್ಟಗಳನ್ನು ನಾಶಮಾಡುವುದರಿಂದಲೂ, **ಶಿಷ್ಟಸ್ತುತ ಶ್ರೀ ಪದಾಂಭೋಜ** = ಶಿಷ್ಟರಿಂದ ಸ್ತುತಿಮಾಡಲ್ಪಟ್ಟ ಕಾಂತಿಯುಕ್ತ ಪಾದಗಳುಳ್ಳ, **ಭೋ ರಾಘವೇಂದ್ರಾರ್ಯ** ಗುರೋ ತೇ ನಮ = ರಾಘವೇಂದ್ರ ಗುರುಗಳೇ ತಮಗೆ ನಮಸ್ಕಾರವು, ಹೇ **ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಈಡೇ ಭವತ್ಪಾದಪಾಥೋಜಮಾಧ್ಯಾಯ
ಭೂಯೋಽಪಿ ಭೂಯೋ ಭಯಾತ್ ಪಾಹಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೪॥

ಭವತ್ಪಾದಪಾಥೋಜಂ = ತಮ್ಮ ಪಾದಕಮಲಗಳನ್ನು, **ಆಧ್ಯಾಯ** = ಚೆನ್ನಾಗಿ ಧ್ಯಾನಿಸಿ, **ಭೂಯೋ ಭೂಯಃ** = ಪುನಃ ಪುನಃ, **ಈಡೇ** = ಸ್ತೋತ್ರಮಾಡುವೆನು, **ಭೋ ರಾಘವೇಂದ್ರಾರ್ಯ** = ರಾಘವೇಂದ್ರ ಗುರುಗಳೇ, **ಭಯಾತ್** = ನಾನಾ ಭಯಗಳಿಂದ, **ಪಾಹಿ** = ರಕ್ಷಿಸಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಉಗ್ರಂ ಪಿಶಾಚಾದಿಕಂ ದ್ರಾವಯಿತ್ವಾಽಽಶು
ಸೌಖ್ಯಂ ಜನಾನಾಂ ಕರೋಷೀಶ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೫॥

ಉಗ್ರಂ = ಕ್ರೂರವಾದ, **ಪಿಶಾಚಾದಿಕಂ** = ಪಿಶಾಚವೇ ಮೊದಲಾದ ಮಾರೀ ಗ್ರಹಗಳನ್ನು, **ಆಶು** = ಕೂಡಲೇ, **ದ್ರಾವಯಿತ್ವಾ** = ದೂರ ಓಡಿಸಿ, **ಜನಾನಾಂ** =

ಭಕ್ತರಿಗೆ, **ಸೌಖ್ಯಂ** = ಸುಖವನ್ನು, **ಕರೋಷಿ** = ಮಾಡುವಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಊರ್ಜತ್ಕೃಪಾಪೂರ ಪಾಥೋನಿಧೇ ಮಂಕ್ಷು
ತುಷ್ಟೋಽನುಗೃಹ್ಣಾಸಿ ಭಕ್ತಾನ್ ವಿಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೬॥

ಊರ್ಜತ್ಕೃಪಾಪೂರ ಪಾಥೋನಿಧೇ - ಊರ್ಜತ್ = ಉತ್ಕೃಷ್ಟವಾದ, **ಕೃಪಾ ಪೂರ** = ದಯೆದಿಂದ, **ಪಾಥೋನಿಧೇ** = ಸಮುದ್ರದಂತಿರುವ, **ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ತುಷ್ಟಃ** = ಸಂತುಷ್ಟರಾದ ನೀವು, **ಭಕ್ತಾನ್** = ಭಕ್ತರನ್ನು, **ಮಂಕ್ಷು** = ಕೂಡಲೇ, **ಅನುಗೃಹ್ಣಾಸಿ** = ಅನುಗ್ರಹಿಸುವಿರಿ, **ಭೋ ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಋಜೂತ್ತಮ ಪ್ರಾಣ ಪಾದಾರ್ಚನ ಪ್ರಾಪ್ತ-
ಮಾಹಾತ್ಮ್ಯ ಸಂಪೂರ್ಣಸಿದ್ಧೇಶ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೭॥

ಹೇ ಸಂಪೂರ್ಣಸಿದ್ಧೇಶ = ಸಮಸ್ತ ಅಣಿಮಾದಿ ಸಿದ್ಧಿಗಳಿಗೆ ಒಡೆಯರಾದ ರಾಘವೇಂದ್ರರೇ, ತಾವು, **ಋಜೂತ್ತಮ ಪ್ರಾಣ ಪಾದಾರ್ಚನ ಪ್ರಾಪ್ತ ಮಾಹಾತ್ಮ್ಯಃ- ಋಜೂತ್ತಮ** = ಋಜುಗಳಲ್ಲಿ ಮೊದಲಿಗರಾದ, **ಪ್ರಾಣ** = ಮುಖ್ಯಪ್ರಾಣದೇವರ, **ಪಾದಾರ್ಚನ** = ಪಾದಗಳ ಸತತ ಸೇವನೆಯಿಂದ, **ಪ್ರಾಪ್ತ** = ಹೊಂದಲ್ಪಟ್ಟ, **ಮಾಹಾತ್ಮ್ಯಃ** = ಮಹಾನುಭಾವತ್ವವುಳ್ಳವರು, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಋಜುಸ್ವಭಾವಾಪ್ತಭಕ್ತೇಷ್ಟಕಲ್ಪದ್ರು-
ರೂಪೇಶಭೂಪಾದಿವಂದ್ಯ ಪ್ರಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೮॥

ಋಜುಸ್ವಭಾವಾಪ್ತಭಕ್ತೇಷ್ಟಕಲ್ಪದ್ರುರೂಪ - **ಋಜುಸ್ವಭಾವ** = ವಕ್ರವಲ್ಲದ ಶುದ್ಧಾಂತಃಕರಣದಿಂದ, **ಆಪ್ತ** = ಪ್ರಾಪ್ತರಾದ, **ಭಕ್ತ** = ಭಕ್ತರಿಗೆ, **ಇಷ್ಟಕಲ್ಪದ್ರುಮರೂಪ** = ಇಷ್ಟಾರ್ಥವನ್ನು ಕೊಡುವ ಕಲ್ಪವೃಕ್ಷದಂತಿರುವ, **ಈಶಭೂಪಾದಿವಂದ್ಯ** = ಭೂಮಿಯನ್ನು ಪಾಲಿಸುವ ರಾಜಾದಿಗಳಿಂದ ಪೂಜ್ಯರಾದ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಋದ್ಧಂ ಯಶಸ್ತೇ ವಿಭಾತಿ ಪ್ರಕೃಷ್ಟಂ
ಪ್ರಪನ್ನಾರ್ತಿಹಂತರ್ಮಹೋದಾರ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾಯ ಪಾಹಿ ಪ್ರಭೋ ॥೯॥

ಹೇ ರಾಘವೇಂದ್ರಾರ್ಯ = ರಾಘವೇಂದ್ರ ಗುರುಗಳೇ, **ತೇ** = ನಿಮ್ಮ, **ಪ್ರಕೃಷ್ಟಃ** = ಪ್ರಕರ್ಷವನ್ನು ಹೊಂದಿದ, **ಯಶಃ** = ಕೀರ್ತಿಯು, **ಋದ್ಧಂ** = ದಿನದಿನವೂ ಅಭಿವೃದ್ಧಿ ಯನ್ನು ಹೊಂದುತ್ತಿರುವುದಾಗಿ, (ಬಹಳ ಎಂಬುದನ್ನು ಅತಿಶಯಾರ್ಥದಲ್ಲಿ ಬಹಾಳ ಎನ್ನುವಂತೆ **ಋೂದ್ಧಂ** = ಋೂದ್ಧಂ ಎಂದು ಉಪಯೋಗಿಸಿದ್ದಾರೆ), **ವಿಭಾತಿ** = ತೋರುತ್ತಿದೆ, **ಹೇ ಪ್ರಪನ್ನಾರ್ತಿಹಂತಃ** = ಶರಣಾಗತರಾದವರ ದುಃಖಗಳನ್ನು ನಾಶ ಮಾಡುವ, **ಮಹೋದಾರ** = ಮಹಾ ಔದಾರ್ಯಗುಣವುಳ್ಳ, **ಶ್ರೀ ರಾಘವೇಂದ್ರಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಕ್ಲೃಪ್ತಾತಿಭಕ್ತೌಘ ಕಾಮ್ಯಾರ್ಥದಾತ-
ರ್ಭವಾಂಭೋಧಿಪಾರಂಗತ ಪ್ರಾಜ್ಞಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥೧೦॥

ಕ್ಲಪ್ತಾತಿಭಕ್ತೌಘಕಾಮ್ಯಾರ್ಥದಾತಃ - **ಕ್ಲಪ್ತ** = ನಿರ್ದಿಷ್ಟರಾದ, **ಅತಿಭಕ್ತೌಘ** = ಅತ್ಯಂತಭಕ್ತರ ಸಮೂಹಗಳಿಗೆ, **ಕಾಮ್ಯಾರ್ಥದಾತಃ** = ಇಷ್ಟಾರ್ಥಗಳನ್ನು ಕೊಡುವ, **ಭವಾಂಭೋಧಿಪಾರಂಗತ** = ಸಂಸಾರಸಾಗರವನ್ನು ದಾಟಿದವರಾದ, **ಪ್ರಾಜ್ಞ** = ಪ್ರಕೃಷ್ಟ ವಾದ ಜ್ಞಾನವುಳ್ಳ, **ಶ್ರೀ ರಾಘವೇಂದ್ರಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಏಕಾಂತಭಕ್ತಾಯ ಮಾಕಾಂತಪಾದಾಬ್ಜ
ಉಚ್ಚಾಯ ಲೋಕೇ ನಮಸ್ತೇ ವಿಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೧೧॥

ಏಕಾಂತಭಕ್ತಾಯ = ಭಗವಂತನ ಅತ್ಯಂತ ಭಕ್ತರಾದ, **ಮಾಕಾಂತಪಾದಾಬ್ಜ ಉಚ್ಚಾಯ** - **ಮಾಕಾಂತ** = ಲಕ್ಷ್ಮೀಕಾಂತನ, **ಪಾದಾಬ್ಜ** = ಪಾದಕಮಲಗಳಲ್ಲಿ, **ಉಚ್ಚಾಯ** = ಉತ್ಕೃಷ್ಟರಾದ, **ಶ್ರೀ ರಾಘವೇಂದ್ರ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಐಶ್ವರ್ಯಭೂಮನ್ ಮಹಾಭಾಗ್ಯದಾಯಿನ್
ಪರೇಷಾಂ ಚ ಕೃತ್ಯಾದಿ ನಾಶಿನ್ ಪ್ರಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೧೨॥

ಐಶ್ವರ್ಯಭೂಮನ್ = ಜ್ಞಾನೈಶ್ವರ್ಯಾದಿ ಪೂರ್ಣರಾದ, **ಮಹಾಭಾಗ್ಯದಾಯಿನ್** = ಆಯುರಾರೋಗ್ಯಾದಿ ಮಹಾಭಾಗ್ಯವನ್ನು ನೀಡುವ, **ಪರೇಷಾಂ** = ಬೇರೆಯವರು ಮಾಡಿದ, **ಕೃತ್ಯಾದಿನಾಶಿನ್** = ಮಾಟ, ಯಕ್ಷಿಣಿಗಳನ್ನು ಹೋಗಲಾಡಿಸುವ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರ ಗುರುಗಳೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಓಂಕಾರ ವಾಚ್ಯಾರ್ಥಭಾವೇನ ಭಾವೇನ
ಲಬ್ಧೋದಯಶ್ರೀಶ ಯೋಗೀಶ ಭೋ
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೧೩॥

ಓಂಕಾರ ವಾಚ್ಯಾರ್ಥಭಾವೇನ - **ಓಂಕಾರ ವಾಚ್ಯಾರ್ಥ** = ಓಂಕಾರ ಶಬ್ದದಿಂದ ಮುಖ್ಯಪ್ರತಿಪಾದ್ಯರಾದ ನಾರಾಯಣನ, **ಭಾವೇನ** = ಅಭಿಪ್ರಾಯವುಳ್ಳ, **ಭಾವೇನ** = ಭಕ್ತಿಯಿಂದ, **ಲಬ್ಧೋ ದಯಶ್ರೀಕ** = ಪ್ರಾಪ್ತವಾದ ಜ್ಞಾನಾದಿಸಂಪತ್ತುಳ್ಳ, **ಯೋಗೀಶ** = ಯೋಗಿಶ್ರೇಷ್ಠರಾದ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಔರ್ವಾನಲಪ್ರಖ್ಯ ದುರ್ವಾದಿ ದಾವಾನಲೈಃ
ಸರ್ವತಂತ್ರ ಸ್ವತಂತ್ರೇಶ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೧೪॥

ದುರ್ವಾದಿದಾವಾನಲೈಃ = ಕೆಟ್ಟವಾದಿಗಳೆಂಬ ಕಾಡ್ಗಿಚ್ಚುಗಳಿಂದ, **ಸ್ವತಂತ್ರ** = ಬಿಡಲ್ಪಟ್ಟು ಸ್ವತಂತ್ರರಾದವರೇ, **ಔರ್ವಾನಲಪ್ರಖ್ಯ** = ಅನ್ಯವಾದಿಗಳಿಗೆ ವಡವಾನಲದಂತೆ ಇರುವವರೇ, **ಸರ್ವತಂತ್ರ** = ಸಮಸ್ತಶಾಸ್ತ್ರಗಳನ್ನು ಬಲ್ಲ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಅಂಭೋಜ ಸಂಭೂತ ಮುಖ್ಯಾಮರಾರಾಧ್ಯ-
ಭೂನಾಥಭಕ್ತೇಶ ಭಾವಜ್ಞ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೧೫॥

ಅಂಭೋಜ ಸಂಭೂತ ಮುಖ್ಯಾಮರಾರಾಧ್ಯ - ಅಂಭೋಜ ಸಂಭೂತ = ಕಮಲದಲ್ಲಿ ಜನಿಸಿದ ಬ್ರಹ್ಮದೇವರೇ, **ಮುಖ್ಯ** = ಮೊದಲಾದ, **ಅಮರ** = ದೇವತೆಗಳಿಂದ, **ಆರಾಧ್ಯ** = ಸೇವಿಸಲ್ಪಡುವ, **ಭೂನಾಥ** = ಭೂಮಿಗೆ ನಾಥನಾದ ನಾರಾಯಣನ, **ಭಕ್ತ** = ಭಕ್ತರಿಗೆ, **ಈಶ** = ಮುಂದಾಳುವಾದ, **ಭಾವಜ್ಞ** = ಹರಿ ವಾಯುಗಳ ಭಾವವನ್ನು ತಿಳಿದಿರುವ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಅಸ್ತಂಗತಾನೇಕ ಮಾಯಾದಿವಾದೀಶ-
ವಿದ್ಯೋತಿತಾಶೇಷವೇದಾಂತ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೧೬॥

ಅಸ್ತಂಗತಾನೇಕಮಾಯಾದಿವಾದೀಶ - ಅಸ್ತಂಗತ = ತಲೆ ಎತ್ತದಂತೆ ಮಾಡಿದ, **ಅನೇಕ** = ಅನೇಕ ಸಂಖ್ಯೆಯ, **ಮಾಯಾದಿವಾದೀಶ** = ಮಾಯವಾದನೆ ಮೊದಲಾದ ವಾದಿಶ್ರೇಷ್ಠರುಗಳನ್ನು ನಿಗ್ರಹಿಸಿದ ಸ್ವಾಮಿಗಳೇ, **ವಿದ್ಯೋತಿತಾಶೇಷವೇದಾಂತ** =

ವಿದ್ಯೋತಿತ - ವ್ಯಾಖ್ಯಾನದ ಮೂಲಕ ಪ್ರಕಟವಾಗುವಂತೆ ಮಾಡಿದ, **ಅಶೇಷ** = ಸಮಸ್ತ, **ವೇದಾಂತ** = ವೇದಾಂತಗ್ರಂಥಗಳುಳ್ಳ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಕಾಮ್ಯಾರ್ಥದಾನಾಯ ಬದ್ಧಾದರಾಶೇಷ-
ಲೋಕಾಯ ಸೇವಾನುಸಕ್ತಾಯ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೧೭॥

ಸೇವಾನುಸಕ್ತಾಯ = ನಿಮ್ಮ ಸೇವೆಯಲ್ಲಿ ಆಸಕ್ತವಾದ, **ಅಶೇಷಲೋಕಾಯ** = ಸಕಲ ಭಕ್ತಜನರಿಗೆ, **ಕಾಮ್ಯಾರ್ಥದಾನಾಯ** = ಕಾಮಿತಾರ್ಥವನ್ನು ಕೊಡಲು, **ಬದ್ಧಾದರಃ** = ಆದರವನ್ನು ಹೊಂದಿದವರೇ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಖದ್ಯೋತಸಾರೇಷು ಪ್ರತ್ಯರ್ಥಿಸಾರ್ಥೇಷು
ಮಧ್ಯಾಹ್ನಮಾರ್ತಾಂಡಬಿಂಬಾಭ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೧೮॥

ಖದ್ಯೋತ ಸಾರೇಷು = ದೀಪದ ಹುಳದಂತೆ ಅಲ್ಪಸತ್ವವುಳ್ಳ, **ಪ್ರತ್ಯರ್ಥಿ ಸಾರ್ಥೇಷು** = ಪ್ರತಿವಾದಿಗಳ ಸಮೂಹಕ್ಕೆ, **ಮಧ್ಯಾಹ್ನಮಾರ್ತಾಂಡಬಿಂಬಾಭ** = ಮಧ್ಯಾಹ್ನ ಕಾಲದ, ಸೂರ್ಯನ ಬಿಂಬದಂತೆ ಕಾಂತಿಯುಳ್ಳವರೇ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಗರ್ವಿಷ್ಠ ಗರ್ವಾಂಬುಶೋಷಾರ್ಯಮಾತ್ಯುಗ್ರ
ನಮ್ರಾಂಬುಧೇರ್ಯಾಮಿನೀನಾಥ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೧೯॥

ಗರ್ವಿಷ್ಠಗರ್ವಾಂಬುಶೋಷಾರ್ಯಮಾತ್ಯುಗ್ರ - **ಗರ್ವಿಷ್ಠ** = ಗರ್ವ ಹೊಂದಿರುವವರ, **ಗರ್ವಾಂಬು** = ಗರ್ವವೆಂಬ ನೀರನ್ನು, **ಶೋಷ** = ಒಣಗಿಸುವುದರಲ್ಲಿ

ಅರ್ಯಮಾ = ಸೂರ್ಯನಂತೆ, **ಅತ್ಯುಗ್ರ** = ಅತಿ ಉಗ್ರರಾಗಿರುವವರೇ, **ನಮ್ರಾಂಬುಧೇಃ** = ಅತಿ ವಿನೀತರೆಂಬ ಸಮುದ್ರಕ್ಕೆ, **ಯಾಮಿನೀನಾಥ** = ಚಂದ್ರನಂತೆ ವೃದ್ಧಿ ಮಾಡುವ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಘೋರಾಮಯಧ್ವಾಂತ ವಿಧ್ವಂಸನೋದ್ದಾಮ-
ದೇದೀಪ್ಯಮಾನಾರ್ಕಬಿಂಬಾಭ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ **॥ ೨೦॥**

ಘೋರಾಮಯಧ್ವಾಂತ ವಿಧ್ವಂಸನೋದ್ದಾಮ ದೇದೀಪ್ಯಮಾನಾರ್ಕಬಿಂಬಾಭ ಭೋ = ಭಯಂಕರವಾದ ರೋಗಗಳೆಂಬ ಕತ್ತಲೆಯನ್ನು ಧ್ವಂಸಮಾಡುವುದರಲ್ಲಿ ಶ್ರೇಷ್ಠವಾದ ಅತಿಶಯವಾಗಿ ಬೆಳಗುವ ಸೂರ್ಯಬಿಂಬದ ಕಾಂತಿಯುಳ್ಳವರೇ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಜಣತ್ಕಾರ ದಂಡಾಂಕ ಕಾಷಾಯ ವಸ್ತ್ರಾಂ-
ಕ ಕೌಪೀನ ಪೀನಾಂಕ ಹಂಸಾಂಕ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ **॥ ೨೧॥**

ಜಣತ್ಕಾರ ದಂಡಾಂಕ = ಶಬ್ದಮಾಡತಕ್ಕಂಥ ದಂಡದ ಚಿಹ್ನೆ ಉಳ್ಳವರೇ, **ಕಾಷಾಯವಸ್ತ್ರಾಂಕ** = ಕಾಷಾಯವಸ್ತ್ರದಿಂದ ಅಲಂಕೃತರಾದ, **ಕೌಪೀನ ಪೀನಾಂಕ** = ಸ್ಥೂಲವಾದ ಕೌಪೀನದಿಂದ ಅಲಂಕೃತರಾದ, **ಹಂಸಾಂಕ** = ಪರಮಹಂಸಾಶ್ರಮಿಗಳಾದ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಚಂಡೀಶ ಕಾಂಡೇಶ ಪಾಖಂಡವಾಕ್ಕಾಂಡ-
ತಾಮಿಸ್ರಮಾರ್ತಾಂಡ ಪಾಷಂಡ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ **॥ ೨೨॥**

ಚಂಡೀಶ = ರುದ್ರನ ಪಾರಮ್ಯ ಹೇಳುವ ಶೈವಮತ, **ಕಾಂಡೇಶ**=ಕುತ್ಸಿತ ಕರ್ಮಗಳಿಗೆ ಮುಖ್ಯರಾದ, **ಪಾಷಂಡ** = ನಾಸ್ತಿಕ ತಮಗಳ, **ವಾಕ್ಕಾಂಡ** = ಶುಷ್ಕ ಮಾತುಗಳ ಸಮೂಹವೆಂಬ, ತರ್ಕ ಮತ ಎಂಬ, **ತಾಮಿಸ್ರ** = ಕತ್ತಲೆಗೆ, ಮಾರ್ತಾಂಡ, ಸೂರ್ಯನಂತಿರುವ, **ಪಾಖಂಡ** = ಪಾಪಗಳನ್ನು ಖಂಡಿಸುವವರೇ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಛದ್ಮಾಣುಭಾಗಂ ನ ವಿದ್ಮಸ್ತ್ವದಂತಃ
ಸುಸದ್ಮೈವ ಪದ್ಮಾಧವಸ್ಯಾಸಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ **॥ ೨೩॥**

ತ್ವದಂತಃ = ನಿಮ್ಮ ಅಂತಃಕರಣದಲ್ಲಿ, **ಛದ್ಮ** = ಮೋಸಮಾಡುವ, **ಅಣುಭಾಗಂ** = ಅಲ್ಪಪ್ರದೇಶವನ್ನು, **ನ ವಿದ್ಮಃ** = ತಿಳಿಯಲಾರೆವು, **ಪದ್ಮಾಧವಸ್ಯ** = ಪದ್ಮಾಪತಿಯಾದ ನಾರಾಯಣನಿಗೆ, **ಸುಸದ್ಮೈವ** = ಶ್ರೇಷ್ಠವಾದ ಆಶ್ರಯವಾಗಿ, **ಅಸಿ** = ಆಗಿರುವಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಜಾಡ್ಯಂ ಹಿನಸ್ತಿ ಜ್ವರಾರ್ಶಃ ಕ್ಷಯಾದ್ಯಾಶು
ತೇ ಪಾದಪದ್ಮಾಂಬುಲೇಶೋಽಪಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ **॥ ೨೪॥**

ತೇ = ನಿಮ್ಮ, **ಪಾದಪದ್ಮಾಂಬುಲೇಶೋಽಪಿ** = ಪಾದಕಮಲದಲ್ಲಿರುವ ಒಂದು ಹನಿ ನೀರೂ ಕೂಡ, **ಜ್ವರಾರ್ಶಃಕ್ಷಯಾದಿ** = ಜ್ವರ - ನಾನಾ ವಿಧವಾದ ಜ್ವರಗಳು, **ಅರ್ಶ** = ಮೂಲವ್ಯಾಧಿ, **ಕ್ಷಯಾದಿ** = ಕ್ಷಯರೋಗವೇ ಮೊದಲಾದ, **ಜಾಡ್ಯಂ** = ರೋಗಗಳನ್ನು, ಹಿನಸ್ತಿ = ಪರಿಹರಿಸುತ್ತದೆ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಝುಷಧ್ವಜೇಯೇಷ್ವಲಭ್ಯೋರುಚೇತಃ
ಸಮಾರೂಢಮಾರೂಢವಕ್ಷೋಂಗ ಭೋ।

ಶ್ರೀ ರಾಘವೇಂದ್ರಾಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೨೫॥

ಝಷಧ್ವಜೇಯೇಷ್ವಲಭ್ಯೋರುಚೇತಃ ಸಮಾರೂಢಮಾರೂಢವಕ್ಷೋಂಗ = ಝಷಧ್ವಜೇಯ = ಮನ್ಮಥನ ಸಂಬಂಧಿಯಾದ, ಇಷು = ಬಾಣಗಳಿಗೆ, **ಅಲಭ್ಯ** = ಅಲಭ್ಯವಾದ (ಸಿಗದ), **ಉರುಚೇತ** – **ಉರು** = ಉತ್ಕೃಷ್ಟವಾದ, **ಚೇತಃ** = ಮನಸ್ಸುಳ್ಳವರೇ, **ಸಮಾರೂಢಮಾರೂಢವಕ್ಷ್ಯಃ** = **ಸಮಾರೂಢ** = ಚೆನ್ನಾಗಿ ಧರಿಸಿರುವ, **ಮಾಽಽರೂಢ ಮಾ** = ಲಕ್ಷ್ಮೀದೇವಿಯನ್ನು, **ಆರೂಢ** = ಭಗವಂತನನ್ನು ಧರಿಸಿರುವ, **ವಕ್ಷ** = ಹೃದಯವೆಂಬ ಅವಯವವುಳ್ಳವರೇ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಇಛಾಂಚಾವಿಹೀನಾಯ ಯಾದೃಚ್ಛಿಕ ಪ್ರಾಪ್ತ-
ತುಷ್ಟಾಯ ಸದ್ಯಃ ಪ್ರಪನ್ನೋಽಸಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೨೬॥

ಇಛಾಂಚಾವಿಹೀನಾಯ = ಏನನ್ನೂ ಬೇಡದೇ ಇರುವ, **ಯಾದೃಚ್ಛಿಕ ಪ್ರಾಪ್ತ ತುಷ್ಟಾಯ** = ಯದೃಚ್ಛಾಲಬ್ಧವಾದ್ದರಿಂದಲೇ ಸಂತುಷ್ಟನಾದ ಭಕ್ತನಿಗೆ, **ಸದ್ಯಃ** = ಕೂಡಲೇ, **ಪ್ರಸನ್ನೋಽಸಿ** = ಪ್ರಸನ್ನರಾಗುವಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಟೀಕಾರಹಸ್ಯಾರ್ಥ ವಿಖ್ಯಾಪನಗ್ರಂಥ
ವಿಸ್ತಾರಲೋಕೋಪಕರ್ತಃ ಪ್ರಭೋ।
ಶ್ರೀ ರಾಘವೇಂದ್ರಾಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೨೭॥

ಟೀಕಾರಹಸ್ಯಾರ್ಥವಿಖ್ಯಾಪನಗ್ರಂಥವಿಸ್ತಾರಲೋಕೋಪಕರ್ತಃ – **ಟೀಕಾ** = ಜಯತೀರ್ಥರಿಂದ ರಚಿತವಾದ ಸುಧಾದಿಗ್ರಂಥಗಳ, **ರಹಸ್ಯಾರ್ಥ** = ಆಂತರಿಕಾರ್ಥಗಳನ್ನು, **ವಿಖ್ಯಾಪನ** = ತಿಳಿಸುವ, **ಗ್ರಂಥವಿಸ್ತಾರ** = ಪರಿಮಳಾದಿ ಗ್ರಂಥರಚನೆಯಿಂದ, **ಲೋಕೋಪಕರ್ತಃ** = ಸಜ್ಜನವೃಂದಕ್ಕೆ ಮಹದುಪಕಾರವನ್ನು ಮಾಡಿರುವ, **ಶ್ರೀ**

ರಾಘವೇಂದ್ರಾರ್ಯ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಠಂಕುರ್ವರೀಣಾಮಮೇಯ ಪ್ರಭಾವೋ-
ದ್ಧರಾಪಾರ ಸಂಸಾರತೋ ಮಾಂ ಪ್ರಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೨೮॥

ಅಮೇಯಪ್ರಭಾವ = ತಿಳಿಯಲು ಅಸಾಧ್ಯವಾದ ಪ್ರಭಾವವುಳ್ಳ ರಾಘವೇಂದ್ರರೇ, **ಅರೀಣಾಂ** = ಶತ್ರುಗಳಿಗೆ, **ಠಂಕುರು** = ಅವರನ್ನು ಓಡಿಸುವಂತೆ ಠಂಕಾರವನ್ನು ಮಾಡಿರಿ, **ಅಪಾರಸಂಸಾರತಃ** = ಪಾರುಗಾಣದ ಸಂಸಾರದೆಶೆಯಿಂದ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರಮಾಡಿರಿ, ಶ್ರೀ ರಾಘವೇಂದ್ರಾರ್ಯ **ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಡಾಕಿನ್ಯಪಸ್ಮಾರಘೋರಾದಿಕೋಗ್ರ-
ಗ್ರಹೋಚ್ಚಾಟನೋದಗ್ರವೀರಾಗ್ರ್ಯ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೨೯॥

ಡಾಕಿನ್ಯಪಸ್ಮಾರ ಘೋರಾದಿಕೋಗ್ರಗ್ರಹೋಚ್ಚಾಟನೋದಗ್ರ, ವೀರಾಗ್ರ್ಯ - **ಡಾಕಿನೀ** = ಮಾರಿಯು, **ಅಪಸ್ಮಾರ** = ಮೂರ್ಛೆ, **ಘೋರಾದಿಕ** = ಕ್ರೂರವಾದ ಪಿಶಾಚಾದಿಗಳೇ ಮೊದಲಾದ, **ಉಗ್ರಗ್ರಹ** = ಭಯಂಕರವಾದ ಗ್ರಹಗಳು, ಇವುಗಳ **ಉಚ್ಚಾಟನ** = ಓಡಿಸುವುದರಲ್ಲಿ, **ಉದಗ್ರ** = ಪ್ರಧಾನರಾದ, **ವೀರಾಗ್ರ್ಯ** = ವೀರರಲ್ಲಿ ಮೊದಲಿಗರೇ, ಶ್ರೀ ರಾಘವೇಂದ್ರಾರ್ಯ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಢಕ್ಕಾದಿಕಧ್ವಾನ ವಿದ್ರಾವಿತಾನೇಕ-
ದುರ್ವಾದಿಗೋಮಾಯುಸಂಘಾತ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩೦॥

ಢಕ್ಕಾದಿಕಧ್ವಾನ ವಿದ್ರಾವಿತಾನೇಕ ದುರ್ವಾದಿಗೋಮಾಯುಸಂಘಾತ = ಢಕ್ಕಾದಿಕಧ್ವಾನ = ಢಕ್ಕೆಯೆ ಮೊದಲಾದ ವಾದ್ಯಗಳ ಶಬ್ದದಿಂದ, ವಿದ್ರಾವಿತ = ದೂರ ಓಡಿಸಲ್ಪಟ್ಟ ಅನೇಕ, ದುರ್ವಾದಿ = ಮಾಯಾವಾದಿಯೇ ಮೊದಲಾದ ಅನೇಕ ಕೆಟ್ಟ ವಾದಿಗಳೆಂಬ, ಗೋಮಾಯು = ನರಿಗಳ, ಸಂಘಾತ = ಸಮೂಹವುಳ್ಳ, ಶ್ರೀ ರಾಘವೇಂದ್ರಾರ್ಯ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, ಪಾಹಿ = ನಮ್ಮನ್ನು ರಕ್ಷಿಸಿರಿ.

ಣಾತ್ಮಾದಿಮಾತ್ರರ್ಣಲಕ್ಷ್ಯಾರ್ಥಕ ಶ್ರೀ-
ಪತಿಧ್ಯಾನ ಸನ್ನದ್ಧಧೀಸಿದ್ಧ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩೦॥

ಣಾತ್ಮಾದಿಮಾತ್ರರ್ಣಲಕ್ಷ್ಯಾರ್ಥಕ ಶ್ರೀಪತಿ ಧ್ಯಾನ ಸನ್ನದ್ಧಧೀಸಿದ್ಧ- ಣಾತ್ಮಾದಿ ಮಾತ್ರರ್ಣ = 'ಣಂ ಣಾತ್ಮನೇ ನಮಃ' ಇತ್ಯಾದಿ ಮಾತೃಕಾನ್ಯಾಸದಿಂದ, ಲಕ್ಷ್ಯಾರ್ಥಕ= ಪ್ರತಿಪಾದ್ಯರಾದ, ಶ್ರೀಪತಿ = ಶ್ರೀಮನ್ನಾರಾಯಣನ, ಧ್ಯಾನ = ಧ್ಯಾನದಲ್ಲಿ, ಸನ್ನದ್ಧ = ಉದ್ಯುಕ್ತನಾದ, ಧೀ = ಬುದ್ಧಿಯುಳ್ಳ, ಸಿದ್ಧ = ಸಿದ್ಧಪುರುಷರೇ, ಶ್ರೀ ರಾಘವೇಂದ್ರಾರ್ಯಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, ಪಾಹಿ = ನಮ್ಮನ್ನು ರಕ್ಷಿಸಿರಿ.

ತಾಪತ್ರಯ ಪ್ರೌಢಬಾಧಾಭಿಭೂತಸ್ಯ
ಭಕ್ತಸ್ಯ ತಾಪತ್ರಯಂ ಹಂಸಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩೧॥

ತಾಪತ್ರಯ ಪ್ರೌಢಬಾಧಾಭಿಭೂತಸ್ಯ = ತಾಪತ್ರಯ = ಆಧ್ಯಾತ್ಮಿಕಾದಿ ತಾಪಗಳಿಂದ ಬರುವ, ಪ್ರೌಢಬಾಧ = ಭಯಂಕರವಾದ ಬಾಧೆಯಿಂದ, ಅಭಿಭೂತಸ್ಯ = ಆಕ್ರಮಿಸಲ್ಪಟ್ಟ, ಭಕ್ತಸ್ಯ = ಭಕ್ತನ, ತಾಪತ್ರಯಂ = ತಾಪತ್ರಯವನ್ನು, ಹಂಸಿ = ನಾಶ ಮಾಡುವಿರಿ, ಶ್ರೀ ರಾಘವೇಂದ್ರಾರ್ಯ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, ಪಾಹಿ = ನಮ್ಮನ್ನು ರಕ್ಷಿಸಿರಿ.

ಸ್ಥಾನತ್ರಯ ಪ್ರಾಪಕಜ್ಞಾನದಾತಃ
ಸ್ತ್ರಿಧಾಮಾಂಘ್ರಿಭಕ್ತಿಂ ಪ್ರಯಚ್ಛ ಪ್ರಭೋ।

ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩೩॥

ಸ್ಥಾನತ್ರಯಪ್ರಾಪಕಜ್ಞಾನದಾತಃ = **ಸ್ಥಾನತ್ರಯ** - ಶ್ವೇತದ್ವೀಪಾನಂತಾಸನ ವೈಕುಂಠಗಳೆಂಬ ಮೂರು ಸ್ಥಾನಗಳನ್ನು, **ಪ್ರಾಪಕ** = ತಲುಪಿಸುವಂತಹ, **ಜ್ಞಾನದಾತಃ** = ಪರಮಾತ್ಮನ ಜ್ಞಾನವನ್ನು ನೀಡುವ, **ಶ್ರೀ ರಾಘವೇಂದ್ರಾರ್ಯ** = ಶ್ರೀ ರಾಘವೇಂದ್ರರೇ, **ತ್ರಿಧಾಮಾಂಘ್ರಿಭಕ್ತಿಂ** = ಮೂರು ಆವಾಸಸ್ಥಾನಗಳುಳ್ಳ ಭಗವಂತನ ಪಾದಗಳಲ್ಲಿ ಭಕ್ತಿಯನ್ನು, **ಪ್ರಯಚ್ಛ** = ಕೊಡಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ದಾರಿದ್ರ್ಯ ದಾರಿದ್ರ್ಯ ಯೋಗೇನ ಯೋಗೇನ
ಸಂಪನ್ನಸಂಪತ್ತಿಮಾಧೇಹಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೩೪॥

ದಾರಿದ್ರ್ಯ ದಾರಿದ್ರ್ಯ ಯೋಗೇನ = ಅತ್ಯಂತ ದಾರಿದ್ರ್ಯದಿಂದ ಪೀಡೆ ಹೊಂದಿದ ನನ್ನನ್ನು, **ಯೋಗೇನ** = ತಮ್ಮ ಯೋಗಶಕ್ತಿಯಿಂದ, **ಸಂಪನ್ನ ಸಂಪತ್ತಿಂ** = ಸಂಪತ್ತನ್ನು ಹೊಂದಿದವನನ್ನಾಗಿ, **ಆಧೇಹಿ** = ಮಾಡಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಧಾವಂತಿ ತೇ ನಾಮಧೇಯಾಭಿಸಂಕೀರ್ತ್ಯ
ನೇನೈನಸಾಮಾಶು ವೃಂದಾನಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಬೋ ॥ ೩೫॥

ಹೇ **ಶ್ರೀ ರಾಘವೇಂದ್ರಾರ್ಯ** = ರಾಘವೇಂದ್ರರೇ, **ತೇ** = ನಿಮ್ಮ, **ನಾಮಧೇಯಾಭಿಸಂಕೀರ್ತನೇನ** = ನಾಮಧೇಯವನ್ನು ಉಚ್ಚಾರದಿಂದಲೇ, **ಏನಸಾಂ** = ಪಾಪಗಳ, **ವೃಂದಾನಿ** = ಸಮೂಹಗಳು, **ಧಾವಂತಿ** = ದೂರ ಓಡುತ್ತವೆ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ನಾನಾವಿಧಾನೇಕಜನ್ಮಾದಿದುಃಖೌಘ-
ತಃ ಸಾಧ್ವಸಂ ಸಂಹರೋದಾರ ಭೋ
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ || ೩೬||

ನಾನಾವಿಧಾನೇಕಜನ್ಮಾದಿ ದುಃಖೌಘತಃ = ನಾನಾವಿಧ = ಅನೇಕ ರೀತಿಯಾದ, **ಅನೇಕ** = ಬಹಳ ವಿಧವಾದ, **ಜನ್ಮಾದಿದುಃಖೌಘತಃ** = ನಾಯಿ ನರಿ ಮುಂತಾದ ಯೋನಿಯಲ್ಲಿ ಬರುವ ದುಃಖ ಸಮೂಹದಿಂದ ಬರುವ, **ಸಾಧ್ವಸಂ** = ಭಯವನ್ನು, **ಹೇ ಉದಾರ** = ಉದಾರಗಳುಣಶಾಲಿಗಳೇ, **ಸಂಹರ** = ಪರಿಹರಿಸಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ರಕ್ಷಿಸಿರಿ.

ಪಾತಾ ತ್ವಮೇವೇತಿ ಮಾತಾ ತ್ವಮೇವೇತಿ
ಮಿತ್ರಂ ತ್ವಮೇವೇತ್ಯಹಂ ವೇದ್ಮಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ || ೩೭||

ಶ್ರೀ ರಾಘವೇಂದ್ರಾರ್ಯ = ಶ್ರೀ ರಾಘವೇಂದ್ರ ಗುರುಗಳೇ, **ತ್ವಮೇವ** = ನೀವೇ, **ಪಾತಾ ಇತಿ** = ರಕ್ಷಣೆ ಮಾಡುವ ತಂದೆಯೆಂದು, **ತ್ವಮೇವ ಮಾತಾ** = ನೀವೇ ಜ್ಞಾನವನ್ನು ನೀಡುವ ತಾಯಿಯೆಂದು, **ತ್ವಮೇವ** = ನೀವೇ, **ಮಿತ್ರಂ** = ಆಪತ್ಕಾಲದ ಸ್ನೇಹಿತರೆಂದು, **ಅಹಂ** = ನಾನು, ವೇದ್ಮಿ ತಿಳಿದಿರುವೆನು, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಫಾಲಸ್ಥದುರ್ದೈವವರ್ಣಾವಲೀಕಾರ್ಯ-
ಲೋಪೇಽಪಿ ಭಕ್ತಸ್ಯ ಶಕ್ತೋಽಸಿ ಭೋ
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ || ೩೮||

ಫಾಲಸ್ಥದುರ್ದೈವ ವರ್ಣಾವಲೀ ಕಾರ್ಯಲೋಪೇ - **ಫಾಲಸ್ಥ** = ಹಣೆಯಲ್ಲಿ ಬರೆದಿರುವ, **ದುರ್ದೈವ** = ದೌರ್ಭಾಗ್ಯಸೂಚಕವಾದ, **ವರ್ಣಾವಲೀ** = ಅಕ್ಷರ

ಸಮೂಹಗಳ, **ಕಾರ್ಯ** = ಫಲರೂಪಕಾರ್ಯವನ್ನು, **ಲೋಪೇ ಅಪಿ** = ಇಲ್ಲದಂತೆ ಮಾಡಲೂ, **ಶಕ್ತಃ ಅಸಿ** = ಸಮರ್ಥರಾಗಿರುವಿರಿ.

ಬದ್ಧೋಽಸ್ಮಿ ಸಂಸಾರಪಾಶೇನ ತೇಽಂಘ್ರಿಂ
ವಿನ್ಯಾಽನ್ಯಾಗತಿರ್ನೇತ್ಯವೇಮಿ ಪ್ರಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೩೯॥

ಭೋ ಪ್ರಭೋ = ರಾಘವೇಂದ್ರ ಪ್ರಭುಗಳೇ, **ಅಹಂ** = ನಾನು, **ಸಂಸಾರ ಪಾಶೇನ** = ಭವಪಾಶದಿಂದ, **ಬದ್ಧಃ ಅಸ್ಮಿ** = ಕಟ್ಟಲ್ಪಟ್ಟಿದ್ದೇನೆ, **ತೇ** = ನಿಮ್ಮ, **ಅಂಘ್ರಿಂ ವಿನಾ** = ಪಾದಗಳ ಹೊರತಾಗಿ, **ಅನ್ಯಾ** = ಬೇರೆಯಾದ, **ಗತಿಃ** = ಮಾರ್ಗವು, **ನ ಇತಿ** = ಇಲ್ಲವೆಂದು, **ಅವೈಮಿ** = ತಿಳಿದಿರುವೆನು, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಭಾವಂ ಭಜಾಮೀಹ ವಾಚಾ ವದಾಮಿ ತ್ವ-
ದೀಯಂ ಪದಂ ದಂಡವತ್ ಸ್ವಾಮಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೪೦॥

ಇಹ = ಈ ಲೋಕದಲ್ಲಿ, **ಭಾವಂ** = ಗತಿಯಾಗಿರುವ, **ತ್ವದೀಯಂ ಪದಂ** = ತಮ್ಮ ಪಾದಗಳನ್ನು, **ವಾಚಾ** = ಸ್ತುತಿಗಳಿಂದ, **ವದಾಮಿ** = ಕೊಂಡಾಡುವೆನು, **ದಂಡ ವತ್ ಭಜಾಮಿ** = ಸಾಷ್ಟಾಂಗಪ್ರಣಾಮಗೈವೆ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಮಾನ್ಯೇಷು ಮಾನ್ಯೋಽಸಿ ಮತ್ಯಾ ಚ ಧೃತ್ಯಾ ಚ
ಮಾಮದ್ಯ ಮಾನ್ಯಂ ಕುರು ದ್ರಾಗ್ ವಿಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೪೧॥

ಮತ್ಯಾ = ಸಮೀಚೀನವಾದ ಬುದ್ಧಿಯಿಂದ, **ಧೃತ್ಯಾ ಚ** = ಜಿಹ್ವೆ ಹಾಗೂ ಉಪಸ್ಥ ಇಂದ್ರಿಯವನ್ನು ಗೆಲ್ಲುವುದರಿಂದಲೂ, **ಮಾನ್ಯೇಷು** = ಪೂಜ್ಯರಾದವರಲ್ಲಿ,

ಮಾನ್ಯೋಽಸಿ = ಪೂಜ್ಯರಾಗಿರುವಿರಿ **ಅದ್ಯ** = ಈಗ, **ಮಾಂ** = ನನ್ನನ್ನು, **ದ್ರಾಗ್** = ಈ ಕೂಡಲೇ, **ಮಾನ್ಯಂ** = ಪೂಜ್ಯನನ್ನಾಗಿ, **ಕುರು** = ಮಾಡಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಯಂ ಕಾಮಮಾಕಾಮಯೆ ತಂ ನ ಚಾಪಂ
ತತಸ್ತ್ವಂ ಶರಣ್ಯೋ ಭವತ್ಯೇಮಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೪೨॥

ಯಂ ಕಾಮಂ = ಯಾವ ಕಾಮನೆಯನ್ನು, **ಆಕಾಮಯೇ** = ಇಚ್ಛಿಸುವೆನೋ, ಆ ಕಾಮನೆಯನ್ನು, **ನ ಚಾಪಂ** = ಹೊಂದಲಿಲ್ಲ, **ತತಃ** = ಆದ್ದರಿಂದಲೇ, **ತ್ವಂ** = ನೀವು, **ಶರಣ್ಯೋ ಭವ ಇತಿ** = ರಕ್ಷಕರಾಗಿರೆಂದು, **ಏಮಿ** = ನಿಮ್ಮನ್ನು ಸಮೀಪಿಸಿರುವೆ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ರಾಜಾದಿವಶ್ಯಾದಿ ಕುಕ್ಷಿಂಭರಾನೇಕ-
ಚಾತುರ್ಯವಿದ್ಯಾಸು ಮೂಢೋಽಸ್ಮಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೪೩॥

ಹೇ ಪ್ರಭೋ = ರಾಘವೇಂದ್ರರೇ, **ಅಹಂ** = ನಾನು, **ರಾಜಾದಿವಶ್ಯಾದಿ ಕುಕ್ಷಿಂಭರಾನೇಕ ಚಾತುರ್ಯ ವಿದ್ಯಾಸು** = **ರಾಜಾದಿ** = ರಾಜರೇ ಮೊದಲಾದವರನ್ನು, **ವಶ್ಯಾದಿ** = ವಶಮಾಡಿಕೊಳ್ಳುವಿಕೆಯೇ ಮೊದಲಾದ, **ಕುಕ್ಷಿಂಭರ** = ಉದರ ಪೋಷಣೆ ಮಾಡಿಕೊಳ್ಳುವ, **ಅನೇಕ ಚಾತುರ್ಯ** = ಅನೇಕವಿಧವಾದ ಚತುರತೆಯ, **ವಿದ್ಯಾಸು** = ವಿದ್ಯೆಗಳಲ್ಲಿ, **ಮೂಢಃ ಅಸ್ಮಿ** = ಮೂರ್ಖನಾಗಿದ್ದೇನೆ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಲಕ್ಷೇಷು ತೇ ಭಕ್ತವರ್ಗೇಷು ಕುರ್ವೇಕ-
ಲಕ್ಷ್ಯಂ ಕೃಪಾಪಾಂಗಲೇಶಸ್ಯ ಮಾಂ

ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ **॥ ೪೪॥**

ಹೇ ಪ್ರಭೋ = ಪ್ರಭುಗಳೇ, **ತೇ** = ನಿಮ್ಮ, **ಲಕ್ಷ್ಯೇಷು** = ಲಕ್ಷಸಂಖ್ಯಾಕರಾದ, **ಭಕ್ತವರ್ಗೇಷು** = ಭಕ್ತರ ಸಮೂಹದಲ್ಲಿ, **ಮಾಂ** = ನನ್ನನ್ನು, **ಕೃಪಾಪಾಂಗಲೇಶಸ್ಯ** = ಅಲ್ಪಪ್ರಮಾಣದ ದಯಾ ಎಂಬ ಕುಡಿನೋಟಕ್ಕೆ, ಏಕಲಕ್ಷ್ಯಂ= ಮುಖ್ಯಪಾತ್ರನನ್ನಾಗಿ, **ಕುರು** = ಮಾಡಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ವಾರಾಂಗನಾದ್ಯೂತ ಚೌರ್ಯಾನ್ಯದಾರಾ-
ರತತ್ವಾದ್ಯವದ್ಯತ್ವತೋ ಮಾಂ ಪ್ರಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ **॥ ೪೫॥**

ವಾರಾಂಗನಾದ್ಯೂತ ಚೌರ್ಯಾನ್ಯದಾರಾರತತ್ವಾದ್ಯವದ್ಯತ್ವತಃ – **ವಾರಾಂಗನಾ** – ಗಣಿಕಾಸ್ತ್ರೀಯರು (ವೇಶ್ಯೆಯರು), **ದ್ಯೂತ** = ಜೂಜು, **ಚೌರ್ಯ** = ಕಳ್ಳತನ, **ಅನ್ಯ ದಾರಾ** = ಪರಸ್ತ್ರೀಯರು ಇವರುಗಳಲ್ಲಿ, **ರತತ್ವಾದಿ** = ಆಸಕ್ತರಾಗಿರುವಿಕೆ ಮೊದಲಾದ, **ಅವದ್ಯತ್ವತಃ** = ದೋಷಗಳಿಂದ, **ಮಾಂ** = ನನ್ನನ್ನು, ಶ್ರೀ ರಾಘವೇಂದ್ರಾರ್ಯ **ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ರಕ್ಷಿಸಿರಿ.

ಶಕ್ತೋ ನ ಶಕ್ತಿಂ ತವ ಸ್ತೋತುಮಾಧ್ಯಾತು-
ಮೀದೃಕ್ವಹಂ ಕರೋಮೀಶ ಕಿಂ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ **॥ ೪೬॥**

ತವ = ತಮ್ಮನ್ನು, **ಸ್ತೋತುಂ** = ಸ್ತೋತ್ರಮಾಡಲು, **ನ ಶಕ್ತಃ** = ಸಮರ್ಥನಾಗಿಲ್ಲ, **ಆಧ್ಯಾತುಂ** = ಧ್ಯಾನ ಮಾಡಲು, **ನ ಶಕ್ತಿಃ** = ಶಕ್ತಿಯಿಲ್ಲ, **ಈದೃಕ್ ಅಹಂ** = ಹೀಗೆ ಅಸಮರ್ಥನಾದ ನಾನು, **ಕರೋಮಿ ಕಿಂ?** = ಏನನ್ನು ಮಾಡಬೇಕು, ತಿಳಿಸಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಷಡ್ವೈರಿವರ್ಗಂ ಮಮಾರಾನ್ನಿರಾಕುರ್ವ-
ಮಂದೋ ಹರೇರಾಂಘ್ರಿರಾಗೋಽಸ್ತು ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ **॥ ೪೭॥**

ಷಡ್ವೈರಿವರ್ಗಂ = ಕಾಮಕ್ರೋಧಾದಿ ಆರು ಶತ್ರುಸಮೂಹವನ್ನು, **ಮಮ** = ನನ್ನ, **ಆರಾತ್** = ಸಮೀಪದಿಂದಲೇ, **ನಿರಾಕುರು** = ನಿರಾಕರಿಸಿರಿ, **ಹರೇಃ** = ಶ್ರೀ ಹರಿಯ, **ಅಂಘ್ರಿರಾಗಃ** = ಪಾದದಲ್ಲಿ ಅನುರಾಗವು, **ಅಮಂದಃ** = ಕಡಮೆಯಾಗದಂತೆ, **ಅಸ್ತು** = ಇರಲಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಸನ್ಮಾರ್ಗಸಚ್ಛಾಸ್ತ್ರ ಸತ್ಸಂಗ ಸದ್ಭಕ್ತಿ-
ಸಜ್ಜ್ಞಾನ ಸಂಪತ್ತಿಮಾಧೇಹಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ **॥ ೪೮॥**

ಭೋ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, ತಾವು, **ಸನ್ಮಾರ್ಗ ಸಚ್ಛಾಸ್ತ್ರ ಸತ್ಸಂಗ ಸದ್ಭಕ್ತಿ ಸಜ್ಜ್ಞಾನ ಸಂಪತ್ತಿಂ** – **ಸನ್ಮಾರ್ಗ** = ಸಜ್ಜನರ ಮಾರ್ಗವು, **ಸಚ್ಛಾಸ್ತ್ರಂ** = ಸಮೀಚೀನ ಶಾಸ್ತ್ರಗಳು, **ಸತ್ಸಂಗ** = ಸಜ್ಜನರ ಸಂಗತಿಯು, **ಸದ್ಭಕ್ತಿ** = ಸಮೀಚೀನವಾದ ಭಕ್ತಿಯು, **ಸಜ್ಜ್ಞಾನ** = ಸಮ್ಯಕ್ ಜ್ಞಾನವು, ಇವುಗಳ, **ಸಂಪತ್ತಿಂ** = ಸಂಪತ್ತನ್ನು, **ಆಧೇಹಿ** = ಉಂಟುಮಾಡಿರಿ, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಹಾಸ್ಯಾಸ್ಪದೋಽಹಂ ಸಮಾನೇಷ್ವಕೀರ್ತ್ಯಾ
ತವಾಂಘ್ರಿಂ ಪ್ರಪನ್ನೋಽಸ್ಮಿ ಸಂರಕ್ಷಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ **॥ ೪೯॥**

ಅಹಂ = ನಾನು, **ಅಕೀರ್ತ್ಯಾ** = ಅಪಕೀರ್ತಿಯಿಂದ, **ಸಮಾನೇಷು** = ನನಗೆ ಸಮಾನರಾದವರಲ್ಲಿ, **ಹಾಸ್ಯಾಸ್ಪದಃ** = ಅಪಹಾಸ್ಯಕ್ಕೆ ಗುರಿಯಾಗಿ, **ತವ** = ನಿಮ್ಮ,

ಅಂಘ್ರಿಂ = ಪಾದಪದ್ಮಗಳನ್ನು, **ಪ್ರಪನ್ನಃ ಅಸ್ಮಿ** = ಶರಣುಹೊಂದಿರುವೆನು, **ಶ್ರೀ ರಾಘವೇಂದ್ರಾರ್ಯ ಪ್ರಭೋ** = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಲಕ್ಷ್ಮೀವಿಹೀನತ್ವ ಹೇತೋಃ ಸ್ವಕೀಯೈಃ
ಸುದೂರೀಕೃತೋಽಸ್ಮ್ಯದ್ಯ ವಾಚ್ಯೋಽಸ್ಮಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿಪ್ರಭೋ ॥ ೩೦॥

ಅಹಂ = ನಾನು, **ಲಕ್ಷ್ಮೀವಿಹೀನತ್ವ ಹೇತೋಃ** = ಧನರಹಿತನಾದ್ದರಿಂದ, **ಸ್ವಕೀಯೈಃ** = ನನ್ನ ಬಂಧುಗಳಿಂದಲೂ, **ಸುದೂರೀಕೃತಃ** = ದೂರಮಾಡಲ್ಪಟ್ಟವನಾಗಿ, **ಅಸ್ಮಿ** = ಆಗಿರುವೆನು, **ಅದ್ಯ** = ಈಗ, **ವಾಚ್ಯಃ ಅಸ್ಮಿ** = ನಿಂದಾವಚನಗಳಿಗೆ ವಾಚ್ಯನಾಗಿ, **ಅಸ್ಮಿ** = ಆಗಿದ್ದೇನೆ, ಶ್ರೀರಾಘವೇಂದ್ರಾ ರ್ಯಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಕ್ಷೇಮಂಕರಸ್ತ್ವಂ ಭವಾಂಭೋಧಿಮಜ್ಜ-
ಜ್ಜನಾನಾಮಿತಿ ತ್ವಾಂ ಪ್ರಪನ್ನೋಽಸ್ಮಿ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩೧॥

ತ್ವಂ = ನೀವು, **ಭವಾಂಭೋಧಿಮಜ್ಜಜ್ಜನಾನಾಂ** = ಭವಾಂಬೋಧಿ = ಭವ ಸಾಗರದಲ್ಲಿ, **ಮಜ್ಜತ್** = ಮುಳುಗುತ್ತಿರುವ, **ಜನಾನಾಂ** = ಜನರಿಗೆ, **ಕ್ಷೇಮಂಕರಃ** = ಕ್ಷೇಮವನ್ನುಂಟುಮಾಡುವವರೆಂದು, **ತ್ವಾಂ** = ತಮ್ಮನ್ನು, **ಪ್ರಪನ್ನಃ ಅಸ್ಮಿ** = ಶರಣಾಗತನಾಗಿದ್ದೇನೆ, ಶ್ರೀ ರಾಘವೇಂದ್ರಾರ್ಯ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಪಾಹಿ** = ನಮ್ಮನ್ನು ರಕ್ಷಿಸಿರಿ.

ಕೃಷ್ಣಾವಧೂತೇನ ಗೀತೇನ ಮಾತ್ರಕ್ಷ-
ರಾದ್ಯೇನ ಗಾಥಾಸ್ತವೇನೇಢ್ಯ ಭೋ।
ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ
ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ ॥ ೩೨॥

ಯೇನ = ಯಾವ, **ಕೃಷ್ಣಾವಧೂತೇನ** = ಕೃಷ್ಣಾವಧೂತರಿಂದ, **ಮಾತ್ರಕ್ಷರಾತ್** = ಅಕಾರದಿಂದ ಕ್ಷಕಾರದವರೆಗೆ ಐವತ್ತೊಂದು ಅಕ್ಷರಗಳಿಂದ, **ಗೀತೇನ** = ಸ್ತೋತ್ರ ಮಾಡಿದ, **ಗಾಥಾಸ್ತವೇನ** = ಹಾಡುಗಬ್ಬದಿಂದ, **ಈಡ್ಯ** = ಸ್ತುತ್ಯರಾದ, **ಭೋ ರಾಘವೇಂದ್ರಾರ್ಯ** = ರಾಘವೇಂದ್ರಗುರುಗಳೇ, **ಪಾಹಿ** = ರಕ್ಷಿಸಿರಿ.

ಇತಿ ಶ್ರೀ ರಾಘವೇಂದ್ರತಂತ್ರೇ ಕೃಷ್ಣಾವಧೂತ ವಿರಚಿತೇ ಏಕಾದಶ ಪಟಲಃ

ದ್ವಾದಶ ಪಟಲಮ್

ಋಣಮೋಚನ ಸ್ತೋತ್ರಮ್*

ಶ್ರಿತಜನದುರಿತಘ್ನಂ ಭಕ್ತವರ್ಗಸ್ಯ ನಿಘ್ನಂ
ಸುರತರುಸಮರೂಪಂ ಸರ್ವಸಾಮ್ರಾಜ್ಯಭೂಪಂ।
ಭಜಕಜನಶರಣ್ಯಂ ನೌಮಿ ಕಾರುಣ್ಯಪೂರ್ಣಂ
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೧॥

ಅಹಂ = ನಾನು, ಶ್ರಿತಜನದುರಿತಘ್ನಂ = ಆಶ್ರಿತಭಕ್ತಜನರ ಪಾಪಗಳನ್ನು ನಾಶ ಮಾಡುವ, **ಭಕ್ತವರ್ಗಸ್ಯ** = ಭಕ್ತಜನರಿಗೆ, **ನಿಘ್ನಂ** = ಆಶ್ರಯರಾಗಿರುವ, **ಸುರತರು ಸಮರೂಪಂ** = ಕಲ್ಪವೃಕ್ಷಕ್ಕೆ ಸಮರಾದ, **ಸರ್ವಸಾಮ್ರಾಜ್ಯಭೂಪವ್** = ಸಮಸ್ತಸಾಮ್ರಾಜ್ಯಕ್ಕೂ ರಾಜರಂತಿರುವ, **ಭಜಕಜನಶರಣ್ಯಂ** = ಸೇವಕಭಕ್ತ ಜನರ ರಕ್ಷಕರಾದ, **ಕಾರುಣ್ಯಪೂರ್ಣಂ** = ದಯಾಪೂರ್ಣರಾದ ರಾಘವೇಂದ್ರರನ್ನು, **ನೌಮಿ** = ನಮಸ್ಕರಿಸುವೆನು, **ಹೇ ತಾತ ರಾಘವೇಂದ್ರ** = ತಂದೆಯಾದ ರಾಘವೇಂದ್ರರೇ, **ಮೇ** = ನನ್ನ, **ಋಣಪರಿಹಾರಂ** = ಸಾಲದ ತೀರುವಣಿಕೆಯನ್ನು (ಪರಿಹಾರವನ್ನು), **ಕುರು** = ಮಾಡು.

ರಚಿತಭಯವಿನಾಶ ಶ್ರೀದ ಸಂಪತ್ಸಮೃದ್ಧ
ಪ್ರಿಯತಮಪರ ದೀನಾಽನಾಥ ಬಂಧೋ ನಮಸ್ತೇ।
ನಿಟಲಗತಕುವರ್ಣಶ್ರೇಣಿ ವೈಯರ್ಥ್ಯಕಾರಿನ್
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೨॥

ರಚಿತಭಯವಿನಾಶ = ರಚಿತ = ಉಂಟಾದ, **ಭಯ** = ಭಯವನ್ನು, **ವಿನಾಶ** = ಹೋಗಲಾಡಿಸುವವರೇ, **ಶ್ರೀದ** = ಸಂಪತ್ತನ್ನು ನೀಡುವ, **ಸಂಪತ್ಸಮೃದ್ಧ** = ಜ್ಞಾನಾದಿ ಸಂಪತ್ತಿನಿಂದ ಸಮೃದ್ಧರಾದ, **ಪ್ರಿಯತಮಪರ** = ಅತ್ಯಂತ ಪ್ರಿಯರಾದವರ ಪರ

---

*ಈ ಪಟಲದಲ್ಲಿ ಶ್ರೀ ರಾಘವೇಂದ್ರಾಯ ನಮಃ ಎಂಬ ಅಷ್ಟಾಕ್ಷರದ ವರ್ಣಗಳಿಂದಲೇ ಶ್ಲೋಕವು ಪ್ರಾರಂಭವಾಗುತ್ತದೆ.

ವಹಿಸುವ, **ದೀನಾನಾಥಬಂಧೋ** = ದೀನ ಹಾಗೂ ನಾಥರಿಲ್ಲದವರಿಗೆ ಬಂಧುವಾದ, **ತೇ** = ನಿಮಗೆ, **ನಮಃ** = ನಮಸ್ಕಾರವು, **ನಿಟಿಲಗತಕುವರ್ಣಶ್ರೇಣಿವೈಯ್ಯರ್ಥಕಾರಿನ್-ನಿಟಿಲ** = ಹಣೆಯಲ್ಲಿ, **ಗತ** = ಬರೆಯಲ್ಪಟ್ಟ, **ಕುವರ್ಣಶ್ರೇಣಿ** = ಕುತ್ಸಿತವಾದ ಬರಹದ ಸಾಲುಗಳನ್ನು, **ವೈಯ್ಯರ್ಥಕಾರಿನ್** = ವ್ಯರ್ಥವನ್ನಾಗಿ ಮಾಡುವ ಸಾಮರ್ಥ್ಯವುಳ್ಳ, **ತಾತ** = ತಂದೆಯಾದ, ರಾಘವೇಂದ್ರರೇ, **ಮೇ** = ನನ್ನ, **ಋಣ ಪರಿಹಾರಂ ಕುರು** = ಸಾಲದ ಪರಿಹಾರವನ್ನು ಮಾಡು.

ಘನತರ ಹರಿಸೇವೋತ್ಕರ್ಷಲಬ್ಧಾಷ್ಟಸಿದ್ಧೇ
ವಿತರಣಗುಣಲೀಲಾಧಿಕ್ಕೃತ ಸ್ವರ್ದ್ರುಕೀರ್ತೇ।
ನಿಖಿಲಗುಣನಿಧಾನಶ್ಲಾಘ್ಯಸೌಭಾಗ್ಯಮೂರ್ತೇ
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೩॥

ಘನತರ ಹರಿಸೇವೋತ್ಕರ್ಷಲಬ್ಧಾಷ್ಟಸಿದ್ಧೇ = **ಘನತರ** = ಪೂರ್ಣವಾದ, **ಹರಿಸೇವಾ** = ಹರಿಸೇವೆಯ, **ಉತ್ಕರ್ಷ** = ಅತಿಶಯದಿಂದ, **ಲಬ್ಧ** = ಹೊಂದಲ್ಪಟ್ಟ, **ಅಷ್ಟಸಿದ್ಧೇ** = ಅಣಿಮಾದಿ ಎಂಟು ಸಿದ್ಧಿಗಳುಳ್ಳ, **ವಿತರಣಗುಣಲೀಲಾಧಿಕ್ಕೃತ ಸ್ವರ್ದ್ರುಮ ಕೀರ್ತೇ** = **ವಿತರಣಗುಣ** = ದಾನಮಾಡುವ ಗುಣದಿಂದ, **ಲೀಲಾ** = ಲೀಲೆಯಿಂದ (ಕ್ರೀಡೆಯಿಂದ), **ಧಿಕ್ಕೃತ** = ತಿರಸ್ಕರಿಸಲ್ಪಟ್ಟ, **ಸ್ವರ್ದ್ರು** = ಕಲ್ಪವೃಕ್ಷದ, **ಕೀರ್ತೇ** = ಕೀರ್ತಿಯುಳ್ಳ, **ನಿಖಿಲಗುಣನಿಧಾನಶ್ಲಾಘ್ಯಸೌಭಾಗ್ಯ ಮೂರ್ತೇ** = **ನಿಖಿಲಗುಣ** = ಸಮಸ್ತಗುಣಗಳ, **ನಿಧಾನ** = ಇರುವಿಕೆಯಿಂದ, **ಶ್ಲಾಘ್ಯ** = ಪ್ರಶಂಸಿಸಲು ಯೋಗ್ಯವಾದ, **ಸೌಭಾಗ್ಯಮೂರ್ತೇ** = ಮಂಗಳ ಸ್ವರೂಪರಾದ ರಾಘವೇಂದ್ರರೇ, **ಮೇ** = ನನ್ನ, **ಋಣಪರಿಹಾರಂ** = ಸಾಲದ ಪರಿಹಾರವನ್ನು, **ಕುರು** = ಮಾಡು.

ವಿದಿತ ವಿವಿದ ವೇದವ್ಯಾಸವಾಕ್ಯಾರ್ಥಮಧ್ವ-
ಪ್ರಕಟಿತಮತಭಾವವ್ಯಾಕೃತಿಪ್ರೋಪಕರ್ತಃ।
ಕೃತಕಲಿಕೃತದೋಷೋಚ್ಚಾಟನ ಕ್ಷೇಮಕಾರಿನ್
ಕುರು ಋಣ ಪರಿಹಾರಂ ತಾತ ಮೇ ರಾಘವೇಂದ್ರ ॥ ೪॥

ವಿದಿತವಿವಿಧ ವೇದವ್ಯಾಸಾವಾಕ್ಯಾರ್ಥಮಧ್ವಪ್ರಕಟಿತ ಮತಭಾವವ್ಯಾಕೃತಿ **ಪ್ರೋಪಕರ್ತ** = ತಿಳಿಯಲ್ಪಟ್ಟ ನಾನಾವಿಧವಾದ ವೇದವ್ಯಾಸರ ವಾಕ್ಯಗಳ ಅರ್ಥವುಳ್ಳ

ಮಧ್ವರಿಂದ ಪ್ರಕಟಿಸಲ್ಪಟ್ಟ ಮತದ ಅಭಿಪ್ರಾಯ ವ್ಯಾಖ್ಯಾನದಿಂದ ತುಂಬ ಉಪಕಾರ ಮಾಡಿರುವವರೇ, **ಕೃತಕಲಿದೋಷೋಚ್ಚಾಟನಕ್ಷೇಮಕಾರಿನ್** = ಕಲಿಕೃತ ದೋಷಗಳ ಉಚ್ಚಾಟನೆಯನ್ನು ಮಾಡಿ ಕ್ಷೇಮವುಂಟುಮಾಡಿರುವವರೇ, **ತಾತ** = ತಂದೆಯಾದ ರಾಘವೇಂದ್ರರೇ, **ಮೇ** = ನನ್ನ, **ಋಣಪರಿಹಾರಂ** = ಸಾಲದ ಪರಿಹಾರವನ್ನು, **ಕುರು** = ಮಾಡಿರಿ.

ದ್ರವಿಣರಹಿತಲೋಕಾಸ್ತ್ವಾಮುಪಾಶ್ರಿತ್ಯ ಸರ್ವೇ
ಕಲಿತ ಸಕಲ ಕಾಮಾಃ ಸಂತಿ ಸೌಖ್ಯೇನ ಭೂಮೌ।
ಇದಮಹಮಪಿ ಮತ್ವಾ ಸಂಸ್ತುತಃಸ್ತ್ವಾಮುದಾರಂ
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೫॥

ಸರ್ವೇ = ಎಲ್ಲಾ, **ದ್ರವಿಣರಹಿತ ಲೋಕಾಃ** = ಧನರಹಿತರಾದ ಜನರು, **ತ್ವಾಂ** = ನಿಮ್ಮನ್ನು, **ಉಪಾಶ್ರಿತ್ಯ** = ಆಶ್ರಯಿಸಿ, **ಕಲಿತಸಕಲಕಾಮಾಃ** = ಹೊಂದಲ್ಪಟ್ಟ ಸಕಲಾಭೀಷ್ಟವುಳ್ಳವರಾಗಿ, **ಭೂಮೌ** = ಭೂಮಿಯಲ್ಲಿ, **ಸೌಖ್ಯೇನ** = ಸುಖದಿಂದ, **ಸಂತಿ** = ಇರುತ್ತಾರೆ, **ಅಹಮಪಿ** = ನಾನೂ ಕೂಡ, **ಇದಂ** = ಈ ವಿಷಯವನ್ನು, **ಮತ್ವಾ** = ತಿಳಿದು, **ಉದಾರಂ** = ಉದಾರಿಯಾದ, **ತ್ವಾಂ** = ನಿಮ್ಮನ್ನು, **ಸಂಸ್ತುತಃ** = ಸುತ್ತುವರಿದ್ದೇನೆ, **ಹೇ ತಾತ** = ತಂದೆಯಾದ ರಾಘವೇಂದ್ರರೇ, **ಮೇ** = ನನ್ನ, **ಋಣಪರಿಹಾರಂ** = ಸಾಲದ ಪರಿಹಾರವನ್ನು, **ಕುರು** = ಮಾಡಿರಿ.

ಯತಿವರ ಬಹುಭಕ್ತತ್ರಾಣನಾತ್ ಪಾಟವಂ ತೇ
ಕಿಮು ಗಲಿತಮುತಾಽಹಂ ನಾಸ್ಮಿ ಕಿಂ ರಕ್ಷಣಾರ್ಹಃ।
ದ್ವಯಮಪಿ ನ ಹಿ ಯುಕ್ತಂ ಸರ್ವತಂತ್ರಸ್ವತಂತ್ರೇ
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೬॥

ಹೇ ಯತಿವರ = ಯತಿವರ್ಯರೇ, **ಬಹುಭಕ್ತತ್ರಾಣನಾತ್** = ಅಸಂಖ್ಯಾತರಾದ ಭಕ್ತರ ರಕ್ಷಣೆ ಮಾಡಿದ್ದರಿಂದ, **ತೇ** = ನಿಮ್ಮ, **ಪಾಟವಂ** = ರಕ್ಷಣೆ ಮಾಡುವ ಸಾಮರ್ಥ್ಯವು, **ಕಿಮು ಗಲಿತಂ?** = ಹೊರಟುಹೋಯಿತೇ? **ಉತ** = ಅಥವಾ, **ಅಹಂ** = ನಾನು, **ರಕ್ಷಣಾರ್ಹಃ** = ರಕ್ಷಣೆ ಮಾಡಲು ಯೋಗ್ಯನಾದವನು, **ನಾಸ್ಮಿ ಕಿಮ್** = ಅಲ್ಲವೇನು? **ಸರ್ವತಂತ್ರ ಸ್ವತಂತ್ರೇ** = ಸರ್ವಸಮರ್ಥರಾದ ನಿಮ್ಮಲ್ಲಿ, **ದ್ವಯಮಪಿ** = ಮೇಲೆ ಹೇಳಿದ ಎರಡೂ, **ನ ಹಿ ಯುಕ್ತಂ** = ಸರಿಯಾಗುವುದಿಲ್ಲ, **ಹೇ ತಾತ** =

ತಂದೆ ಯಾದ ರಾಘವೇಂದ್ರರೇ, ಮೇ = ನನ್ನ, ಋಣ ಪರಿಹಾರಂ = ಸಾಲದ ಪರಿಹಾರವನ್ನು, ಕುರು = ಮಾಡಿರಿ.

ನರಮಿತರಮುದಾರಂ ಸೇವಮಾನೋಽಪಿ ಭೂಯಃ
ಸುಖಮಹಮಿಹ ನಾಪಂ ಪೂರ್ವಕರ್ಮಾನುರೋಧಾತ್।
ತದಪಿ ಝುಟಿತಿ ಧೂತ್ವಾ ರಕ್ಷಸೀತ್ಯಾಶ್ರಯೇ ತ್ವಾಂ
ಕುರು ಋಣ ಪರಿಹಾರಂ ತಾತ ಮೇ ರಾಘವೇಂದ್ರ ॥ ೭॥

ಅಹಂ = ನಾನು, **ಇತರಂ** = ನಿಮ್ಮಿಂದ ಇತರರಾದ, **ಉದಾರಂ** = ಉದಾರಿಯಾದ, **ನರಂ** = ಮನುಷ್ಯರನ್ನು, **ಭೂಯಃ** = ಪುನಃ ಪುನಃ, **ಸೇವಮಾನೋಽಪಿ** = ಸೇವೆ ಮಾಡಿದರೂ, ಇಹ = ಈ ಭೂಮಿಯಲ್ಲಿ, **ಪೂರ್ವಕರ್ಮಾನುರೋಧಾತ್** = ಪ್ರಾಚೀನ ಕರ್ಮಾನುಸಾರವಾಗಿ, **ಸುಖಂ** = ಸುಖವನ್ನು, **ನ ಆಪಂ** = ಪಡೆಯಲಾಗಲಿಲ್ಲ, **ತದಪಿ** = ಆ ಪೂರ್ವಕರ್ಮವನ್ನು, **ಝುಟಿತಿ** = ಕೂಡಲೇ, **ಧೂತ್ವಾ** = ಹೋಗಲಾಡಿಸಿ, **ರಕ್ಷಸಿ** = ರಕ್ಷಣೆ ಮಾಡುವಿರಿ, **ಇತಿ** = ಹೀಗೆಂದು ತಿಳಿದು, **ತ್ವಾಂ** = ನಿಮ್ಮನ್ನು, **ಆಶ್ರಯೇ** = ಆಶ್ರಯಿಸುವೆನು, **ತಾತ** = ತಂದೆಯಾದ ರಾಘವೇಂದ್ರರೇ, **ಮೇ** = ನನ್ನ, **ಋಣಪರಿಹಾರಂ** = ಸಾಲದ ಪರಿಹಾರವನ್ನು, **ಕುರು** = ಮಾಡಿರಿ.

ಮಮ ತು ಭವತಿ ಮಿತ್ರೇ ಬಾಂಧವೇ ಮಾತರೀಷ್ಟೇ
ಪಿತರಿ ಸತಿ ವದಾನ್ಯೇ ಸದ್ಗುರೌ ವಾ ಸಮರ್ಥೇ।
ವ್ಯಸನಮನುಭವಾಮಿ ತ್ವತ್ಸುತಃ ಸಾಂಪ್ರತಂ ಕಿಂ
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೮॥

ಮಮ = ನನಗೆ, **ಮಿತ್ರೇ** = ಸ್ನೇಹಿತರಾದ, **ಬಾಂಧವೇ** = ಬಂಧುವಾಗಿರುವ, **ಮಾತರಿ** = ತಾಯಿಯಾಗಿರುವ, **ಇಷ್ಟೇ** = ಪ್ರಿಯರಾಗಿರುವ, **ಪಿತರಿ** = ತಂದೆಯಾಗಿರುವ, **ವದಾನ್ಯೇ** = ಮಹಾದಾನಿಯಾಗಿರುವ, **ಸಮರ್ಥೇ** = ಸರ್ವಸಮರ್ಥರಾದ, **ಸದ್ಗುರೌ** = ಶ್ರೇಷ್ಠಗುರುಗಳಾದ, ನೀವು, **ಭವತಿ ಸತಿ** = ಇರುತ್ತಿರಲು, **ತ್ವತ್ಸುತಃ** = ನಿನ್ನ ಪುತ್ರನಾದ ನಾನು, **ವ್ಯಸನಂ** = ಮನಃಖೇದವನ್ನು, **ಅನುಭವಾಮಿ** = ಅನುಭವಿಸುತ್ತಿರುವೆನು, ಇದು, **ಸಾಂಪ್ರತಂ ಕಿಮ್** = ಸರಿಯೇನು? **ತಾತ** = ತಂದೆಯಾದ ರಾಘವೇಂದ್ರರೇ, **ಮೇ** = ನನ್ನ, **ಋಣಪರಿಹಾರಂ** = ಸಾಲದ ಪರಿಹಾರವನ್ನು, **ಕುರು** = ಮಾಡಿರಿ.

ಇತಿ ಗುರುವರ ಪುತ್ರೋ ನಾಮ ಕೃಷ್ಣಾವಧೂತಃ
ಚಕರ ಋಣವಿನಾಶಸ್ತೋತ್ರಮೇತದ್ ಗುಣಾನಾಂ।
ಪಠತಿ ಶತದಿನಂ ಯೋ ನಿತ್ಯಮೇತತ್ ತ್ರಿವಾರಂ
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೯॥

ಇತಿ = ಈ ಪ್ರಕಾರವಾಗಿ, **ಗುರುವರ ಪುತ್ರಃ** = ಗುರುವರ್ಯರಾದ ರಾಘವೇಂದ್ರರ ಪುತ್ರನಾದ, **ಕೃಷ್ಣಾವಧೂತ ನಾಮ** = ಕೃಷ್ಣಾವಧೂತನೆಂದು ಪ್ರಸಿದ್ಧನಾದ ನಾನು, **ಗುಣಾನಾಂ** = ರಾಘವೇಂದ್ರರ ಗುಣಗಳ, **ಏತತ್** = ಈ **ಋಣವಿನಾಶ ಸ್ತೋತ್ರಂ** = ಸಾಲವನ್ನು ಉಳಿಯದಂತೆ ಮಾಡುವ ಈ ಸ್ತೋತ್ರವನ್ನು, **ಚಕರ (ಚಕಾರ)** = ರಚಿಸಿರುವೆನು, **ಯಃ** = ಯಾರು, **ಶತದಿನಂ** = ನೂರುದಿವಸ ಪರ್ಯಂತವಾಗಿ, **ನಿತ್ಯಂ** = ಪ್ರತಿದಿನವೂ, **ತ್ರಿವಾರಂ** = ಮೂರು ಕಾಲಗಳಲ್ಲಿ, **ಪಠತಿ** = ಪಾರಾಯಣ ಮಾಡುವನೋ, **ಸಃ** = ಅವನು, **ಶ್ರೀ ಗುರೋಃ** = ಪೂಜ್ಯಗುರುಗಳ, **ಸುಪ್ರಸಾದಾತ್** = ಮಹಾನುಗ್ರಹದಿಂದ, **ಋಣವಿಮುಕ್ತಃ** = ಋಣದಿಂದ ಬಿಡಲ್ಪಟ್ಟವನಾಗಿ, **ಭವತಿ** = ಆಗುವನು.

ಋಣಮೋಚನಕಂ ನಾಮ ಸ್ತೋತ್ರಂ ಪ್ರತ್ಯಕ್ಷಸಿದ್ಧಿದಂ।
ಕುರು ಋಣಪರಿಹಾರಂ ತಾತ ಮೇ ರಾಘವೇಂದ್ರ ॥ ೧೦॥

ಗುರುರಾಜೇನ = ರಾಯರಿಂದ, **ಸ್ವೀಕೃತಂ** = ಸ್ವೀಕರಿಸಲ್ಪಟ್ಟ, **ಪ್ರತ್ಯಕ್ಷ ಸಿದ್ಧಿದಂ** = ಪ್ರತ್ಯಕ್ಷವಾಗಿ ಸಿದ್ಧಿಯನ್ನುಂಟುಮಾಡುವ, **ಋಣಮೋಚಕಂ ನಾ** = 'ಋಣಮೋಚನ' ಎಂಬ ಹೆಸರುಳ್ಳ, **ಸ್ತೋತ್ರಂ** = ಸ್ತೋತ್ರವನ್ನು, **ಪಠನ್** = ಪಠಿಸುವವನು, **ಋಣಾನ್ಮುಕ್ತಃ** = ಋಣದಿಂದ ಮುಕ್ತಿ ಹೊಂದಿದವನು, **ಭವೇತ್** = ಆಗುವನು.

ಇತಿ ಶ್ರೀ ಕೃಷ್ಣಾವಧೂತ ಪಂಡಿತ ವಿರಚಿತೇ ಪ್ರತ್ಯಕ್ಷಸಿದ್ಧಿಪ್ರದೇ
ಶ್ರೀ ರಾಘವೇಂದ್ರ ತಂತ್ರೇ ಋಣಮೋಚನಂ ನಾಮ ದ್ವಾದಶಃ ಪಟಲಃ

ತ್ರಯೋದಶಃ ಪಟಲಮ್

ಪಾದುಕಾಪೂಜಾ ವಿಧಾನಮ್

ಶ್ರೀ ಗುರೋಃ ಪಾದುಕಾಪೂಜಾ ವಿಧಾನಂ ಗೃಹಧರ್ಮಿಣಾಂ।
ಕೃಷ್ಣಾವಧೂತೋ ವಕ್ಷ್ಯೇಽಹಂ ಗುರೋರಭಿಮತಂ ಯಥಾ ॥೧॥

ಅರ್ಥ - **ಕೃಷ್ಣಾವಧೂತಃ** = ಕೃಷ್ಣಾವಧೂತನಾದ, **ಅಹಂ** = ನಾನು, **ಗೃಹ ಧರ್ಮಿಣಾಂ** = ಗೃಹಸ್ಥರಿಗೆ, **ಶ್ರೀಗುರೋಃ** = ಪೂಜ್ಯಗುರುಗಳಾದ ರಾಘವೇಂದ್ರರ, **ಪಾದುಕಾಪೂಜಾ ವಿಧಾನಂ** = ಪಾದುಕೆಗಳನ್ನು ಪೂಜಿಸುವ ವಿಧಾನವನ್ನು, **ಗುರೋಃ** = ಗುರುಗಳ, **ಅಭಿಮತಂ ಯಥಾ** = ಸಮ್ಮತವಾಗುವ ರೀತಿಯಲ್ಲಿ, **ವಕ್ಷ್ಯೇ** = ಹೇಳುವೆನು.

ಧ್ಯಾನಮಾವಾಹನಂ ಪಶ್ಚಾದ್ ಆಸನಂ ಸ್ನಾನಮಕ್ಷತಾಃ।
ಗಂಧಃಪುಷ್ಪಾಣಿ ನೈವೇದ್ಯಂ ಧೂಪೋ ದೀಪೋ ನಿರಾಜನಮ್।
ಪುಷ್ಪಾಂಜಲಿರ್ದ್ವಾದಶೈವ ಪಾದುಕಾಪೂಜನೇ ಕ್ರಮೇ ॥ ೨॥

ಪಾದುಕಾಪೂಜನ ಕ್ರಮೇ = ಪಾದುಕೆಗಳನ್ನು ಪೂಜೆ ಮಾಡುವ ಕ್ರಮದಲ್ಲಿ, **ಧ್ಯಾನಂ** = ಧ್ಯಾನವು, **ಆವಾಹನಂ** = ಆವಾಹನೆಯು, **ಪಶ್ಚಾತ್** = ಅನಂತರದಲ್ಲಿ, **ಆಸನಂ** = ಆಸನವು, **ಸ್ನಾನಂ** = ಸ್ನಾನವು, **ಅಕ್ಷತಾಃ** = ಮಂತ್ರಾಕ್ಷತೆಯು, **ಗಂಧಃ** = ಗಂಧವು, **ಪುಷ್ಪಾಣಿ** = ಹೂವುಗಳು, **ಧೂಪಃ** = ಧೂಪಾರತಿಯು, **ದೀಪಃ** = ಏಕಾರತಿಯು, **ನೈವೇದ್ಯಂ** = ನೈವೇದ್ಯವು, **ನೀರಾಜನಂ** = ಮಂಗಳಾರತಿಯು, **ಪುಷ್ಪಾಂಜಲಿಃ** = ಪುಷ್ಪವನ್ನು ಏರಿಸುವುದು ಹೀಗೆ, **ದ್ವಾದಶೈವ** = ಹನ್ನೆರಡು ಉಪ ಚಾರಗಳು ಮಾತ್ರ (ಪಾದ್ಯ, ಆಚಮನ, ಮಧುಪರ್ಕ ಇವುಗಳಿಲ್ಲ).

ಅಥ ಪಾದುಕಾಪೂಜಾ ವಿಧಾನಂ

ಸಾಯಂಕಾಲೇ ಗೃಹೇ ಸ್ನಾತ್ವಾ ಕೃತ್ವಾ ಸಂಧ್ಯಾಜಪಾದಿಕಂ।
ಹರಿಂ ವಾಯುಂ ಚ ಸಂಪೂಜ್ಯ ಪಾದುಕೇ ಪೂಜಯೇದ್ ಗುರೋಃ ॥ ೩॥

ಗೃಹೀ = ಗೃಹಸ್ಥನು, **ಸಾಯಂಕಾಲೇ** = ಸಾಯಾಹ್ನದಲ್ಲಿ, **ಗೃಹೇ** = ಮನೆಯಲ್ಲಿ, **ಸ್ನಾತ್ವಾ**= ಸ್ನಾನಮಾಡಿ, **ಸಂಧ್ಯಾಜಪಾದಿಕಂ** = ಸಂಧ್ಯಾವಂದನೆ ಹಾಗೂ ಜಪಾದಿಗಳನ್ನು, **ಕೃತ್ವಾ** = ಮಾಡಿ, **ಹರಿಂ** = ನಾರಾಯಣನನ್ನು, **ವಾಯುಂ ಚ** = ವಾಯುದೇವರನ್ನು, **ಸಂಪೂಜ್ಯ** = ಪೂಜಿಸಿದ ನಂತರ, **ಗುರೋಃ** = ರಾಘವೇಂದ್ರ ಗುರುಗಳ, **ಪಾದುಕೇ** = ಪಾದುಕೆಗಳನ್ನು, **ಪೂಜಯೇತ್** = ಪೂಜಿಸಬೇಕು.

ಧ್ಯಾನಂ

ಪಾದುಕೇ ಗುರುರಾಜಸ್ಯಾಽಪಾದಿಕೇ ಸರ್ವಸಂಪದಾಂ।
ಬಾಧಿಕೇ ಸರ್ವಬಾಧಾನಾಂ ಸಾಧಿಕೇ ಭವತಾಂ ಮುದೇ ॥ ೪॥

ಗುರುರಾಜಸ್ಯ = ಗುರುರಾಜರ, **ಪಾದುಕೇ** = ಪಾದುಕೆಗಳು, **ಸರ್ವಸಂಪದಾಂ** = ಸಕಲ ಸಂಪತ್ತುಗಳನ್ನೂ, **ಆಪಾದಿಕೇಃ** = ತಂದುಕೊಡುವ ಸಾಮರ್ಥ್ಯವುಳ್ಳದು, **ಸರ್ವಬಾಧಾನಾಂ** = ಸಮಸ್ತ ಪಿಶಾಚಾದಿ ಬಾಧೆಗಳಿಗೆ, **ಬಾಧಿಕೇ** = ಬಾಧಿಸುವಂತಹದ್ದು, **ಮುದೇ** = ಸಂತೋಷದ, **ಸಾಧಿಕೇ** = ಸಾಧಕಗಳಾಗಿ, **ಭವತಾಂ** = ಆಗಲಿ.

ಶ್ರೀ ರಾಘವೇಂದ್ರಾಯ ನಮಃ ಧ್ಯಾನಂ ಸಮರ್ಪಯಾಮಿ

ಆವಾಹನಮ್

ಪಾದೌ ಪಾದುಕಯೋರತ್ರಾಽಽವಾಹಯಾಮಿ ಮಹಾಗುರೋಃ।
ಅತ್ರ ಸನ್ನಿಹಿತೌ ಭೂತ್ವಾ ಕಾಮದೌ ಭವತಂ ಮಮ ॥ ೫॥

ಅತ್ರ = ಈ, **ಪಾದುಕಯೋಃ** = ಪಾದುಕೆಗಳಲ್ಲಿ, **ಮಹಾಗುರೋಃ** = ಶ್ರೇಷ್ಠಗುರುಗಳಾದ, ರಾಘವೇಂದ್ರ ತೀರ್ಥರ, **ಪಾದೌ** = ಪಾದಗಳನ್ನು, **ಆವಾಹಯಾಮಿ**=ಆವಾಹನೆಯನ್ನು ಮಾಡುವೆನು, **ಅತ್ರ** = ಈ ಪಾದುಕೆಗಳಲ್ಲಿ, **ಸನ್ನಿಹಿತೌ ಭೂತ್ವಾ** = ಸನ್ನಿಹಿತಗಳಾಗಿ, **ಮಮ** = ನನಗೆ, **ಕಾಮದಂ** = ಇಷ್ಟಾರ್ಥದಾಯಕಗಳಾಗಿ, **ಭವತಂ**=ಆಗಲಿ.

ಶ್ರೀ ರಾಘವೇಂದ್ರಾಯ ನಮಃ ಆವಾಹನಂ ಸಮರ್ಪಯಾಮಿ

ಆಸನಮ್

ಇದಮಾಸನಮಾಸ್ತೀರ್ಣಂ ತಿಷ್ಠತಾಮತ್ರ ಪಾದುಕೇ।
ಕುರು ತ್ವಂ ಗುರುರಾಜಸ್ಯ ಕೃಪಾ ಮೇ ಸ್ಯಾದ್ ಯಥಾ ತಥಾ ॥ ೬॥

ಇದಂ = ಈ, **ಆಸನಂ** = ಆಸನವು, **ಆಸ್ತೀರ್ಣಂ** = ವಿಸ್ತರಿಸಲ್ಪಟ್ಟಿದೆ, **ಹೇ ಪಾದುಕೇ** = ಪಾದುಕೆಗಳೇ, **ಅತ್ರ** = ಇಲ್ಲಿ, **ತಿಷ್ಠತಾಂ** = ಆಸೀನರಾಗಿರಿ, **ತ್ವಂ** = ನೀವು (ಪಾದುಕೆಗಳು), **ಮೇ** = ನನ್ನ ಮೇಲೆ, **ಗುರುರಾಜಸ್ಯ** = ಗುರುರಾಜರ, **ಕೃಪಾ** = ದಯೆಯು, **ಯಥಾ ಸ್ಯಾತ್ ತಥಾ** = ಉಂಟಾಗುವಂತೆ, **ಕುರು** = ಮಾಡಿರಿ.

ಶ್ರೀ ರಾಘವೇಂದ್ರಾಯ ನಮಃ **ಆಸನಮ್ ಸಮರ್ಪಯಾಮಿ**

ಸ್ನಾನಮ್

ಶುದ್ಧೈಃ ಸುಗಂಧಿಭಿಃ ಶೀತೈಃ ಸಲಿಲೈಃ ಸ್ನಪಯಾಮಿ ವಾಂ।
ರಾಘವೇಂದ್ರಗುರೋಃ ಪಾದಂ ತಾಪಂ ಮೇ ವಿಹತಾಂ ಸದಾ॥ ೭॥

ಶುದ್ಧೈಃ = ಶೋಧಿಸಿ ಶುದ್ಧವಾದ, **ಶೀತೈಃ** = ತಂಪಾದ, **ಸುಗಂಧಿಭಿಃ** = ಸುಗಂಧಿತವಾದ, **ಸಲಿಲೈಃ** = ಜಲದಿಂದ, **ವಾಂ** = ನಿಮ್ಮನ್ನು, **ಸ್ನಪಯಾಮಿ** = ಸ್ನಾನಮಾಡಿಸುವೆನು, **ರಾಘವೇಂದ್ರಗುರೋಃ** = ರಾಘವೇಂದ್ರಗುರುಗಳ, **ಪಾದಂ** = ಚರಣವು, **ಸದಾ** = ಯಾವಾಗಲೂ, **ಮೇ** = ನನ್ನ, **ತಾಪಂ** = ಆಧ್ಯಾತ್ಮಿಕಾದಿ ತಾಪವನ್ನು, **ವಿಹತಾಂ** = ಪರಿಹಾರ ಮಾಡಲಿ.

ಶ್ರೀ ರಾಘವೇಂದ್ರಾಯ ನಮಃ **ಸ್ನಾನಮ್ ಸಮರ್ಪಯಾಮಿ**

ಫಲೈಃ ಕ್ಷೀರೈಃ ಶರ್ಕರಾದ್ಯೈಃ
ಸ್ನಾನಂ ಚೇತ್ ಪೂರ್ವಮಾಚರೇತ್ ॥ ೮॥

ಫಲೈಃ = ಹಣ್ಣುಗಳಿಂದ, **ಕ್ಷೀರೈಃ** = ಹಾಲಿನಿಂದ, **ಶರ್ಕರಾದ್ಯೈಃ** = ಸಕ್ಕರೆ ಮೊದಲಾದವುಗಳಿಂದ, **ಸ್ನಾನಂ ಚೇತ್** = ಸ್ನಾನಮಾಡಿಸುವುದಾದರೆ, **ಪೂರ್ವಂ** = ಶುದ್ಧೋದಕಸ್ನಾನದ ಪೂರ್ವದಲ್ಲಿ, **ಆಚರೇತ್** = ಮಾಡಬೇಕು.

ಅಕ್ಷತಾಃ

ಗುರುರಾಜ ಪದಾಂಭೋಜನ್ಯಾಸಪ್ರಯತ ಪಾದುಕೇ।
ಅಕ್ಷತಾನ್ ವಾಂ ಪ್ರದಾಸ್ಯಾಮಿ ಕುರುತಂ ಮಾಮಿಹಾಕ್ಷತಮ್ ॥ ೯॥

ಗುರುರಾಜ = ಗುರುರಾಜರ, **ಪದಾಂಭೋಜ** = ಪಾದಕಮಲದ, **ನ್ಯಾಸ** = ಇಡುವಿಕೆಯಿಂದ, **ಪ್ರಯತ** = ಪವಿತ್ರವಾದ, **ಪಾದುಕೇ** = ಪಾದುಕೆಗಳೇ, **ಅಕ್ಷತಾನ್**

= ಮಂತ್ರಾಕ್ಷತೆಯನ್ನು, ವಾಂ = ನಿಮಗೆ, ಪ್ರದಾಸ್ಯಾಮಿ = ಕೊಡುವೆನು (ಹಾಕುವೆನು), ಇಹ = ಇಲ್ಲಿ, ಮಾಂ = ನನ್ನನ್ನು, ಅಕ್ಷತಮ್ = ನಾಶರಹಿತನನ್ನಾಗಿ, ಕುರುತಂ = ಮಾಡಿರಿ.

ಶ್ರೀ ರಾಘವೇಂದ್ರಾಯ ನಮಃ ಅಕ್ಷತಾನ್ ಸಮರ್ಪಯಾಮಿ

ಗಂಧಮ್

ಗುರುರಾಜರಜೋಗಂಧಲಿಪ್ತಾಂಗೇ ಪಾದುಕೇ ಯುವಾಂ।
ಗೃಹೀತ್ವಾ ಸುರಭಿಂ ಗಂಧಂ ವರ್ತೇಯಾಥಾಂ ಸುರದ್ರುಮೌ ॥೯॥

ಗುರುಪಾದರಜೋಗಂಧಲಿಪ್ತಾಂಗೌ - **ಗುರುಪಾದ** = ಗುರುರಾಜರ ಪಾದದಲ್ಲಿರುವ, **ರಜೋಗಂಧ** = ಧೂಳೆಂಬ ಗಂಧದಿಂದ, **ಲಿಪ್ತಾಂಗೇ** = ಲೇಪಮಾಡಲ್ಪಟ್ಟ ಅವಯವವುಳ್ಳ, **ಪಾದುಕೇ** = ಪಾದುಕೆಗಳೇ, **ಯುವಾಂ** = ನೀವಿಬ್ಬರೂ, **ಸುರಭಿಂ ಗಂಧಂ** = ಸುವಾಸನೆಯುಳ್ಳ ಗಂಧವನ್ನು, **ಗೃಹೀತ್ವಾ** = ಸ್ವೀಕರಿಸಿ, **ಸುರದ್ರುವತ್** = ಕಲ್ಪವೃಕ್ಷದಂತೆ, **ವರ್ತೇಯಾಥಾಂ** = ಇಷ್ಟಾರ್ಥರಾಗಿರೆಂದು ಪ್ರಾರ್ಥಿಸುವೆ.

ಶ್ರೀ ರಾಘವೇಂದ್ರಾಯ ನಮಃ ಗಂಧಂ ಸಮರ್ಪಯಾಮಿ

ಪುಷ್ಪಮ್*

ಮಲ್ಲಿಕಾದಿ ಸುಪುಷ್ಪಾಣಾಂ ಮಾಲಾ ಶ್ರೀಗುರುಪಾದುಕೇ।
ಅಸಿತಾನಿ ಚ ಪುಷ್ಪಾಣಿ ಗೃಹೀತ್ವಾವತಮೇವ ಮಾಮ್ ॥೧೦॥

ಶ್ರೀ ಗುರುಪಾದುಕೇ = ಗುರುರಾಜರ ಪಾದುಕೆಗಳೇ, **ಮಲ್ಲಿಕಾದಿಸುಪುಷ್ಪಾಣಾಂ** = ಮಲ್ಲಿಗೆಯೇ ಮೊದಲಾದ ಪುಷ್ಪಗಳುಳ್ಳ, **ಮಾಲಾಂ** = ಮಾಲೆಯನ್ನು, **ಅಸಿತಾನಿ** = ನಿಷಿದ್ಧವಲ್ಲದ ಕೆಂಪು ಮುಂತಾದ ಬಣ್ಣಗಳಿರುವ, **ಪುಷ್ಪಾಣಿಚ** = ಹೂವುಗಳನ್ನು ಕೂಡ, ('ಚ' ಶಬ್ದದಿಂದ ಬಿಳಿಯಾದ ಪುಷ್ಪಗಳನ್ನೂ ತೆಗೆದುಕೊಳ್ಳಬೇಕು), **ಗೃಹೀತ್ವಾ** = ತೆಗೆದುಕೊಂಡು, **ಮಾಂ** = ನನ್ನನ್ನು, **ಅವತಂ** = ರಕ್ಷಿಸಿರಿ.

ಶ್ರೀ ರಾಘವೇಂದ್ರಾಯ ನಮಃ ಪುಷ್ಪಾಣಿ ಸಮರ್ಪಯಾಮಿ

---

* ಭಗವಂತನಿಗೆ ನಿವೇದಿಸಿದ ಪುಷ್ಪಾದಿಗಳನ್ನು ಪಾದುಕೆಗಳ ಮೇಲಿಡಬಾರದು.

ನೈವೇದ್ಯಮ್

ಯಥಾಶಕ್ತಿ ಯಥಾಕಾಲಂ ಭಕ್ತ್ಯಾಽಽನೀತಂ ಫಲಾದಿಕಂ।
ಸ್ವೀಕೃತಂ ಸಫಲಂ ಮಾಂ ಚ ಕುರುತಂ ಗುರುಪಾದುಕೇ ॥ ೧೧॥

ಹೇ ಗುರುಪಾದುಕೇ = ಗುರುಗಳ ಪಾದುಕೆಗಳೇ, **ಯಥಾಕಾಲಂ** = ಕಾಲವನ್ನು ಮೀರದೇ, **ಯಥಾಶಕ್ತಿ** = ಶಕ್ತಿಯನ್ನು ಮೀರದೇ, **ಭಕ್ತ್ಯಾ** = ಭಕ್ತಿಪೂರ್ವಕವಾಗಿ, **ಆನೀತಂ** = ತಂದಿರುವ, **ಫಲಾದಿಕಂ** = ಫಲಗಳೇ ಮೊದಲಾದ ನೈವೇದ್ಯವನ್ನು, **ಸ್ವೀಕೃತಂ** = ಸ್ವೀಕರಿಸಿ, **ಮಾಂ ಚ** = ನನ್ನನ್ನು, **ಸಫಲಂ** = ಸಫಲನನ್ನಾಗಿ, **ಕುರುತಂ** = ಮಾಡಿರಿ.

ಶ್ರೀ ರಾಘವೇಂದ್ರಾಯ ನಮಃ ನೈವೇದ್ಯಂ ಸಮರ್ಪಯಾಮಿ

ಧೂಪಂ

ಶ್ರೀ ರಾಘವೇಂದ್ರ ರಾಜೇಂದ್ರಮುನೀಂದ್ರ ಸಂಗತೇ।
ಪಾದುಕೇ ವಾಂ ಪ್ರದಾಸ್ಯಾಮಿ ಧೂಪಂ ಸರ್ವ ಮನೋಹರಮ್ ॥ ೧೨॥

ಶ್ರೀ ರಾಘವೇಂದ್ರ ರಾಜೇಂದ್ರ ಮುನೀಂದ್ರಪದಸಂಗತೇ – **ಶ್ರೀ ರಾಘವೇಂದ್ರ** = ಶ್ರೀ ರಾಘವೇಂದ್ರಗುರುಗಳೆಂಬ, **ರಾಜೇಂದ್ರಮುನೀಂದ್ರಪದ** = ಯತಿರಾಜರು ಹಾಗೂ ಮುನಿಶ್ರೇಷ್ಠರೂ ಆದ, ರಾಘವೇಂದ್ರರ ಪಾದಗಳಲ್ಲಿ, **ಸಂಗತೇ** = ಸಂಬದ್ಧಗಳಾದ, **ಪಾದುಕೇ** = ಪಾದುಕೆಗಳೇ, **ವಾಂ** = ನಿಮಗೆ, **ಸರ್ವಮನೋರಥಂ** = ಸುವಾಸಿತಗಳಾದ (ಆಘ್ರಾಣಿಸಲು ಯೋಗ್ಯವಾದ), **ಧೂಪಂ** = ಧೂಪವನ್ನು, **ಪ್ರದಾಸ್ಯಾಮಿ** = ಕೊಡುವೆನು.

ಶ್ರೀ ರಾಘವೇಂದ್ರಾಯ ನಮಃ ಧೂಪಂ ಸಮರ್ಪಯಾಮಿ

ದೀಪಮ್

ಅಂಧಕಾರಹರಂ ಚಕ್ಷುಃಸಫಲೀಕರಣೇ ಪಟುಂ।
ದರ್ಶನಾರ್ಥಂ ಚ ವಾಂ ದೀಪಂ ದರ್ಶಯೇ ಗುರುಪಾದುಕೇ ॥ ೧೩॥

ಹೇ ಗುರುಪಾದುಕೇ = ಗುರುಗಳ ಪಾದುಕೆಗಳೇ, **ವಾಂ** = ನಿಮಗೆ, **ಅಂಧಕಾರ ಹರಂ** = ಕತ್ತಲೆಯನ್ನು ಪರಿಹರಿಸುವ, **ಚಕ್ಷುಃ ಸಫಲೀಕರಣೇ** = ಕಣ್ಣುಗಳಿಗೆ ಸಫಲತೆಯನ್ನುಂಟುಮಾಡುವುದರಲ್ಲಿ, **ಪಟುಮ್** = ಸಮರ್ಥವಾದ, **ದೀಪಂ** = ದೀಪವನ್ನು, **ದರ್ಶನಾರ್ಥಂ** = ದರ್ಶನಫಲಕ್ಕಾಗಿ, **ದರ್ಶಯೇ** = ತೋರಿಸುವೆನು.

ಶ್ರೀ ರಾಘವೇಂದ್ರಾಯ ನಮಃ ದೀಪಂ ದರ್ಶಯಾಮಿ
ನೀರಾಜನತ್ರಯಂ ಕಾರ್ಯಮಧಿಕಂ ವಿಭವೋ ಯಥಾ ॥ ೧೪॥

ನೀರಾಜನತ್ರಯಂ = ಮೂರು ಮಂಗಳಾರತಿಗಳನ್ನು, **ಕಾರ್ಯಂ** = ಮಾಡಬೇಕು, **ಯಥಾ ವಿಭವಃ** = ಸಂಪತ್ತಿಗೆ ತಕ್ಕಂತೆ (ಅನುಕೂಲವಿದ್ದರೆ), **ಅಧಿಕಂ** = ಬಹಳ ನೀರಾಜನವನ್ನು (ಅಂದರೆ ಇನ್ನೂ ಜಾಸ್ತಿ ಮಂಗಳಾರತಿಗಳನ್ನು ಬೆಸ ಸಂಖ್ಯೆಯಲ್ಲಿ), **ಕಾರ್ಯಂ** = ಮಾಡತಕ್ಕದ್ದು.

ಪ್ರಥಮ ನೀರಾಜನಮ್

ಜಯತು ಜಯತು ಪಾದೂಃ ಪಾತಕ ಧ್ವಂಸಕರ್ತ್ರೀ
ಜಯತು ಜಯತು ಬಂಧುರ್ಬಂಧನಿರ್ನಾಶಯಿತ್ರೀ।
ಜಯತು ಜಯತು ಮಿತ್ರಂ ಮಾತೃವದ್ ರಕ್ಷಯಿತ್ರೀ
ಜಯತು ಜಯತು ರಾಜದ್ರಾಘವೇಂದ್ರಾಂಘ್ರಿದಾತ್ರೀ ॥ ೧೫॥

ಪಾತಕಧ್ವಂಸಕರ್ತ್ರೀ = ಪಾಪಗಳನ್ನು ನಿರ್ಮೂಲಮಾಡುವ, **ಪಾದೂಃ** = ಪಾದುಕೆಗಳೇ, ನೀವು, **ಜಯತು ಜಯತು** = ಉತ್ಕೃಷ್ಟರಾಗಿರಿ, **ಬಂಧನಿರ್ನಾಶಯಿತ್ರೀ** = ಸಾಂಸಾರಿಕ ಬಂಧನವನ್ನು, ನಾಶಮಾಡುವ, **ಬಂಧುಃ** = ಬಂಧುಗಳಾದ ನೀವು, **ಜಯತು ಜಯತು** = ಜಯಿಸಿರಿ, **ಮಾತೃವತ್** = ತಾಯಿಯಂತೆ, **ರಕ್ಷಯಿತ್ರೀ** = ರಕ್ಷಣೆ ಮಾಡುವ, **ಮಿತ್ರಂ** = ಮಿತ್ರರಾದ ನೀವು, **ಜಯತು ಜಯತು** = ಜಯಿಸಿರಿ, **ರಾಜದ್ರಾಘವೇಂದ್ರಾಂಘ್ರಿದಾತ್ರೀ**=**ರಾಜತ್** = ಶೋಭಿಸುವ, **ರಾಘವೇಂದ್ರಾಂಘ್ರಿ** = ರಾಘವೇಂದ್ರ ಪಾದಗಳನ್ನು, **ದಾತ್ರೀ** = ಕೊಡುವ ನೀವು, **ಜಯತು ಜಯತು** = ಜಯಿಸಿರಿ.

ದ್ವಿತೀಯ ನೀರಾಜನಮ್

ಶ್ರೀಮತ್ ಸದ್ಗುರುಪಾದಸಂಗ ವಿಭವೇ ಶ್ರೀಪಾದುಕೇ ಪಾದುಕೇ
ಪಾಟೀರಾಮಲಗಂಧಬಂಧುರತನೋ ಶ್ರೀ ಪಾದುಕೇ ಪಾದುಕೇ।
ನಾನಾಲೋಕಶಿರೋಭಿಲಾಲಿತಮಹಾ ಶ್ರೀಪಾದುಕೇ ಪಾದುಕೇ
ದೇಹಿ ತ್ವಂ ಮಮ ಮಂಗಲಂ ತವ ಭಜೇ ಶ್ರೀಪಾದುಕೇ ಪಾದುಕೇ ॥ ೧೬॥

ಶ್ರೀಮತ್ಸದ್ಗುರುಪಾದಸಂಗವಿಭವೇ = **ಶ್ರೀಮತ್** = ಕಾಂತಿಸಂಪನ್ನರಾದ, **ಸದ್ಗುರು** = ಶ್ರೇಷ್ಠಗುರುಗಳಾದ, ರಾಘವೇಂದ್ರರ, **ಪಾದಸಂಗ** = ಪಾದಗಳ ಸಂಸರ್ಗ

ದಿಂದ ಹೊಂದಿದ, **ವಿಭವೇ** = ಸಂಪತ್ತುಳ್ಳ, **ಶ್ರೀಪಾದುಕೇ** = ಕಾಂತಿಯುಕ್ತಗಳಾದ, **ಪಾದುಕೇ** = ಪಾದುಕೆಗಳೇ, **ಪಾಟೀರಾಮಲಗಂಧಬಂಧುರತನೋಃ** = **ಪಾಟೀರ** = ಚಂದನದ, **ಅಮಲಗಂಧ** = ನಿರ್ಮಲವಾದ ಗಂಧದಿಂದ, **ಬಂಧುರ** = ಮನೋಹರ ವಾದ, **ತನೋಃ** = ದೇಹವುಳ್ಳ, **ಶ್ರೀಪಾದುಕೇ ಪಾದುಕೇ** = ಪಾದುಕೆಗಳೇ, **ನಾನಾ ಲೋಕಶಿರೋಭಿಲಾಲಿತ ಮಹಾ ಶ್ರೀಪಾದುಕೇ** - **ನಾನಾಲೋಕ** = ನಾನಾ ವಿಧವಾದ ಜನರ, **ಶಿರೋಭಿಃ** = ತಲೆಗಳಿಂದ, **ಲಾಲಿತ** = ಪೂಜಿತವಾದ, **ಶ್ರೀ ಪಾದುಕೇ** = ಕಾಂತಿಯುಕ್ತವಾದ ಪಾದುಕೆಗಳೇ, **ತವ** = ನಿಮ್ಮನ್ನು, **ಭಜೇ** = ಆಶ್ರಯಿಸುತ್ತೇನೆ, **ತ್ವಂ** = ನೀವು, **ಮಮ** = ನನಗೆ, **ಮಂಗಲಂ** = ಮಂಗಲವನ್ನು, **ದೇಹಿ** = ಕೊಡು.

ತೃತೀಯ ನೀರಾಜನಂ

ಗುರುವರ ಪದಪದ್ಮಪೂತ ದೇಹೇ
ಮಮ ಮುಖಮಸ್ತ್ವಿತಿ ಪಾದುಕೇ ಶ್ರಯೇ ತ್ವಾಮ್।
ಮಯಿ ಸದಯಮನಾಃ ತ್ವದೇಕಭಕ್ತೇ
ಮೃದುಲ ತನೂದರಿ ಸುಂದರಿ ಪ್ರಸೀದ ॥ ೧೭॥

ಗುರುವರಪದಪದ್ಮಪೂತದೇಹೇ = **ಗುರುವರ** = ಶ್ರೇಷ್ಠಗುರುಗಳಾದ ರಾಘ ವೇಂದ್ರರ, **ಪದಪದ್ಮ** = ಪಾದಕಮಲಗಳಿಂದ, **ಪೂತದೇಹೇ** = ಪವಿತ್ರವಾದ ದೇಹವುಳ್ಳ, **ಪಾದುಕೇ** = ಪಾದುಕೆಗಳಲ್ಲಿ, **ಮಮ** = ನನ್ನ, **ಮುಖಂ** = ಮುಖವು, **ಅಸ್ತು ಇತಿ** = ಇರಲೆಂದು, **ತ್ವಾಂ** = ನಿಮ್ಮನ್ನು, **ಶ್ರಯೇ** = ಆಶ್ರಯಿಸುತ್ತೇನೆ, **ಹೇ ಮೃದುಲತನೂದರಿ** = ಅತಿ ಮೃದುವಾದ ಹಾಗೂ ಸಣ್ಣದಾದ ಮಧ್ಯಭಾಗವುಳ್ಳ, **ಸುಂದರಿ** = ಎಲೋ ಸುಂದರವಾದ ಪಾದುಕೆಯೇ, **ತ್ವದೇಕಭಕ್ತೇ** = ನಿನ್ನ ಭಕ್ತರಲ್ಲಿ ಪ್ರಧಾನನಾದ, **ಮಯಿ** = ನನ್ನಲ್ಲಿ, **ಸದಯಮನಾಃ** = ದಯಾಪೂರ್ಣವಾದ ಮನಸ್ಸುಳ್ಳವಳಾಗಿ, **ಪ್ರಸೀದ** = ಪ್ರಸನ್ನಳಾಗು.

ನೀರಾಜನಂ ಸಮರ್ಪಯಾಮಿ

ವಂದೇ ತ್ವಾಂ ದೇವಿ ದೇವವ್ರತಿಯತಿಪತಿ ಪದಧೂಳಿಕಾಲಿಪ್ತಲಿಪ್ತೇ
ಭೂಯೋ ಭೂಯೋ ದಯಾ ಮೇ ಭವತು ವೃತವರೇ ಮಾನಯಾನಸ್ಯ ದಿವ್ಯೇ।
ಮಾನಂ ಜ್ಞಾನಂ ಧನಂ ಮೇ ದಿಶದಿಶ ದಶಧಾ ಪಾದುಕೇ ದುಷ್ಟ ದುಃಖಾತ್।
ಪಾಹೀತೋ ಹೀನಹೀನಾತ್ ಸಖಿಸಖಿ ಸುಖಿನಂ ಮಾಂ ತನೂತ ಪ್ರತಪ್ತಮ್ ॥

ಹೇ ದೇವಿ = ದೀಪ್ತ್ಯಾದಿ ಗುಣವುಳ್ಳ ಪಾದುಕೆಯೇ, **ದೇವವ್ರತಿಯತಿ ಪತಿ ಪದ್ಧೂಲಿಕಾಲಿ ಪ್ರಲಿಪ್ತೇ** = **ದೇವವ್ರತಿಯತಿಪತಿ** = ದೇವಶ್ರೇಷ್ಠವಾದ ಹಾಗೂ ಯತಿ ಶ್ರೇಷ್ಠರಾದ, ರಾಘವೇಂದ್ರರ, **ಪದ್ಧೂಲಿಕಾಲಿ** = ಕಾಲಿನಲ್ಲಿರುವ ಧೂಳಿನ ಸಮೂಹ ದಿಂದ, **ಪ್ರಲಿಪ್ತೇ** = ಲೇಪಿತರಾಗಿರುವ ಪಾದುಕೆಗಳೇ, **ತ್ವಾಂ** = ನಿಮ್ಮನ್ನು, **ವಂದೇ** = ನಮಸ್ಕಾರವನ್ನು ಮಾಡುವನೋ, **ಮೇ** = ನನಗೆ, **ಭೂಯೋ ಭೂಯೋ** = ಪುನಃ ಪುನಃ, **ದಯಾ** = ದಯೆಯು, **ಭವತು** = ಉಂಟಾಗಲಿ, **ವೃತವರೇ** = ಪ್ರಸನ್ನರಲ್ಲಿ ಶ್ರೇಷ್ಠವಾದ, **ದಿವ್ಯೇ** = ದಿವ್ಯವಾದವುಗಳು, ಇತಿ = ಹೀಗೆ, **ಮಾನಯಾನಸ್ಯ** = ಗೌರವ ದಿಂದ (ನಿನ್ನನ್ನು) ಪೂಜಿಸುತ್ತಿರುವ, **ಮೇ** = ನನಗೆ, **ಹೇ ಪಾದುಕೇ** = ಪಾದುಕೆಗಳೇ, **ಮಾನಂ** = ಗೌರವವನ್ನು, **ಜ್ಞಾನಂ** = ಶಾಸ್ತ್ರಾರ್ಥಜ್ಞಾನವನ್ನು, **ಧನಂ** = ಧನವನ್ನು, **ದಶಧಾ** = ಹತ್ತಾರು ಕಡೆಗಳಿಂದ, **ದಿಶ ದಿಶ** = ಕೊಡುವಂತಾಗಿರಿ, ಇತಃ = ಇದ ಕ್ಕಿಂತಲೂ, **ಹೀನ ಹೀನಾತ್** = ಅತಿ ಹೀನವಾದ (ಕುತ್ಸಿತವಾದ), **ದುಷ್ಟದುಃಖಾತ್** = ಅನಿಷ್ಟವಾದ ದುಃಖದಿಂದ, **ಪಾಹಿ** = ರಕ್ಷಿಸಿರಿ, **ಹೇ ಸಖಿ ಸಖಿ** = ಸರ್ವರಿಗೂ ಮಿತ್ರ ರಾದ ರಾಯರ ಸಖಿಯಾದ ಪಾದುಕೆಯೇ, **ಪ್ರತಪ್ತಂ** = ಸಂಸಾರದ ಬೇಗೆಯಿಂದ ಬೆಂದುಹೋಗಿರುವ, **ಮಾಂ** = ನನ್ನನ್ನು, **ಸುಖಿನಂ** = ಸುಖಿಯನ್ನಾಗಿ, **ತನೂತ** = ಮಾಡಿರಿ.

ಕಾಮದಾತ್ರೀ ಸಕಾಮಾನಾಮನ್ಯೈಕಾಮೃತದಾಯಿಕಾ।
ಕಾಲೇ ಕಾಲೇಽಘಕಾರ್ಪಾಸಂ ದಹ್ಯಾತ್ ಕಾಪ್ಯಾರ್ಯಪಾದುಕಾ ॥ ೧೯॥

ಸಕಾಮಾನಾಂ = ಕಾಮನೆಯಿಂದ ಪೂಜಿಸುವವರಿಗೆ (ಸಕಾಮಭಕ್ತರಿಗೆ), **ಕಾಮ ದಾತ್ರೀ** = ಕಾಮನೆಯನ್ನು (ಬೇಡಿದ ಇಷ್ಟಾರ್ಥವನ್ನು) ನೀಡುವ, **ಅನ್ಯೈಕಾಮೃತ ದಾಯಿಕಾ** = **ಅನ್ಯ** = ಬೇರೆ ನಿಷ್ಕಾಮಭಕ್ತರಿಗೆ, **ಏಕಾಮೃತ** = ಮುಖ್ಯವಾದ ಅಮೃತ ರೂಪಮುಕ್ತಿಯನ್ನೇ, **ದಾಯಿಕಾ** = ಕೊಡುವ, **ಸಾ** = ಆ, **ಆರ್ಯಪಾದುಕಾ** = ಪೂಜ್ಯ ರಾದ ರಾಘವೇಂದ್ರರ ಪಾದುಕೆಯು, **ಕಾಲೇ ಕಾಲೇ** = ಆಗಾಗ್ಗೆ ಸಂಭವಿಸುವ, **ಅಘ ಕಾರ್ಪಾಸಂ** = ಪಾಪಗಳೆಂಬ ಹತ್ತಿಯನ್ನು, **ದಹ್ಯಾತ್** = ಸುಟ್ಟುಹಾಕಲಿ.

ಮಾಲಿಕಾಂ

ಸುಮುಖಿ ಸುಂದರಿ ಕೌಸುಮಮಾಲಿಕಾಂ
ಸತತ ತಾರಕ ಸಂಭ್ರಮ ದಾಯಿಕಾಮ್।

ಸತರಲಾಂ ನಲಿನೇನ ತವಾಂಗಕೇ
ಪ್ರಣಿದಧಾಮಿ ಗುರೂತ್ತಮ ಪಾದುಕೇ ॥ ೨೦॥

ಹೇ ಸುಮುಖಿ = ಸಮೀಚೀನವಾದ ಮುಖವುಳ್ಳ, **ಸುಂದರಿ** = ಮನೋಹರವಾದ ಅವಯವಗಳುಳ್ಳ, **ಗುರೂತ್ತಮ ಪಾದುಕೇ** = ಗುರುಶ್ರೇಷ್ಠರಾದ ರಾಘವೇಂದ್ರರ ಪಾದುಕೆಗಳೇ, ಸತತ ತಾರಕ ಸಂಭ್ರಮದಾಯಿಕಾಂ - **ಸತತ** = ವ್ಯಾಪ್ತವಾದ, **ತಾರಕ ಸಂಭ್ರಮ** = ನಕ್ಷತ್ರಗಳ ಭ್ರಮೆಯನ್ನುಂಟುಮಾಡುವ, **ಸತರಲಾಂ** = ಚಂಚಲವಾದ, **ನಲಿನೇನ ಯುಕ್ತಾಂ** = ಕಮಲದಿಂದ ಯುಕ್ತವಾದ, **ಕೌಸುಮಮಾಲಿಕಾಂ** = ಕುಸುಮ ಮಾಲೆಯನ್ನು, **ಪ್ರಣಿದದಾಮಿ** = ಭಕ್ತ್ಯಾದರಪೂರ್ವಕವಾಗಿ ನೀಡುವೆನು.

ಮಾಲಿಕಾಂ ಸಮರ್ಪಯಾಮಿ

ಪುಷ್ಪಾಂಜಲಿಂ

ಶ್ರೀ ರಾಘವೇಂದ್ರ ಗುರುರಾಜಪದಾರವಿಂದ-
ಸಂಸರ್ಗಲಬ್ಧಸುಗುಣ್ಯೈಃ ಜಗತಿ ಪ್ರಪೂಜ್ಯ।
ಶ್ರೀಪಾದುಕೇ ಸುಮುಖಿ ಸುಂದರಿ ಸೂಕ್ಷ್ಮಮಧ್ಯೇ
ಪುಷ್ಪಾಂಜಲಿಂ ವೃಣು ವಿಧೇಹಿ ಸುಮಂಗಲಂ ಮೇ ॥ ೨೧॥

ಶ್ರೀ ರಾಘವೇಂದ್ರ ಗುರುರಾಜಪದಾರವಿಂದ ಸಂಸರ್ಗಲಬ್ಧಸುಗುಣ್ಯೈಃ - **ಶ್ರೀ ರಾಘವೇಂದ್ರ ಗುರುರಾಜ ಪದಾರವಿಂದ** = ಗುರುರಾಜರಾದ ಶ್ರೀ ರಾಘವೇಂದ್ರರ ಪಾದಪದ್ಮಗಳಲ್ಲಿ, **ಸಂಸರ್ಗ** = ಸಂಪರ್ಕದಿಂದ, **ಲಬ್ಧ** = ಪಡೆದ, **ಸುಗುಣ್ಯೈಃ** = ಶ್ರೇಷ್ಠವಾದ ಗುಣಗಳಿಂದ, **ಜಗತಿ** = ಜಗತ್ತಿನಲ್ಲಿ, **ಪ್ರಪೂಜ್ಯ** = ಪೂಜೆಗೊಳ್ಳುವ, **ಸುಂದರಿ** = ನೋಡಲು ಸುಂದರವಾದ, **ಸುಮುಖಿ** = ಸುಮುಖವುಳ್ಳ, **ಸೂಕ್ಷ್ಮಮಧ್ಯೆ** = ನಡುಸಣ್ಣವುಳ್ಳ, **ಶ್ರೀ ಪಾದುಕೇ** = ಕಾಂತಿಯುಕ್ತವಾದ ಪಾದುಕೆಗಳಲ್ಲಿ, **ಪುಷ್ಪಾಂಜಲಿಂ** = ಪುಷ್ಪಾಂಜಲಿಯನ್ನು (ಬೊಗಸೆ ತುಂಬ ಪುಷ್ಪಗಳನ್ನು), **ವೃಣು** = ಸ್ವೀಕರಿಸು, **ಮೇ** = ನನಗೆ, **ಸುಮಂಗಲಂ** = ನಿತ್ಯಮಂಗಲವನ್ನು, **ವಿಧೇಹಿ** = ಉಂಟುಮಾಡು.

ಪುಷ್ಪಾಂಜಲಿಂ ಸಮರ್ಪಯಾಮಿ

ಪ್ರದಕ್ಷಿಣ ನಮಸ್ಕಾರಂ

ಪ್ರದಕ್ಷಿಣ ನಮಸ್ಕಾರೌ ಕರಿಷ್ಯೇ ಪಾದುಕೇ ತವ।
ಮಾಮುದ್ಧರ ಕೃಪಾಪೂರ್ಣೇ ಭವದುಃಖಾಂಬುಧೇರ್ದ್ರುತಮ್ ॥ ೨೨॥

ತವ = ನಿನ್ನ, **ಪಾದುಕೇ** = ಪಾದುಕೆಗಳಲ್ಲಿ, **ಪ್ರದಕ್ಷಿಣ ನಮಸ್ಕಾರೌ** = ಪ್ರದಕ್ಷಿಣೆ ಮತ್ತು ನಮಸ್ಕಾರಗಳನ್ನು, **ಕರಿಷ್ಯೇ** = ಮಾಡುವೆನು, **ಹೇ ಕೃಪಾಪೂರ್ಣೇ** = ದಯಾ ಪೂರ್ಣವಾದ ಪಾದುಕೆಯೇ, **ಭವದುಃಖಾಂಬುಧೇಃ** = ಸಂಸಾರವೆಂಬ ದುಃಖ ಸಾಗರದ ದೆಶೆಯಿಂದ, **ದ್ರುತಂ** = ಬೇಗನೇ, **ಮಾಂ** = ನನ್ನನ್ನು, **ಉದ್ಧರ** = ಉದ್ಧಾರ ಮಾಡು.

ಪ್ರದಕ್ಷಿಣ ನಮಸ್ಕಾರಂ ಸಮರ್ಪಯಾಮಿ

ಅನೇಕಧಾ ಯಥಾಯೋಗ್ಯಮುಪಚಾರಾನ್ ಸಮರ್ಪಯೇತ್।
ಕೃತ್ವಾಽಽಭೀಷ್ಟ ಪ್ರಾರ್ಥನಾಂ ಚ ಸರ್ವತಂತ್ರೇ ಸಮರ್ಪಯೇತ್ ॥ ೨೩॥

ಅನೇಕಧಾ = ಅನೇಕ ರೀತಿಯಾದ, **ಯಥಾಯೋಗ್ಯಂ** = ತನ್ನ ಯೋಗ್ಯತೆಗೆ ಅನುಸಾರವಾಗಿ, **ಉಪಚಾರಾನ್** = ಉಪಚಾರಗಳನ್ನು, **ಸಮರ್ಪಯೇತ್** = ಸಮರ್ಪಿಸಬೇಕು, **ಅಭೀಷ್ಟಪ್ರಾರ್ಥನಾಂ** = ಅಭೀಷ್ಟಪ್ರಾರ್ಥನೆಯನ್ನು (ಅಭೀಷ್ಟವನ್ನು ನೀಡು ಎಂಬ ಪ್ರಾರ್ಥನೆಯನ್ನು), **ಸರ್ವತಂತ್ರೇ** = ಸ್ವತಂತ್ರರಾದ ಗುರುರಾಜರಲ್ಲಿ, **ಸಮರ್ಪಯೇತ್** = ಅರ್ಪಿಸಬೇಕು.

ಶ್ರೀ ಗುರೋಶ್ಚರಣಪಂಕಜ ಸಂಗಾನ್ಮೋದಮಾನಹೃದಯೇ ಮೃದುಲಾಂಗಿ।
ಇಷ್ಟಪೂರ್ತಿರಧುನಾ ಮಮ ಭೂಯಾಃ ಶಿಷ್ಟಶೀರ್ಷಪರಿಪಾಲಿತಮೂರ್ತೇ॥ ೨೪॥

ಶ್ರೀ ಗುರೋಃ = ಶ್ರೀ ರಾಘವೇಂದ್ರರ, **ಚರಣಪಂಕಜಸಂಗಾತ್** = ಪಾದ ಕಮಲದ ಸಂಸರ್ಗದಿಂದ, **ಮೋದಮಾನಹೃದಯೇ** = ಸಂತೋಷಪಡುತ್ತಿರುವ ಹೃದಯವುಳ್ಳ, **ಮೃದುಲಾಂಗಿ** = ಮೃದುವಾದ ಅವಯವವುಳ್ಳ, **ಶಿಷ್ಟಶೀರ್ಷಪರಿಲಾಲಿತ ಮೂರ್ತೇ** = **ಶಿಷ್ಟಶೀರ್ಷ** = ಶ್ರೇಷ್ಠಜನರಿಂದ ತಲೆಬಾಗಿ, **ಪರಿಲಾಲಿತ** = ಗೌರವಿಸಲ್ಪಟ್ಟ, **ಮೂರ್ತೇ** = ದೇಹವುಳ್ಳವಳೇ, **ಅಧುನಾ** = ಈಗ, **ಮಮ** = ನನಗೆ, **ಇಷ್ಟಪೂರ್ತಿಃ ಭೂಯಾಃ** = ಇಷ್ಟಾರ್ಥಗಳನ್ನು ಪೂರ್ಣಮಾಡಿರಿ.

ಪಾಹಿ ಮಾಂ ಸುಮುಖಿ ವತ್ಸಲಭಾವಾದ್ ವಾಹಿಕಾ ತ್ವಮಸಿ ಭಕ್ತಭರಸ್ಯ।
ಯಾಹಿ ಮೇ ವಿಪದ ಉಚ್ಛ್ರಿತಸರ್ಪಾಃ ತಾ ಹಿನಸ್ತಿ ನಮನಂ ತವ ಪಾದೂ॥ ೨೫॥

ಹೇ ಸುಮುಖಿ = ಶೋಭನವುಳ್ಳ ಪಾದುಕೆಯೇ, **ಮಾಂ** = ನನ್ನನ್ನು, **ವತ್ಸಲ ಭಾವಾತ್** = ಪುತ್ರವಾತ್ಸಲ್ಯದಿಂದ, **ಪಾಹಿ** = ರಕ್ಷಿಸು, **ತ್ವಂ** = ನೀನು, **ಭಕ್ತಭರಸ್ಯ** =

ಭಕ್ತರ ಭಾರವನ್ನು, **ವಾಹಿಕಾ** = ಹೊರುವವಳು, **ಅಸಿ** = ಆಗಿದ್ದೀ, (ಭಕ್ತರನ್ನು ಸಲಹುವ ಭಾರವನ್ನು ವಹಿಸುವವಳು), **ಮೇ** = ನನ್ನ, **ಉಚ್ಛ್ರಿತಸರ್ಪಾಃ** = ಹೆಡೆಯನ್ನು ಎತ್ತಿರುವ ಸರ್ಪಗಳಂತಿರುವ, **ವಿಪದಃ** = ಆಪತ್ತುಗಳು, **ಯಾಹಿ** = ಹೋಗುವಂತಾಗಲಿ.

ಪಾಯಾಃ ಮಾಂ ಶ್ರೀ ಗುರುರಾಘವೇಂದ್ರಚರಣಾಪಾಯಾಪಹಾರೋದ್ಯತೇ
ಮಾಯಾಪಾಶವಿನಾಶಿನಿ ಪ್ರಭಜತಾಂ ಹೇಯಾಖಿಲಾರೋಜ್ಝಿತೇ।
ದಾಯಾದೇಽಮರಪಾದಪಸ್ಯ ಚ ಪರೀಧೂಯಾಖಿಲಂ ಪಾತಕಂ
ಜಾಯಾಪುತ್ರಗೃಹಾದಿ ಸಂಸ್ಕೃತಿಷು ಮೇ ಭೂಯಾಃ ಮುದೇ ಪಾದುಕೇ ॥ ೨೬॥

ಗುರುರಾಘವೇಂದ್ರ ಚರಣಾಪಾಯಾಪಹಾರೋದ್ಯತೇ = **ಗುರುರಾಘವೇಂದ್ರ ಚರಣ** = ರಾಘವೇಂದ್ರರ ಚರಣಗಳಲ್ಲಿ ಆಸಕ್ತರಾದ ಭಕ್ತರ, **ಅಪಾಯಾಪಹಾರ** = ಅಪಾಯಗಳನ್ನು ಪರಿಹರಿಸುವುದರಲ್ಲಿ, **ಉದ್ಯತೇ** = ಉದ್ಯುಕ್ತಳಾದ, **ಪ್ರಭಜತಾಂ** = ಭಕ್ತರ, **ಮಾಯಾಪಾಶವಿನಾಶಿನಿ** = ಮಾಯಾಪಾಶವನ್ನು ನಾಶಮಾಡುವ, **ಹೇಯೋಽಖಿಲಾರೋಜ್ಝಿತೇ** = ಹೇಯವಾದ ಸಮಸ್ತ ಅಮಂಗಳಗಳಿಂದ ಮುಕ್ತವಾದ, **ಅಮರಪಾದಪಸ್ಯ** = ಕಲ್ಪವೃಕ್ಷದ, **ದಾಯಾದೇ** = ಬಂಧುವಾಗಿರುವ, **ಅಖಿಲಂ ಪಾತಕಂ ಪರಿಧೂಯ** = ನಿಖಿಲಪಾಪಗಳನ್ನು ಹೋಗಲಾಡಿಸಿ, **ಜಾಯಾಪುತ್ರಗೃಹಾದಿ ಸಂಸ್ಕೃತಿಷು** = ಪತ್ನೀಪುತ್ರ, ಮನೆ ಮೊದಲಾದ ಸಂಸಾರದಲ್ಲಿ, **ಹೇ ಪಾದುಕೇ** = ಪಾದುಕೆಗಳೇ, **ಮೇ** = ನನ್ನ, **ಮುದೇ** = ಸಂತೋಷಕ್ಕಾಗಿ, **ಭೂಯಾಃ** = ಆಗಿರಿ.

ಇತಿ ಶ್ರೀ ಕೃಷ್ಣಾವಧೂತ ವಿರಚಿತೇ ಶ್ರೀ ರಾಘವೇಂದ್ರ ತಂತ್ರೇ
ಪ್ರತ್ಯಕ್ಷಸಿದ್ಧಿಪ್ರದೇ ಪಾದುಕಾಪೂಜಾವಿಧಾನಂ ತ್ರಯೋದಶ ಪಟಲಃ

ಚತುರ್ದಶ ಪಟಲಮ್

ಕ್ಷಮಾಪಣ ಸ್ತೋತ್ರಮ್

ಶ್ರೀ ಲಕ್ಷ್ಮ್ಯುಪೇತಂ ದಕ್ಷಿಣಾಂಕೇ ವಸಂತ್ಯಾ
ಚಂಡಜ್ಯೋತಿರ್ಜ್ಯೋತಿಷಂ ತಾಮ್ರವರ್ಣಂ।
ಶಯ್ಯಾಕಾರೋಽನಂತಭೋಗೋಪವಿಷ್ಟಂ
ವಿಷ್ಣುಂ ಸ್ವಪ್ನೇಽದರ್ಶಯದ್ ಯೋ ಗುರುರ್ಮೇ ॥೧॥

ಯಃ = ಯಾವ, **ಯೇ** = ನನ್ನ, **ಗುರುಃ** = ಗುರುಗಳಾದ ಶ್ರೀ ರಾಘವೇಂದ್ರರು, **ಮೇ** = ನನಗೆ, **ದಕ್ಷಿಣಾಂಕೇ** = ಬಲತೊಡೆಯ ಮೇಲೆ, **ವಸಂತ್ಯಾ** = ಕುಳಿತಿರುವ, **ಶ್ರೀಲಕ್ಷ್ಮ್ಯಾ** = ಶ್ರೀ ಲಕ್ಷ್ಮೀದೇವಿಯಿಂದ, **ಉಪೇತಂ** = ಕೂಡಿರುವ, **ಚಂಡಜ್ಯೋತಿರ್ಜ್ಯೋತಿಷಂ** = ಸೂರ್ಯನಂತೆ ಪ್ರಕಾಶಮಾನನಾದ, **ತಾಮ್ರವರ್ಣಂ** = ಕೆಂಪಾದ ಬಣ್ಣವಿರುವ, **ಶಯ್ಯಾಕಾರಾನಂತಭೋಗೋಪವಿಷ್ಟಂ** = ಶಯ್ಯಾಕಾರ ಹಾಸಿಗೆಯಾಕಾರದ, **ಅನಂತ** = ಶೇಷನ, **ಬೋಗ** = ದೇಹದಲ್ಲಿ, **ಉಪವಿಷ್ಟಂ** = ಕುಳಿತಿರುವ, **ವಿಷ್ಣುಂ** = ವಿಷ್ಣುವನ್ನು, **ಸ್ವಪ್ನೇ** = ಸ್ವಪ್ನದಲ್ಲಿ, **ಅದರ್ಶಯತ್** = ತೋರಿಸಿದರು.

ಮುಖ್ಯಪ್ರಾಣಂ ಸ್ವರ್ಣಘಂಟೋಪರಿಸ್ಥಂ
ಸಂದರ್ಶ್ಯಾರಾದಾಭಿಮುಖ್ಯೇನ ಪಶ್ಚಾತ್।
ಸ್ವಾಪತ್ಯಂ ಮಾಂ ಸ್ವಾಂತಿಕೇ ಸೂಪವೇಶ್ಯ
ಸ್ವಾತ್ಮಾನಂ ಮೇಽದರ್ಶಯದ್ ಯಃ ಪ್ರಮೋದಾತ್ ॥೨॥

ಪಶ್ಚಾತ್ = ಅನಂತರ, **ಸ್ವರ್ಣಘಂಟೋಪರಿ** = ಸುವರ್ಣನಿರ್ಮಿತ ಘಂಟೆಯ ಮೇಲೆ, **ಸ್ಥಂ** = ಕುಳಿತಿರುವ, **ಮುಖ್ಯಪ್ರಾಣಂ** = ಮುಖ್ಯಪ್ರಾಣದೇವನನ್ನು, **ಆರಾತ್** = ಸಮೀಪದಿಂದ, **ಸಂದರ್ಶ್ಯ** = ತೋರಿಸಿ, **ಸ್ವಾಪತ್ಯಂ** = ತನ್ನ ಪುತ್ರನಾದ, **ಮಾಂ** = ನನ್ನನ್ನು, **ಸ್ವಾಂತಿಕೇ** = ಬಹಳ ಹತ್ತಿರದಲ್ಲಿ, **ಆಭಿಮುಖ್ಯೇನ** = ತನ್ನ ಎದುರುಗಡೆ, **ಸೂಪವೇಶ್ಯ** = ಕುಳ್ಳಿರಿಸಿ, **ಸ್ವಾತ್ಮಾನಂ** = ತನ್ನನ್ನು, **ಪ್ರಮೋದಾತ್** = ಸಂತೋಷದಿಂದಲೇ, **ಮೇ** = ನನಗೆ, **ಅದರ್ಶಯತ್** = ತೋರಿಸಿದರು.

ಸಾಕ್ಷಾತ್ ಪುತ್ರಾಪೇಕ್ಷಯಾ ವತ್ಸಲಂ ಮ-
ಯ್ಯೇನಂ ನಿತ್ಯಂ ಮಾನಸೇ ಮೇ ವಸಂತಂ।
ಸ್ಮಾರಂ ಸ್ಮಾರಂ ಸ್ಥಾರತಾಪಾವಿಲೋಪೀ
ಸ್ವಚ್ಛೋಽಹಂ ಶ್ರೀ ರಾಘವೇಂದ್ರ ಪ್ರಸಾದಾತ್ ॥ ೩॥

ಸಾಕ್ಷಾತ್ = ಸಾಕ್ಷಾತ್ತಾಗಿ, **ಪುತ್ರಾಪೇಕ್ಷಯಾ** = ಪುತ್ರನಿಗಿಂತಲೂ, **ಮಯಿ** = ನನ್ನಲ್ಲಿ, **ವತ್ಸಲಂ** = ಪ್ರೀತಿಯನ್ನಿಟ್ಟಿರುವ, **ಮೇ** = ನನ್ನ, **ಮಾನಸೇ** = ಮನಸ್ಸಿನಲ್ಲಿ, **ನಿತ್ಯಂ** = ಯಾವಾಗಲೂ, **ವಸಂತಮ್** = ವಾಸಮಾಡುತ್ತಿರುವ, **ಸ್ಮಾರಂ ಸ್ಮಾರಂ** = ಪುನಃ ಪುನಃ ಸ್ಮರಿಸುವವರ, **ಸ್ಥಾರತಾಪಾವಿಲೋಪೀ** = ಸ್ಥಿರವಾದ ತಾಪತ್ರಯವನ್ನು ದೂರಮಾಡುವ, **ಶ್ರೀರಾಘವೇಂದ್ರ ಪ್ರಸಾದಾತ್** = ರಾಘವೇಂದ್ರರ ಅನುಗ್ರಹದಿಂದ, **ಅಹಂ** = ನಾನು, **ಸ್ವಚ್ಛಂ** = ಶುದ್ಧನಾಗಿದ್ದೇನೆ.

ಯಸ್ಮಾದಸ್ಮಿನ್ ರಾಘವೇಂದ್ರಾರ್ಯತಂತ್ರೇ
ಪೂರ್ಣೇ ಜಾತೇ ಸ್ವಪ್ನ ಏವಂ ವಿಧೋಽಭೂತ್।
ತಸ್ಮಾದಸ್ಯ ಶ್ರಾವಣಾತ್ ಪಾಠತೋಽಪಿ
ಪ್ರಾಣದ್ವಾರೇಣಾಪರೋಕ್ಷ್ಯಂ ಹರೇಃ ಸ್ಯಾತ್ ॥ ೪॥

ಯಸ್ಮಾತ್ = ಯಾವ ಕಾರಣದಿಂದ, **ಅಸ್ಮಿನ್** = ಈ, **ರಾಘವೇಂದ್ರಾರ್ಯ ತಂತ್ರೇ** = ರಾಘವೇಂದ್ರ ತಂತ್ರವು, **ಪೂರ್ಣೇ ಜಾತೇ** = ಪೂರ್ಣವಾಗುತ್ತಿರಲು, **ಏವಂ ವಿಧಃ** = ಹಿಂದೆ ತಿಳಿಸಿದ ರೀತಿಯಂತೆ, **ಸ್ವಪ್ನಃ** = ಕನಸು, **ಅಭೂತ್** = ಆಯಿತೋ, **ತಸ್ಮಾತ್** = ಆ ಕಾರಣದಿಂದ, **ಅಸ್ಯ** = ಈ ರಾಘವೇಂದ್ರ ತಂತ್ರದ, **ಶ್ರಾವಣಾತ್** = ಶ್ರವಣ ಮಾಡುವುದು, ಶ್ರವಣವನ್ನು ಪಠಿಸುವುದರಿಂದ, **ಪಾಠತೋಽಪಿ** = ಪಠಣದಿಂದಲೂ, **ಪ್ರಾಣದ್ವಾರೇಣ** = ಪ್ರಾಣದೇವನ ಮೂಲಕ, **ಹರೇಃ** = ಶ್ರೀ ಹರಿಯು, **ಆಪರೋಕ್ಷ್ಯಂ** = ಅಪರೋಕ್ಷವು, **ಸ್ಯಾತ್** = ಆಗುತ್ತದೆ.

ಲಕ್ಷ್ಮೀಕಾಂತೇ ಸ್ವಾಪರೋಕ್ಷೀಕೃತೇಽಸ್ಮಿನ್
ಕಿಂ ದುಸ್ಸಾಧ್ಯಂ ದುಃಖಬಂಧಃ ಕಥಂ ಸ್ಯಾತ್।
ಗ್ರಂಥಂ ಚಾಮುಂ ರಾಘವೇಂದ್ರಾರ್ಯತಾತಃ
ಸ್ವೀಚಕ್ರೇ ಯತ್ ತೇನ ಚಾಸಂ ಕೃತಾರ್ಥಃ ॥ ೫॥

ಅಸ್ಮಿನ್ = ಈ, **ಲಕ್ಷ್ಮೀಕಾಂತೇ** = ಲಕ್ಷ್ಮೀರಮಣನು, **ಸ್ವಾಪರೋಕ್ಷೀಕೃತೇ** =

ತನಗೆ ಅಪರೋಕ್ಷನಾಗಲು, **ದುಃಸಾಧ್ಯಂ** = ಅಸಾಧ್ಯವಾದದ್ದು, **ಕಿಮ್** = ಏನಿದೆ, **ದುಃಖಬಂಧಃ** = ದುಃಖಪ್ರದವಾದ ಸಾಂಸಾರಿಕಬಂಧನವು, **ಕಥಂ ಸ್ಯಾತ್** = ಹೇಗೆ ಆದೀತು? **ಅಮುಂ** = ಈ, **ಗ್ರಂಥಂ ಚ** = ಗ್ರಂಥವನ್ನಾದರೂ, **ರಾಘವೇಂದ್ರಾರ್ಯತಾತಃ** = ತಂದೆಯಾದ ರಾಘವೇಂದ್ರರು, **ಸ್ವೀಚಕ್ರೇ ಇತಿ ಯತ್** = ಸ್ವೀಕಾರ ಮಾಡಿದ್ದಾರೆಂಬ ಯಾವ ಪ್ರಸಿದ್ಧ ಸಂಗತಿಯಿದೆಯೋ, **ತೇನ** = ಅದರಿಂದಲೇ, **ಕೃತಾರ್ಥಃ** = ಕೃತಕೃತ್ಯನಾಗಿ (ಧನ್ಯನಾಗಿ), **ಆಸಂ** = ಆದೆನು.

ತ್ವಂ ಮೇ ಮಾತಾ ತ್ವಂ ಪಿತಾ ತ್ವಂ ಸಖಾ ಚ
ತ್ವಂ ಮೇ ಬಂಧುಃ, ತ್ವಂ ಚ ದಾತಾ ದಯಾಲುಃ।
ತ್ವಂ ಮೇ ರಾಜಾ ಪಾಲಕಸ್ತ್ವಂ ಗುರುಶ್ಚ
ಪುತ್ರೋಽಹಂ ತೇ ಪಾಹಿ ಮಾಂ ರಾಘವೇಂದ್ರ ॥ ೬॥

ಹೇ **ರಾಘವೇಂದ್ರ** = ರಾಘವೇಂದ್ರರೇ, **ತ್ವಂ** = ನೀವೇ, **ಮೇ** = ನನಗೆ, **ಮಾತಾ** = ತಾಯಿಯು, **ತ್ವಂ** = ನೀವೇ, **ಪಿತಾ** = ಪಾಲಕರು, **ತ್ವಂ** = ನೀವೇ, **ಸಖಾ ಚ** = ಮಿತ್ರನು, **ತ್ವಂ** = ನೀವೇ, **ಮೇ** = ನನಗೆ, **ಬಂಧುಃ** = ಬಂಧುವು, **ತ್ವಂ** = ನೀವೇ, **ದಾತಾ** = ದಾನಿಯು, **ದಯಾಲುಃ** = ಅತಿ ಕರುಣೆಯುಳ್ಳವರು, **ತ್ವಂ** = ನೀವೇ, **ಮೇ** = ನನಗೆ, **ರಾಜಾ** = ಅಧಿಪತಿಯು, **ತ್ವಂ** = ನೀವೇ, **ಪಾಲಕಃ ಗುರುಶ್ಚ** = ವಿದ್ಯಾದಾನಾದಿಗಳಿಂದ ಪಾಲಿಸುವ ಗುರುವೂ ಆಗಿರುವಿರಿ, **ಅಹಂ** = ನಾನಾದರೂ, **ತೇ** = ನಿಮ್ಮ, **ಪುತ್ರಃ** = ಪುತ್ರನು, **ಮಾಂ** = ನನ್ನನ್ನು, **ಪಾಹಿ** = ರಕ್ಷಿಸಿರಿ.

ಸರ್ವಜ್ಞ ತ್ವಂ ಮಾಮಕಂ ಸರ್ವವೃತ್ತಂ
ಜಾನಾಸ್ಯೇವ ಪ್ರತ್ಯಹಂ ಕಿಂ ವದಾಮಿ।
ಯೇ ಯೇ ಪಾಪಾಃ ಸಂತಿ ಲೋಕೇಷು ತೇಷಾಂ
ಅಗ್ರೇ ಗಣ್ಯೇ ನಾಸ್ತಿ ಮೇ ಸದ್ಗುಣೋಽಣುಃ ॥ ೭॥

ಹೇ **ಸರ್ವಜ್ಞ** = ಎಲ್ಲೋ ಸರ್ವವನ್ನು ತಿಳಿದಿರುವ ರಾಘವೇಂದ್ರ ಗುರುಗಳೇ, **ತ್ವಂ** = ನೀವು, **ಮಾಮಕಂ** = ಸಂಬಂಧಿಯಾದ, **ಸರ್ವವೃತ್ತಂ** = ಸಮಸ್ತಕಾರ್ಯಕಲಾಪವನ್ನೂ, **ಜಾನಾಸ್ಯೇವ** = ತಿಳಿದೇ ಇರುವಿರಿ, **ಪ್ರತ್ಯಹಂ** = ಪ್ರತಿದಿವಸವೂ, **ಕಿಂ ವದಾಮಿ** = ಏನು ಹೇಳಲಿ? (ಹೇಳುವ ಅವಶ್ಯಕತೆ ಇರುವುದಿಲ್ಲ), **ಲೋಕೇಷು** = ಲೋಕಗಳಲ್ಲಿ, **ಯೇ ಯೇ ಪಾಪಾಃ** = ಯಾವ ಯಾವ ಪಾಪಿಗಳಿರುವರೋ, **ತೇಷಾಂ** = ಅವರ ಮಧ್ಯದಲ್ಲಿ, **ಅಗ್ರೇ** = ಮೊದಲು, **ಗಣ್ಯೇಃ** = ಎಣಿಸಲು ಯೋಗ್ಯನಾದ, **ಮೇ**

= ನನ್ನಲ್ಲಿ, ಸದ್ಗುಣಾಃ = ಸಮೀಚೀನವಾದ ಗುಣವು, ಅಣುಃ = ಅಣುವಿನಷ್ಟು, ನಾಸ್ತಿ = ಇರುವುದಿಲ್ಲ.

ಏತಾದೃಕ್ಷಂ ಚೋದ್ಧರೇರ್ಮಾಂ ವಿಧೇಯಂ
ಸತ್ಯಂ ಖ್ಯಾತಂ ತೇ ದಯಾಲುತ್ವಮೇತತ್।
ಸರ್ವಂ ತ್ವಯ್ಯೇವಾರ್ಪಿತಂ ಮದ್ಗುರುತ್ವಾತ್
ಕಾರ್ಯಾಕಾರ್ಯಂ ಕರ್ಮ ತತ್ತತ್‌ಫಲಂ ಚ ॥ ೮॥

ಏತಾದೃಕ್ಷಂ = ಇಂತಹ ಪಾಪಿಯಂತಿರುವ, **ವಿಧೇಯಂ** = ಈಗ ವಿನೀತನಾಗಿರುವ, **ಮಾಂ ಚ** = ನನ್ನನ್ನೂ ಕೂಡ, **ಉದ್ಧರೇಃ** = ಉದ್ಧಾರ ಮಾಡುವಿರೆಂದರೆ, **ಏತತ್** = ಇದು, **ತೇ** = ನಿಮ್ಮ, **ದಯಾಲುತ್ವಂ** = ದಯಾಪೂರ್ಣತೆಯು, **ಸತ್ಯಂ** = ಖಂಡಿತವಾಗಿಯೂ, **ಖ್ಯಾತಂ** = ಪ್ರಸಿದ್ಧವಾಯಿತು, **ಸರ್ವಂ** = ಸಮಸ್ತವಾದ, **ಕಾರ್ಯಾಕಾರ್ಯಂ** = ಯೋಗ್ಯಾಯೋಗ್ಯಗಳಾದ ಆಯಾಯ ಫಲಗಳೂ ಕೂಡ, **ಕರ್ಮ** = ಕರ್ಮವು, **ತತ್ತತ್ಫಲಂ ಮದ್ಗುರುತ್ವಾತ್** = ನನ್ನ ಗುರುವಾದ್ದರಿಂದ, **ತ್ವಯಿ** = ನಿಮ್ಮಲ್ಲಿಯೇ, **ಅರ್ಪಿತಂ** = ಅರ್ಪಿಸಲ್ಪಟ್ಟಿದೆ.

ತತ್ರ ಸ್ವೀಕುರ್ವಾತ್ಮನೋ ಯದ್ಯದಿಷ್ಟಂ
ಪುತ್ರತ್ವಾನ್ಮೇಽಥೇತರತ್ವಂ ಸಹಸ್ವ।
ಅತ್ರ ಪ್ರೋಕ್ತಂ ಮೇ ಋತಂ ವಾಽನೃತಂ ವಾ
ತತ್ ಕ್ಷಾಂತ್ವಾ ಮೋದಮುಚ್ಚೈರುಪಾಗಾಃ ॥ ೯॥

ತತ್ರ = ಆ ಕರ್ಮಗಳು ಹಾಗೂ ಅದರ ಫಲಗಳಲ್ಲಿ, **ಆತ್ಮನಃ** = ತಮಗೆ (ನಿಮಗೆ), **ಯದ್ಯದ್** = ಯಾವುದು ಯಾವುದು, **ಇಷ್ಟಂ** = ಅಭಿಪ್ರೇತವಾಗಿದೆಯೋ, ಅದನ್ನು, **ಮೇ** = ನನ್ನ, **ಪುತ್ರತ್ವಾತ್** = ಪುತ್ರತ್ವ ರೂಪ ಧರ್ಮದಿಂದ (ನಾನು ತಮ್ಮ ಪುತ್ರನೆಂಬ ಕಾರಣದಿಂದ), **ಸ್ವೀಕುರು** = ಸ್ವೀಕರಿಸಿರಿ, **ಅಥ** = ಅಥವಾ (ಇದಕ್ಕಿಂತ ಭಿನ್ನವಾಗಿ), **ಇತರತ್** = ಬೇರೆಯಾದದ್ದನ್ನು (ನಿನಗೆ ಪ್ರಿಯವಲ್ಲದ ವಿಷಯಗಳಿದ್ದರೆ ಅದನ್ನು), **ತ್ವಂ** = ನೀವು, **ಸಹಸ್ವ** = ಸಹಿಸಿ ರಕ್ಷಿಸಿರಿ, **ಹೇ ತಾತ** = ತಂದೆಯೇ, **ಅತ್ರ** = ಇಲ್ಲಿ, **ಪ್ರೋಕ್ತಂ** = ಹೇಳಲ್ಪಟ್ಟಿದ್ದು, **ಋತಂ** = ಸತ್ಯವಾಗಲೀ, **ವಾ** = ಅಥವಾ, **ಅನೃತಂ** = ಸತ್ಯಕ್ಕೆ ದೂರವಾದ ಸಂಗತಿಯಾಗಲಿ, **ಕ್ಷಾಂತ್ವಾ** = ಕ್ಷಮಿಸಿ, **ಉಚ್ಚೈಃ** = ಉತ್ಕೃಷ್ಟವಾಗಿ, **ಮೋದಂ** = ಸಂತೋಷವನ್ನು, **ಉಪಾಗಾಃ** = ಹೊಂದಿರಿ.

ತಾತ ಶ್ರೀ ಗುರುರಾಘವೇಂದ್ರಯತಿರಾಟ್ ಶ್ರೀ ರಾಘವೇಂದ್ರಪ್ರಭೋ।
ಲೋಕಾಗಣ್ಯಗುಣೌಘಲಾಲಿತ ತವ ಸ್ತೋತ್ರಾಯ ನಾಽಲಂ ವಚಃ।
ನಾಽಲಂ ಬುದ್ಧಿರಭೂತ್ ತವ ಸ್ತವವಿಧಿಪ್ರೋತ್ಸಾಹಮಾನಸ್ಯ ಮೇ
ಕಿಂತು ಶ್ರೋತೃಪಠಜ್ಜನಾಲಸತಯಾ ತೇ ಜಾಜ್ಞಯಾ ಪೂರ್ಯತೇ ॥ ೧೦॥

ಹೇ ತಾತ = ತಂದೆಯಾದ, ಶ್ರೀ ಗುರುರಾಘವೇಂದ್ರಯತಿರಾಟ್ = ಗುರುಗಳಾದ ಹಾಗೂ ಯತಿಶ್ರೇಷ್ಠರಾದ, ಶ್ರೀ ರಾಘವೇಂದ್ರ ಪ್ರಭೋ = ಪ್ರಭುಗಳಾದ ಶ್ರೀ ರಾಘವೇಂದ್ರರೇ, **ಲೋಕಾಗಣ್ಯಗುಣೌಘಲಾಲಿತ** = **ಲೋಕಂ** = ಜನರಿಂದ, **ಅಗಣ್ಯ** = ಲೆಕ್ಕಮಾಡಲು ಬಾರದಿರುವಷ್ಟು, **ಗುಣೌಘ** = ಗುಣಸಮೂಹಗಳಿಂದ, **ಲಾಲಿತ** = ಗೌರವವನ್ನು ಹೊಂದಿದವರೇ, **ತವ** = ನಿಮ್ಮ, **ಸ್ತೋತ್ರಾಯ** = ಸ್ತೋತ್ರ ಮಾಡಲು, **ವಚಃ** = ಮಾತುಗಳು (ವಾಗಿಂದ್ರಿಯವು), **ಅಲಂ ನ** = ಸಮರ್ಥವಾಗುವುದಿಲ್ಲ, **ತವ** = ತಮ್ಮ, **ಸ್ತವವಿಧಿಪ್ರೋತ್ಸಾಹಮಾನಸ್ಯ** = ಸ್ತೋತ್ರಮಾಡುವ ವಿಧಾನವನ್ನು ಆಚರಿಸುವುದರಲ್ಲಿ ಪ್ರೋತ್ಸಾಹವನ್ನು ನೀಡುತ್ತಿರುವ, **ಮೇ** = ನನ್ನ, **ಬುದ್ಧಿಃ** = ಬುದ್ಧಿಯಾದರೂ, **ನ ಅಲಂ ಅಭೂತ್** = ಸಮರ್ಥವಾಗಲಿಲ್ಲ, **ಕಿಂತು** = ಆದರೆ, **ಶ್ರೋತೃಪಠಜ್ಜನಾಲಸತಯಾ** = **ಶ್ರೋತೃ** = ವಿಧಿವಿಧಾನವನ್ನು ಕೇಳಲಿಚ್ಛಿಸುವ ಭಕ್ತರು, **ಪಠಜ್ಜನ** = ಪಾರಾಯಣಾಸಕ್ತರಾದ ಭಕ್ತರು ಇವರುಗಳು, **ಅಲಸತಯಾ** = ಅನಾಸಕ್ತರಾದರೂ, **ತೇ** = ನಿಮ್ಮ, **ಆಜ್ಞಯಾ** = ಕೇವಲ ಆಜ್ಞೆಯಿಂದಲೇ, **ಪೂರ್ಯತೇ** = ಪೂರ್ಣ ಮಾಡಲ್ಪಡುತ್ತದೆ.

ಯಸ್ಯ ಯಸ್ಯಾಸ್ತಿ ದುರ್ದೈವಮೂಲ ನಿರ್ನಾಶನಾರ್ಹತಾ।
ತಸ್ಯ ತಸ್ಯೈವ ತಂತ್ರೇಽಸ್ಮಿನ್ ಆಸ್ಥಾಸ್ತೀತ್ಯಬ್ರವೀದ್ ಗುರುಃ ॥ ೧೧॥

ಯಸ್ಯ ಯಸ್ಯ = ಯಾರು ಯಾರಿಗೆ, **ದುರ್ದೈವ ಮೂಲ ನಿರ್ನಾಶನಾರ್ಹತಾ** = **ದುರ್ದೈವ** = ಕೆಟ್ಟ ದೈವದ (ಅದೃಷ್ಟದ) **ಮೂಲ** = ಮೂಲವಾದ ಪಾಪಕರ್ಮಗಳನ್ನು, **ನಿರ್ನಾಶನ** = ಮೂಲಸಹಿತ ನಾಶಮಾಡುವ, **ಅರ್ಹತಾ** = ಯೋಗ್ಯತೆಯು (ದುರಾದೃಷ್ಟಕ್ಕೆ ಮೂಲವಾದ ಕಾರಣವನ್ನು ನಾಶಮಾಡಿಕೊಳ್ಳುವ ಯೋಗ್ಯತೆ ಯಾರಿಗೆ ಇದೆಯೋ ಅವನಿಗೆ ಮಾತ್ರ), **ತಸ್ಯ ತಸ್ಯೈವ** = ಆ ವ್ಯಕ್ತಿಗಳಿಗೆ ಮಾತ್ರವೇ, **ಅಸ್ಮಿನ್ ತಂತ್ರೇ** = ಈ ರಾಘವೇಂದ್ರ ತಂತ್ರದಲ್ಲಿ, **ಆಸ್ಥಾ** = ಪಠಿಸುವ ಆಸಕ್ತಿಯು, **ಅಸ್ತಿ** = ಇರುತ್ತದೆ, **ಇತಿ** = ಹೀಗೆ, **ಗುರುಃ** = ಗುರುಗಳು, **ಅಬ್ರವೀತ್** = ಹೇಳಿದರು.

ಅಹಂ ಶ್ರೀ ಗುರುರಾಜೇನ ಪಿತ್ರಾ ಪ್ರತ್ಯಕ್ಷಚೋದಿತಃ।
ರಹಸ್ಯಂ ಸಫಲಂ ಚಷ್ಟ್ವಾ ನ ದೂಷ್ಯೇ ವಿದುಷಾಂ ಧುರಿ ॥ ೧೨॥

ಪಿತ್ರಾ = ತಂದೆಯಾದ, **ಶ್ರೀ ಗುರುರಾಜೇನ** = ಗುರುರಾಜರಿಂದ, **ಪ್ರತ್ಯಕ್ಷ ಚೋದಿತಃ** = ಪ್ರತ್ಯಕ್ಷವಾಗಿಯೇ ಪ್ರಚೋದನೆ ಮಾಡಲ್ಪಟ್ಟವರಾಗಿ, **ಸಫಲಂ** = ಸಫಲ ವಾಗುವ, **ರಹಸ್ಯಂ** = ರಹಸ್ಯವಿಷಯವನ್ನು, **ಚಷ್ಟ್ವಾ** = ಹೇಳಿರುವ, **ಅಹಂ** = ನಾನು, **ವಿಧುಷಾಂ ಧುರಿ** = ವಿದ್ವಾಂಸರ ಎದುರಿನಲ್ಲಿ, **ನ ದೂಷ್ಯೇ** = ದೂಷಿಸಲ್ಪಡಲಾರೆ.

ಇತಿ ಕೃಷ್ಣಾವಧೂತೇನ ವಶ್ಯವಾಣೀ ವಿಲಾಸಿನಾ।
ಶ್ರೀ ಗುರುಪ್ರೇಮಪುತ್ರೇಣ ಗುರುರಾಜ ಪ್ರಸಾದತಃ ॥ ೧೩॥

ಕೃತಂ ಶ್ರೀ ರಾಘವೇಂದ್ರಾರ್ಯತಂತ್ರಂ ಸದ್ಯಃ ಫಲಪ್ರದಂ
ಪ್ರೀಯತಾಂ ತೇನ ಗುರುರಾಟ್ ಹೃದ್ಗತೌ ಮಧ್ವಮಾಧವೌ ॥ ೧೪॥

ಇತಿ = ಈ ರೀತಿಯಲ್ಲಿ, **ವಶ್ಯವಾಣೀ ವಿಲಾಸಿಸಾ** = ರಾಘವೇಂದ್ರರ ವಶವಾದ ವಾಗ್ವೈಭವವುಳ್ಳ, **ಶ್ರೀ ಗುರುಪ್ರೇಮ ಪುತ್ರೇಣ** = ಗುರುಗಳ ಪ್ರೇಮಪುತ್ರನಾದ, **ಕೃಷ್ಣಾವಧೂತೇನ** = ಕೃಷ್ಣಾವಧೂತರಿಂದ, **ಗುರುರಾಜ ಪ್ರಸಾದತಃ** = ಗುರ್ವನುಗ್ರಹ ದಿಂದ, **ಸದ್ಯಃ ಫಲಪ್ರದಂ** = ಕೂಡಲೇ ಫಲ ನೀಡು, **ಶ್ರೀ ರಾಘವೇಂದ್ರಾರ್ಯತಂತ್ರಂ** = ರಾಘವೇಂದ್ರತಂತ್ರವು, **ಕೃತಂ** = ರಚಿಸಲ್ಪಟ್ಟಿತು, **ತೇನ** = ಈ ರಚನೆಯಿಂದ, **ಗುರುರಾಟ್‌ಹೃದ್ಗತೌ** = ಗುರುರಾಜರ ಹೃದಯಗತರಾದ, **ಮಧ್ವಮಾಧವೌ** = ಶ್ರೀ ಮಧ್ವಾಚಾರ್ಯರು ಹಾಗೂ ಮಾಧವರು, **ಪ್ರೀಯತಾಂ** = ಪ್ರೀತರಾಗಲಿ.

ಗುರುರಾಜ ಪಿತಾಽಸಿ ಮೇ ಕೃಪಾವಾನಿತಿ ನಿಶ್ಚಿತ್ಯ ಮಯೋದ್ಧತಂ ವ್ಯಭಾಣಿ।
ತ್ವದನನ್ಯಗತೇರ್ಮಮಾನೃತೋಕ್ತೀಃ ಸುತವಾತ್ಸಲ್ಯತಯಾ ಕುರುಷ್ವ ಸತ್ಯಾಃ ॥ ೧೫॥

ಹೇ ಗುರುರಾಜ = ಗುರುರಾಜರೇ, **ಮೇ** = ನನ್ನ, **ಪಿತಾ ಅಸಿ ಇತಿ** = ತಂದೆ ಯೆಂದು, **ಕೃಪಾವಾನ್ ಇತಿ** = ದಯಾಸಮುದ್ರರೆಂದು, **ನಿಶ್ಚಿತ್ಯ** = ನಿಶ್ಚಯಿಸಿ, **ಮಯಾ** = ನನ್ನಿಂದ, **ಉದ್ಧತಂ** = ಅಹಂಕಾರಯುಕ್ತವಾದ ಮಾತು, **ವ್ಯಭಾಣಿ** = ಹೇಳಲ್ಪಟ್ಟಿತು, **ತ್ವದನನ್ಯಗತೇಃ** = ನೀವು ಹೊರತು ಅನ್ಯರು ಗತಿಯಿಲ್ಲದಿರುವ, **ಮಮ** = ನನ್ನ, **ಅನೃತೋಕ್ತೀಃ** = ಮಿಥ್ಯಾಮಾತುಗಳನ್ನು, **ಸುತವತ್ಸಲ್ಯತಯಾ** = ಪುತ್ರನಲ್ಲಿರುವ ವಾತ್ಸಲ್ಯದಿಂದ, **ಸತ್ಯಾಃ** = ಸತ್ಯವನ್ನಾಗಿ, **ಕುರುಷ್ವ** = ಮಾಡಿರಿ.

ಅನೃಣ ಮಯಾಚನ ಮಶ್ರಮ ಮಭಯಂ ನ್ಯಾಯ್ಯಂ ಯಥೇಷ್ಟಮಪ್ರಯತ್ನಂ।
ಅಶನಂ ವಸನಂ ಸದನಂ ದಾತುಂ ಭೋಕ್ತುಂ ದದಾಸಿ ಚೇತ್ ತದಲಮ್ ॥ ೧೬॥

ಹೇ ಗುರುರಾಜರೇ, **ಮೇ** = ನನಗೆ, **ಅನೃಣಂ** = ಋಣವಲ್ಲದ (ಸಾಲದಿಂದ ಬಂದಿರದ), **ಅಯಾಚನಂ** = ಬೇಡದೆ ಬಂದಿರುವ, **ಅಶ್ರಮಂ** = ಶ್ರಮವಿಲ್ಲದೆ ಬಂದಿರುವ, **ಅಭಯಂ** = ಭಯರಹಿತವಾದ, **ನ್ಯಾಯ್ಯಂ** = ನ್ಯಾಯವಾಗಿ ಬಂದಿರುವ, **ಯಥೇಷ್ಟಂ** = ಇಷ್ಟಕ್ಕೆ ವಿರುದ್ಧವಲ್ಲದಿರುವ, **ಅಪ್ರಯತ್ನಂ** = ಪ್ರಯತ್ನ ಮಾಡದೆ ಬಂದಿರುವ, **ಅಶನಂ** = ಆಹಾರವನ್ನು, **ವಸನಂ** = ವಸ್ತ್ರವನ್ನು, **ಸದನಂ** = ಮನೆ ಮುಂತಾದುವುಗಳನ್ನು, **ದಾತುಂ** = ದಾನ ಮಾಡಲು, **ಭೋಕ್ತುಂ** = ಭೋಗಮಾಡಲು ಬೇಕಾದಷ್ಟು ಮಾತ್ರ, **ದದಾಸಿ ಚೇತ್** = ಕೊಡುವಿರಾದರೇ, **ತತ್ ಅಲಂ** = ಅಷ್ಟೇ ಸಾಕು.

ಇತಿ ಶ್ರೀ ಕೃಷ್ಣಾವಧೂತವಿರಚಿತೇ ಶ್ರೀ ರಾಘವೇಂದ್ರತಂತ್ರೇ
ಪ್ರತ್ಯಕ್ಷ ಸಿದ್ಧಿಪ್ರದೇ ಕ್ಷಮಾಪನಸ್ತೋತ್ರಂ ನಾಮ ಚತುರ್ದಶ ಪಟಲಃ

ಅಥ ಪಂಚದಶ ಪಟಲಮ್

ಶ್ರೀ ಗುರುರಾಜಸ್ತವರಾಜಃ

ಅಥ ಕೃಷ್ಣಾವಧೂತೋಽಹಂ ಗುರುರಾಜಪ್ರಿಯಃ ಸುತಃ।
ವಕ್ಷ್ಯೇ ಮಯಿ ಪಿತುಸ್ತಸ್ಯ ಕೃಪಾಂ ಸರ್ವಾತಿಶಾಯಿನೀಮ್ ॥ ೧॥

ಅರ್ಥ - ಅಥ = ಅನಂತರದಲ್ಲಿ, **ಗುರುರಾಜಪ್ರಿಯಸ್ಸುತಃ** = ಗುರುರಾಜರ ಪ್ರೀತಿಪುತ್ರನಾದ, **ಕೃಷ್ಣಾವಧೂತಃ** = ಕೃಷ್ಣಾವಧೂತನಾಮಕನಾದ, **ಅಹಂ** = ನಾನು, **ಮಯಿ** = ನನ್ನಲ್ಲಿ, **ತಸ್ಯ ಪಿತುಃ** = ಆ ತಂದೆಯಾದ ರಾಘವೇಂದ್ರರ, **ಸರ್ವಾತಿಶಾಯಿನೀಂ** = ಸರ್ವಶ್ರೇಷ್ಠವಾದ, **ಕೃಪಾಂ** = ದಯೆಯನ್ನು, **ವಕ್ಷ್ಯೇ** = ಹೇಳುವೆನು.

ಯದ್ಯಪ್ಯೇತನ್ನ ಪ್ರಕಾಶ್ಯಂ ರಹಸ್ಯಂ ವಿಸ್ಮಯಪ್ರದಂ।
ತಥಾಪಿ ವಕ್ಷ್ಯೇ ಗ್ರಂಥೇಽಸ್ಮಿನ್ ಪ್ರತ್ಯಯಾರ್ಥಂ ತದಾಜ್ಞಯಾ ॥ ೨॥

ಯದ್ಯಪಿಃ = ವಸ್ತುತಃ ವಿಚಾರಿಸಿದರೆ, **ಏತತ್** = ಈ ಮುಂದೆ ಹೇಳುವ ವಿಷಯವು, **ರಹಸ್ಯಂ** = ಗೋಪ್ಯವಾದದ್ದು, **ವಿಸ್ಮಯ ಪ್ರದಂ** = ಅಚ್ಚರಿಯುಂಟು ಮಾಡುವುದಾಗಿದ್ದು, **ನ ಪ್ರಕಾಶ್ಯಂ** = ಪ್ರಕಟಗೊಳಿಸಲು ಯೋಗ್ಯವಾಗಿಲ್ಲ, **ತಥಾಽಪಿ** = ಹಾಗಿದ್ದರೂ, **ಅಸ್ಮಿನ್ ಗ್ರಂಥೇ** = ಈ ಗ್ರಂಥದಲ್ಲಿ, **ಪ್ರತ್ಯಯಾರ್ಥಂ** = ವಿಶ್ವಾಸ ವುಂಟಾಗಲು, **ತದಾಜ್ಞಯಾ** = ಅವರ ಅನುಜ್ಞೆಯಿಂದಲೇ, **ವಕ್ಷ್ಯೇ** = ಹೇಳುವೆನು, (**ತದಾಜ್ಞಯಾ** = ರಾಘವೇಂದ್ರರ ಅನುಜ್ಞೆಯನ್ನನುಸರಿಸಿ, **ಅಸ್ಮಿನ್** = ಈ, **ಗ್ರಂಥೇ** = ಗ್ರಂಥದಲ್ಲಿ (ಪಟಲದಲ್ಲಿ), **ವಕ್ಷ್ಯೇ** = ಹೇಳುವೆನು.

ಕದಾಚಿದ್ ಬಂಧು-ದಾರಿದ್ರ್ಯ ಋಣ ರಾಜಾದಿ ಪೀಡಿತಃ।
ಭೃಶಂ ಶೋಚನ್ ಗುರುಂ ಧ್ಯಾಯನ್ ನ ಸ್ವಾಪ್ಸ್ವಂ ಕಲುಷಾಶಯಃ ॥ ೩॥

ಕದಾಚಿತ್ = ಒಂದು ದಿನ, **ಬಂಧು-ದಾರಿದ್ರ್ಯ-ಋಣ-ರಾಜಾದಿ ಪೀಡಿತಃ** - **ಬಂಧು** = ಬಂಧುಗಳು, **ದಾರಿದ್ರ್ಯ** = ಬಡತನವು, **ಋಣ** = ಸಾಲವು, **ರಾಜಾದಿ** = ರಾಜಸೇವಕರೆ ಮೊದಲಾದವರಿಂದ, **ಪೀಡಿತಃ** = ತೊಂದರೆಗೊಳಗಾದ ನಾನು, **ಭೃಶಂ**

= ಬಹಳವಾಗಿ, **ಶೋಚನ್** = ಶೋಕಪಡುವವನಾಗಿ, **ಗುರುಂ** = ಗುರುಗಳನ್ನು, **ಧ್ಯಾಯನ್** = ಧ್ಯಾನಮಾಡುತ್ತಾ, **ಕಲುಷಾಶಯಃ** = ಚಿಂತಾಕ್ರಾಂತವಾದ ಮನಸ್ಸುಳ್ಳವನಾಗಿ, **ಅಸ್ವಾಪ್ಸಂ** = ಮಲಗಿದೆನು.

ತತಃ ಸೂರ್ಯೋದಯೇ ಕಾಲೇ ಸ್ವಪ್ನೇ ಕೋಽಪಿ ಯತೀಶ್ವರಃ।
ಆಕಟೀರ್ಜಾನುಪರ್ಯಂತಂ ಋದ್ಧಕಾಷಾಯವಸ್ತ್ರವಾನ್ ॥ ೪॥

ತುಲಸೀ ಮಣಿ ಮಾಲಾಭ್ಯಾಂ ಶೋಭಿತೇನ ವಿವಾಸಸಾ।
ವಿಶಾಲವಕ್ಷಸಾ ತೈಲಸ್ನಿಗ್ಧಶ್ಯಾಮಲ ವರ್ಚಸಾ ॥ ೫॥

ಅಪ್ರಾವೃತೇನ ಶಿರಸಾ ಪಾದುಕಾಭ್ಯಾಂ ಚ ರಾಜತಃ।
ಶಿಷ್ಯೇಣಾನುಗತಃ ಪಶ್ಚಾತ್ ಜಲಪಾತ್ರಧರೇಣ ಚ ॥ ೬॥

ವೇಗಾದಾಗತ್ಯ ಮಾಂ ಹಸ್ತೇ ಗೃಹೀತ್ವಾಂತರುಪಾಗತಃ।
ಶಿಷ್ಯಸ್ತು ದ್ವಾರ ಏವಾಸೀದ್ ಉಪಾವಿಶದಸೌ ಗುರುಃ ॥ ೭॥

ತತಃ = ಅನಂತರ, **ಸೂರ್ಯೋದಯೇ ಕಾಲೇ** = ಪ್ರಾತಃಕಾಲದಲ್ಲಿ (ಮುಂಜಾವಿನಲ್ಲಿ), **ಸ್ವಪ್ನೇ** = ಸ್ವಪ್ನದಲ್ಲಿ, **ಕೋಽಪಿ** = ಯಾರೋ ಒಬ್ಬ, **ಯತೀಶ್ವರಃ** = ಯತಿಶ್ರೇಷ್ಠರು, **ಆಕಟೇಃ** = ಕಟಿಯಿಂದ, ಆರಂಭಿಸಿ, **ಜಾನುಪರ್ಯಂತಂ** = ಮೊಳಕಾಲಿನವರೆಗೂ, **ಋದ್ಧಕಾಷಾಯವಾಸವಾನ್** = ಅಲಂಕೃತವಾದ ಕಾವೀ ವಸ್ತ್ರವನ್ನು ಧರಿಸಿರುವ, **ತುಲಸೀಮಣಿ ಮಾಲಾಭ್ಯಾಂ** = ತುಲಸೀಹಾರ ಹಾಗೂ ತುಲಸೀಮಣಿ ಮಾಲೆಗಳಿಂದ, **ಶೋಭಿತೇನ** = ಪ್ರಕಾಶಮಾನವಾದ, **ತೈಲಸ್ನಿಗ್ಧ ಶ್ಯಾಮಲವರ್ಚಸಾ** = ತೈಲದಂತೆ ನುಣುಪಾದ, ಶ್ಯಾಮಲವರ್ಣದ ಕಾಂತಿಯಿರುವ, **ಶ್ಯಾಮಲ ವಿಶಾಲವಕ್ಷಸಾ** = ವಿಶಾಲವಾದ ವಕ್ಷಸ್ಸಿನಿಂದ, **ಶೋಭಿತೇನ** = ಶೋಭಿಸುತ್ತಿರುವ, **ಅಪ್ರಾವೃತೇನ** = ಬಟ್ಟೆಯಿಂದ ಆಚ್ಛಾದಿಸದ (ತಲೆಗೆ ಏನನ್ನೂ ಸುತ್ತಿಕೊಂಡಿರದ), **ಶಿರಸಾ** = ತಲೆಯಿಂದ, **ಪಾದುಕಾಭ್ಯಾಂ ಚ** = ಎರಡು ಪಾದುಕೆಗಳಿಂದಲೂ, **ರಾಜಿತಃ** = ಶೋಭಿತರಾದ, **ಪಶ್ಚಾತ್** = ಹಿಂದುಗಡೆಯಲ್ಲಿ, **ಜಲಪಾತ್ರಧಾರೇಣ** = ಜಲಪಾತ್ರೆಯನ್ನು (ಕಮಂಡಲುವನ್ನು) ಧರಿಸಿರುವ, **ಶಿಷ್ಯೇಣ** = ಶಿಷ್ಯನಿಂದ, **ಅನುಗತಃ** = ಅನುಸರಿಸಲ್ಪಟ್ಟ, **ಅಸೌ** = ಈ ಗುರುಗಳು, **ವೇಗಾತ್** = ವೇಗದಿಂದ, **ಆಗತ್ಯ** = ಬಂದು, **ಮಾಂ** = ನನ್ನನ್ನು, **ಹಸ್ತೇ** = ತಮ್ಮ ಕೈಯಲ್ಲಿ, ಗೃಹೀತ್ವಾ = ಹಿಡಿದುಕೊಂಡು, **ಅಂತಃ** = ಒಳಗಡೆ, **ಉಪಾಗತಃ** = ಬಂದರು, **ಶಿಷ್ಯಸ್ತು** = ಶಿಷ್ಯನಾದರೂ, **ದ್ವಾರ ಏವ**

= ಬಾಗಿಲಲ್ಲಿಯೇ, **ಆಸೀತ್** = ಇದ್ದನು, **ಗುರುಃ** = ಗುರುವಾದರೂ, **ಉಪಾವಿಶತ್** = ಕುಳಿತರು.

ಅಥ ಮಾಂ ಪ್ರಾಣಿನಂ ಸಂತಂ ವತ್ಸೇತ್ಯಾಮಂತ್ರ್ಯ ಸೋಽಬ್ರವೀತ್।
ಪ್ರದರ್ಶಯಂಸ್ತಾಮ್ರಪತ್ರಂ ಲಿಖಿತಂ ನಾಗರಾಕ್ಷರೈಃ ॥ ೮॥

ಅಥ = ಅನಂತರದಲ್ಲಿ, **ಸಃ** = ರಾಘವೇಂದ್ರರು, **ಪ್ರಾಣಿನಂ ಸಂತಂ** = ಪಶುವಿನಂತೆ ವರ್ತಿಸಿ (ಪ್ರಾಣಿಯಂತಿದ್ದ), **ಮಾಂ** = ನನ್ನನ್ನು, **ವತ್ಸ ಇತಿ** = ಮಗುವೆ ಎಂದು, **ಆಮಂತ್ರ್ಯ** = ಸಂಬೋಧಿಸಿ, **ನಾಗರಾಕ್ಷರೈಃ** = ದೇವನಾಗರೀ ಲಿಪಿಗಳಿಂದ, **ಲಿಖಿತಂ** = ಬರೆದಿರುವ, **ತಾಮ್ರಪತ್ರಂ** = ತಾಮ್ರದ ತಗಡನ್ನು, **ಪ್ರದರ್ಶಯನ್** = ತೋರಿಸುತ್ತಾ, **ಅಬ್ರವೀತ್** = ಹೀಗೆ ಹೇಳಿದರು.

ಆತ್ಮೇತ್ಯೇವ ಪರಂ ದೇವಮುಪಾಸ್ವ ಹರಿಮವ್ಯಯಂ।
ಪ್ರಾಣಸ್ಯೇದಂ ವಶೇ ಸರ್ವಂ ಪ್ರಾಣಃ ಪರವಶೇ ಸ್ಥಿತಃ ॥ ೯॥

ಪರಂದೇವಂ = ದೇವೋತ್ತಮನಾದ, **ಅವ್ಯಯಂ** = ನಾಶರಹಿತನಾದ, **ಹರಿಂ** = ಶ್ರೀಹರಿಯನ್ನು, **ಆತ್ಮಾ ಇತ್ಯೇವ** = ನನ್ನ ಸ್ವಾಮಿಯು ಎಂದೇ, **ಉಪಾಸ್ವ** = ಉಪಾಸನೆಯನ್ನು ಮಾಡು, **ಇದಂ ಸರ್ವಂ** = ಈ ಸಮಸ್ತ ಜಗತ್ತು, **ಪ್ರಾಣಸ್ಯ** = ಮುಖ್ಯಪ್ರಾಣನ, **ವಶೇ** = ವಶದಲ್ಲಿದೆ, **ಪ್ರಾಣಃ** = ಪ್ರಾಣನಾದರೂ, **ಪರವಶೇ** = ಭಗವಂತನ ಅಧೀನನಾಗಿ, **ಸ್ಥಿತಃ** = ಇರುವನು.

***ವಿಷ್ವಕ್ಸೇನಃ ವಾಯುಪುತ್ರಃ ಪ್ರಹ್ಲಾದಃ ಪ್ರಥಮೋ ಮತಃ।**
ವಿಭೀಷಣೋಽಥ ಬಾಹ್ಲೀಕೋ ವ್ಯಾಸೋಽಹಂ ಸತ್ಯಸಂಧಕಃ ॥ ೧೦॥

ಅಹಂ = ನಾನು, **ವಾಯುಪುತ್ರಃ** = ವಾಯುಪುತ್ರನಾದ, **ವಿಷ್ವಕ್ಸೇನಃ** = ವಿಷ್ವಕ್ಸೇನನೆಂಬ ಹರಿನಿರ್ಮಾಲ್ಯಧಾರಕನೇ ಆಗಿರುವೆನು, **ಪ್ರಹ್ಲಾದಃ** = ಪ್ರಹ್ಲಾದರಾಜನು, **ಪ್ರಥಮಃ** = ಮೊದಲನೆಯ ಅವತಾರವು, **ವಿಭೀಷಣ** = ವಿಭೀಷಣನು ದ್ವಿತೀಯಾವತಾರವು, **ಬಾಹ್ಲೀಕಃ** = ದ್ವಾಪರದ ಬಾಹ್ಲೀಕರಾಜನು ತೃತೀಯ ಅವತಾರವು, **ವ್ಯಾಸಃ** = ವ್ಯಾಸರಾಜರು ನಾಲ್ಕನೆಯ ಅವತಾರವು, **ಅಹಂ** =

*ವಿಷ್ವಕ್ಸೇನನು ವಾಯುಪುತ್ರನೆಂದೇ ಪ್ರಸಿದ್ಧಿಯಿದೆ. ಆದ್ದರಿಂದ 'ವಾಯುಪುತ್ರ'ನೆಂದು ಬರೆಯಲಾಗಿದೆ.

ನಾನು, (ರಾಘವೇಂದ್ರರು ಐದನೆಯ ಅವತಾರವು), **ಸತ್ಯಸಂಧಕಃ** = ಸತ್ಯಸಂಧರಾದರೂ ಆರನೆಯ ಅವತಾರವು ಎಂದು, **ಮತಃ** = ಪ್ರಸಿದ್ಧವಾಗಿದೆ.

ಸಂಹತಪ್ರಹತೌ ಸಂಧಿಪ್ರಸಂಧೀ ಸೋಮಿಕೋರ್ಮಿಕೌ।
ಅಪ್ಪಣ್ಣಾಚಾರ್ಯಕೃಷ್ಣೌ ಚ ಸೇವಕೌ ಮೇ ಯುಗಕ್ರಮಾತ್ ॥ ೧೧॥

ಸಂಹತ ಪ್ರಹತೌ = ಸಂಹತ ಮತ್ತು ಪ್ರಹತರು, ಎಂಬ ಇಬ್ಬರು, **ಸಂಧಿ ಪ್ರಸಂಧೀ** = ಸಂಧಿ ಮತ್ತು ಪ್ರಸಂಧಿಗಳೆಂಬ ಇಬ್ಬರು, **ಸೋಮಕೋರ್ಮಿಕೌ** = ಸೋಮಕ ಮತ್ತು ಊರ್ಮಿಕ ಎಂಬ ಇಬ್ಬರು, **ಅಪ್ಪಣ್ಣಾಚಾರ್ಯಕೃಷ್ಣೌ ಚ** = ಅಪ್ಪಣ್ಣಾಚಾರ್ಯ ಮತ್ತು ಕೃಷ್ಣಾವಧೂತರೆಂಬ ನೀವಿಬ್ಬರೂ, **ಯುಗಕ್ರಮಾತ್** = ಕೃತಾದಿಯುಗಾನುಸಾರವಾಗಿ, **ಮೇ** = ನನ್ನ (ರಾಘವೇಂದ್ರರ), **ಸೇವಕೌ** = ಸೇವಕರಾಗಿರುವಿರಿ.

ಮಯ್ಯಧಿಷ್ಠಾಯ ತೇ ಭಾರಂ ಸಮನ್ಮಂತ್ರಾದ್ಯುಪಾಸನಂ।
ಗ್ರಂಥಂ ಕಮಪಿ ಕರ್ತುಂ ತ್ವಂ ಪ್ರಾರಭಸ್ವ ಭಯಂ ನ ತೇ ॥ ೧೨॥

ಮನ್ಮಂತ್ರಾದ್ಯುಪಾಸನಂ = ನನ್ನ ಅಷ್ಟಾಕ್ಷರಮಂತ್ರ ಮೊದಲಾದ ಉಪಾಸನೆಯನ್ನು ತಿಳಿಸುವ, **ತೇ** = ನಿನ್ನ, **ಭಾರಂ** = ಭಾರವನ್ನು, **ಮಯಿ** = ನನ್ನಲ್ಲಿ, **ಅಧಿಷ್ಠಾಯ** = ಇಟ್ಟು, **ಕಮಪಿ** = ಯಾವುದಾದರೊಂದು, **ಗ್ರಂಥಂ** = ಗ್ರಂಥವನ್ನು, **ತ್ವಂ** = ನೀನು, **ಪ್ರಾರಭಸ್ವ** = ಪ್ರಾರಂಭಮಾಡು, **ತೇ** = ನಿನಗೆ, **ಭಯಂ** = ಭಯವು, **ನ** = ಬೇಡ.

ಯೋಗ್ಯತಾಮನುಸೃತ್ಯಾಹಮಯೋಗ್ಯೇಚ್ಛಾಂ ನಿವಾರಯನ್।
ವಿಪತ್ತೀಃ ಪರಿಹೃತ್ಯಾ ತೇ ಸುಖಂ ದಾಸ್ಯಾಮಿ ಪುತ್ರಕ ॥ ೧೩॥

ಹೇ ಪುತ್ರಕ = ಪುತ್ರನೇ, **ಅಹಂ** = ನಾನು, **ಯೋಗ್ಯತಾಂ** = ಯೋಗ್ಯತೆಯನ್ನು, **ಅನುಸೃತ್ಯ** = ಅನುಸರಿಸಿ, **ಅಯೋಗ್ಯೇಚ್ಛಾಂ** = ಅಯೋಗ್ಯವಸ್ತು ವಿಷಯಕವಾದ ಇಚ್ಛಾದಿಗಳನ್ನು, **ನಿವಾರಯನ್** = ನಿವಾರಿಸಿ, **ತೇ** = ನಿನ್ನ, **ವಿಪತ್ತೀಃ** = ವಿಪತ್ತುಗಳನ್ನು, **ಪರಿಹೃತ್ಯಾ** = ಹೋಗಲಾಡಿಸಿ, **ಸುಖಂ** = ಸುಖವನ್ನು, **ದಾಸ್ಯಾಮಿ** = ಕೊಡುವೆನು.

ಓಮಿತ್ಯುಕ್ತ್ವಾ ಯತಿಸ್ತಚ್ಚ ತಾಮ್ರಪತ್ರಂ ತಥಾಕ್ಷತಾನ್।
ದತ್ವಾ ಮಹ್ಯಮದೃಶ್ಯೋಽಭೂತ್ ಪ್ರಬುದ್ಧೋಽಹಂ ತತಃ ಕ್ಷಣಾತ್ ॥ ೧೪॥

ಯತಿಃ = ರಾಘವೇಂದ್ರರು, **ಓಂ ಇತ್ಯುಕ್ತ್ವಾ** = ಓಂ ಎಂದು ಆಶೀರ್ವದಿಸಿ, **ತಚ್ಚ ತಾಮ್ರಪತ್ರಂ** = ಆ ತಾಮ್ರದ ತಗಡನ್ನು, **ತಥಾ** = ಹಾಗೆಯೇ, **ಅಕ್ಷತಾನ್** = ಮಂತ್ರಾಕ್ಷತೆಯನ್ನು, **ಮಹ್ಯಂ** = ನನಗೆ, **ದತ್ವಾ** = ಕೊಟ್ಟು, **ಅದೃಶ್ಯಃ** = ಅದೃಶ್ಯರು, **ಅಭೂತ್** = ಆದರು, **ಅಹಂ** = ನಾನು, **ತತ್ಕ್ಷಣಾತ್** = ಆ ಕ್ಷಣದಲ್ಲೇ, **ಪ್ರಬುದ್ಧಃ** = ಎಚ್ಚರಗೊಂಡೆನು.

ಅಪಶ್ಯ ಶಿರಸಃ ಸ್ಥಾನೇ ಸಾಕ್ಷತಾಂ ತಾಮ್ರಪತ್ರಿಕಾಂ।
ಶಾಂತಃ ಶೋಕಸ್ತದಾ ಮೇಽಭೂದಾಸಾರೈಃ ಪಾದಪೋ ಯಥಾ ॥ ೧೫॥

ಶಿರಸಂಸ್ಥಾನೇ = ತಲೆಯಭಾಗದಲ್ಲಿ, **ಸಾಕ್ಷತಾಂ** = ಅಕ್ಷತೆಯಿಂದ ಸಹಿತವಾದ, **ತಾಮ್ರಪತ್ರಿಕಾಂ** = ತಾಮ್ರದ ತಗಡನ್ನು, **ಅಪಶ್ಯಂ** = ನೋಡಿದೆನು, **ತದಾ** = ಆಗ, **ಮೇ** = ನನ್ನ, **ಶೋಕಃ** = ದುಃಖವು, **ಆಸಾರೈಃ** = ಶೀತಲವಾದ ನೀರಿನ ಕಣಗಳಿಂದ, **ಪಾದಪಃ** = ವೃಕ್ಷವು, **ಯಥಾ** = ಹೇಗೆ, **ಭವತಿ** = ಆಗುವುದೋ, **ತಥಾ** = ಹಾಗೆ, **ಶಾಂತಃ** = ಶಾಂತವಾಗಿ, **ಅಭೂತ್** = ಆಯಿತು.

ಚಿತ್ತಂ ಪ್ರಸನ್ನಮಭವದ್ ಯಥಾಂಭಃ ಕುಂಭಜೋದಯಾತ್।
ತತಃ ಶ್ರೀ ರಾಘವೇಂದ್ರಾರ್ಯಗುರುಂ ಮೋದಾದ್ ಅಪೂಜಯಮ್ ॥ ೧೬॥

ಯಥಾ = ಹೇಗೆ, **ಕುಂಭಜೋದಯಾತ್** = ಅಗಸ್ತ್ಯನಕ್ಷತ್ರದ ಉದಯದಿಂದ, **ಅಂಭಃ** = ನೀರು ಪ್ರಸನ್ನವಾಗುವುದೋ, **ತಥಾ** = ಹಾಗೆ, **ಚಿತ್ತಂ** = ಮನಸ್ಸು, **ಪ್ರಸನ್ನಂ** = ಪ್ರಸನ್ನನಾಗಿ, **ಅಭವತ್** = ಆಯಿತು, **ತತಃ** = ಅಂದಿನಿಂದ ಪ್ರಾರಂಭಿಸಿ, **ಶ್ರೀ ರಾಘವೇಂದ್ರಾರ್ಯಗುರುಂ** = ಪೂಜ್ಯರು, ಗುರುಗಳೂ ಆದ ಶ್ರೀ ರಾಘವೇಂದ್ರರನ್ನು, **ಮೋದಾತ್** = ಸಂತೋಷದಿಂದ, **ಅಪೂಜಯಂ** = ಪೂಜಿಸಿದೆನು.

ಆರಿರಂಭಯಿಷುರ್ಗ್ರಂಥಂ ರಾಘವೇಂದ್ರಾರ್ಯತಂತ್ರಕಂ।
ಅಸ್ತೌಷಂ ಸ್ತವರಾಜೇನ ಭಕ್ತ್ಯುನ್ಮಾದಭ್ರಮನ್ಮನಾಃ ॥ ೧೭॥

ಅಹಂ = ನಾನು, **ರಾಘವೇಂದ್ರಾರ್ಯತಂತ್ರಕಂ** = ರಾಘವೇಂದ್ರ ತಂತ್ರವೆಂಬ, **ಗ್ರಂಥಂ** = ಗ್ರಂಥವನ್ನು, **ಆರಿರಂಭಯಿಷುಃ** = ಆರಂಭ ಮಾಡುವ ಇಚ್ಛೆಯುಳ್ಳವನಾಗಿ, **ಭಕ್ತ್ಯುನ್ಮಾದಭ್ರಮನ್ಮನಾಃ - ಭಕ್ತ್ಯುನ್ಮಾದ** = ಭಕ್ತಿಯ ಉದ್ರೇಕದಿಂದ, **ಭ್ರಮತ್** = ಅವರಲ್ಲಿಯೇ ಸುತ್ತುತ್ತಿರುವ, **ಮನಾಃ** = ಮನಸ್ಸುಳ್ಳವನಾಗಿ, **ಸ್ತವರಾಜೇನ** = ಸ್ತೋತ್ರರಾಜದಿಂದ (ಶ್ರೇಷ್ಠಸ್ತುತಿಯಿಂದ), **ಅಸ್ತೌಷಮ್** = ಸ್ತುತಿಸಿದೆನು.

ಶ್ರೀ ರಾಘವೇಂದ್ರಾರ್ಯ ಪಿತಾ ತ್ವಮೇವ ತ್ವಮೇವ ಮೇ ಸದ್ಗತಿ ಹೇತುಭೂತಃ।
ಇಮಂ ಚ ಶೋಕಂ ಮಮ ನಾಶಯಾಶು ಕ್ಷಮಸ್ವ ಮೇ ಸರ್ವ ಮಹಾಪರಾಧಮ್ ॥

ಶ್ರೀ ರಾಘವೇಂದ್ರಾರ್ಯ = ರಾಘವೇಂದ್ರ ಗುರುಗಳೇ, **ತ್ವಮೇವ** = ನೀವೇ, **ಪಿತಾ** = ತಂದೆಯಾಗಿರುವಿರಿ, **ಮೇ** = ನನಗೆ, **ಸದ್ಗತಿ ಹೇತುಭೂತಃ** = ಸದ್ಗತಿಯನ್ನು ನೀಡಲು, ಕಾರಣಕರ್ತರೂ, **ತ್ವಮೇವ** = ನೀವೇ, **ಇಮಂ** = ಈ, **ಮಮ** = ನನ್ನ, **ಶೋಕಂ** = ದುಃಖವನ್ನು, **ಆಶು** = ಈ ಕೂಡಲೇ, **ನಾಶಯ** = ನಾಶಮಾಡಿರಿ, **ಮೇ** = ನನ್ನ, **ಸರ್ವಮಹಾಪರಾಧಂ** = ಸಕಲವಿಧವಾದ ಮಹಾಪರಾಧಗಳನ್ನು, **ಕ್ಷಮಸ್ವ** = ಕ್ಷಮಿಸಿರಿ.

ಕಲ್ಯಾವೇಶೇನ ಕಲುಷಂ ವಿಷಯಾಸಕ್ತಚೇತಸಂ।
ಸ್ನಾನ ಸಂಧ್ಯಾದಿಭಿರ್ಹೀನಂ ಭಕ್ತಿಹೀನಂ ಹರೌ ಗುರೌ ॥ ೧೯॥

ಕಲ್ಯಾವೇಶೇನ = ಕಲಿಯ ಆವೇಶದಿಂದ, **ವಿಷಯಾಸಕ್ತ ಚೇತಸಂ** = ವೈಷಯಿಕ ಭೋಗಗಳಲ್ಲಿಯೇ ಮುಳುಗಿರುವ ಮನಸ್ಸುಳ್ಳ, **ಕಲುಷಂ** = ಕಲುಷಿತನಾದ, **ಸ್ನಾನ ಸಂಧ್ಯಾದಿಭಿಃ** = ತೀರ್ಥಕ್ಷೇತ್ರ ನದೀಸ್ನಾನ ಸಂಧ್ಯಾವಂದನಾದಿಗಳಿಂದ, **ಹೀನಂ** = ರಹಿತನಾದ ಮತ್ತು, **ಹರೌ** = ಹರಿಯಲ್ಲಿ, **ಗುರೌ** = ಗುರುಗಳಲ್ಲಿ, **ಭಕ್ತಿಹೀನಂ** = ಭಯಭಕ್ತಿಯಿಲ್ಲದಿರುವ.

ಸಾಧೂನಾಂ ಸಂಗರಹಿತಂ ದುಷ್ಟಾನಾಂ ಸಂಗತೇ ಸ್ಥಿತಂ।
ದುರ್ಮಾರ್ಗೇ ಸರ್ವದಾ ಸಂತಂ ರಾಘವೇಂದ್ರಾರ್ಯ ರಕ್ಷ ಮಾಂ ॥ ೨೦॥

ಸಾಧೂನಾಂ = ಸಜ್ಜನರ, **ಸಂಗರಹಿತಂ** = ಸಹವಾಸವಿಲ್ಲದ, **ದುಷ್ಟಾನಾಂ** = ದುರ್ಜನರ, **ಸಂಗತೇ** = ಸಹವಾಸದಲ್ಲಿ, **ಸ್ಥಿತಂ** = ಬಿದ್ದಿರುವ, **ಸರ್ವದಾ** = ಯಾವಾಗಲೂ, **ದುರ್ಮಾರ್ಗೇ** = ಅನಾಚಾರದಲ್ಲೇ, **ಸಂತಂ** = ಇರುವ, **ಮಾಂ** = ನನ್ನನ್ನು, **ರಕ್ಷ** = ರಕ್ಷಿಸಿರಿ.

ರಕ್ಷಣೀಯಮರಕ್ಷಂತಂ ರಕ್ಷಣಾನರ್ಹರಕ್ಷಕಂ।
ದಾಕ್ಷಿಣ್ಯಾದರ್ಥಲೋಭಾದ್ ವಾ ದುರ್ವ್ಯಾಪಾರಂ ಸುವಂಚಕಮ್ ॥ ೨೧॥

ಹೇ ರಾಘವೇಂದ್ರಾರ್ಯ = ಆರ್ಯರಾದ ರಾಘವೇಂದ್ರರೇ, **ರಕ್ಷಣೀಯಂ** = ರಕ್ಷಿಸಲು ಯೋಗ್ಯರಾದ ಸಜ್ಜನರನ್ನು, ಹಾಗೂ ಪತ್ನಿಪುತ್ರಾದಿಗಳನ್ನು, **ಅರಕ್ಷಂತಂ** =

ರಕ್ಷಣೆಯನ್ನು ಮಾಡದಿರುವ, **ರಕ್ಷಣಾನರ್ಹರಕ್ಷಕಂ** = ರಕ್ಷಣೆ ಮಾಡಲು ಅಯೋಗ್ಯರಾದ ದುರ್ಜನರ ರಕ್ಷಣೆ ಮಾಡುತ್ತಿರುವ, **ದಾಕ್ಷಿಣ್ಯಾತ್** = ದಾಕ್ಷಿಣ್ಯಕ್ಕೆ ಒಳಗಾಗಿಯೋ, **ವಾ** = ಅಥವಾ, **ಲೋಭಾತ್** = ಲೋಭದಿಂದಲೋ, **ದುರ್ವ್ಯಾಪಾರಂ** = ದುರ್ನಡತೆಯುಳ್ಳ, **ಸುವಂಚಕಂ** = ಮಹಾಮೋಸಗಾರನಾದ,

ಯಂತ್ರಬದ್ಧಪಶುಪ್ರಾಯಂ ಭ್ರಮಮಾಣಂ ಕುಯೋನಿಷು।
ಅನಾಲಂಬನಮತ್ಯಾರ್ತಂ ರಾಘವೇಂದ್ರಾರ್ಯ ರಕ್ಷಮಾಂ ॥ ೨೨॥

ಯಂತ್ರಬದ್ಧಪಶುಪ್ರಾಯಂ = ಬೋನಿನಲ್ಲಿ ಸಿಕ್ಕಿಬಿದ್ದ ಪ್ರಾಣಿಯಂತೆ ಅಸ್ವತಂತ್ರನಾದ, **ಕುಯೋನಿಷು** = ನೀಚಾತಿನೀಚ ಯೋನಿಗಳಲ್ಲಿ, **ಭ್ರಮಮಾಣಂ** = ಜನ್ಮವೆತ್ತಲು ತಯಾರಾಗಿರುವ, **ಅನಾಲಂಬನಂ** = ಆಶ್ರಯವೇ ಇಲ್ಲದಿರುವ, **ಅತ್ಯಾರ್ತಂ** = ಅತೀ ದುಃಖಿತನಾದ, **ಮಾಂ** = ನನ್ನನ್ನು, **ರಕ್ಷ** = ರಕ್ಷಿಸಿರಿ.

ಜನ್ಮಮೃತ್ಯು ಜರಾವ್ಯಾಧಿ ಪೀಡಿತಶ್ಚ ಸ್ವಕರ್ಮಭುಕ್।
ದಾರಿದ್ರ್ಯಮತಿತೀರ್ಷುಶ್ಚ ಸಂಸಾರವ್ಯಸನಾತುರಃ ॥ ೨೩॥

ಹೇ ರಾಘವೇಂದ್ರಾರ್ಯ = ರಾಘವೇಂದ್ರರೇ, **ಜನ್ಮ-ಮೃತ್ಯು-ಜರಾ ವ್ಯಾಧಿ ಪೀಡಿತಃ** = ಜನ್ಮ, ಮರಣ, ವೃದ್ಧಾಪ್ಯ ರೋಗಗಳಿಂದ ಪೀಡಿಸಲ್ಪಟ್ಟ, **ಸ್ವಕರ್ಮಭುಕ್** = ನನ್ನ ಪ್ರಾರಬ್ಧ ಕರ್ಮಫಲವನ್ನು ಅನುಭವಿಸುತ್ತಿರುವ, **ದಾರಿದ್ರ್ಯಂ** = ಬಡತನವನ್ನು, **ಅತಿತೀರ್ಷುಃ** = ದಾಟಲೂ ಸಾಧ್ಯವಾಗದೆ, **ಸಂಸಾರ ವ್ಯಸನಾತುರಃ** = ಸಾಂಸಾರಿಕ ವ್ಯಸನಗಳಿಂದ ದುಃಖಗೊಂಡಿರುವ,

ದಾತುಂ ಭೋಕ್ತುಂ ಮಹಾಲುಬ್ಧೋ ವೈಭವೇಽಪಿ ಕದನ್ನಭುಕ್।
ಪರಾನ್ನ ಪರಿತುಷ್ಟೋಽಹಂ ರಾಘವೇಂದ್ರಾರ್ಯ ರಕ್ಷಮಾಂ ॥ ೨೪॥

ವೈಭವೇಽಪಿ = ಸಂಪತ್ತಿನಿಂದ ಕೂಡಿರುವವನಾದರೂ, **ದಾತುಂ** = ದಾನ ಮಾಡಲು, **ಭೋಕ್ತುಂ** = ತಿನ್ನಲು, **ಮಹಾಲುಬ್ಧಃ** = ಮಹಾಲೋಭಿಯಾದ, **ಕದನ್ನಬುಕ್** = ಕುತ್ಸಿತವಾದ ಅನ್ನವನ್ನು ತಿನ್ನುತ್ತಿರುವ, **ಪರಾನ್ನ ಪರಿತುಷ್ಟಕಃ** = ಬೇರೆಯವರ ಅನ್ನದಿಂದಲೇ ಸಂತುಷ್ಟನಾದ, **ಮಾಂ** = ನನ್ನನ್ನು, **ರಕ್ಷ** = ರಕ್ಷಿಸಿರಿ.

ಕ್ಷಣಶಃ ಕಣಶೋಽಪ್ಯರ್ಥಂ ಸಂಗೃಹ್ಯ ಚ ಪಿಶಾಚವತ್।
ರಕ್ಷನ್ನದಾತಾ ಚಾಭೋಕ್ತಾ ದುರ್ಮುಖೋ ದುರಹಂಕೃತಿಃ ॥ ೨೫॥

ಗುರುರಾಜ = ಗುರುರಾಜರೇ, **ಪಿಶಾಚವತ್** = ಧನಪಿಶಾಚಿಯಂತೆ, **ಕ್ಷಣಶಃ** = ಕ್ಷಣವನ್ನು ಬಿಡದೆ, **ಕಣಶಃ** = ಬಿಡಿಕಾಸನ್ನು ಬಿಡದೆ, **ಅರ್ಥಂ** = ಹಣವನ್ನು, **ಸಂಗೃಹ್ಯ ಅಪಿ** = ಸಂಗ್ರಹ ಮಾಡಿಯೂ, **ರಕ್ಷನ್** = ರಕ್ಷಿಸುತ್ತಾ, **ಅದಾತಾ** = ಮತ್ತೊಬ್ಬರಿಗೆ ಕೊಡದೆ, **ಚ** = ಮತ್ತು, **ಅಭೋಕ್ತಾ** = ನಾನೂ ತಿನ್ನದೆ, **ದುರ್ಮುಖಃ** = ನೋಡಲು ಕ್ರೂರವಾದ ಮುಖವುಳ್ಳ, **ದುರಹಂಕೃತಿಃ** = ದುರಹಂಕಾರಿಯಾದ ನನ್ನನ್ನು, ರಕ್ಷಿಸಿರಿ.

ಪುತ್ರಪತ್ನೀ ಗೃಹಾದ್ಯೇಷು ಸಕ್ತೋऽಹಂ ಭರ್ತ್ಸಿತೋऽಪಿ ತೈಃ।
ಕರ್ಮಜ್ಞಾನೇಂದ್ರಿಯೈಃ ಪಾಪೀ ಗುರುರಾಜಾನುರಕ್ಷ ಮಾಂ ॥ ೨೬॥

ಪುತ್ರಪತ್ನೀ ಗುಹಾದ್ಯೇಷು = ಮಕ್ಕಳು, ಪತ್ನ್ಯಾದಿಗಳಲ್ಲಿ, **ತೈಃ** = ಆ ಪತ್ನೀ ಪುತ್ರಾದಿಗಳಿಂದ, **ಭರ್ತ್ಸಿತೋऽಪಿ** = ನಿಂದೆ ಮಾಡಲ್ಪಟ್ಟವನಾದರೂ (ಅವರುಗಳಲ್ಲಿ), **ಸಕ್ತಃ** = ಆಸಕ್ತನಾದ, **ಅಹಂ** = ನಾನು, **ಕರ್ಮಜ್ಞಾನೇಂದ್ರಿಯೈಃ** = ಹಸ್ತಪಾದಾದಿ ಕರ್ಮೇಂದ್ರಿಯಗಳಿಂದಲೂ ಹಾಗೂ ಕಣ್ಣು, ಕಿವಿ ಮೊದಲಾದ ಜ್ಞಾನೇಂದ್ರಿಯ ಗಳಿಂದಲೂ, **ಪಾಪಿ** = ಪಾಪಿಷ್ಠನಾಗಿರುವ, **ಮಾಂ** = ನನ್ನನ್ನು, **ಅನುರಕ್ಷ** = ರಕ್ಷಿಸಿರಿ.

ಗುರುವಾರ್ಯೇ ಪುರಾಣಾದಾವನಾದರಣಶಾಲಿನಃ।
ತ್ವದ್ಭಕ್ತಾನ್ ವಿಷ್ಣುಭಕ್ತಾಂಶ್ಚಾಪ್ಯವಜ್ಞಾತುಶ್ಚ ಸಜ್ಜನಾನ್ ॥ ೨೭॥

ಗುರೌ = ಗುರುಗಳಲ್ಲಿ, **ಆರ್ಯೇ** = ಆರ್ಯರಲ್ಲಿಯೂ, **ಪುರಾಣಾದೌ** = ಪುರಾಣ, ಇತಿಹಾಸಗಳಲ್ಲಿ, **ಅನಾದರಣ ಶಾಲಿನಃ** = ತಿರಸ್ಕಾರವನ್ನು ಮಾಡಿರುವ, **ಚ** = ಮತ್ತು, **ತ್ವದ್ಭಕ್ತಾನ್** = ತಮ್ಮ ಭಕ್ತರನ್ನು, **ವಿಷ್ಣುಭಕ್ತಾನ್** = ವಿಷ್ಣುಭಕ್ತರಾದ, **ಸಜ್ಜನಾನ್ ಚ** = ಸಜ್ಜನರನ್ನು ಕೂಡ, **ಅವಜ್ಞಾತುಃ** = ತಿರಸ್ಕರಿಸುವ, ನನ್ನನ್ನು ರಕ್ಷಿಸಿರಿ.

ಸ್ವಮಾಹಾತ್ಮ್ಯ ಪ್ರಕಾಶಾರ್ಥಮತ್ಯಂತಾನೃತಭಾಷಿಣಃ।
ಗುರು ಬ್ರಾಹ್ಮಣ ದೇವಾನಾಂ ಪೂಜಾಂ ದಂಭೇನ ಕುರ್ವತಃ ॥ ೨೮॥

ಸ್ವಮಾಹಾತ್ಮ್ಯ ಪ್ರಕಾಶಾರ್ಥಂ = ನನ್ನ ಮಹಿಮೆಯನ್ನು ತೋರಿಸುವ ಸಲುವಾಗಿ, **ಅತ್ಯಂತಾನೃತಭಾಷಿಣಃ** = ಬಹಳವಾಗಿ ಸುಳ್ಳನ್ನು ಹೇಳುತ್ತಿರುವ, **ಗುರು-ಬ್ರಾಹ್ಮಣ ದೇವಾನಾಂ** = ಗುರುಗಳು, ಬ್ರಾಹ್ಮಣರು, ದೇವತೆಗಳ, **ಪೂಜಾಂ** = ಪೂಜೆಯನ್ನು, **ದಂಭೇನ** = ಡಂಭಾಚಾರದಿಂದ, **ಕುರ್ವತಃ** = ಆಚರಿಸುತ್ತಿರುವ, ನನ್ನನ್ನು ರಕ್ಷಿಸಿರಿ.

ಅಪರಾಧಾನನೇಕಾನ್ ಮೇ ಕ್ಷಮಸ್ವ ಮಯಿ ವತ್ಸಲಃ।
ಪಂಚಯಜ್ಞಾದ್ಯಕರಣಾದತಿಥೀನಾಮುಪೇಕ್ಷಣಾತ್ ॥ ೨೯॥

ಮೇ = ನನ್ನ, **ಅನೇಕ ಅಪರಾಧಾನ್** = ಬಹಳ ಅಪರಾಧಗಳನ್ನು, **ಮಯಿ** = ನನ್ನಲ್ಲಿ, **ವತ್ಸಲಃ** = ವಾತ್ಸಲ್ಯವುಳ್ಳ ನೀವು, **ಕ್ಷಮಸ್ವ** = ಕ್ಷಮಿಸಿರಿ, **ಪಂಚಯಜ್ಞಾದ್ಯ ಕರಣಾತ್** = ಪಂಚಯಜ್ಞಗಳನ್ನು ಮಾಡದಿರುವಿಕೆಯಿಂದ, **ಅತಿಥೀನಾಂ** = ಅತಿಥಿಗಳ, **ಉಪೇಕ್ಷಣಾತ್** = ಉಪೇಕ್ಷೆ ಮಾಡುವಿಕೆಯೆಂಬ ಅಪರಾಧಗಳ ದೆಸೆಯಿಂದ, **ಕ್ಷಮಸ್ವ** = ಕ್ಷಮಿಸಿರಿ.

ಶ್ರೌತಸ್ಮಾರ್ತಾಗ್ನಿರಾಹಿತ್ಯಾದ್ ಅಮಾಶ್ರಾದ್ಧಾದ್ಯಭಾವತಃ।
ಹವ್ಯಕವ್ಯಾದಿ ಲೋಪಾಚ್ಚ ಪಂಕ್ತಿಭೇದಾಚ್ಚ ಪಾತಕಾತ್ ॥ ೩೦॥

ಶ್ರೌತಸ್ಮಾರ್ತಾಗ್ನಿರಾಹಿತ್ಯಾತ್ - ಶ್ರೌತ = ಸ್ಮೃತಿಯಲ್ಲಿ ಹೇಳಲ್ಪಟ್ಟ, **ಸ್ಮಾರ್ತ** = ಸ್ಮೃತ್ಯುಕ್ತವಾದ, **ಅಗ್ನಿರಾಹಿತ್ಯಾತ್** = ಅಗ್ನಿ ಇಲ್ಲದಿರುವಿಕೆಯಿಂದ, **ಅಮಾ ಶ್ರಾದ್ಧಾದ್ಯಭಾವತಃ** = ಅಮಾವಾಸ್ಯೆ (ದರ್ಶ) ಮೊದಲಾದ ಪರ್ವಕಾಲಗಳಲ್ಲಿ ಮಾಡಲೇಬೇಕಾದ ಪಿತೃಶ್ರಾದ್ಧಾದಿಗಳ ಅಭಾವದಿಂದ, **ಹವ್ಯಕವ್ಯಾದಿಲೋಪಾತ್** = ದೇವತೆಗಳಿಗೆ ಪಿತೃಗಳಿಗೆ ಮಾಡಲೇಬೇಕಾದ ಕರ್ಮಗಳ ಲೋಪದಿಂದ, **ಪಂಕ್ತಿ ಭೇದಾತ್** = ಪಂಕ್ತಿಭೇದರೂಪವಾದ, **ಪಾತಕಾತ್** = ಪಾಪದಿಂದಲೂ, **ಕ್ಷಮಸ್ವ** = ಕ್ಷಮಿಸಿರಿ.

ಅಭಕ್ಷ್ಯಭಕ್ಷಣಾಚ್ಚಾದಿ ಪಾತ್ರಾಪಾತ್ರಾವಿವೇಚನಾತ್।
ವರ್ಣೋಕ್ತಾಚಾರರಾಹಿತ್ಯಾದ್ ರಾಘವೇಂದ್ರಾರ್ಯ ರಕ್ಷಮಾಂ ॥ ೩೧॥

ಅಭಕ್ಷ್ಯಭಕ್ಷಣಾತ್ = ತಿನ್ನಲು ಅಯೋಗ್ಯವಾದ ನಿಷಿದ್ಧವಸ್ತುಗಳ ತಿನ್ನುವಿಕೆ ಯಿಂದಲೂ, **ಪಾತ್ರಾಪಾತ್ರಾ ವಿವೇಚನಾತ್** = ಪಾತ್ರರು ಅಪಾತ್ರರೆಂಬ ವಿವೇಚನೆ ಇಲ್ಲದಿರುವಿಕೆಯಿಂದಲೂ, **ವರ್ಣೋಕ್ತಾಚಾರರಾಹಿತ್ಯಾತ್** = ಬ್ರಾಹ್ಮಣರಿಗೆ ಹೇಳಿದ ಆಚಾರವನ್ನು ಮಾಡದಿರುವಿಕೆಯಿಂದಲೂ, **ಹೇ ರಾಘವೇಂದ್ರಾರ್ಯ** = ಶ್ರೀ ಗುರು ರಾಘವೇಂದ್ರರೇ, **ಮಾಂ** = ನನ್ನನ್ನು, **ರಕ್ಷ** = ರಕ್ಷಿಸಿರಿ.

ನೀಚ ಸೇವಾಽಽಲೇಖ್ಯವೃತ್ತಿಮಾಹಾಪತ್ಯಾದಿ ಜೀವನಾತ್।
ಅಸತ್ಸುಪಕ್ಷಪಾತಾಚ್ಚ ಪೌರೋಹಿತ್ಯಾತ್ ದುರನ್ನತಃ ॥೩೨॥

ದಿವಾ-ಸಂಧ್ಯಾರಜಃ ಶ್ರಾದ್ಧ-ಪರ್ವಾದಿಷು ವಧೂರತೇಃ।
ಋತೌ ಪತ್ನ್ಯನುಗಮನಾತ್ ಪಾತಕಾದ್ ರಕ್ಷ ಮಾಂ ಗುರೋ ॥೩೩॥

ನೀಚಸೇವಾಲೇಖ್ಯವೃತ್ತಿಮಾಠಾಪತ್ಯಾದಿ ಜೀವನಾತ್ - ನೀಚಸೇವಾ = ನೀಚಜನರ ಸೇವೆಯು, **ಆಲೇಖ್ಯವೃತ್ತಿ** = ಲೆಕ್ಕ ಬರೆಯುವುದು, **ಮಾಠಾಪತ್ಯಾತ್** = ಮಠದ ಮೇಲ್ವಿಚಾರಣೆಯಿಂದ ಜೀವನ ನಡೆಸುವುದು, **ಅಸತ್ಸು** = ದುರ್ಜನರಲ್ಲಿ, **ಪಕ್ಷಪಾತಾಚ್ಚ** = ಪಕ್ಷಪಾತ ಮಾಡುವುದು, **ಪೌರೋಹಿತ್ಯಾತ್** = ಪೌರೋಹಿತ್ಯ ಮಾಡುವುದರಿಂದ, **ದುರನ್ನತಃ** = ದುರ್ಜನರ ಅನ್ನದಿಂದಲೂ, **ರಕ್ಷ** = ರಕ್ಷಿಸಿರಿ, **ದಿವಾ ಸಂಧ್ಯಾ ರಜಃಶ್ರಾದ್ಧಪರ್ವಾದಿಷು** - **ದಿವಾ** = ಹಗಲು, **ಸಂಧ್ಯಾ** = ಮೂರು ಸಂಧ್ಯಾಕಾಲಗಳು, **ರಜಃ** = ಪತ್ನೀ ರಜಸ್ವಲೆಯಾದ ಕಾಲ, **ಶ್ರಾದ್ಧ** = ಪಿತೃ ಶ್ರಾದ್ಧದ ದಿನ, **ಪರ್ವಾದಿಷು** = ಪರ್ವಕಾಲವೇ ಮೊದಲಾದ ಸಮಯಗಳಲ್ಲಿ, **ವಧೂರತೇಃ** = ಸ್ತ್ರೀಯರಲ್ಲಿ ಮೂಡಿದ ಆಸಕ್ತಿಯಿಂದ, **ಋತೌ** = ರಜಸ್ವಲೆಯಾದ ಕಾಲದಲ್ಲಿ **ಪತ್ನ್ಯನುಗಮನಾತ್** = ಪತ್ನಿಯನ್ನು ಕೂಡುವಿಕೆ ಇವುಗಳಿಂದುಂಟಾದ, **ಪಾತಕಾತ್** = ಪಾಪಗಳಿಂದ, **ಹೇ ಗುರೋ** = ಗುರುವೇ, **ಮಾಂ** = ನನ್ನನ್ನು, **ರಕ್ಷ** = ರಕ್ಷಿಸಿರಿ.

ಕನ್ಯಾಗೋಜಾವಿ ಮಹಿಷೀಘೃತ ತೈಲಾದಿ ವಿಕ್ರಯಾತ್।
ಏಕಾದಶ್ಯನ್ನ ನಿಘಸಾದ್ ದ್ವಾದಶ್ಯುಲ್ಲಂಘನಾದಪಿ ॥ ೩೪॥

ಕನ್ಯಾಗೋಜಾಽವಿಮಹಿಷೀ ಘೃತ ತೈಲಾದಿ ವಿಕ್ರಯಾತ್ - ಕನ್ಯಾ = ಕನ್ಯೆಯನ್ನು, **ಗೋ** = ಹಸುವಿನ, **ಅಜಾ** = ಆಡು, **ಅವಿ** = ಕುರಿ, **ಮಹಿಷೀ** = ಎಮ್ಮೆ, **ಘೃತ** = ತುಪ್ಪ, **ತೈಲ** = ಎಣ್ಣೆ ಇವೇ ಮೊದಲಾದ ವಸ್ತುಗಳ, **ವಿಕ್ರಯಾತ್** = ಮಾರುವಿಕೆಯಿಂದ, **ಏಕಾದಶ್ಯನ್ನನಿಘಸಾತ್ - ಏಕಾದಶ್ಯನ್ನ** = ಏಕಾದಶಿಯಂದು ಆಹಾರವನ್ನು, **ನಿಘಸಾತ್** = ತಿನ್ನುವುದರಿಂದ, **ದ್ವಾದಶ್ಯುಲ್ಲಂಘನಾತ್** = ದ್ವಾದಶಿಯಂದು ಕಾಲಕ್ಕೆ ಸರಿಯಾಗಿ ಪಾರಣೆ ಮಾಡದೆ ಉಲ್ಲಂಘಿಸಿದ್ದರಿಂದ ಉಂಟಾದ ಪಾಪದಿಂದ, **ಮಾಂ** = ನನ್ನನ್ನು, **ಕ್ಷಮಸ್ವ** = ಕ್ಷಮಿಸಿರಿ.

ದಿವಾಸ್ವಾಪಾತ್ ಪರಸ್ತ್ರೀಣಾಂ ವಿಧವಾನಾಂ ಚ ಸಂಗತಃ।
ಪತ್ನೀ ಸುತಾದಿ ನಿರ್ವ್ಯಾಜ ತ್ಯಾಗಾತ್ ತಾತಾವ ಮಾಂ ಗುರೋ ॥ ೩೫॥

ದಿವಾಸ್ವಾಪಾತ್ = ಹಗಲು ಮಲಗುವುದರಿಂದ, **ಪರಸ್ತ್ರೀಣಾಂ** = ಅನ್ಯಸ್ತ್ರೀಯರ,

ವಿಧವಾನಾಂ = ವಿಧವೆಯರ, **ಸಂಗತಃ** = ಸಂಗಮದಿಂದ, **ಪತ್ನೀಸುತಾದಿ ನಿರ್ವ್ಯಾಜ ತ್ಯಾಗಾತ್** = ಪತ್ನಿ ಹಾಗೂ ಮಕ್ಕಳನ್ನು ಕಾರಣವಿಲ್ಲದೆ ತ್ಯಜಿಸಿದ ಪಾಪದಿಂದಲೂ, **ಮಾಂ** = ನನ್ನನ್ನು, **ಅವ** = ರಕ್ಷಿಸಿರಿ.

ಪರಸ್ತ್ರೀಗಣಿಕಾದೀನಾಂ ಪುರುಷಸ್ಯಾನುಕೂಲನಾತ್।
ಹಿಂಸನಾದ್ ಗೋದ್ವಿಜಸ್ತ್ರೀಣಾಂ ಜಾರಗರ್ಭನಿಪಾತನಾತ್ ॥ ೩೬॥

ನರಸ್ತುತೇರ್ದ್ಯೂತಚೌರ್ಯಾದ್ ಭಾರ್ಯಾಪಣ್ಯೇನ ಜೀವನಾತ್।
ಜಾರಜಾನಾಂ ಸ್ವಪುತ್ರಾಣಾಂ ಲಾಲನಾಚ್ಚಾವ ಮಾಂ ಗುರೋ ॥ ೩೭॥

ಹೇ ಗುರೋ = ಗುರುರಾಜರೇ, **ಪರಸ್ತ್ರೀಗಣಿಕಾದೀನಾಂ** = ಪರಸ್ತ್ರೀಯರು ಹಾಗೂ ವೇಶ್ಯಾಸ್ತ್ರೀಯರಿಗೆ ಸಂಬಂಧಿಸಿದ, **ಪುರುಷಸ್ಯ** = ಪುರುಷನಿಗೆ, **ಅನುಕೂಲನಾತ್** = ಅನುಕೂಲ ಮಾಡುವಿಕೆಯಿಂದ, **ಗೋ ದ್ವಿಜಸ್ತ್ರೀಣಾಂ** = ಹಸು ಹಾಗೂ ಬ್ರಾಹ್ಮಣ ಸ್ತ್ರೀಯರ, **ಹಿಂಸನಾತ್** = ಹಿಂಸೆ ಮಾಡುವುದರಿಂದ, **ಜಾರಗರ್ಭ ನಿಪಾತನಾತ್** = ಜಾರನಿಂದ ಧರಿಸಿದ ಗರ್ಭವನ್ನು ಪಾತಮಾಡುವುದರಿಂದ, **ರಕ್ಷ** = ರಕ್ಷಿಸಿರಿ, **ನರ ಸ್ತುತೇಃ** = ನರರನ್ನು ಸ್ತುತಿ ಮಾಡುವಿಕೆಯಿಂದ, **ದ್ಯೂತಚೌರ್ಯಾತ್** = ಜೂಜು ಹಾಗೂ ಕಳ್ಳತನ ಮಾಡುವಿಕೆಯಿಂದ, **ಭಾರ್ಯಾಪಣ್ಯೇನ** = ಹೆಂಡತಿಯನ್ನು ಪಣವಾಗಿಡುವಿಕೆಯಿಂದ ಸಂಪಾದಿಸಿದ ಹಣದಿಂದ, **ಜೀವನಾತ್** = ಜೀವನ ಮಾಡುವುದರಿಂದ, **ಜಾರಜಾನಾಂ** = ಜಾರರಿಂದ ಜನಿಸಿದ, **ಸ್ವಪುತ್ರಾಣಾಂ** = ತನ್ನ ಮಕ್ಕಳ, **ಲಾಲನಾಚ್ಚ** = ಪಾಲಿಸುವುದರಿಂದಲೂ ಬಂದ ಪಾಪಗಳಿಂದ, **ಮಾಂ** = ನನ್ನನ್ನು, **ಅವ** = ರಕ್ಷಿಸಿರಿ.

ವಿಷಾಗ್ನಿ ಶಸ್ತ್ರಪಾಷಾಣ ಗಲಬಂಧಾಭಿಚಾರಕೈಃ।
ಹಿಂಸನೋಚ್ಚಾಟನಾದ್ ಬಂಧುಮಾತಾಪಿತ್ರಾದಿವರ್ಜನಾತ್ ॥ ೩೮॥

ಹೇ ರಾಘವೇಂದ್ರಾರ್ಯ = ರಾಘವೇಂದ್ರ ಗುರುಗಳೇ, **ವಿಷಾಗ್ನಿ ಶಸ್ತ್ರಪಾಷಾಣ ಗಲ ಬಂಧಾಭಿಚಾರಕೈಃ - ವರ್ಜನಾತ್** = ವಿಷವನ್ನು ಕೊಡುವುದು, **ಅಗ್ನಿ** = ಅಗ್ನಿಯಿಂದ ಸುಡುವುದು, **ಶಸ್ತ್ರ** = ಆಯುಧಗಳಿಂದ ಹೊಡೆಯುವುದು, **ಪಾಷಾಣ** = ಕಲ್ಲಿನಿಂದ ಹೊಡೆಯುರುದು, **ಗಲಬಂಧ** = ಕುತ್ತಿಗೆಗೆ ನೇಣು ಹಾಕುವುದು, **ಅಭಿಚಾರಕೈಃ** = ಮಾಟ ಮಾಡುವುದು ಇವುಗಳಿಂದ, **ಹಿಂಸೋಚ್ಚಾಟನಾತ್** = ಹಿಂಸೆ ಹಾಗೂ ಉಚ್ಚಾಟನೆ ಇವುಗಳಿಂದ, **ಬಂಧುಮಾತಾಪಿತ್ರಾದಿವರ್ಜನಾತ್** =

ಬಂಧುಗಳು, ತಾಯಿ ಹಾಗೂ ತಂದೆ ಮುಂತಾದವರನ್ನು ತ್ಯಜಿಸುವುದರಿಂದಲೂ ಬಂದ ಪಾತಕದಿಂದ ರಕ್ಷಿಸಿರಿ.

ಸ್ವಸ್ರಾದಿದೂಷಣಾತ್ ಪತ್ನೀಪತಿವಿದ್ವೇಷವಶ್ಯತಃ।
ಮಿತ್ರಭಿತ್ ಕೂಟಸಾಕ್ಷಿತ್ವಾದ್ ರಾಘವೇಂದ್ರಾರ್ಯ ರಕ್ಷಮಾಂ ॥ ೩೯॥

ಸ್ವಸ್ರಾದಿ ದೂಷಣಾತ್ = ಅಕ್ಕತಂಗಿಯರು ಹಾಗೂ ಅಕ್ಕತಂಗಿಯರಂತಿರುವವರನ್ನು, **ದೂಷಣಾತ್** = ಹಾಳು ಮಾಡುವುದರಿಂದ, **ಪತ್ನಿಪತಿವಿದ್ವೇಷ ವಶ್ಯತಃ** = ಅನ್ಯೋನ್ಯ ಪತಿಪತ್ನಿಯರಲ್ಲಿ ದ್ವೇಷ ಹುಟ್ಟಿಸುವುದರಿಂದಲೂ, **ಮಿತ್ರಭಿತ್** = ಮಿತ್ರರನ್ನು ಬೇರೆ ಮಾಡುವುದರಿಂದಲೂ, **ಕೂಟ ಸಾಕ್ಷಿತ್ವಾತ್** = ಸುಳ್ಳುಸಾಕ್ಷಿಯನ್ನು ಹೇಳುವುದರಿಂದಲೂ ಉಂಟಾದ ಪಾತಕದಿಂದ, **ಮಾಂ** = ನನ್ನನ್ನು, **ರಕ್ಷ** = ರಕ್ಷಿಸಿರಿ.

ಜ್ಞಾತ್ವಾಪಿ ಜಾರಿಣೀಂ ಪತ್ನೀಂ ತಯಾ ಸಂಗಮ್ಯ ಲೋಭತಃ।
ವಂಶಾಧಃ ಪಾತನಾತ್ ತಸ್ಯಾಮಪತ್ಯೋತ್ಪಾದನಾದಪಿ ॥ ೪೦॥

ಪರಸ್ವ-ಪರ ಪತ್ನೀನಾಂ ಬಲಾದನುಭವಾದಪಿ।
ಋಣಾಪಹರಣಾಚ್ಚಾಪಿ ಮಾಮುದ್ಧರ ಕೃಪಾನಿಧೇ ॥ ೪೧॥

ಜಾರಿಣೀಂ ಪತ್ನೀಂ = ಹೆಂಡತಿಯು ಜಾರಿಣೀ ಸ್ತ್ರೀಯೆಂದು, **ಜ್ಞಾತ್ವಾಽಪಿ** = ತಿಳಿದಿದ್ದರೂ ಕೂಡ, **ಲೋಭತಃ** = ಭೋಗಲಾಲಸೆಯಿಂದ, **ತಯಾ** = ಜಾರಿಣಿಯ ಜೊತೆ, **ಸಂಗಮ್ಯ** = ಸಂಗಮಾಡಿ, **ತಸ್ಯಾಂ** = ಆ ಸ್ತ್ರೀಯಲ್ಲಿ, **ಅಪತ್ಯೋತ್ಪಾದನಾತ್** = ಮಕ್ಕಳನ್ನು ಉತ್ಪಾದಿಸುವಿಕೆಯಿಂದ ಹಾಗೂ **ವಂಶಾಧಃಪಾತನಾತ್** = ಕುಲವನ್ನು ಹಾಳುಮಾಡಿದ್ದರಿಂದಲೂ, ರಕ್ಷಿಸಿರಿ, **ಪರಸ್ವಪರ ಪತ್ನೀನಾಂ** = ಪರರ ಸಂಪತ್ತು ಹಾಗೂ ಪರಸ್ತ್ರೀಯರ, **ಬಲಾತ್** = ಬಲಾತ್ಕಾರದಿಂದ, **ಅನುಭವಾದಪಿ** = ಭೋಗಿಸಿದ್ದರಿಂದಲೂ, **ಚ** = ಮತ್ತು, **ಋಣಾಪಹರಣಾತ್ ಅಪಿ** = ತೆಗೆದುಕೊಂಡ ಸಾಲವನ್ನು ಹಿಂತಿರುಗಿ ಕೊಡದಿರುವುದರಿಂದಲೂ, **ಹೇ ಕೃಪಾನಿಧೇ** = ದಯಾಲುಗಳೇ, **ಮಾಂ** = ನನ್ನನ್ನು, **ಉದ್ಧರ** = ಉದ್ಧರಿಸಿರಿ.

ಇತ್ಯಾದಿ ಬಹುಪಾಪೌಘಾತ್ ಜ್ಞಾತ್ವಾಽಜ್ಞಾತ್ವಾ ಕೃತಾದಪಿ।
ತಾತ ಶ್ರೀ ರಾಘವೇಂದ್ರಾರ್ಯ ಪರಿಪಾಲಯ ಮಾಂ ಸುತಮ್ ॥ ೪೨॥

ಇತ್ಯಾದಿ = ಇವೇ ಮೊದಲಾದ, **ಜ್ಞಾತ್ವಾಽಜ್ಞಾತ್ವಾ** = ತಿಳಿದೂ ತಿಳಿಯದೇ,

ಕೃತಾತ್ = ಮಾಡಿರುವ, **ಬಹು ಪಾಪೌಘಾತ್** = ಬಹಳ ಪಾಪಗಳ ಸಮುದಾಯ ದಿಂದ, **ಹೇ ತಾತ** = ತಂದೆಯಾದ, **ಶ್ರೀ ರಾಘವೇಂದ್ರಾರ್ಯ** = ರಾಘವೇಂದ್ರ ಪೂಜ್ಯ ಗುರುಗಳೇ, **ಸುತಂ** = ತಮ್ಮ ಪುತ್ರನಂತಿರುವ, **ಮಾಂ** = ನನ್ನನ್ನು, **ಪರಿಪಾಲಯ** = ರಕ್ಷಿಸಿರಿ.

ಪಾಪಿನಾಮಗ್ರಗಣ್ಯೋಹಂ ದಯಾಲೂನಾಂ ತ್ವಮಗ್ರಣೀಃ।
ತ್ವಾಂ ವಿನಾ ನ ಹಿ ಜಾನೇಽನ್ಯಂ ಮಮಾದ್ಯೋದ್ಧಾರಕಾರಣಮ್ ॥ ೪೩॥

ಅಹಂ = ನಾನು, **ಪಾಪಿನಾಂ** = ಪಾಪಿಗಳಲ್ಲಿ, **ಅಗ್ರಗಣ್ಯಃ** = ಶ್ರೇಷ್ಠನು, **ತ್ವಂ** = ನೀವು, **ದಯಾಲೂನಾಂ** = ದಯಾಳುಗಳಲ್ಲಿ, **ಅಗ್ರಣೀಃ** = ಅಗ್ರಗಣ್ಯರು, **ಅದ್ಯ** = ಇಂದು, **ಮಮ** = ನನ್ನ, **ಉದ್ಧಾರಕಾರಣಂ** = ಉದ್ಧಾರಕ್ಕೆ ಕಾರಣರಾದ, **ತ್ವಾಂ ವಿನಾ** = ನಿಮ್ಮ ಹೊರತಾಗಿ, **ಅನ್ಯಂ** = ಬೇರೊಬ್ಬ ಉದ್ಧಾರಕರನ್ನು, **ನ ಜಾನೇ** = ತಿಳಿದಿಲ್ಲ.

ಶ್ರೀ ರಾಘವೇಂದ್ರ ಗುರುರಾಜ ಕೃಪಾಸಮುದ್ರ
ಕಾರುಣ್ಯಪೂರ್ಣಕರುಣಾ ಜಲಧೇ ಕೃಪಾಬ್ಧೇ
ಭಕ್ತಾನುಕಂಪಿತಮನೋದಯಯಾ ಪಯೋಧೇಽ-
ನುಕ್ರೋಶಸಾಂದ್ರ ಕರುಣಾಲಯ ಮಾಂ ಪ್ರಪಾಹಿ ॥ ೪೪॥

ಹೇ ಕೃಪಾಸಮುದ್ರ = ಕೃಪಾಸಮುದ್ರರಾದ, **ಕಾರುಣ್ಯಪೂರ್ಣ** = ಕರುಣಾ ಪೂರ್ಣರಾದ, **ಕರುಣಾಜಲಧೇ** = ದಯಾಸಾಗರರಾದ, **ಕೃಪಾಬ್ಧೇ** = ಕೃಪಾಸಮುದ್ರ ರಾದ, **ಗುರುರಾಜ** = ಶ್ರೇಷ್ಠ ಗುರುಗಳಾದ, **ಶ್ರೀ ರಾಘವೇಂದ್ರ** = ಶ್ರೀ ರಾಘ ವೇಂದ್ರರೇ, **ಭಕ್ತಾನುಕಂಪಿತ ಮನೋದಯಯಾ** = ಭಕ್ತರ ಮೇಲಿರುವ ಅನುಕಂಪ ವುಳ್ಳ ಮನಸ್ಸಿನಲ್ಲಿರುವ ದಯೆಯಿಂದ, **ಪಯೋಧೇ** = ಸಮುದ್ರದಂತಿರುವ, **ಅನು ಕ್ರೋಶಸಾಂದ್ರ** = ದಯಾಪರಿಪೂರ್ಣರಾದ, **ಕರುಣಾಲಯ** = ಕರುಣಾಕರರಾದ ರಾಘವೇಂದ್ರರೇ, **ಮಾಂ** = ನನ್ನನ್ನು, **ಪ್ರಪಾಹಿ** = ವಿಶೇಷವಾಗಿ ರಕ್ಷಿಸಿರಿ.

ಇತಿ ಕೃಷ್ಣಾವಧೂತೇನ ಗುರುಪಾದಾನುಜೀವಿನಾ।
ಸ್ತವರಾಜಮಿಮಂ ಪ್ರೋಕ್ತಂ ರಹಸ್ಯಂ ಪಾಪನಾಶಕಮ್ ॥ ೪೫॥

ಗುರುಪಾದಾನುಜೀವಿನಾ = ಗುರುರಾಘವೇಂದ್ರರನ್ನು ಉಪಜೀವಿಸಿಕೊಂಡಿ ರುವ, **ಕೃಷ್ಣಾವಧೂತೇನ** = ಶ್ರೀ ಕೃಷ್ಣಾವಧೂತ ಪಂಡಿತರಿಂದ, **ಇತಿ** = ಈ ರೀತಿಯಾಗಿ,

ಇಮಂ = ಈ, ಪಾಪನಾಶಕಂ = ಪಾಪಪರಿಹಾರಕವಾದ, ರಹಸ್ಯಂ = ರಹಸ್ಯವಾದ, ಸ್ತವರಾಜಂ = ಶ್ರೇಷ್ಠಸ್ತುತಿಯು, ಪ್ರೋಕ್ತಂ = ಹೇಳಲ್ಪಟ್ಟಿತು.

ಪಠತಾಂ ಸರ್ವಪಾಪಾನಿ ನಶ್ಯಂತ್ಯೇವ ನ ಸಂಶಯಃ।
ಇದಂ ದತ್ತವರ ಸ್ತೋತ್ರಂ ಗುರುರಾಜೇನ ಸಾದೃತಮ್ ॥ ೪೬॥

ಗುರುರಾಜೇನ = ಗುರುರಾಜರಿಂದ, **ಸಾದೃತಂ** = ಆದರಿಸಲ್ಪಟ್ಟ, **ಇದಂದತ್ತವರ ಸ್ತೋತ್ರಂ** = ಈ ದತ್ತವರ ಸ್ತೋತ್ರವನ್ನು, **ಪಠತಾಂ** = ಪಠನ ಮಾಡುವವರ, **ಸರ್ವ ಪಾಪಾನಿ** = ಸಮಸ್ತಪಾಪಗಳೂ, **ನಶ್ಯಂತಿ ಏವ** = ಖಂಡಿತರಾಗಿಯೂ ನಾಶ ಹೊಂದುವುದು, **ನ ಸಂಶಯಃ** = ಸಂಶಯವಿಲ್ಲ.

ಪ್ರಗೋಪ್ತವ್ಯಂ ಪ್ರಯತ್ನೇನ ದದ್ಯಾಚ್ಛ್ರದ್ಧಾಲವೇ ಗುರೌ।
ಅಭಕ್ತಾಯ ನ ದಾತವ್ಯಂ ಕಲಿದೋಷನಿವಾರಕಮ್ ॥ ೪೭॥

ಕಲಿದೋಷನಿವಾರಕಮ್ = ಕಲಿಕಲ್ಮಶವನ್ನು ಹೋಗಲಾಡಿಸುವ ಈ ಸ್ತೋತ್ರವನ್ನು, **ಪ್ರಯತ್ನೇನ** = ಪ್ರಯತ್ನಪೂರ್ವಕವಾಗಿ, **ಪ್ರಗೋಪ್ತವ್ಯಂ** = ರಹಸ್ಯವಾಗಿಡಬೇಕು, **ಗುರೌ** = ಗುರುರಾಜರಲ್ಲಿ, **ಶ್ರದ್ಧಾಲವೇ** = ಶ್ರದ್ಧೆಯುಳ್ಳವರಿಗೆ ಮಾತ್ರ, **ದದ್ಯಾತ್** = ಕೊಡತಕ್ಕದ್ದು, **ಅಭಕ್ತಾಯ** = ರಾಯರ ಭಕ್ತರಲ್ಲದವನಿಗೆ, **ನ ದಾತವ್ಯಂ** = ಕೊಡಬಾರದು.

ದಿನಂ ವಾ ಸಕೃದಪ್ಯೇತತ್ ಪಠತಾಂ ಯೋಗ್ಯತಾಮನು।
ಅನಾಚಾರರತಾಂನಾಂ ವಾ ವರ್ತತೇ ಪಿತೃವದ್ ಗುರುಃ ॥ ೪೮॥

ಯೋಗ್ಯತಾಂ ಅನು = ಯೋಗ್ಯತಾನುಸಾರವಾಗಿ, **ದಿನಂ** = ದಿನಪೂರ್ತಿಯಾಗಲೀ, **ವಾ** = ಅಥವಾ, **ಸಕೃದಪಿ** = ಒಂದು ಬಾರಿಯಾದರೂ, **ಏತತ್** = ಈ ಸ್ತೋತ್ರವನ್ನು, **ಪಠತಾಂ** = ಪಠಿಸುವ, **ಅನಾಚಾರರತಾಂನಾಂ** = ಅನಾಚಾರದಲ್ಲಿ ಆಸಕ್ತರಾಗಿರುವವರಿಗೆ, **ಗುರುಃ** = ಗುರುಗಳಾದ ರಾಘವೇಂದ್ರರು, **ಪಿತೃವತ್** = ತಂದೆಯಂತೆ ರಕ್ಷಕರಾಗಿ, **ವರ್ತತೇ** = ಇರುವರು.

ಬಾಲೋऽಸತ್ಯಂ ವದತಿ ಪಿತರಂ ಸ್ವಾಪರಾಧೇऽಪಿ ಧಾರ್ಷ್ಟ್ಯಾತ್।
ತಾತ ತ್ವಂ ಮೇऽವದ ಇದಮತೋऽಕಾರ್ಷಮೇತತ್ ತಥೇತಿ ॥ ೪೯॥

ಇದಂ = ಈ ಅಪರಾಧ ಕಾರ್ಯವನ್ನು, **ತ್ವಂ** = ನೀನೇ, **ಮೇ** = ನನಗೆ, **ಅವದಃ** = ಹೇಳಿರುವೆ, **ಅತಃ** = ಆದ್ದರಿಂದಲೇ, **ಏತತ್** = ಈ ಅಕಾರ್ಯವನ್ನು, **ತಥಾ** = ನೀನು ಹೇಳಿದಂತೆ, **ಅಕಾರ್ಷಂ** = ಮಾಡಿದೆನು, ಇತಿ = ಹೀಗೆ, **ಬಾಲಃ** = ಪುತ್ರನು, **ಸ್ವಾಪರಾಧೇಽಪಿ** = ತಾನೇ ಅಪರಾಧವೆಸಗಿದ್ದರೂ, **ಧಾರ್ಷ್ಟ್ಯಾತ್** = ದರ್ಪದಿಂದ, **ಅಸತ್ಯಂ** = ಸುಳ್ಳನ್ನು, **ಪಿತರಂ** = ತಂದೆಯನ್ನು ಕುರಿತು, **ವದತಿ** = ಹೇಳುತ್ತಾನೆ.

ಶ್ರುತ್ವಾ ತಾತಸ್ತನಯವಚನಂ ಪ್ರೇಮತೋ ಮೋದತೇ ಹಿ।
ತ್ವಂ ಮೋದೇಥಾಃ ಶಿಶುವಚಸಿ ಮೇ ರಾಘವೇಂದ್ರಾರ್ಯ ತಾತ ॥ ೫೦॥

ತಾತಃ = ತಂದೆಯಾದರೂ, **ತನಯವಚನಂ** = ಪುತ್ರನ ಮಾತನ್ನು, **ಶ್ರುತ್ವಾ** = ಕೇಳಿ, **ಪ್ರೇಮತಃ** = ಪ್ರೇಮದಿಂದ, **ಮೋದತೇ ಹಿ** = ಸಂತೋಷಿಸುವವನಷ್ಟೇ, (ಹಾಗೆಯೇ), **ಹೇ ರಾಘವೇಂದ್ರಾರ್ಯ ತಾತ** = ಪೂಜ್ಯತಂದೆಯಾದ ರಾಘವೇಂದ್ರರೇ, **ತ್ವಂ** = ನೀವು, **ಮೇ ಶಿಶುವಚಸಿ** = ಈ ಶಿಶುವಿನಂತಿರುವ ನನ್ನ ಮಾತಿನ ವಿಷಯದಲ್ಲಿ, **ಮೋದೇಥಾ** = ಸಂತೋಷಿಸಬೇಕು.

ಗುರುರಾಜ ಪಿತಾ ಮೇ ಕೃಪಾವಾನಿತಿ ನಿಶ್ಚಿತ್ಯ ಮಯೋದ್ಧತಂ ವ್ಯಚಾರಿ।
ತ್ವದನನ್ಯಗತೇರ್ಮಮಾಪರಾಧಾನ್ ಸುತವಾತ್ಸಲ್ಯಮುಪಾಗತಃ ಕ್ಷಮಸ್ವ ॥ ೫೧॥

ಹೇ ಗುರುರಾಜ = ಗುರುರಾಜರೇ, **ಮೇ** = ನನ್ನ, **ಪಿತಾ** = ತಂದೆಯಾದ ತಾವು, **ಕೃಪಾವಾನ್** ಇತಿ = ಅತ್ಯಂತ ದಯಾಲುವೆಂದು, **ನಿಶ್ಚಿತ್ಯ** = ನಿಶ್ಚಯಮಾಡಿ, **ಮಯಾ** = ನನ್ನಿಂದ, **ಉದ್ಧತಂ** = ಅಹಂಕಾರಿಯಾಗಿ, **ವ್ಯಚಾರಿ** = ಸಂಚಾರಮಾಡಲ್ಪಟ್ಟಿತು, **ತ್ವದನನ್ಯಗತೇಃ** = ನೀವು ಹೊರತು ಅನ್ಯಗತಿಯಿಲ್ಲದ, **ಮಮ** = ನನ್ನ, **ಅಪರಾಧಾನ್** = ಅಪರಾಧಗಳನ್ನು, **ಸುತವಾತ್ಸಲ್ಯಂ** = ಸುತಪ್ರೇಮವನ್ನು, **ಉಪಾಗತಃ** = ಹೊಂದಿದವರಾಗಿ, **ಕ್ಷಮಸ್ವ** = ಕ್ಷಮಿಸಿರಿ.

ಇತಿ ಶ್ರೀ ಕೃಷ್ಣಾವಧೂತ ವಿರಚಿತ ರಾಘವೇಂದ್ರ ತಂತ್ರೇ ಪ್ರತ್ಯಕ್ಷ ಸಿದ್ಧಿಪ್ರದೇ
ರಹಸ್ಯೋಪಾಖ್ಯಾನೇ ಗುರುರಾಜಸ್ತವರಾಜೋ ನಾಮ ಪಂಚದಶ ಪಟಲಃ

॥ ಶ್ರೀ ಕೃಷ್ಣಾರ್ಪಣಮಸ್ತು ॥